
ಕನ್ನಡ ಮತ್ತು ಸಂಸ್ಕೃತಿ ಇಲಾಖೆ


ಕನ್ನಡ ಭಾಷಾಭಿವೃದ್ಧಿ ಯೋಜನೆ

ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು

ಡಾ. ವ್ಹಿ. ಜಿ. ಪೂಜಾರ







ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬

ರಾಯಚೂರು ಜಿಲ್ಲೆಯ
ತತ್ವಪದಕಾರರ ಸ್ಮಾರಕಗಳು

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ
ತತ್ವಪದಕಾರರ ಸ್ಮಾರಕಗಳ ಕ್ಷೇತ್ರಕಾರ್ಯ
ಹಾಗೂ ಸಂಪುಟಗಳ ಪ್ರಕಟನಾ ಯೋಜನೆ-೧

ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು

ಪ್ರಧಾನ ಸಂಶೋಧಕರು ಮತ್ತು ಲೇಖಕರು
ಡಾ.ವ್ಹಿ.ಜಿ.ಪೂಜಾರ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ – ೫೮೫ ೧೦೬

RAICHURU JILLEYA TATVA PADAKARARA SMARAKAGALU: Research Articles on Monuments of Mystic Poets of Raichur district Written by: Dr.V.G.Pujar Professor of Kannada, Institute of Kannada studies, Gulbarga University. Gulbarga. Published by: Institute of Kannada Studies, Gulbarga University, Gulbarga.
Funded by: Government of Karnataka

ISBN : 978-81-923285-0-8
First Impression : 2012
Total Pages : **xxxv** +189
Paper Used : 80 Gsm Maplitho
Price : Rs. 200.00

ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು
ಪ್ರಧಾನ ಸಂಶೋಧಕರು ಮತ್ತು ಲೇಖಕರು : **ಡಾ.ವ್ಹಿ.ಜಿ.ಪೂಜಾರ,** ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಪ್ರಥಮ ಮುದ್ರಣ : ೨೦೧೨
ಪುಟಗಳು: xxxv + ೧೮೯
ಬಳಸಿದ ಕಾಗದ : ೮೦ ಜಿ.ಎಸ್.ಎಮ್. ಮ್ಯಾಪ್‌ಲಿಥೊ
ಬೆಲೆ : ರೂ. ೨೦೦.೦೦
ಕರಡು ತಿದ್ದಿದವರು: ಲೇಖಕರು
ಮುದ್ರಕರು :
ಮೆ॥ ಪ್ರಿಂಟ್ ಪಾರ್ಕ್
ಕ್ವಾಲಿಟಿ ಆಫ್ ಸೆಟ್ ಪ್ರಿಂಟರ್ಸ್
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ
ಶ್ರೀರಾಂಪುರಂ ಅಂಚೆ,
ಬೆಂಗಳೂರು – ೫೬೦ ೦೨೧.
ದೂ : ೦೮೦–೨೩೪೨೨೮೩೮

4

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಸಂಚಾಲಕರು

ಪ್ರೊ. ನಾಗಾಬಾಯಿ ಬುಳ್ಳಾ

ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ.ಕೆ.ಖಂಡೋಬಾ	ಡಾ. ಡಿ.ಬಿ.ನಾಯಕ
ಡಾ. ವ್ಹಿ.ಜಿ.ಪೂಜಾರ	ಡಾ. ಬಸವರಾಜ ಸಬರದ
ಡಾ. ವೀರಣ್ಣ ದಂಡೆ	ಡಾ. ಬಿ.ಎಸ್. ಪೋಲಿಸ ಪಾಟೀಲ
ಡಾ. ಎಚ್.ಟಿ.ಪೋತೆ	ಡಾ. ಎಸ್.ಎಂ. ಹಿರೇಮಠ

ಡಾ. ಜಯಶ್ರೀ ದಂಡೆ

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು-560 001
ದಿ: 2-11-2011

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತಕರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲ್ಯಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ

ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳ ಅಡಿಯಲ್ಲಿ ಈಗ ಸಿದ್ಧಪಡಿಸಿರುವ ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು ಸಂಪುಟವನ್ನು ಪ್ರಕಟಿಸಲು ಶ್ರಮಿಸಿದ ಲೇಖಕರನ್ನು ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು– 560 001
ದಿ: 16.11.2011

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ 450 ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ದವಾಗುತ್ತಿವೆ. ಈ ಯೋಜನೆಯ ಹಲವು ಯೋಜನೆಯ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ರಾಯಚೂರು ಜಿಲ್ಲೆಯ

ತತ್ವಪದಕಾರರ ಸ್ಮಾರಕಗಳು ಸಂಪುಟವನ್ನು ಪ್ರಕಟಿಸುತ್ತಿದೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು--ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು–ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ

ಸಚಿವರು

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– 560 001
☐ 22205781ಮ 2203400
ಫ್ಯಾಕ್ಸ್: 22353105
ಇ–ಮೇಲ್: secy-kc@karnataka. Gov.In

ದಿ: 24.10.2011

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.450ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವಾನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ 5ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪಾರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ

ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. 2009ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **'ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು'** ಸಂಪುಟವನ್ನು ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತುಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು, ಯೋಜನೆಯ ಪ್ರಧಾನ ಸಂಶೋಧಕರು ಮತ್ತು ಲೇಖಕರು ಆದ ಡಾ.ವ್ಹಿ.ಜಿ.ಪೂಜಾರ ಅವರನ್ನು, ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು

ಕಾರ್ಯದರ್ಶಿ

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– 560 001
ದಿ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರ ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು

ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ 2009ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಇದೀಗ **'ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು'** ಸಂಪುಟವನ್ನು ಪ್ರಕಟಿಸಿ ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ. ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ, ಈ ಯೊಜನೆಯ ಪ್ರಧಾನ ಸಂಶೋಧಕರು ಮತ್ತು ಲೇಖಕರು ಆದ ಡಾ. ವ್ಹಿ.ಜಿ.ಪೂಜಾರ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ : 25/10/2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. 1970–71ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ 1980ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ

ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ತತ್ವಪದಕಾರರ ಸ್ಮಾರಕಗಳ ಕ್ಷೇತ್ರಕಾರ್ಯ ಹಾಗೂ ಸಂಪುಟಗಳ ಪ್ರಕಟನಾ ಯೋಜನೆ (ಭಾಗ-1)ಯೂ ಒಂದು. ಈ ಯೋಜನೆಗೆ ಸಂಬಂಧಿಸಿದಂತೆ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ತತ್ವಪದಕಾರರ ಸ್ಮಾರಕಗಳು ಹಾಗೂ ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು ಹೀಗೆ ಎರಡು ಸಂಪುಟಗಳನ್ನು ಹೊರತರುತ್ತಿರುವುದು ಹರ್ಷದ ಸಂಗತಿಯಾಗಿದೆ.

ಪ್ರಸ್ತುತ "ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು" ಸಂಪುಟವನ್ನು ನಮ್ಮ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ವ್ಹಿ.ಜಿ.ಪೂಜಾರ ಅವರು ವಿಶೇಷ ಶ್ರಮವಹಿಸಿ ಕ್ಷೇತ್ರ ಕಾರ್ಯ ಕೈಕೊಂಡು ಸಿದ್ಧಪಡಿಸಿರುವರು. ತತ್ವಪದಕಾರರನ್ನು ಕುರಿತು ಬರೆದ ಇಲ್ಲಿನ ಲೇಖನಗಳು ಹಾಗೂ ಆಯಾ ತತ್ವಪದಕಾರರಿಗೆ ಸಂಬಂಧಿಸಿದ ಸ್ಮಾರಕಗಳ ಚಿತ್ರಗಳು ತುಂಬ ಮೌಲಿಕವಾದುವಾಗಿವೆ. ತತ್ವಪದಕಾರರ ಜಾತ್ಯತೀತ ದೃಷ್ಟಿ, ಕೋಮು ಸಾಮರಸ್ಯ ಭಾವ ಹಾಗೂ ಅವರ ಜೀವನಾದರ್ಶಗಳು ಜನತೆಯ ಬಾಳಿಗೆ ಬೆಳಕು ನೀಡುವಂಥವಾಗಿವೆ. ತತ್ವಪದಕಾರರ ಸ್ಮಾರಕಗಳಂತೂ ಅವರ ಬದುಕಿನ ಮೇಲೆ ಹೊಸಬೆಳಕು ಬೀರುವಂಥವಾಗಿವೆ. ಒಟ್ಟಿನಲ್ಲಿ ಪ್ರಸ್ತುತ ಸಂಪುಟವು ಹೊಸ ಆವಿಷ್ಕಾರ ಹಾಗೂ ಚಿಂತನೆಗಳಿಗೆ ಉತ್ತಮದಾರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದೆ. ಇಂಥ ಮೌಲಿಕವಾದ ಸಂಪುಟವನ್ನು ಸಿದ್ಧಪಡಿಸಿದ ಈ ಯೋಜನೆಯ ಪ್ರಧಾನ ಸಂಶೋಧಕರೂ, ಲೇಖಕರೂ ಆದ ಡಾ. ವ್ಹಿ.ಜಿ.ಪೂಜಾರ ಅವರಿಗೂ, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಶೋಧಕರ ಹಾಗೂ ಲೇಖಕರ ನುಡಿ

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಸಂವರ್ಧನೆಯಲ್ಲಿ ಕನ್ನಡನಾಡಿನ ಶರಣರು, ಕೀರ್ತನಕಾರರು ಹಾಗೂ ತತ್ವಪದಕಾರರು ವಹಿಸಿದ ಪಾತ್ರ ತುಂಬ ಮಹತ್ವದ್ದಾಗಿದೆ. ಇವರು ಬರೆದ ವಚನಗಳು. ಕೀರ್ತನೆಗಳು ಹಾಗೂ ತತ್ವಪದಗಳು ಜನಸಮ್ಮುಖವಾದ ವಿಚಾರಗಳನ್ನು ಒಳಗೊಂಡಿದ್ದು ತುಂಬ ಮೌಲಿಕವಾದುವಾಗಿವೆ. ಇವುಗಳಿಂದ ಕನ್ನಡ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ತಲೆ ಎತ್ತಿ ನಿಲ್ಲುವಂಥದಾಗಿದೆ. ತತ್ವಪದ ಸಾಹಿತ್ಯವಂತೂ ಜನಮಾನಸದಲ್ಲಿ ಕೋಮು ಸೌಹಾರ್ದತೆ– ಸಾಮರಸ್ಯ ಭಾವವನ್ನು ಬೆಳೆಸಿದೆ. ಜಾತಿ, ಮತ,ಪಂಥ ಇವಾವ ಭೇದಭಾವವಿಲ್ಲದೆ ತತ್ವಪದಕಾರರು ನಮ್ಮ ನಾಡಿನಲ್ಲಿ ಭಾವೈಕ್ಯತೆಯ ಬೇರಿಗೆ ನೀರೆರೆದಿದ್ದಾರೆ. ತತ್ವಪದ ಸಾಹಿತ್ಯವು ವಿಶೇಷವಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಸೃಷ್ಟಿಗೊಂಡಿದೆ. ಈ ಸಾಹಿತ್ಯದ ಅಧ್ಯಯನ, ತತ್ವಪದಕಾರರ ಇತಿವೃತ್ತದ ಶೋಧ ಇತ್ತೀಚೆಗೆ ತಕ್ಕ ಮಟ್ಟಿಗೆ ನಡೆದಿದೆ. ವಿಶೇಷವಾಗಿ ಈ ಪ್ರದೇಶದಲ್ಲಿ ಭಜನಾ ಸಂದರ್ಭದಲ್ಲಿ ಹಾಡಲ್ಪಡುವ ತತ್ವಪದಗಳು ನಮ್ಮ ಹಳ್ಳಿಗಾಡಿನ ಜನರಲ್ಲಿ ಭ್ರಾತೃತ್ವ ಭಾವನೆಯನ್ನು ಬೆಳೆಸಿವೆ. ತತ್ವಪದಕಾರರಿಗೆ ಯಾವುದೇ ಜಾತಿಭೇದವಿಲ್ಲ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಂತೂ ಹಿಂದೂ ಮುಸ್ಲಿಂ ಎಂಬ ಯಾವುದೇ ಭೇದಭಾವವಿಲ್ಲದೆ ಎಲ್ಲಾ ಜಾತಿ ವರ್ಗದ ಜನರು ತತ್ವಪದಗಳನ್ನು ರಚಿಸಿದ್ದುಂಟು. ಇವುಗಳನ್ನು ರಚಿಸಿದವರನ್ನು ಹಾಗೂ ಅವರ ಸ್ಮಾರಕಗಳನ್ನು ಕುರಿತು ಇದುವರೆಗೆ ಸಂಶೋಧನಾಧ್ಯಯನ ನಡೆದಿರಲಿಲ್ಲ. ಇದನ್ನು ಗುರುತಿಸಿ "ತತ್ವಪದಕಾರರ ಸ್ಮಾರಕಗಳ ಕ್ಷೇತ್ರಕಾರ್ಯ ಹಾಗೂ ಸಂಪುಟಗಳ ಪ್ರಕಟನಾ ಯೋಜನೆ–೧"ಅನ್ನುಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಯೋಜನೆಗೆ ಕರ್ನಾಟಕ ಸರ್ಕಾರವು ಧನ ಸಹಾಯ ನೀಡಿದೆ.

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದ ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಕನ್ನಡ ಭಾಷಾಭಿವೃದ್ಧಿಯೋಜನೆಯಡಿ ನಮ್ಮ ಕನ್ನಡ ಅಧ್ಯಯನ ಸಂಸ್ಥೆಗೆ ಧನ ಸಹಾಯ ನೀಡಿ ಸಂಶೋಧನ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಗತಗೊಳಿಸಲು ಪ್ರೇರೇಪಿಸಿದುದು ಸಮಯೋಚಿತವೂ, ಸಮಂಜಸವಾದುದೂ ಆಗಿದೆ. ಪ್ರಸ್ತುತ ಸಂಶೋಧನ ಯೋಜನೆಯ ಪ್ರಧಾನಸಂಶೋಧಕನಾದ ನಾನು ಗುಲಬರ್ಗಾ, ಯಾದಗಿರಿ ಹಾಗೂ ರಾಯಚೂರ ಜಿಲ್ಲೆಗಳಲ್ಲಿನ ತತ್ವಪದಕಾರರ

ಇತಿವೃತ್ತ ಮತ್ತು ಅವರಿಗೆ ಸಂಬಂಧಿಸಿದ ಸ್ಮಾರಕಗಳನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸುವ, ಶೋಧಿಸುವ ಕಾರ್ಯವನ್ನು ಕೈಕೊಂಡಿದ್ದೇನೆ. ಪ್ರಸ್ತುತ ಯೋಜನೆಯು ಸಂಪೂರ್ಣ ಕ್ಷೇತ್ರಕಾರ್ಯವನ್ನು ಅವಲಂಬಿಸಿದೆ. ಗುಲಬರ್ಗಾ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳ ವಿವಿಧ ಹಳ್ಳಿಗಳಲ್ಲಿ ವಾಸವಾಗಿ ಹೋದ ಅನೇಕ ತತ್ವಪದಕಾರರಿಗೆ ಸಂಬಂಧಿಸಿದ ಪ್ರಸ್ತುತ ಕ್ಷೇತ್ರಕಾರ್ಯಾಧರಿತ ಸಂಶೋಧನ ಯೋಜನೆಯಡಿ ನಾನೀಗ "ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ತತ್ವಪದಕಾರರ ಸ್ಮಾರಕಗಳು" ಹಾಗೂ "ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು" ಎಂಬೆರಡು ಸಂಪುಟಗಳನ್ನು ಪ್ರಕಟಿಸಿರುವೆ.

ಪ್ರಸ್ತುತ "ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು" ಎಂಬ ಸಂಪುಟದಲ್ಲಿ ರಾಯಚೂರು ಜಿಲ್ಲೆಯ ಇಪ್ಪತ್ನಾಲ್ಕು ತತ್ವಪದಕಾರರಿಗೆ ಸಂಬಂಧಿಸಿದ ಇತಿವೃತ್ತ ಹಾಗೂ ಅವರಿಗೆ ಸಂಬಂಧಿಸಿದ ಸ್ಮಾರಕಗಳನ್ನು ಶೋಧಿಸಿ, ಸಂಗ್ರಹಿಸಿ ಸ್ಮಾರಕಗಳ ಹಾಗೂ ವಿವಿಧ ಆಕರಗಳಿಂದ ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ಅವರ ಚರಿತ್ರೆಯನ್ನು ಇಲ್ಲಿ ಪುನರ್ ರೂಪಿಸಲು ಯತ್ನಿಸಲಾಗಿದೆ. ಇದು ಹೊಸಬಗೆಯ ಅಧ್ಯಯನವಾಗಿದ್ದು, ಈ ಹಿಂದೆ ಈ ರೀತಿಯ ಅಧ್ಯಯನ ಈ ಸ್ವರೂಪದಲ್ಲಿ ನಡೆದಿರಲಿಲ್ಲ. ಅಲ್ಲಲ್ಲಿ ಕೆಲವು ತತ್ವಪದಕಾರರ ಇತಿವೃತ್ತ ಹಾಗೂ ಅವರ ತತ್ವಪದಗಳನ್ನು ಪ್ರತ್ಯೇಕವಾಗಿ ಸಂಕಲನ ರೂಪಗಳಲ್ಲಿ ಕೆಲವು ವಿದ್ವಾಂಸರು ಪ್ರಕಟಿಸಿದ್ದರು. ನಾನಿಲ್ಲಿ ಆ ಎಲ್ಲ ವಿದ್ವಾಂಸರು ಪ್ರಕಟಿಸಿದ ಆಯಾ ತತ್ವಪದಕಾರರ ಇತಿವೃತ್ತ ಹಾಗೂ ಅವರ ತತ್ವಪದಗಳ ನೆರವನ್ನು ಪಡೆದಿರುವೆ.

ಪ್ರಸ್ತುತ ಸಂಪುಟದಲ್ಲಿ ಆಯಾ ತತ್ವಪದಕಾರರ ಇತಿವೃತ್ತವನ್ನು ಸಂಕ್ಷಿಪ್ತದಲ್ಲಿ ನೀಡಿ, ಅವರಿಗೆ ಸಂಬಂಧಿಸಿದ ಸ್ಮಾರಕಗಳ ಚಿತ್ರಗಳನ್ನು ಅಲ್ಲಲ್ಲೇ ಕೊಡುತ್ತ ಬರಲಾಗಿದೆ. ಜೊತೆಗೆ ಅವರು ರಚಿಸಿದ ತತ್ವಪದಗಳಲ್ಲಿ ಕೆಲವು ಮಹತ್ವದ ತತ್ವಪದಗಳನ್ನು ನೀಡಲಾಗಿದೆ. ಇದರಿಂದ ಆಯಾ ತತ್ವಪದಕಾರರ ಬದುಕಿನ ವಿವರಗಳು, ಅವರು ಸಮಾಜಕ್ಕೆ ಕೊಡಮಾಡಿದ ಸಂದೇಶಗಳು ವಿದಿತವಾಗುವವು. ತತ್ವಪದಕಾರರ ಬದುಕು – ಬರಹಗಳ ಮೇಲೆ ಹೊಸಬೆಳಕು ಬೀರುವ ದಿಸೆಯಲ್ಲಿ ಇಲ್ಲಿ ಸಂಶೋಧನೆ ನಡೆಸಲಾಗಿದೆ. ಅವರನ್ನು ಕುರಿತು ಕಿರು ಲೇಖನಗಳನ್ನು ಬರೆಯಲಾಗಿದೆ. ಈ ಬಗೆಯ ಸಚಿತ್ರ ರೂಪದ ಬರಹ ಪಂಡಿತರಿಗೂ – ಪಾಮರರಿಗೂ ಹಿಡಿಸುವುದೆಂದೂ, ತತ್ವಪದಕಾರರ ಚರಿತ್ರೆಯ ಹಂದರದ ಮೇಲೆ ಹೊಸಬೆಳಕು ಚೆಲ್ಲುವುದೆಂದೂ ಭಾವಿಸಲಾಗಿದೆ. ವಿಶೇಷವಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಈ ತತ್ವಪದಕಾರರು ಭಾವೈಕ್ಯತೆಯ, ಕೋಮುಸಾಮರಸ್ಯದ ಹರಿಕಾರರಾಗಿ ತೋರಿ ಬರುವುದನ್ನು ಇಲ್ಲಿ ಗುರುತಿಸಲಾಗಿದೆ. ಜೊತೆಗೆ ಇಲ್ಲಿ ಕೆಲವು ಬೆಳಕಿಗೆ ಬರದ ಹೊಸ ತತ್ವಪದಕಾರರನ್ನು, ಅವರ ಸ್ಮಾರಕಗಳನ್ನು ಹಾಗೂ

ಅವರು ಕಟ್ಟಿ ಹಾಡಿದ ತತ್ವಪದಗಳನ್ನು ಮೊದಲ ಬಾರಿಗೆ ಬೆಳಕಿಗೆ ತರಲಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶವಂತೂ ತತ್ವಪದಕಾರರ ಕನ್ನೆ ನೆಲವಾಗಿದೆ; ತತ್ವಪದ ಸಾಹಿತ್ಯದ ನೆಲೆವೀಡಾಗಿದೆ. ಈ ಸಾಹಿತ್ಯ ಪ್ರಕಾರವು ಇಲ್ಲಿ ತುಂಬ ಸಮೃದ್ಧವಾಗಿ ಸೃಷ್ಟಿಗೊಂಡಿದ್ದನ್ನು ಗುರುತಿಸುವೆವು. ಇದು ವಚನ ಸಾಹಿತ್ಯದಂತೆ ಜೀವಪರವೂ, ಜನಪರವೂ ಆದುದನ್ನೂ ವಚನ ಸಾಹಿತ್ಯದ ಛಾಯೆಯೇ ಇದರ ಮೇಲೆ ಚೆಲ್ಲವರಿದುದನ್ನೂ ಇಲ್ಲಿ ಗುರುತಿಸಲಾಗಿದೆ. ಜಾತಿ ಭೇದ –ಲಿಂಗಭೇದ, ಬಡವ ಬಲ್ಲಿದ ಭೇದ, ಕರ್ಮಠತನ ಮುಂತಾದುವನ್ನು ತತ್ವಪದಕಾರರು ಖಂಡಿಸಿದುದನ್ನೂ, ಸಮಾನತೆ – ಸೋದರತ್ವ ಭಾವನೆಗಳನ್ನು ಜನ ಮಾನಸದಲ್ಲಿ ನೆಲೆಗೊಳಿಸಲು ಯತ್ನಿಸಿದುದನ್ನೂ ನಾವು ಅನೇಕ ತತ್ವಪದಕಾರರ ತತ್ವಪದಗಳಿಂದ ಅರಿಯುವೆವು. ಇಂಥ ಮೌಲಿಕವೂ ಸಾರ್ವಕಾಲಿಕ ಸತ್ಯಗಳನ್ನು ಒಳಗೊಂಡಂಥವೂ ಆದ ಕೆಲವು ತತ್ವಪದಗಳನ್ನು ಇಲ್ಲಿ ಉದಾಹರಣೆಗಳ ರೂಪದಲ್ಲಿ ಕೊಡಲಾಗಿದೆ. 19

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದ ಈ ಶುಭ ಸಂದರ್ಭದಲ್ಲಿ ಪ್ರಸ್ತುತ ಸಂಶೋಧನ ಯೋಜನೆಗೆ ಆರ್ಥಿಕ ನೆರವು ನೀಡಿದ ಕರ್ನಾಟಕ ಸರ್ಕಾರಕ್ಕೆ ನಾನು ಋಣಿಯಾಗಿರುವೆ. ಈ ಸಂಪುಟವು ಪ್ರಕಟಗೊಳ್ಳುತ್ತಿರುವುದನ್ನು ಸಂತೋಷದಿಂದ ಸ್ವಾಗತಿಸಿ ಶುಭ ಹಾರೈಕೆಗಳನ್ನು ನೀಡಿದ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ವಿ. ಸದಾನಂದಗೌಡ ಅವರಿಗೆ , ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಬಸವರಾಜು ಅವರಿಗೆ ಹಾಗೂ 'ನಲ್ನುಡಿ'ಯನ್ನು ನೀಡಿ ಶುಭಕೋರಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರಿಗೆ ನಾನು ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಪ್ರಸ್ತುತ ಸಂಪುಟವು ತುಂಬ ಅಚ್ಚುಕಟ್ಟಾಗಿ, ಆಕರ್ಷಕವಾಗಿ ಬೇಗನೆ ಮುದ್ರಣಗೊಂಡು ಹೊರಬರಲಿ ಎಂದು ಹಾರೈಸಿ, ತಮ್ಮ ಮೌಲಿಕವಾದ ನುಡಿಗಳನ್ನು ಬರೆದುಕೊಟ್ಟು ಬೆನ್ನು ತಟ್ಟಿದ ನಮ್ಮ ವಿಶ್ವವಿದ್ಯಾಲಯದ ನೆಚ್ಚಿನ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಈ ಸಂಪುಟದ ಪ್ರಕಟನೆಗೆ ಪ್ರೋತ್ಸಾಹ ನೀಡಿದ ಕುಲಸಚಿವರಾದ ಪ್ರೊ. ಎಸ್. ಎಲ್. ಹಿರೇಮಠ ಅವರಿಗೆ ಹಾಗೂ ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿಯ ಸದಸ್ಯರಿಗೆ ಮತ್ತು ವಿಶ್ವವಿದ್ಯಾಲಯದ ಎಲ್ಲ ಅಧಿಕಾರಿಗಳಿಗೆ ನಾನು ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ಅಧ್ಯಕ್ಷರುಗಳಾದ ಡಾ. ಬಸವರಾಜ ಸಬರದ, ಡಾ. ವೀರಣ್ಣ ದಂಡೆ ಹಾಗೂ ಈಗಿನ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೂ ನನ್ನ ವಂದನೆಗಳು.

ಪ್ರಸ್ತುತ ಸಂಶೋಧನ ಯೋಜನೆಯಲ್ಲಿ ಒಂದು ವರ್ಷಕಾಲ ಸಂಶೋಧನ ಸಹಾಯಕರಾಗಿ ನನ್ನೊಂದಿಗೆ ಇದ್ದು, ಕ್ಷೇತ್ರಕಾರ್ಯದಲ್ಲಿ ತೊಡಗಿದ ನನ್ನ ವಿದ್ಯಾರ್ಥಿ ಶ್ರೀ ಬಳಿರಾಮ ರಾಠೋಡ ಅವರನ್ನು ನಾನು ಪ್ರೀತಿ ಪೂರ್ವಕವಾಗಿ ಸ್ಮರಿಸುವೆ. ರಾಯಚೂರು ಜಿಲ್ಲೆಯ ಆಯಾ ಹಳ್ಳಿಗಳಿಗೆ ನಾವು ಕ್ಷೇತ್ರಕಾರ್ಯಕ್ಕೆಂದು ಹೋಗಿ ತತ್ವಪದಕಾರರಿಗೆ ಸಂಬಂಧಿಸಿದ ಸ್ಮಾರಕಗಳನ್ನು ಶೋಧಿಸುವಾಗ, ಮಾಹಿತಿಯನ್ನು ಸಂಗ್ರಹಿಸುವಾಗ ನಮಗೆ ನೆರವು ನೀಡಿದ ಪ್ರೊ ಶಾಶ್ವತಸ್ವಾಮಿ ಮುಕ್ಕುಂದಿ ಮಠ, ಶ್ರೀ ಗಿರಿರಾಜ ಹೊಸಮನಿ, ಡಾ. ಸ್ವಾಮಿರಾವ್ ಕುಲಕರ್ಣಿ, ಡಾ. ಕೆ. ಶಶಿಕಾಂತ, ಪ್ರೊ. ಶಂಕರರಾವ್ ಉಭಾಳೆ, ಡಾ. ಅರವಿಂದ ರಾಠೋಡ, ಡಾ. ಶಾಂತಪ್ಪ ಡಂಬಳ, ಶ್ರೀ ಶರಣಪ್ಪ ಗುಡದಿನ್ನಿ, ಡಾ. ಬಸವರಾಜ ಸಬರದ, ಶ್ರೀ ಶಿವರಂಜನ್ ಸತ್ಯಂಪೇಟೆ ಮುಂತಾದವರನ್ನು ಹಾಗೂ ತತ್ವಪದಕಾರರ ಬಗ್ಗೆ ಅಧಿಕೃತ ಮಾಹಿತಿ ನೀಡಿದ ಅನೇಕ ಹಳ್ಳಿಗಳ ಹಿರಿಯರನ್ನು, ಬಂಧುಗಳನ್ನು ನಾನಿಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುವೆ.

ಈ ಸಂಪುಟವನ್ನು ಅಚ್ಚುಕಟ್ಟಾಗಿ, ಆಕರ್ಷಕವಾಗಿ ಹಾಗೂ ವಿಶೇಷ ಕಾಳಜಿವಹಿಸಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾರ್ಕ್ ಕ್ವಾಲಿಟಿ ಆಫಸೆಟ್ ಮುದ್ರಣಾಲಯದ ಒಡೆಯರಾದ ಶ್ರೀ. ಜಿ.ಬಿ. ಪಾಟೀಲ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಒಟ್ಟಿನಲ್ಲಿ ಪ್ರಸ್ತುತ ಸಂಪುಟದ ರಚನೆ ನನಗೆ ತುಂಬ ತೃಪ್ತಿಯನ್ನು ಕೊಟ್ಟಿದೆ. ಇದನ್ನು ಓದುವ ಸಹೃದಯರು ನೀಡುವ ಸಲಹೆ – ಸೂಚನೆಗಳನ್ನು ನಾನು ಹಾರ್ದಿಕವಾಗಿ ಸ್ವಾಗತಿಸುವೆ.

ಡಾ. ವ್ಹಿ.ಜಿ. ಪೂಜಾರ

ಪ್ರಧಾನ ಸಂಶೋಧಕರು ಹಾಗೂ ಲೇಖಕರು

ಪ್ರಸ್ತಾವನೆ

ಜೀವನವೊಂದು ನಿರಂತರ ಹೋರಾಟ. ಮಾನವ ಹುಟ್ಟಿನಿಂದ ಸಾವಿನವರೆಗೆ ಅನುಭವಿಸುವ ಸಿಹಿ-ಕಹಿ ಸುಖ-ದುಃಖ ಸೋಲು-ಗೆಲುವು ಆತ ಕಟ್ಟಿಕೊಂಡು ಬಂದ ಬುತ್ತಿ. ಈ ಬಾಳ ಬುತ್ತಿಯನ್ನು ಸಿಹಿಗೊಳಿಸಿ ಸವಿಯುವುದರಲ್ಲಿಯೇ ಆತನ ಜಾಣ್ಮೆಯಡಗಿದೆ. ಇದು ಬುದ್ಧಿವಂತರಿಗೆ ಸಿಹಿಯಾಗಿಯೂ ಮಂದಮತಿಗಳಿಗೆ ಕಹಿಯಾಗಿಯೂ ಮಾರ್ಪಡುವುದು ಸಹಜ. ಈ ರೀತಿ ಬಾಳಿನಲ್ಲಿ ಸಿಹಿ-ಕಹಿ ಉಂಡು ಕ್ಷಣಿಕ ಆನಂದದಿಂದ ಶಾಶ್ವತವಾದ ಆನಂದವನ್ನು ಅರಸುತ್ತ ಮಾನವ ನಡೆದದ್ದನ್ನು ಆದಿಕಾಲದಿಂದಲೂ ಕಾಣಬಹುದು. ಜೀವನವನ್ನು ಅರ್ಥಪೂರ್ಣವಾಗಿಸಿಕೊಂಡು ಪರಿಪೂರ್ಣದತ್ತ ಸಾಗುವುದೇ ಆತನ ಗುರಿ. ಇಂಥ ಗುರಿಯನ್ನು ಮುಟ್ಟಲು ಆತ ಹಲವು ಮಾರ್ಗಗಳನ್ನು ಅನುಸರಿಸಿದ್ದಾನೆ. ಅವುಗಳಲ್ಲಿ ಅನುಭಾವ ಮಾರ್ಗವೂ ಒಂದು. ಜೀವಾತ್ಮ-ಪರಮಾತ್ಮನೊಂದಿಗೆ ಸಮರಸಗೊಂಡು ಮುಕ್ತಿಯನ್ನು ಪಡೆಯಬೇಕೆಂಬ ನಿರಂತರವಾದ ಹಂಬಲವನ್ನು ಕೈಗೂಡಿಸಿಕೊಡುವ ಸಾಧನ (ಮಾರ್ಗವೇ) ವೇ ಅನುಭಾವ ಮಾರ್ಗ.

ನಮ್ಮ ದೇಶದಲ್ಲಿ ಹಲವಾರು ಸಾಧು-ಸಂತರು ಅನುಭಾವಿಗಳು ತತ್ವಪದಕಾರರು ಈ ಮಾರ್ಗವನ್ನು ಅನುಸರಿಸಿರುವರು. ಅಂಥವರಲ್ಲಿ ಕರ್ನಾಟಕದ ಶಿವ-ಶರಣರು ಹರಿದಾಸರು ಮತ್ತು ತತ್ವಪದಕಾರರು ಗಮನಾರ್ಹರು. ಇವರು ತಮ್ಮ ಅನುಭಾವವನ್ನು ವಚನ-ಸ್ವರವಚನ ತತ್ವಪದ ಭಜನೆ ಹಾಡು ಕೀರ್ತನೆ ಉಗಾ-ಭೋಗ ಸುಳಾದಿಗಳ ಮೂಲಕ ವ್ಯಕ್ತಪಡಿಸಿದರು. ಈ ಸಾಹಿತ್ಯ ಕನ್ನಡದ ಸಂಪತ್ತು. ಕನ್ನಡಕ್ಕೆ ವಿಶ್ವ ಸಾಹಿತ್ಯದಲ್ಲೊಂದು ಸ್ಥಾನವನ್ನು ಕಲ್ಪಿಸಿಕೊಟ್ಟಂಥದು. ಶರಣರ ಹರಿದಾಸರ ಮತ್ತು ತತ್ವಪದಕಾರರ ಅಂತರಂಗದ ಅನುಭಾವವನ್ನೊಳಗೊಂಡ ಈ ಸಾಹಿತ್ಯ ಚಿರನೂತನ ಮೌಲ್ಯಗಳನ್ನೊಳಗೊಂಡಂಥದು. ತತ್ವಪದಕಾರರ ತತ್ವಪದಗಳಂತೂ ಸಮಗ್ರ ಮಾನವ ಜನಾಂಗಕ್ಕೆ ಮಾರ್ಗದರ್ಶಿಯಾಗಬಲ್ಲ ಅನೇಕ ತತ್ವಗಳನ್ನು ಜೀವನಾದರ್ಶಗಳನ್ನು ಒಳಗೊಂಡದ್ದನ್ನು ಅರಿಯಬಹುದು.

ಕನ್ನಡ ತತ್ವ ಪದಗಳು ಪಂಡಿತರಿಗೂ ಪಾಮರರಿಗೂ ಅಪ್ಯಾಯಮಾನವಾಗಿವೆ, ಸಾಕಷ್ಟು ಜನಪ್ರಿಯತೆಯನ್ನು ಪಡೆದಿವೆ. ಇವುಗಳ ವಸ್ತು ಅಂದಂದಿನ ಸಮಕಾಲೀನ ವಿಷಯವಾಗಿದೆ. ಇವುಗಳಲ್ಲಿನ ಎಷ್ಟೋ ತತ್ವಗಳು, ನೀತಿ ನುಡಿಗಳು ಜನತೆಗೆ

ಅನುಕರಣೆಗೆ ಯೋಗ್ಯವಾಗಿರುವುದರಿಂದ ಇಂದಿನ ದಿನಗಳಲ್ಲಿ ಇವು ಪ್ರಸ್ತುತವೆನಿಸುತ್ತವೆ. ಈ ತತ್ವ ಪದಗಳ ಹಾಗೂ ಇವುಗಳನ್ನು ರಚಿಸಿದ ತತ್ವಪದಕಾರರ ಅಧ್ಯಯನವಿಂದು ವ್ಯಾಪಕವಾಗಿ ನಡೆದಿದೆ.

ಹೈದ್ರಾಬಾದ ಕರ್ನಾಟಕ ಪ್ರದೇಶವು ತತ್ವಪದ ಸಾಹಿತ್ಯದ ನೆಲೆವೀಡಾಗಿದೆ. ಇಲ್ಲಿ ವಿವಿಧ ಮತದ ತತ್ವ ಪದಕಾರರು ಕೋಮು ಸೌಹಾರ್ದತೆ ಭಾವವುಳ್ಳ ತತ್ವಪದಗಳನ್ನು ಬರೆದುದು ವಿಶೇಷವೆನಿಸಿದೆ. ಈ ಭಾಗದ ರಾಯಚೂರು, ಬೀದರ, ಯಾದಗಿರಿ, ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಅನೇಕ ತತ್ವಪದಕಾರರು ಇರುವುದನ್ನು ಗುರುತಿಸುವೆವು. ಇವರು ಬರೆದ ಅನೇಕ ತತ್ವಪದಗಳನ್ನು ಈ ಭಾಗದಲ್ಲಿ ಈಗಲೂ ಭಜನಾ ಸಂದರ್ಭದಲ್ಲಿ ಜನ ಹಾಡುವುದುಂಟು. ತತ್ವಪದಕಾರರಿಗೆ ಯಾವುದೇ ಜಾತಿಭೇದವಿಲ್ಲ. ಹಿಂದೂ ಮುಸ್ಲಿಂ ಎಂಬ ಭೇದಭಾವವಿಲ್ಲದೆ ಎಲ್ಲರೂ ಈ ಭಾಗದಲ್ಲಿ ತತ್ವಪದಗಳನ್ನು ರಚಿಸಿದ್ದು ವಿಶೇಷವಾಗಿದೆ. ಈ ತತ್ವಪದಕಾರರ ಸಾಹಿತ್ಯ ನಮ್ಮ ಹಳ್ಳಿಗಾಡಿನ ಜನರಲ್ಲಿ ಭ್ರಾತೃತ್ವ ಭಾವನೆಯನ್ನು ಬೆಳೆಸಿದೆ. ಊರು-ಕೇರಿ ಗುಡಿ ಗುಂಡಾರ, ಮಸೀದಿ ಮುಂತಾದೆಡೆಗಳಲ್ಲಿ ತತ್ವ ಪದಗಳನ್ನು ಹಾಡುವುದುಂಟು.

ತತ್ವ ಪದಗಳು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಭಾವೈಕ್ಯತೆಗೆ ನೀರೆರೆದು ಪೋಷಿಸಿವೆ. ಕನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ ತತ್ವಪದ ಸಾಹಿತ್ಯದ ಅಧ್ಯಯನ ಅನ್ವೇಷಣೆ ಹಾಗೂ ತತ್ವಪದಕಾರರ ಸ್ಮಾರಕಗಳನ್ನು ಕುರಿತಾಗಿ ಅಧ್ಯಯನ ನಡೆದಿದೆ. ಆದರೆ ತತ್ವಪದಕಾರರ ಸ್ಮಾರಕಗಳನ್ನು ಸಂಗ್ರಹಿಸಿ ಚಿತ್ರರೂಪದಲ್ಲಿ ಪ್ರಕಟಿಸುವ ಕಾರ್ಯ ಇದುವರೆಗೆ ನಡೆದಿರಲಿಲ್ಲ. ಪ್ರಸ್ತುತ ಕೃತಿಯಲ್ಲಿ ರಾಯಚೂರು ಜಿಲ್ಲೆಯ ತತ್ವಪದಕಾರರಿಗೆ ಸಂಬಂಧಿಸಿದ ಮನೆ, ದೇವಾಲಯ, ಸಮಾಧಿ, ಮಠ, ಬೆಟ್ಟ, ಹಾಗೂ ಇನ್ನಿತರ ಲಭ್ಯವಿರುವ ಸ್ಮಾರಕಗಳನ್ನು ಕ್ಷೇತ್ರಕಾರ್ಯ ನಡೆಸಿ ಗುರುತಿಸಲಾಗಿದೆ. ಆ ಎಲ್ಲ ಸ್ಮಾರಕಗಳನ್ನು ಚಿತ್ರೀಕರಿಸಿಕೊಂಡು ಈ ಕೃತಿಯಲ್ಲಿ ಮುದ್ರಿಸಿದೆ. ಈ ಸ್ಮಾರಕಗಳು ತತ್ವಪದಕಾರರ ಬದುಕಿನ ಮೇಲೆ ಹೊಸ ಬೆಳಕು ಬೀರಬಲ್ಲುವಾಗಿವೆಯೆಂದು ಭಾವಿಸಲಾಗಿದೆ. ಈ ಭಾಗದ ಅದರಲ್ಲೂ ಗುಲಬರ್ಗಾ ಯಾದಗಿರಿ ಹಾಗೂ ರಾಯಚೂರ ಜಿಲ್ಲೆಗಳಲ್ಲಿ ಆಗಿ ಹೋದ ತತ್ವಪದಕಾರರ ಸ್ಮಾರಕಗಳ ರೂಪದಲ್ಲಿ ಅವರು ವಾಸಿಸುವ ಮನೆ ಅವರ ಹೆಸರಿನಲ್ಲಿ ನಿರ್ಮಿಸಿದ ದೇವಾಲಯಗಳು ಅವರು ಕೂಡುತ್ತಿದ್ದ ಕಟ್ಟೆಗಳು ನಡೆದಾಡಿದ ಸ್ಥಳಗಳು ಅವರು ಅನುಷ್ಠಾನ ಗೈದ ತಾಣಗಳು ಅವರ ಗದ್ದುಗೆಗಳು ಅವರ ಸ್ಮರಣಾರ್ಥವಾಗಿ ನಡೆಯುವ ಜಾತ್ರೆ ಉತ್ಸವಗಳು ಮುಂತಾದವುಗಳನ್ನು ನಾವು ಇಂದು ಈ ಭಾಗದಲ್ಲಿ ವ್ಯಾಪಕವಾಗಿ ಗುರುತಿಸುವೆವು. ಈ ದಿಶೆಯಲ್ಲಿ ನಾನು ಗುಲಬರ್ಗಾ ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳ ತತ್ವಪದಕಾರರ ಸ್ಮಾರಕಗಳನ್ನು ಗುರುತಿಸಿ ಪ್ರಕಟಿಸುವ

ಸಂಶೋಧನ ಯೋಜನೆಯನ್ನು ಹಮ್ಮಿಕೊಂಡು ಇದನ್ನು ಯಶಸ್ವಿರೀತಿಯಲ್ಲಿ ಪೂರೈಸಿರುವೆ. ಇದರ ಫಲವೇ ತಮ್ಮ ಕೈಯಲ್ಲಿರುವ "ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು." ತತ್ವಪದಗಳ ಅರ್ಥ, ಸ್ವರೂಪ, ಲಕ್ಷಣಗಳು ಹಾಗೂ ಧ್ಯೇಯ-ಧೋರಣೆಗಳನ್ನು ಇಲ್ಲಿ ನಿರೂಪಿಸಬಹುದು. ತತ್ವ ಎಂದರೆ ನಿಯಮ ಸಿದ್ಧಾಂತ ಅಧ್ಯಾತ್ಮ ಕುರಿತ ಚಿಂತನೆ. ಜೀವಾತ್ಮ ಪರಮಾತ್ಮನಲ್ಲಿ ಒಂದಾಗಲು ಚಿಂತಿಸುವ ಚಿಂತನಾ ಕ್ರಮಗಳನ್ನೊಳಗೊಂಡ ಹಾಡುಗಳೇ ತತ್ವಪದಗಳು. ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ವಿವರಿಸುವ ಮಾಧ್ಯಮವೇ ಇವುಗಳು. ಇವುಗಳ ಒಳಹೂರಣ ಅಧ್ಯಾತ್ಮವೇ ಆಗಿದೆ. ಭಕ್ತನು ಪರಮಾತ್ಮನ ಬಗೆಗೆ ತಾಳಿದ ಧ್ಯಾನ ಚಿಂತನೆ, ಭಕ್ತಿ, ಶ್ರದ್ಧೆ, ಅಧ್ಯಾತ್ಮಿಕ ಅನುಭಾವ ಹಾಗೂ ಸಾಮಾಜಿಕ ಚಿಂತನೆ ವಿಡಂಬನೆ ಈ ಪದಗಳಲ್ಲಿ ಬಗೆಬಗೆಯಾಗಿ ವ್ಯಕ್ತಗೊಂಡಿರುವುದುಂಟು. ಶರಣರ ವಚನಗಳಂತೆ ಹರಿದಾಸರ ಕೀರ್ತನೆಗಳಂತೆ, ಈ ತತ್ವಪದಗಳು ತತ್ವಪದಕಾರರಿಂದ ರಚನೆಗೊಂಡು ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿವೆ. ಈ ಪದಗಳು ಜನಸಾಮಾನ್ಯರಿಗೆ ತಿಳಿಯುವ ಹಾಗೆ ಅವರ ನಾಲಿಗೆಯ ಮೇಲೆ ನಲಿಯುವ ನಿತ್ಯದ ಭಾಷೆಯಲ್ಲಿಯೇ ರಚನೆಗೊಂಡಿದ್ದು, ಜನಪರವಾದ ನಿಲುವುಗಳನ್ನು ಜನ ಸಮ್ಮುಖ ಧೋರಣೆಗಳನ್ನು ಒಳಗೊಂಡಿರುವುದು ವಿಶೇಷವಾಗಿದೆ. ತತ್ವಪದಗಳನ್ನು ಸಾಮಾನ್ಯ ಜನರು ಭಜನೆಯ ಹಾಡುಗಳೆಂದು ಅನುಭಾವ ಹಾಡುಗಳೆಂದು ಹಾಗೂ ಕೈವಲ್ಯ ಪದಗಳೆಂದು ಕರೆದಿದ್ದಾರೆ. ಇಂದಿಗೂ ಹಳ್ಳಿಗಳಲ್ಲಿ ಸಾಮಾನ್ಯ ಜನ ಈ ಹಾಡುಗಳನ್ನು ಭಜನೆಯ ಸಂದರ್ಭದಲ್ಲಿ ಹಾಡುವುದುಂಟು. ಈ ಪದಗಳಲ್ಲಿ ಪರಮಾತ್ಮನ ಬಗೆಗಿನ ಅನುಭವ ವ್ಯಕ್ತಗೊಂಡುದರಿಂದ ಇವಕ್ಕೆ ಅನುಭಾವಪದಗಳೆಂದೂ ಇವನ್ನು ಏಕದಾರಿಯಂಥ ವಾದ್ಯದೊಂದಿಗೆ ಸ್ವರವೆತ್ತಿ ಹಾಡುವುದರಿಂದ ಇವಕ್ಕೆ ಸ್ವರವಚನವೆಂದೂ, ಅಂತರಂಗದ ಅರಿವಿನ ಮೂಲಭೂತ ತತ್ವಗಳನ್ನು ಅಧ್ಯಾತ್ಮ ತತ್ವಗಳನ್ನು ಇವು ಒಳಗೊಂಡಿದ್ದರಿಂದ ಇವಕ್ಕೆ ತ್ವಪದಗಳೆಂದೂ ಭಜನಾ ಸಂದರ್ಭದಲ್ಲಿ ಹಾಡುವುದರಿಂದ ಇವಕ್ಕೆ ಭಜನಾ ಹಾಡುಗಳೆಂದೂ ಕರೆಯುತ್ತಾರೆ.

ಒಟ್ಟಿನಲ್ಲಿ ಇವು ಪರಮಾತ್ಮನ ಸ್ವರೂಪವನ್ನು ಅರಿಯಲು ಸಹಾಯಕವಾಗುವಂಥವು. ಭಕ್ತಿ ಸಾಧನೆಯಲ್ಲಿ ತೊಡಗಿದ ಜೀವಾತ್ಮನ ಅಂತರಂಗದ ಕರೆಯೇ ಇವುಗಳ ವಸ್ತು. ಭಕ್ತನ ಆತ್ಮಾನುಭವಕ್ಕೆ ಇವು ಸಂಬಂಧಿಸಿದ್ದರಿಂದ ಇವಕ್ಕೆ ಕೈವಲ್ಯ ಪದಗಳೆಂದೂ ಕರೆದಿದ್ದಾರೆ. ಇವನ್ನು ಕಟ್ಟಿ ಹಾಡಿದವರು ಶರಣ ಮಾರ್ಗಾವಲಂಬಿಗಳಾದ ಅನುಭಾವಿ ಕವಿಗಳು, ಮಠಾಧಿಪತಿಗಳು, ಸಾಧು-ಸಂತರು, ತತ್ವಪದಕಾರರು ಹಾಗೂ ಅವಧೂತರು. ಕನ್ನಡದಲ್ಲಿ ಮೊಟ್ಟ-ಮೊದಲು ಈ ಬಗೆಯ ಹಾಡುಗಳನ್ನು ಹನ್ನೆರಡನೆಯ ಶತಮಾನದ ಬಸವಾದಿ ಶರಣರೇ ಬರೆದವರಾದರೂ

ಅವರ ವಚನಗಳು ಪ್ರಚಾರಕ್ಕೆ ಬಂದಷ್ಟು ಇವು ಬರಲಿಲ್ಲ. ಬಹುಶಃ ಇದಕ್ಕೆ ಕಾರಣ ತತ್ವಪದಗಳು ತತ್ವ ಜಡತ್ವ ಹೊಂದಿದ್ದು ಹಾಗೂ ಗೇಯಾಂಶವನ್ನು ಒಳಗೊಂಡುದೇ ಇರುವುದು ಆಗಿದೆ.

ಮುಂದೆ ಹದಿನೈದನೆಯ ಶತಮಾನದ ನಿಜಗುಣ ಶಿವಯೋಗಿ ಈ ಬಗೆಯ ಪದಗಳ ಪ್ರಕಾರಕ್ಕೆ ಆದ್ಯನೆನಿಸಿದ. ಈತನ ತರುವಾಯ ಇಪ್ಪತ್ತೊಂದನೆಯ ಶತಮಾನದವರೆಗೂ ಅನೇಕ ತತ್ವಪದಕಾರರು ಗಹನವಾದ ಅಧ್ಯಾತ್ಮ ತತ್ವಗಳು ಜನತೆಗೆ ಸುಲಭವಾಗಿ ತಿಳಿಯುವಂತೆ ಅವರ ನಿತ್ಯದ ಅನುಭವಕ್ಕೆ ಬರುವ ವ್ಯಕ್ತಿ ವಸ್ತು ಪ್ರಾಣಿ ಹಾಗೂ ಪಕ್ಷಿಗಳ ಸಂಕೇತಗಳನ್ನು ಬಳಸಿ ಇವನ್ನು ರಚಿಸುತ್ತ ಬಂದುದನ್ನು ಅರಿಯುವೆವು. ಈ ಪದಗಳು ಜನತೆಯ ನಿತ್ಯದ ಜೀವನ ವಿವರಗಳನ್ನೇ ಮೇಲ್ನೋಟಕ್ಕೆ ಒಳಗೊಂಡಂತೆ ಕಂಡರೂ ಇವಕ್ಕೆ ಬೇರೊಂದು ಪಾರಮಾರ್ಥಿಕ ಅರ್ಥವೂ ಇರುತ್ತದೆ. ಈ ಹಾಡುಗಳು ಪರಮಾತ್ಮನ ಸ್ವರೂಪವನ್ನು ಜೀವ ಜಗತ್ತಿನ ಇರುವಿಕೆಯ ಮೂಲ ಕಾರಣಗಳನ್ನು ಕುರಿತಾಗಿ ಚಿಂತನೆ ನಡೆಸಿ ಹಾಡಿದಂಥವು ಆಗಿವೆ. ಈ ಹಾಡುಗಳಲ್ಲಿ ಸಾಹಿತ್ಯವುಂಟು, ಸಂಗೀತವುಂಟು. ಸಾಹಿತ್ಯ ಸಂಗೀತಗಳ ಮೂಲಕ ಇವು ಹೊರ ಹೊಮ್ಮುವಂಥವು ಆಗಿವೆ.

ಈ ಹಾಡುಗಳನ್ನು ಬರೆದಂಥವರು ಶರಣರು ಸಾಧುಗಳು, ಸಂತರು, ಪಂಡಿತರು–ಪಾಮರರು ನಾಥರು ಅವಧೂತರು ಆರೂಢರು ಸೂಫಿಗಳು ಇವರಲ್ಲಿ ಯಾರೇ ಆಗಿರಬಹುದು. ತತ್ವಪದಕಾರರಿಗೆ ಯಾವುದೇ ಜಾತಿ ಭೇದವಿಲ್ಲ. ಮತ್ತು ಇವರು ಯಾವುದೇ ತಾತ್ವಿಕ ಚೌಕಟ್ಟನ್ನು ಅನುಸರಿಸಿದವರೂ ಅಲ್ಲ. "ನಮ್ಮ ತತ್ವಪದ ಚಿಂತನೆ ಹಿಂದೂ ಧರ್ಮದ ವಿಕೃತರೂಪ. ತತ್ವಪದಕಾರರು ಈ ಧರ್ಮದ ಸೇವಕ ವರ್ಗ ಧಾರ್ಮಿಕ ಸೇವಕವರ್ಗ. ಸಾಂಸ್ಕೃತಿಕ ಸಮಾನತೆಯನ್ನು ಸಾಧಿಸಿ ಕೊಳ್ಳುವುದರ ಮೂಲಕ ಆರ್ಥಿಕ ಸಮಾನತೆಯನ್ನು ಪಡೆಯಬಹುದೆಂದು ಹೊರಟ ಅನೇಕ ಭಾರತೀಯ ಉಪ ಸಂಸ್ಕೃತಿಗಳ ಪ್ರಯತ್ನ ಮತ್ತು ಸೋಲಿನ ಪರಿಣಾಮಗಳಲ್ಲಿ ನಮ್ಮ ತತ್ವಪದಕಾರರದು ಒಂದು ನಮ್ರ ಪ್ರಯತ್ನ"ವಾಗಿದೆ. (ರಾಮಚಂದ್ರೇಗೌಡ.ಹಿ.ಶಿ.: "ವಚನ ದಾಸ ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ತತ್ವಪದಗಳು" (ಕನ್ನಡ ತತ್ವಪದಕಾರರು ಪುಟ – ೩೭)

ಮೂಲತಃ ತತ್ವಪದಕಾರರು ಮೇಲ್ನೋಟಕ್ಕೆ ಬದುಕಿಗೆ ಬೆನ್ನು ತೋರಿಸಿದವರಂತೆ ಕಂಡರೂ ವಿಚಾರಿಸಿ ನೋಡಿದಾಗ ಹಾಗೇನೂ ಇಲ್ಲ ಅನಿಸುತ್ತದೆ. ಇವರು ಸಂಸಾರಿಗಳು. ಸಂಸಾರ ಕೊಡುವ ಸಿಹಿ ಗುಟುಕಿಗೆ ಸದಾ ಬಾಯಿ ತೆರೆಯುವ ಆಶಾವಾದಿಗಳಾಗಿದ್ದರೆಂಬುದು ವಿದಿತವಾಗುವುದು. ಬದುಕಿನಲ್ಲಿ ಇವರು ಅನುಭವಿಸಿದ

ಅನೇಕ ಕಷ್ಟಕಾರ್ಪಣ್ಯಗಳನ್ನು ಆಹ್ವಾನಗಳನ್ನು ದಿಟ್ಟತನದಿಂದ ಎದುರಿಸಿ ಜಯಶಾಲಿಗಳಾಗಿದ್ದುದನ್ನು ಇವರ ಅನೇಕ ತತ್ವ ಪದಗಳಿಂದ ಅರಿಯುವೆವು.

ತತ್ವಪದಗಳು ರಾಗ–ತಾಳ, ಹಾಗೂ ಲಯಗಳಿಗೆ ಅನುಗುಣವಾಗಿ ಹಾಡಲಿಕ್ಕೆ ಬರುವಂಥ ಶಾಸ್ತ್ರೀಯ ಹಾಡುಗಳಾಗಿವೆ. ಇವುಗಳನ್ನು ಬರೆದವರು ನಿರಕ್ಷರಿಗಳಲ್ಲ. ಅಲ್ಪ ಸ್ವಲ್ಪ ಕಲಿತಂಥ ಶಿಕ್ಷಿತರು. ಈ ಪದಗಳಲ್ಲಿ ಅಂಥ ಪಾಂಡಿತ್ಯ ಪ್ರದರ್ಶನವೇನೂ ಇರದು. ಇವುಗಳ ಜೀವಾಳ ಅಧ್ಯಾತ್ಮವೇ ಆಗಿದೆ. ಒಮ್ಮೊಮ್ಮೆ ಅಧ್ಯಾತ್ಮ ವಿಷಯ ಪ್ರೌಢಶೈಲಿಯಲ್ಲೂ ಅಭಿವ್ಯಕ್ತಗೊಂಡುದುಂಟು. ಕೆಲ ಪದಗಳಲ್ಲಿ ಹೀಗಾಗಿದೆ. ಅವುಗಳಲ್ಲಿ ಬೆಡಗು ತತ್ವ ವಿಲಾಸ ಕಾಣಿಸಿಕೊಂಡಿದೆ. ಹೆಚ್ಚಾಗಿ ಈ ಪದಗಳು ಸಾಮಾನ್ಯ ಜನರಿಗೆ ತಿಳಿಯುವ ಸರಳ ಭಾಷೆಯಲ್ಲಿಯೇ ರಚನೆಗೊಂಡಿವೆ. ಈ ಪದಗಳು ಮೇಲ್ನೋಟಕ್ಕೆ ಶಿಷ್ಟಸಾಹಿತ್ಯಕ್ಕೆ ಸೇರುವಂಥವು ಎಂದು ಕಂಡರೂ ಒಳಹೊಕ್ಕು ನೋಡಿದಾಗ ಅವು ಜಾನಪದ ಹಾಡುಗಳೆಂದೇ ತೋರುವವು. ಅವುಗಳಲ್ಲಿ ಜಾನ ಪದ ಅಂಶಗಳು, ಜನಪದರ ಜೀವನ ಹಾಸು ಹೊಕ್ಕಾಗಿ ಬೆರೆತುದನ್ನು ಕಾಣುವೆವು. ಈ ಪದಗಳ ಲಕ್ಷಣವನ್ನು ಹೀಗೆ ನಿರೂಪಿಸಬಹುದು. "ಸಾಮಾನ್ಯವಾಗಿ ಹಾಡುಗಳಲ್ಲಿ ಛಂದೋಬದ್ಧವಾದ ಪದ (ಚರಣ–ನುಡಿವಚನ)ಗಳು ಬೆಸ ಸಂಖ್ಯೆಯಲ್ಲಿ ಜೋಡಿಸಲ್ಪಟ್ಟಿರುತ್ತವೆ. ಅವುಗಳ ಆದಿಯಲ್ಲಿ ಪಲ್ಲವ (ಪಲ್ಲವಿ) ಎನ್ನುವ ಒಂದು ಆವರ್ತಕ ಪದ (ಚರಣ–ನುಡಿ ವಚನ) ವಿದ್ದು ಉಳಿದ ಪ್ರತಿ ಚರಣದ ಆದಿಯು ಅವರ್ತನದಿಂದ ಹಾಡಲಿಕ್ಕಾಗಿಯೇ ಇರುತ್ತದೆ" (ಚೆನ್ನಪ್ಪ ಎರೆಸೀಮೆ. (ಸಂ) : ಸಿದ್ಧಗಂಗಾಶ್ರೀ ಪುಟ – ೮೯೩)ಇಂಥ ಲಕ್ಷಣಗಳುಳ್ಳ ಹಾಡುಗಳೇ ತತ್ವಪದಗಳು. ಗೇಯ ಪ್ರಧಾನವಾದ ಈ ಪದಗಳನ್ನು ಸಂಗೀತವಾದ್ಯ (ಏಕದಾರಿ– ಆಹುಜಾ – ಗಾಳಿವಾದ್ಯ)ದೊಂದಿಗೆ ಹಾಡುವರು. ರಾಗ ಬದ್ಧವಾಗಿ ಹಾಡಿದಾಗಲೇ ಇವುಗಳ ಅರ್ಥ ಸ್ಫುಟವಾಗುವುದು. ಈ ಹಾಡುಗಳ ಮೇಲೆ ರಾಗ – ನಿರ್ದೇಶನವಿರುತ್ತದೆ. ಕ್ವಚಿತ್ತಾಗಿ ತಾಳ ನಿರ್ದೇಶನವು ಇದ್ದುದೂ ಕಂಡುಬರುತ್ತದೆ. ಕೆಲವೊಮ್ಮೆ ಈ ಪದಗಳು ರಾಗ ತಾಳಗಳನ್ನು ಹೊಂದಿಯು ಯಾವುದೇ ನಿರ್ದೇಶನವಿಲ್ಲದೆಯೂ ಇರಬಹುದು. ಜನಪ್ರಿಯ ಹಾಡುಗಳಾದ ಇವನ್ನು ಜನ ಪ್ರತಿ ಮಾಡಿಕೊಳ್ಳುವಾಗ ಅವರಿಚ್ಛೆಗನುಗುಣವಾಗಿ ರಾಗ – ತಾಳ ನಿರ್ದೇಶನಗಳಿಗಾಗಿ ಆಗಮ – ಲೋಪಗಳನ್ನು ಇವುಗಳಲ್ಲಿ ಮಾಡಿರುವುದನ್ನು ಕಾಣಬಹುದು.

ಸಾಮಾನ್ಯವಾಗಿ ಎಲ್ಲಾ ತತ್ವಪದಗಳ ಪ್ರಾರಂಭದಲ್ಲಿ ಹಾಡಲೆಂದು ಪಲ್ಲವಿ ಇರುತ್ತದೆ. ಕೆಲವೊಮ್ಮೆ ವಿಶೇಷ ಅರ್ಥವನ್ನು ಸೂಚಿಸಲು ಅನುಪಲ್ಲವಿಯೂ ಇರುವುದುಂಟು. ಪ್ರತಿನುಡಿಯ ಮೊದಲು ಆವರ್ತನವಾಗುವ ಈ ಪಲ್ಲವಿಯು ಪದ್ಯದ ಸಾರವನ್ನು ಹೇಳುತ್ತದೆ. ಇದು ನುಡಿಯಿಂದ ನುಡಿಗೆ ಕೊಂಡಿಯಾಗಿ

ನಿಂತು ಭಾವವನ್ನು ಬೆಸೆದು ಅರ್ಥ ಸಾಧ್ಯತೆಯನ್ನು ವಿಸ್ತಾರಗೊಳಿಸುತ್ತದೆ. ಪಲ್ಲವಿಗಳು ಸಾಮಾನ್ಯವಾಗಿ ಒಂದು ಪಾದದಿಂದ ಹಿಡಿದು ನಾಲ್ಕು ಪಾದಗಳವರೆಗೆ ವ್ಯಾಪ್ತಿಯನ್ನು ಪಡೆದಿರುತ್ತವೆ. ಎರಡು ಪಾದದ ನುಡಿಗಳು ಇದ್ದರೆ ಒಂದು ಪಾದದ ಪಲ್ಲ, ನಾಲ್ಕು ಪಾದದ ನುಡಿಗಳು ಇದ್ದರೆ – ಹೆಚ್ಚಾಗಿ ಎರಡು ಪಾದದ ಪಲ್ಲ, – ಕ್ವಚಿತ್ತಾಗಿ ನಾಲ್ಕು ಪಾದದ ಪಲ್ಲ – ಷಟ್ಪದಿಯಾಗಿದ್ದರೆ ಅದರ ಅರ್ಧ ದಷ್ಟು ಅಂದರೆ, ಮೂರು ಪಾದದ ಪಲ್ಲ ವಿರುವುದುಂಟು.

ತತ್ವಪದಗಳು ಸಾಮಾನ್ಯವಾಗಿ ಒಂದಕ್ಕಿಂತ ಹೆಚ್ಚು ನುಡಿಗಳನ್ನೊಳಗೊಂಡಿರುತ್ತವೆ. ಸಾಮಾನ್ಯವಾಗಿ ಅವು ಮೂರು, ಐದು, ಏಳು, ಒಂಬತ್ತು, ಹನ್ನೊಂದು, ಹದಿಮೂರು ಹೀಗೆ ಬೆಸಸಂಖ್ಯೆಯಲ್ಲಿ ನುಡಿಗಳನ್ನು ಹೊಂದಿರುತ್ತವೆ. ಅಪರೂಪಕ್ಕೆ ಒಮ್ಮೊಮ್ಮೆ ಸರಿಸಂಖ್ಯೆಯ ನುಡಿಯ ಹಾಡುಗಳೂ ಸಿಗುತ್ತವೆ. ಹಾಗೆ ನೋಡಿದರೆ ಒಂದು ತತ್ವಪದಕ್ಕೆ ಇಷ್ಟೇ ಸಂಖ್ಯೆಯ ನುಡಿಗಳಿರಬೇಕೆಂಬ ನಿಯಮವೇನೂ ಇಲ್ಲ. ಆದರೂ ಸಾಮಾನ್ಯವಾಗಿ ಈ ಪದಗಳಲ್ಲಿ ಕಡಿಮೆಯೆಂದರೆ ಮೂರು ನುಡಿ ಅತಿ ಹೆಚ್ಚೆಂದರೆ ಮೂವತ್ತೈದು ನುಡಿಗಳು ಇರುವುದುಂಟು.

ಪ್ರತಿ ತತ್ವಪದದ ಕೊನೆಗೆ ಆಯಾ ತತ್ವಪದಕಾರರ ಅಂಕಿತವೂ ಇರುವುದುಂಟು. ಇಂತಹ ಅಂಕಿತವು ಕೆಲವೊಮ್ಮೆ ಪಲ್ಲವಿಯಲ್ಲಿ ಮತ್ತು ಪ್ರತಿನುಡಿಯ ಕೊನೆಯಲ್ಲಿ ಬರುವುದುಂಟು. ಆದರೆ ಇದು ಅಪರೂಪ. ಸಾಮಾನ್ಯವಾಗಿ ತತ್ವಪದಕಾರನ ಅಂಕಿತವು ಪ್ರತಿಹಾಡಿನ ಕೊನೆಯಲ್ಲಿಯೇ ಬರುವುದುಂಟು. ಇದರಿಂದ ಆ ಹಾಡಿನ ಕರ್ತೃತ್ವವನ್ನು ಗುರುತಿಸಲು ಸಹಾಯವಾಗುತ್ತದೆ. ಕೆಲವು ತತ್ವಪದಕಾರರು ತಮ್ಮ ಹಾಡುಗಳಲ್ಲಿ ಭಿನ್ನ ಭಿನ್ನ ಅಂಕಿತಗಳನ್ನು ಬಳಸಿರುವುದನ್ನು ಕಾಣಬಹುದು.

ತತ್ವಪದಗಳಲ್ಲಿ ಇಂಥದೇ ವಸ್ತು ಇರಬೇಕೆಂಬ ನಿಯಮವಿಲ್ಲ. ಸಾಮಾನ್ಯವಾಗಿ ಅವುಗಳಲ್ಲಿ ಅಧ್ಯಾತ್ಮ ವಿಚಾರ ಗುರುಶಿಷ್ಯರ ಸಂಬಂಧ ಕಾಯಕ– ದಾಸೋಹ, ಶರಣಸತಿ – ಲಿಂಗಪತಿ ಎಂಬ ಭಾವ, ಅರಿವು, ಆಚಾರ ಅನುಭಾವ ನಿರೂಪಣೆ, ಆತ್ಮ ನಿವೇದನೆ, ನೀತಿ ಬೋಧನೆ, ಸಮಾಜ ವಿಡಂಬನೆ ಮೌಢ್ಯಗಳ ಖಂಡನೆ ಜಾತ್ಯತೀತ ಮನೋಭಾವ, ಸಮಾನತೆಯ ಕಳಕಳಿ, ಜೀವಪರ ಚಿಂತನೆ ಇತ್ಯಾದಿ ವಿಷಯಗಳು ಈ ಪದಗಳಿಗೆ ವಸ್ತುವಾದುದನ್ನು ಗುರುತಿಸುವೆವು.

ಗಂಡ–ಮಿಂಡ ಅತ್ತಿ–ಅತ್ತಿಗೆ ಮಾವ–ಮೈದುನ ಅಕ್ಕ–ಮಕ್ಕಳು ಮಾವ–ಅಳಿಯ ಗಂಡ–ಹೆಂಡತಿ ಮುಂತಾದ ಸಂಬಂಧವಾಚಿ ಪದಗಳನ್ನು ಅನುಭಾವದ ಪರಿಭಾಷೆಯಾಗಿ ಬಳಸುವುದು ತತ್ವಪದ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಈ ಪದಗಳಲ್ಲಿ ಕುರಿ–ಕೋಣ ನಾಯಿ–ಕತ್ತೆ, ಕೋಳಿ–ಕೋಗಿಲೆ, ಕೋಡಗ, ಎಮ್ಮೆ ಎತ್ತು, ಮುಂತಾದ ಚಿರಪರಿಚಿತ ಪಶು ಪಕ್ಷಿ ಪ್ರಾಣಿಗಳು ಉಪಮೆ ರೂಪಕಗಳಾಗಿ ಬಳಕೆಯಾಗಿವೆ.

ದಿನನಿತ್ಯದ ಜೀವನಾನುಭವದಿಂದ ಹೆಕ್ಕಿ – ತೆಗೆದ ಪ್ರತಿಮೆ ಸಂಕೇತ ಗುಣಾಂಲಕಾರ ರಸ, ಧ್ವನಿ ಗಾದೆ ಒಗಟು ಆಡು ನುಡಿ ಲೋಕಾನುಭವಗಳನ್ನು ನಾವು ವ್ಯಾಪಕವಾಗಿ ಗುರುತಿಸಬಹುದು.

ತತ್ವ ಪದಗಳು ಅಂಶ ಛಂದಸ್ಸಿನಲ್ಲಿರುವುದು ವಿಶೇಷವೆನಿಸಿದೆ. ಏಳೆ ತ್ರಿಪದಿ ಉತ್ಸಾಹ ಛಂದೋವತಂಸ ಅಕ್ಕರ ಗೀತಿಕೆ ಚೌಪದಿ ಷಟ್ಪದಿ ಮುಂತಾದ ಬಂಧಗಳಲ್ಲಿ ಈ ಪದಗಳು ರಚನೆಗೊಂಡುದನ್ನು ಕಾಣುವೆವು. ಕೆಲವೊಮ್ಮೆ ಈ ಪದಗಳು ಸ್ವಚ್ಛಂದವಾಗಿಯೂ ರಚನೆಗೊಂಡುದನ್ನು ನೋಡುವೆವು. ಸ್ವತಂತ್ರ ಮನೋವೃತ್ತಿಯ ತತ್ವಪದಕಾರರು ಭಾವತುಂಬಿ, ಮನ ತುಂಬಿ ತನ್ಮಯತೆಯಿಂದ ಹಾಡುವಾಗ ಚಂದವೆಂದು ಕೊಂಡದ್ದೇ ಅನೇಕ ಬಾರಿ ಛಂದಸ್ಸಾಗಿರುವುದು ಕಂಡುಬರುತ್ತದೆ. ಆದರೂ ದೇಶಿ ಛಂದೋರೂಪಗಳ ನಿಯಮಗಳಿಗೆ ಅನೇಕ ತತ್ವಪದಗಳು ಹೊಂದುತ್ತವೆಂಬುದು ಗಮನಾರ್ಹ ಸಂಗತಿಯಾಗಿದೆ. ರಗಳೆ ತ್ರಿಪದಿ ಅಕ್ಕರ ಚೌಪದಿ ಏಳೆಯಂಥ ಮಟ್ಟುಗಳು ಈ ಹಾಡುಗಳಲ್ಲಿ ಸಾಕಷ್ಟು ಬಳಕೆಗೊಂಡಿವೆ. ಚಂದಮಾಮ, ಕೋಲುಪದ, ಉಯ್ಯಾಲೆ, ಡಂಗುರ ಬುಡುಬುಡಿಕ್ಯಾ ಹಾಗೂ ಮಂಗಳಾರತಿಯ ಪದಗಳ ಧಾಟಿಗಳೂ ಇವುಗಳಲ್ಲಿ ಇಡಿಕಿರಿದಿವೆ.

ತತ್ವ ಪದಗಳ ಜೀವ ಜೀವಾಳವೆಂದರೆ ಸಂಗೀತವೇ ಆಗಿದೆ. ಸಂಗೀತಕ್ಕೂ ತತ್ವಪದಗಳಿಗೂ ಜೀವ ದೇಹ ಸಂಬಂಧದಂತಿದೆ. ಸಂಗೀತಕ್ಕಳವಡಿಸಿ ತತ್ವಪದಗಳನ್ನು ಹಾಡದಿದ್ದರೆ ಅವು ಅರ್ಥವನ್ನು ಸರಿಯಾಗಿ ಸ್ಫುರಿಸವು. ತತ್ವಪದಗಳನ್ನು ನಾದ ಮಾಧುರ್ಯಕ್ಕಾಗಿ ರಾಗ ರಸದ ಪುಟಿಗೆಗಾಗಿ ತಂತಿವಾದ್ಯ, ತಾಳ ವಾದ್ಯ, ಗಾಳಿವಾದ್ಯಗಳೊಂದಿಗೆ ಮೇಳೈಸಿ ಹಾಡುವುದುಂಟು. ತತ್ವಪದಗಳನ್ನು ಒಬ್ಬನೇ ಹಾಡಿದರೂ ಅವನೊಂದಿಗೆ ಪಕ್ಕ ವಾದ್ಯವನ್ನು ನುಡಿಸುವ ಮೇಳವು ಇರುವುದುಂಟು. ತತ್ವಪದಗಳು ಪರಿಪೂರ್ಣತೆಯನ್ನು ಪಡೆಯಲು ತಾಳ ಹಾಕುವ ತಾಳಧರರು ಚರ್ಮವಾದ್ಯನುಡಿಸುವ ಅಹುಂಜಾರು ಹಾಡುವಮೇಳದವರು ಇರಬೇಕಾಗುತ್ತದೆ. ಏಕದಾರಿಯ ಸೂರಿಹಿಡಿದವರು ಇರಬೇಕಾಗುತ್ತದೆ. ಏಕದಾರಿಯ ಸೂರಿಹಿಡಿದು ಒಬ್ಬನೇ ವ್ಯಕ್ತಿಯೂ ತತ್ವಪದಗಳನ್ನು ಹಾಡಿಕೊಳ್ಳಬಹುದಾದರೂ ಪಲವು ವಾದ್ಯಗಳ ಜೊತೆಗೆ ಹಿಮ್ಮೇಳವೂ ಕೂಡಿದರೆ ಹಾಡಿಗೆ ಕೋಡು ಮೂಡುತ್ತದೆ. ಇದರಿಂದ ಸಾಧಕ ಜೀವಿಯೂ ಅಂದರೆ ತತ್ವಪದಕಾರರೂ ನಾದಲೀಲೆಯಲ್ಲಿ ಕರಗಿ ಅಹಂ ನಿರಶನಗೊಂಡು ನಿಜಪದವನ್ನೇರಲು ಅನುಕೂಲವಾಗುತ್ತದೆ.

ತತ್ವಪದಕಾರರು ತಮ್ಮೊಳಗೆ ತಾವು ಮಾತಾಡಿ ಕೊಂಡಂತೆ ತಮಗೆ ತಾವೇ ಬೋಧಿಸಿಕೊಂಡಂತೆ ಆತ್ಮ ನಿವೇದನೆ ಮಾಡಿಕೊಂಡಂತೆ ಹಾಡಿಕೊಂಡರು. ಅಂತರಂಗ ದರ್ಶನ, ಆತ್ಮ ಚಿಂತನ ಧ್ಯಾನ ಶಿವಯೋಗಾನುಭವ ಲೋಕಾನುಭವ ಹಾಗೂ

ಲೋಕವಿಡಂಬನೆ ಹಾಡಾಗಿ ಹೊನಲಾಗಿ ಬಹಿರಂಗಕ್ಕೆ ಪ್ರವೇಶಿಸಿದಾಗ ಸರ್ವಲೋಕವು ಅವರು ತೆಕ್ಕೆಗೆ ಅಮರಿಕೊಂಡಿತು. ಇದರ ಪರಿಣಾಮವಾಗಿ ತತ್ವಪದದಲ್ಲಿನ ಆತ್ಮಶೋಧವು ನೀತಿಬೋಧೆ – ಲೋಕವಿಡಂಬನೆಯಾಗಿ ಪ್ರವಹಿಸಿತು. ಜನಜೀವನದ ಕೊಳೆಯನ್ನು ತೊಳೆಯುವ ಪಾವನ ಗಂಗೆಯಾಗಿ ಈ ತತ್ವಪದಗಳು ಎಲ್ಲರಿಂದ ಮಾನ್ಯತೆಯನ್ನು ಪಡೆಯುವಂಥವಾದುವು. ಈ ಪದಗಳಲ್ಲಿ ಲೌಕಿಕ ವಿಚಾರವಾದ ನೀತಿಬೋಧೆ ಸಮಾಜ ವಿಡಂಬನೆ ಭ್ರಷ್ಟಾಚಾರದ ಖಂಡನೆ, ಜಾತ್ಯತೀತ ಮನೋಭಾವನೆ ಸ್ತ್ರೀ – ಪುರುಷ ಸಮಾನತೆಯ ಭಾವ ಇತ್ಯಾದಿ ಅಂಶಗಳು ಇಲ್ಲಿದ್ದರೂ ಇವುಗಳೊಂದಿಗೆ ಪ್ರಮುಖವಾಗಿ ಅಧ್ಯಾತ್ಮದ ಅರಿವು ಆಚಾರ ಅನುಭಾವ ಮುಂತಾದವುಗಳಿಗೂ ಸ್ಥಾನ ಸಂದುದು ಕಂಡುಬರುತ್ತದೆ.

ತತ್ವಪದಗಳ ವಸ್ತು ಹಿಂದೆಯೇ ಹೇಳಿದಂತೆ ಅಧ್ಯಾತ್ಮವೇ ಆಗಿದೆ. ವ್ಯಕ್ತಿ ತನ್ನ ಆತ್ಮೋದ್ಧಾರ ಮಾಡಿಕೊಳ್ಳಲು ಈ ಪದಗಳನ್ನು ಹಾಡುವುದುಂಟು. ಜೀವಾತ್ಮನ ಕರೆ, ಮೊರೆ ಈ ಪದಗಳಲ್ಲಿ ಹೆಚ್ಚಾಗಿ ವ್ಯಕ್ತಗೊಂಡದ್ದುಂಟು. ಪ್ರಾರ್ಥನೆ, ಸತಿ, ಪತಿ ಭಾವ, ಜೀವದ ಅನಿತ್ಯತೆ, ಮುಕ್ತಿಯ ಹಂಬಲ ಮೌಢ್ಯಗಳ ವಿರೋಧ ಡಂಭಾಚಾರಗಳ ಖಂಡನೆ ಸಮಾಜೋದ್ಧಾರ ಕಳಕಳಿ ಸಾಮಾಜಿಕ ಪ್ರಜ್ಞೆ ಮುಂತಾದ ವಿಷಯಗಳು ಈ ಪದಗಳಲ್ಲಿಎಡೆ ಪಡೆದಿವೆ. ಮೇಲ್ನೋಟಕ್ಕೆ ಈ ಪದಗಳನ್ನು ಕಟ್ಟಿ ಹಾಡಿದ ತತ್ವಪದಕಾರ ಸಂಸಾರದಿಂದ ವಿಮುಖನಾದಂತೆ ಅಸಹಾಯಕನಾದಂತೆ, ಪಲಾಯನ ವಾದಿಯಾದಂತೆ ಕಾಣಿಸುವನು. ಆದರೆ ಒಳಹೊಕ್ಕು ನೋಡಿದಾಗ ಹಾಗಿರದೇ ಸಂಸಾರದಲ್ಲಿದ್ದೇ ಪಾರಮಾರ್ಥ ಸಾಧನೆಗಾಗಿ ಹೋರಾಟ ನಡೆಸಿದ ಅಂತರಾತ್ಮನ ಕರೆ ಅಲ್ಲಿರುವುದು ಗಮನಕ್ಕೆ ಬರುವುದು. ಅನೇಕ ಸಮಸ್ಯೆಗಳಿಗೆ ಮುಖಾಮುಖಿಯಾಗಿ ಸ್ಪಂದಿಸುವ ಜೀವಗುಣವು ಧೈರ್ಯವು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಎದುರಿಸುವ ಚಾಕ ಚಕ್ಯತೆಯೂ ತತ್ವ ಪದಕಾರರಲ್ಲಿರುವುದನ್ನು ಗುರುತಿಸುವೆವು. "ಈಸಬೇಕು ಇದ್ದು ಜೈಸಬೇಕು ಈ ಭವ ಸಾಗರವ" ಎಂದು ಹರಿದಾಸರು ಹೇಳುವ ಹಾಗೇ ತತ್ವಪದಕಾರರು ಸಂಸಾರದಲ್ಲಿದ್ದುಕೊಂಡೇ ಅಧ್ಯಾತ್ಮ ಸಾಧನೆಯನ್ನು ಮಾಡಿರುವರು. ಅವರೇನು ಹೇಡಿಗಳಲ್ಲ. ಬದುಕನ್ನು ಹಸನುಗೊಳಿಸಲು ಹೋರಾಡಿದ ದಿಟ್ಟರು, ಧೀರರು, ಹೋರಾಟಗಾರರು, ಪ್ರಗತಿಪರ ವಿಚಾರವಾದಿಗಳು, ವೈಚಾರಿಕ ಮನೋಭಾವವುಳ್ಳವರು, ಜಾತ್ಯತೀತ ಮನೋಭಾವವುಳ್ಳವರು. ಪರಮಾತ್ಮನ ಧ್ಯಾನ ಚಿಂತನೆ ಅವರ ಆತ್ಯಂತಿಕ ಗುರಿಯಾಗಿದೆ. ಅಧ್ಯಾತ್ಮ ಸಾಧನೆಯಲ್ಲಿ ತೊಡಗಿದ ಇವರು ಒಂದರ್ಥದಲ್ಲಿ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಗಳು, ನೀರ ಮೇಲೆ ತಾವರೆಯಿದ್ದಂತೆ ಇವರ ಬದುಕು. ಸಮಾಜದಲ್ಲಿ ಸಮಾನತೆ ಭ್ರಾತೃತ್ವಭಾವನೆ ತರುವುದೇ ಇವರ ಗುರಿಯಾಗಿದೆ. ಜನಸಾಮಾನ್ಯರಲ್ಲಿ ಭಕ್ತಿ ಭಾವನೆ ಮೂಡಿಸಿ

ಅವರನ್ನು ಪರಿಶುದ್ಧರನ್ನಾಗಿಸುವುದೇ ಈ ತತ್ವಪದಕಾರರ ಗುರಿಯಾಗಿರುವುದನ್ನು ಅವರ ಪದಗಳಿಂದ ಅರಿಯುವೆವು. ಇಂಥ ತತ್ವ ಪದಕಾರರು ಕರ್ನಾಟಕದಾದ್ಯಂತ ಇರುವರಾದರೂ ಇವರ ಸಂಖ್ಯಾ ಪ್ರಮಾಣ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಹೆಚ್ಚಾಗಿದೆ. ರಾಯಚೂರು ಜಿಲ್ಲೆಯಲ್ಲೂ ಇವರ ಸಂಖ್ಯೆ ತೃಪ್ತಿಕರವಾಗಿದೆ. ಪ್ರಸ್ತುತ ಕೃತಿಯಲ್ಲಿ ಇಪ್ಪತ್ನಾಲ್ಕು ತತ್ವಪದಕಾರರ ಇತಿವೃತ್ತ, ಅವರ ಸ್ಮಾರಕಗಳು, ಹಾಗೂ ಅವರ ಕೆಲವು ತತ್ವಪದಗಳನ್ನಿಲ್ಲಿ ಕೊಡಲಾಗಿದೆ. ಆ ತತ್ವ ಪದಕಾರರನ್ನಿಲ್ಲಿ ಹೆಸರಿಸಬಹುದು: ಗೂಗಲ್ಲು ಪರಪ್ಪಯ್ಯ, ಗೊಬ್ಬೂರು ಹಂಪಣ್ಣ, ಅಂಕಲಿ ಮಠದ ನಿರುಪಾಧೀಶ್ವರ ಮಹಾಸ್ವಾಮಿಗಳು, ನೀರಲಕೇರಿ ಬಸವಲಿಂಗ ಶರಣ, ಘನಮಠದ ನಾಗಭೂಷಣ ಶಿವಯೋಗಿ, ಅರವಲಿ ಬಿಜಲಿ ವಸ್ತಾದಿ, ದೇವದುರ್ಗದ ಚೆನ್ನಮಲ್ಲಕವಿ, ವೆಂಕಟಾಪುರದ ಖೇಮಣ್ಣ, ಹೊಸಪೇಟೆಯ ಅಯ್ಯಪ್ಪ ಪಂಥೋಜಿ, ದಿನ್ನಿಯ ತಾಳಪಲ್ಲಿ ವೆಂಕಯ್ಯ, ಬಳಗಾನೂರು ಮರಿಸ್ವಾಮಿ, ದೇವದುರ್ಗದ ಆದಿ ಅಮಾತೆಪ್ಪ, ಗೊಬ್ಬೂರು ಮಾರ್ತಾಂಡಪ್ಪ, ಗೋನವಾರದ ರಾಮದಾಸ, ರಾಯಚೂರ ಹನುಮಂತವ್ವ, ಕರಿಗುಡ್ಡದ ಬಸಣ್ಣ ರಾಜಶಿವಯೋಗಿ, ಬುರಾನಪೂರದ ರಾಜಯೋಗಿ ಬಸನಗೌಡ, ರಾಯಚೂರು ಯರಮಾರೆಪ್ಪ, ತಲೇಖಾನದ ಭೀಮಸೇನರಾವ್ ಕುಲಕರ್ಣಿ, ಮಂಜರ್ಲಾದ ಖಾದರಸಾಬ, ಜಹಿರಾಬಾದದ ತಿಪ್ಪಣ್ಣ ತಾತಾ, ಹೊಸೂರು ತಿಪ್ಪಣ್ಣ, ಕಲ್ಮಲಾದ ತಾಯಣ್ಣ, ಎಸ್. ಎನ್. ಕುಮಾರ ಚಟ್ನಳ್ಳಿ. ಇವರೆಲ್ಲರೂ ರಾಯಚೂರು ಜಿಲ್ಲೆಯ ಪ್ರಸಿದ್ಧ ತತ್ವ ಪದಕಾರರಾಗಿದ್ದು, ಅನೇಕ ತತ್ವಪದಗಳನ್ನು ರಚಿಸಿ ಜನ ಮಾನಸದಲ್ಲಿ ನೆಲೆ ನಿಂತಿದ್ದಾರೆ. ಇವರ ಬಗೆಗೆ ಇರುವ ಅನೇಕ ಐತಿಹ್ಯಗಳನ್ನು ಇತಿವೃತ್ತವನ್ನು ನಾನು ಸಂಗ್ರಹಿಸುವುದರೊಂದಿಗೆ ಇವರ ಸ್ಮಾರಕಗಳನ್ನು ಕ್ಷೇತ್ರಕಾರ್ಯ ಮಾಡುವುದರ ಮೂಲಕ ಕಲೆಹಾಕಿದ್ದೇನೆ. ಮತ್ತು ಅವುಗಳನ್ನು ಚಿತ್ರಗಳಲ್ಲಿ ಸೆರೆಹಿಡಿದಿದ್ದೇನೆ. ಇವರೆಲ್ಲರ ಜೀವನದ ಕುರುಹಾಗಿ ಪಳೆಯುಳಿಕೆಯಾಗಿ ಈ ನಾಡಿನ ತುಂಬೆಲ್ಲ ಚೆಲ್ಲವರಿದಿರುವ ಸ್ಮಾರಕಗಳನ್ನು ಈ ಗ್ರಂಥದಲ್ಲಿ ಚಿತ್ರಗಳ ಮೂಲಕ ಕೊಡಲು ಯತ್ನಿಸಲಾಗಿದೆ. ಈ ಸ್ಮಾರಕಗಳು ಆಯಾ ತತ್ವಪದಕಾರರ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ತುಂಬ ಸಹಕಾರಿಯೆನ್ನಿಸಿವೆ. ಈ ಎಲ್ಲಾ ಸ್ಮಾರಕಗಳನ್ನು ನಾನು ಕ್ಷೇತ್ರ ಕಾರ್ಯ ಮಾಡುವುದರ ಮೂಲಕ ಸಂಗ್ರಹಿಸಿರುವೆನು. ಈ ಸ್ಮಾರಕಗಳು ಆಯಾ ತತ್ವಪದಕಾರರ ಜೀವನ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲುವಂಥವಾಗಿವೆ. ಈ ಬಗೆಯ ತತ್ವಪದಕಾರರ ಸ್ಮಾರಕಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಅಧ್ಯಯನ ನಡೆಸಿದುದು ಇದು ಮೊದಲ ಪ್ರಯತ್ನವಾಗಿದೆಯೆಂದು ನಮ್ರವಾಗಿ ನಿವೇದಿಸಬಯಸುವೆ. ಹಳ್ಳಿಗಾಡಿನಲ್ಲಿ ಹುಟ್ಟಿಬೆಳೆದ ತತ್ವಪದಕಾರರ ಇತಿವೃತ್ತದ ಶೋಧ ಹಾಗೂ ಅವರ ಸ್ಮಾರಕಗಳ ಸಮಗ್ರವಾದ ಅಧ್ಯಯನ ಕನ್ನಡದಲ್ಲಿ ಇದುವರೆಗೆ ಅಷ್ಟಾಗಿ ನಡೆದಿರಲಿಲ್ಲ. ಈ ರೀತಿಯ ಅಧ್ಯಯನ

ತತ್ವಪದಕಾರರ ಜೀವನ, ಸಾಧನೆ ಅವರ ತತ್ವಪದಗಳ ಸತ್ವ ಮಹತ್ವ ಇವನ್ನೆಲ್ಲ ಅರಿಯಲು ಸಹಾಯಕವಾಗಬಹುದೆಂದು ನಂಬಲಾಗಿದೆ. ತತ್ವಪದ ಸಾಹಿತ್ಯದಲ್ಲಿ ಆಳವಾಗಿ ಅಧ್ಯಯನ ನಡೆಸಲು ಈ ಕ್ಷೇತ್ರ ಕಾರ್ಯಾಧಾರಿತ ತತ್ವಪದಕಾರರ ಸ್ಮಾರಕಗಳ ಶೋಧ ಮಾರ್ಗದರ್ಶಿಯಾಗುವುದೆಂದು ಭಾವಿಸಲಾಗಿದೆ. ಪ್ರಸ್ತುತ "ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು" ಕೃತಿಯಲ್ಲಿ ಉಪಲಬ್ಧವಿರುವ ಅವರ ಸ್ಮಾರಕಗಳನ್ನು ಚಿತ್ರರೂಪದಲ್ಲಿ ನೀಡಲಾಗಿದೆ. ಮತ್ತು ಅವರಿಗೆ ಸಂಬಂಧಿಸಿದ ಆಯಾ ಸ್ಮಾರಕಗಳ ಹಿನ್ನೆಲೆ ಅರ್ಥ ಹಾಗೂ ಅವುಗಳ ಔಚಿತ್ಯ ಇವನ್ನೆಲ್ಲ ಪ್ರಸ್ತುತ ಸಂಪುಟದಲ್ಲಿ ಅಲ್ಲಲ್ಲಿ ವಿವರಿಸುವುದರೊಂದಿಗೆ ಆಯಾ ತತ್ವಪದಕಾರರ ಇತಿವೃತ್ತವನ್ನು ಹೊಸಬೆಳಕಿನಲ್ಲಿ ರಚಿಸಲಾಗಿದೆ. ಆಯಾ ತತ್ವಪದಕಾರರ ಇತಿವೃತ್ತವನ್ನು ಪ್ರಸ್ತುತ ಸಂಪುಟದಲ್ಲಿ ನಿರೂಪಿಸುವುದರೊಂದಿಗೆ ಅವರು ಬರೆದ ತತ್ವಪದಗಳಲ್ಲಿ ಪ್ರಸಿದ್ಧವಾದ ಕೆಲವು ತತ್ವಪದಗಳನ್ನು ಇಲ್ಲಿ ಉದಾಹರಣೆಗಾಗಿ ಕೊಡಲಾಗಿದೆ. ಮತ್ತು ಆಯಾ ತತ್ವಪದಕಾರರ ಬದುಕನ್ನು ಪುಷ್ಟೀಕರಿಸುವ ರೀತಿಯಲ್ಲಿ ಅವರ ವ್ಯಕ್ತಿತ್ವದ ಪ್ರತೀಕದಂತಿರುವ ಅವರ ಬದುಕಿಗೆ ಸಂಬಂಧಿಸಿದ ಸ್ಮಾರಕಗಳನ್ನು ಇಲ್ಲಿ ಚಿತ್ರ ರೂಪದಲ್ಲಿ ಕೊಡಲಾಗಿದೆ. ತತ್ವಪದಕಾರರನ್ನು ಕುರಿತಿದ್ದ ಸ್ಮಾರಕಗಳು ನಾಶವಾಗುವ ಮೊದಲೇ ಸಂಗ್ರಹಿಸುವ ಅಗತ್ಯವಿತ್ತು. ಅದನ್ನಿಲ್ಲಿ ಮಾಡಲು ಯತ್ನಿಸಿದೆ. ತತ್ವಪದಕಾರರು ರಾಯಚೂರು ಜಿಲ್ಲೆಯಲ್ಲಿ ಸಾಕಷ್ಟು ಜನ ಆಗಿ ಹೋಗಿದ್ದಾರೆ. ಅವರಲ್ಲಿ ಪ್ರಸಿದ್ಧರಾದವರ ಬಗ್ಗೆ ಹಾಗೂ ಮಾಹಿತಿ ಲಭ್ಯವಾದವರ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗಿದೆ. ಬಹುಶಃ ಇನ್ನೂ ಹಲವಾರು ಜನ ತತ್ವಪದಕಾರರು ಈ ಜಿಲ್ಲೆಯಲ್ಲಿ ಇರಬಹುದಾಗಿದೆ.

ನಾನಿಲ್ಲಿ ಆದಷ್ಟು ಜಾಗ್ರತೆಯಿಂದ ತತ್ವಪದಕಾರರ ಕುರಿತಾಗಿ ಮಾಹಿತಿ ಸಂಗ್ರಹಿಸಿರುವೆ. ಇದೊಂದು ಪ್ರಾಮಾಣಿಕ ಪ್ರಯತ್ನವಾಗಿದೆ. ಇಂದು ಹಳ್ಳಿಗಳು ತುಂಬ ಸುಧಾರಿಸಿವೆ. ಹಳ್ಳಿಗರು ಸಾಮಾನ್ಯವಾಗಿ ಇಂದು ಪಟ್ಟಣಗಳತ್ತ ಮುಖ ಮಾಡಿದ್ದಾರೆ. ಕೆಲಸ ಕಾರ್ಯಗಳನ್ನು ಹುಡುಕಿಕೊಂಡು ಹಳ್ಳಿಗರು ಪಟ್ಟಣಗಳತ್ತ ವಲಸೆ ಹೋಗುವುದು ಈಚೆಗೆ ಹೆಚ್ಚಾಗಿದೆ. ಹೀಗಾಗಿ ಹಳ್ಳಿಗಳಲ್ಲಿ ತತ್ವಪದಕಾರರ ಕುರಿತು ಸಮಗ್ರವಾದ ಮಾಹಿತಿ ನೀಡುವವರೇ ಇಂದು ಕಡಿಮೆಯಾಗುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಅರಿತು ನಾನು ಆದಷ್ಟು ಜಾಗರೂಕತೆಯಿಂದ ತತ್ವಪದಕಾರರ ತಾಣಗಳನ್ನು ಸ್ಮಾರಕಗಳನ್ನು ಪತ್ತೆಹಚ್ಚಲು ಪ್ರಯತ್ನ ಮಾಡಿರುವೆ. ಇಂಥ ಪ್ರಯತ್ನ ಮಾಡುವಾಗ ಕೆಲವೊಂದು ತತ್ವಪದಕಾರರು ಉಳಿದುಕೊಳ್ಳುವ ಸಂಭವವೂ ಉಂಟು. ಅಂಥವರನ್ನು ಮುಂದಿನ ಅಧ್ಯಯನ ಹಾಗೂ ಸಂಪುಟಗಳ ಪ್ರಕಟಣೆಯಲ್ಲಿ ಸೇರಿಸಿಕೊಳ್ಳಲಾಗುವುದು.

ಈ ಬಗೆಯ ಸಂಶೋಧನಾಧ್ಯಯನವು ನಡೆದುದು ಬಹುಶಃ ಇದೇ ಮೊದಲು ಎಂದು ಭಾವಿಸಿರುವೆ. ಕರ್ನಾಟಕ ಸರ್ಕಾರದ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ

ಕೈಕೊಂಡ ಈ ಸಂಶೋಧನಾಧ್ಯಯನವು ನನಗೆ ತುಂಬ ತೃಪ್ತಿಯನ್ನು ಹಾಗೂ ಸಾರ್ಥಕತೆಯನ್ನು ತಂದುಕೊಟ್ಟಿದೆ. ಕಾಲಗರ್ಭದಲ್ಲಿ ಹೂತು ಹೋಗಬಹುದಾಗಿದ್ದ ಅನೇಕ ತತ್ವಪದಕಾರರ ಸ್ಮಾರಕಗಳನ್ನು ಇಲ್ಲಿ ಅಧಿಕೃತವಾಗಿ ಗುರುತಿಸಿ ಪ್ರಕಟಿಸಲು ಸಾಧ್ಯವಾಗಿದೆ. ಮುಂದಿನ ಜನಾಂಗಕ್ಕೆ ಈ ಬಗೆಯ ಅಧ್ಯಯನ ತೋರುಬೆರಳಾಗಲಿದೆ. ಮತ್ತು ಆಯಾ ತತ್ವಪದಕಾರರ ಇತಿವೃತ್ತದ ಮೇಲೆ ಹೊಸ ಬೆಳಕು ಚೆಲ್ಲಿ ಅವರನ್ನು ಜ್ಞಾನ ಪ್ರಪಂಚಕ್ಕೆ ಪರಿಚಯಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆಯೆಂದು ಭಾವಿಸಿರುವೆನು. ನಾನು ಕೈಕೊಂಡ ಈ ಸಂಶೋಧನ ಯೋಜನೆ ತುಂಬ ಪರಿಪೂರ್ಣವೂ ಸಮಗ್ರವೂ ಆಗಿದೆಯೆಂದು ನಾನೇನು ಭಾವಿಸಿಲ್ಲ. ಆದರೆ ತತ್ವಪದಕಾರರ ಬಗೆಗೆ ಇಲ್ಲಿ ಸಂಗ್ರಹಿಸಿದ ಸ್ಮಾರಕಗಳ ಬಗೆಗೆ ತೃಪ್ತಿಯಿದೆ. ಈ ಸ್ಮಾರಕಗಳು ಆಯಾ ತತ್ವಪದಕಾರರನ್ನು ಕುರಿತು ಆಳವಾದ ಸಂಶೋಧನಾಧ್ಯಯನವನ್ನು ಕೈಗೊಳ್ಳಲು ಮತ್ತು ಅವರ ಚರಿತ್ರೆಯನ್ನು ಪುನಃ ರೂಪಿಸಲು ಮುಂದೆ ಬರುವ ಸಂಶೋಧಕರಿಗೆ ಅಧ್ಯಯನಾಸಕ್ತರಿಗೆ ತುಂಬ ನೆರವು ನೀಡಬಲ್ಲುವಾಗಿವೆಯೆಂದು ಭಾವಿಸಿರುವೆ.

ಡಾ. ವ್ಹಿ. ಜಿ ಪೂಜಾರ
ಪ್ರಧಾನ ಸಂಶೋಧಕರು ಮತ್ತು ಲೇಖಕರು


ಪರಿವಿಡಿ

ರಾಯಚೂರು ಜಿಲ್ಲೆಯ ತತ್ವ ಪದಕಾರರ ಸ್ಮಾರಕಗಳು

೧.ಗೂಗಲ್ಲು ಪರಪ್ಪಯ್ಯ (೧೭೮೦-೧೮೫೦)

ಗೂಗಲ್ಲು ಪರಪ್ಪಯ್ಯ ದೇವದುರ್ಗ ತಾಲೂಕಿನ ಗೂಗಲ್ಲು ಗ್ರಾಮವನ್ನು ತನ್ನ ಕಾರ್ಯಕ್ಷೇತ್ರವನ್ನಾಗಿಸಿಕೊಂಡ ಒಬ್ಬ ಅನುಭಾವಿ ಕವಿ. ಮೂಲತಃ ಈತ ಯಾದಗಿರಿ ಜಿಲ್ಲೆಯವ. ಈತ ಜನಿಸಿದುದು ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಬೆಂಡೆಬೆಂಬಳಿ ಎಂಬ ಗ್ರಾಮದಲ್ಲಿ, ಕ್ರಿ.ಶ. ೧೭೫೦ ರಲ್ಲಿ. ಈತನು ಕಾಳಮ್ಮ ಮತ್ತು ಮಾನಪ್ಪ ದಂಪತಿಗಳಿಗೆ ಮಗನಾಗಿ ಜನಿಸಿದ. ವಿಶ್ವಕರ್ಮ-ಪಾಂಚಾಳ ಮನೆತನದಲ್ಲಿ ಹುಟ್ಟಿದ ಈತನು ಬರಬರುತ್ತ ವೀರಶೈವ ಸಂಸ್ಕಾರವನ್ನು ಹೊಂದಿ ಬೆಳೆದನು. 'ಬೆಳೆವ ಸಿರಿ ಮೊಳಕೆಯಲ್ಲಿ ಕಾಣು' ಎಂಬಂತೆ ಬಾಲ್ಯದಲ್ಲಿ ಪರಪ್ಪ ಅಧ್ಯಾತ್ಮ ಜೀವಿಯಾಗಿ ಬೆಳೆಯ ತೊಡಗಿದ. ಓದು, ಬರಹ, ವಿದ್ಯಾಭ್ಯಾಸದ ಕಡೆಗೆ ಆತ ಗಮನ ಹರಿಸದೆ ಆ ಊರಿನ ಪೂರ್ವಕ್ಕಿರುವ ರಾಮಲಿಂಗನ ಗುಡಿಯಲ್ಲಿಯೇ ಕಾಲ ಕಳೆಯ ತೊಡಗಿದ. ಈತನ ತಂದೆ ತಾಯಿಗಳು ಈತನನ್ನು ಹೇಗಾದರೂ ಮಾಡಿ ಸಂಸರಾದ ಕಡೆಗೆ ಎಳೆತರಬೇಕೆಂದು ಈತನ ಮದುವೆ ಮಾಡಿದರು. ಮುಂದೆ ಈತ ಸಂಸಾರಿಯಾಗಿ ಮಕ್ಕಳನ್ನೂ ಹಡೆದ. ಸಂಸಾರದಲ್ಲಿಯೂ ಆತನಿಗೆ ಬರಬರುತ್ತ ಆಸಕ್ತಿ ಕಡಿಮೆಯಾಗತೊಡಗಿತು. ಮನೆತನದ ಮೂಲ ವೃತ್ತಿ ವಿಶ್ವಕರ್ಮ ಅಕ್ಕಸಾಲಿತನವನ್ನೂ ಮಾಡದೆ ದೇವರ ಗುಡಿಯಲ್ಲಿ ಕಾಲ ಕಳೆಯತೊಡಗಿದ. ದೇವರಿಗೆಂದು ಭಕ್ತಾದಿಗಳು ಇಟ್ಟ ನೈವೇದ್ಯವನ್ನೇ ಸೇವಿಸುತ್ತ ಕೆಲ ಕಾಲ ಕಳೆದನು. ಪರಪ್ಪಯ್ಯನ ಮಡದಿ ಸಾವಿತ್ರಮ್ಮ ಹಾಗೂ ಆತನ ಮಕ್ಕಳು ಕಾಲರಾ ಬೇನೆಗೆ ತುತ್ತಾದರೆಂದು ತಿಳಿದು ಬರುವುದು. ಹೆಂಡತಿ-ಮಕ್ಕಳನ್ನು ಕಳೆದುಕೊಂಡ ಪರಪ್ಪಯ್ಯ ಮುಂದೆ ಸಂಸಾರ ಅನಿತ್ಯವೆಂದು ಬಗೆದು ಅಧ್ಯಾತ್ಮದತ್ತ ಒಲವು ಬೆಳೆಸಿಕೊಂಡನು. ಮೊದಲೇ ಅಧ್ಯಾತ್ಮದತ್ತ ಒಲವು ಹೊಂದಿದ್ದು, ಈಗ ಪೂರ್ಣ ಅನುಭಾವಿಯಾಗಿ ಅಧ್ಯಾತ್ಮಲೋಕಕ್ಕೆ ತನ್ನನ್ನು ಅರ್ಪಿಸಿಕೊಂಡ. ಈಗ ಆತ-ಬೆಂಡೆಬೆಂಬಳಿ ತ್ಯಜಿಸಿ ದೇವದುರ್ಗ ತಾಲೂಕಿನ ಗೂಗಲ್ಲು ಗ್ರಾಮಕ್ಕೆ ಬರುವನು. ಗೂಗಲ್ಲು ಕೃಷ್ಣಾ ನದಿಯ ದಕ್ಷಿಣದ ದಂಡೆಗಿರುವ ಒಂದು ಪವಿತ್ರ ಸ್ಥಳ. ಇಲ್ಲಿ ಹನ್ನೆರಡನೇ ಶತಮಾನದಲ್ಲಿ ಪ್ರಭುದೇವರು ಬಂದಿದ್ದರೆಂದು ಮತ್ತು ಅವರು ಮುಕ್ತಾಯಕ್ಕನನ್ನು ಕಂಡು ಆಕೆಗೆ ಸಾಂತ್ವನವನ್ನು ಇಲ್ಲಿಯೇ ಹೇಳಿದ್ದರು ಎಂಬ ಪ್ರತೀತಿ ಇದೆ. ಇಲ್ಲಿ

ಇದರ ಕುರುಹಾಗಿ ಪ್ರಭುದೇವರ ಗುಡಿ ಇರುವುದನ್ನು ನಾವೀಗ ಕಾಣುವೆವು. ಪರಪ್ಪಯ್ಯ ಅಲ್ಲಮ ಪ್ರಭುವಿನ ಭಕ್ತನಾಗಿ ಒಬ್ಬ ತತ್ವಪದಕಾರನಾಗಿ ಇಲ್ಲಿಯೇ ಬೆಳೆದು ಪ್ರಸಿದ್ಧಿಯನ್ನು ಪಡೆದಿರುವನು. ಈತನು 'ಪ್ರಭು' ಹಾಗೂ "ಆನೆಗೊಂದಿ ವೀರಭದ್ರ" ಅಂಕಿತದಲ್ಲಿ ತತ್ವಪದ ರಚಿಸಿರುವನು. ಈತ ೧೮೫೦ರಲ್ಲಿ ದೈವಾಧೀನನಾದನು. ಈತನ ಕುರಿತಿದ್ದ ಸ್ಮಾರಕಗಳನ್ನಿಲ್ಲಿ ಚಿತ್ರೀಕರಿಸಿ ಕೊಡಲಾಗಿದೆ.



ಗೂಗಲ್ಲು ಪರಪ್ಪಯ್ಯನ
ಕಾಲ್ಪನಿಕ ಚಿತ್ರ, ಗೂಗಲ್ಲು,
ತಾ– ದೇವದುರ್ಗ.



ಗೂಗಲ್ಲಿನಲ್ಲಿರುವ ಪರಪ್ಪಯ್ಯನ
ಗುಡಿ, ಗೂಗಲ್ಲು,
ತಾ – ದೇವದುರ್ಗ.



ತತ್ವಪದಕಾರ ಗೂಗಲ್ಲು
ಪರಪ್ಪಯ್ಯನವರ ಸಮಾಧಿ
ಮೇಲಿರುವ ಲಿಂಗ ಹಾಗೂ ಅವರ
ಶಿಲಾಮೂರ್ತಿ ವಿಗ್ರಹ, ಗೂಗಲ್ಲು
ತಾ – ದೇವದುರ್ಗ



ಗೂಗಲ್ಲು ಪರಪ್ಪಯ್ಯನವರ ಆರಾಧ್ಯ ದೈವ ಅಲ್ಲಮ ಪ್ರಭುದೇವರ ಗುಡಿ ಗೂಗಲ್ಲು,
ತಾ – ದೇವದುರ್ಗ

ಪರಪ್ಪಯ್ಯ ನೂರಾರು ತತ್ವಪದಗಳನ್ನು ಬರೆದುದಾಗಿ ತಿಳಿದುಬಂದರೂ ಅವು ಗ್ರಂಥರೂಪದಲ್ಲಿ ಪ್ರಕಟಗೊಂಡಿಲ್ಲ. ಬೆಂಡೆಬೆಂಬಳಿಯ ಬಿ. ಸಿದ್ಧಲಿಂಗಪ್ಪ ಶಿಕ್ಷಕರು ಪರಪ್ಪಯ್ಯನ ಅರವತ್ತಾರು ತತ್ವಪದಗಳನ್ನು ಸಂಗ್ರಹಿಸಿದ ಬಗ್ಗೆ ತಿಳಿದುಬರುವುದು. ಶ್ರೀ ಶಾಂತರಸ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡ ತತ್ವಪದಗಳು– (ಪ್ರಾತಿನಿಧಿಕ ಸಂಕಲನ) ಕೃತಿಯಿಂದ ಪರಪ್ಪಯ್ಯನ ಎರಡು ತತ್ವಪದಗಳನ್ನು ಇಲ್ಲಿ ಕೊಡಲಾಗಿದೆ.

೧. ಮಾತನಾಡೊ ಮಹಾದೇವ

ಮಾತನಾಡೊ ಮಹಾದೇವ
ಮಾಯ ಕೋಲಾಹಲ ಅಲ್ಲಮಪ್ರಭು
ಜಾತಿವಿರಹಿತ ಈರೇಳು ಜಗದ ಜೀವಾಳ ॥ ಪ ॥

ಮರೆಹೊಕ್ಕರ ಕಾಯುವಂಥಾ ಮನಸಿಜಾರಿ ನಿನ್ನ ಪಂಥ
ಬಿರುದುಳ್ಳ ಬಿಸುಗಣ್ಣಿನ ಭೀಮ ಬಿಂಕದ ನಿಸ್ಸೀಮ ॥ ೧ ॥

ಮನಸೋತೆನಯ್ಯಾ ನಿನಗೆ ಮಾಂಗ್ಯನಾಗಿರೊ ಎನಗೆ
ಘನ ಶಿಖಾಮಣಿ ಗಂಭೀರ ಗೌರೀ ಮನೋಹರ ॥ ೨ ॥

ಗೂಗಲ್ಲ ಗುಡಿಯೊಳಗಿರುವ ಗುರುರಾಯ ಅಲ್ಲಮಪ್ರಭುವೆ
ನಗರ ಪರಮಗ ಮೈಬರೆತ ನಂದೀಶನ ಕುವ ॥ ೩ ॥

೨ ಯಾತರವನಂತ ಉಸುರಲಿ

ಯಾತರವನಂತ ಉಸುರಲಿ, ಜನ
ನ್ನಾಥನು ಮಾಡಿದ ನರರೂಪ ಗುರುವೆ ॥ ಪ ॥

ಒಂಬತ್ತು ಹೆಜ್ಜೆದ ಹೊಲಸೀನ ಊರೊಳು
ತುಂಬಿ ತುಳುಕ್ಯಾಡುತಿರೆ
ಇಂಬಿಟ್ಟು ಈ ದೇಹ ಪೊರಳುಗೇರಿದ ಮೇಲೆ
ಡಿಂಭಕ್ಕೆ ನಮಗೆ ಯಾತರ ಕುಲವಯ್ಯ ॥ ೧ ॥


ಬಂದ ಬಚ್ಚಲಕುಣಿಗೆ ತುಂಬ್ಯಾವು ಮಲಮೂತ್ರ
ತುಂಬಿ ತುಂಬಿ ಹೊಲಸು ನಾರುವುದೆ
ಒಂಭತ್ತು ದ್ವಾರದಿ ನರಕ ಸೋರುತಲಿದೆ
ಹೊಲಿಯಾಗ ನಮಗೆ ಯಾತರ ಕುಲವಯ್ಯ ॥ ೨ ॥

ಹಚ್ಚಡ ಮೇಲೆ ಲಕ್ಷಣವಿಟ್ಟಂತ
ಉಕ್ಕಿಉಬ್ಬಿ ಹೆಣಗಾಡುತಿರೆ
ನಿಶ್ಚಿಂತ ನಿಜರೂಪ ಅಲ್ಲಮಪ್ರಭುವಿಗೆ
ಹುಟ್ಟು ಪರುವಾಗೆ ಯಾತರ ಕುಲವಯ್ಯ ॥ ೩ ॥

೨.ಗೊಬ್ಬೂರು ಹಂಪಣ್ಣ (೧೭೫೩-೧೮೭೮)


ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿನ ಅರಕೇರಿಯ ವಾರದ ಬಣಜಿಗ ವ್ಯಾಪಾರಸ್ಥರ ಮನೆತನದಲ್ಲಿ ಕ್ರಿ.ಶ. ೧೭೫೩ರಲ್ಲಿ ಹಂಪಣ್ಣನ ಜನನವಾಯಿತು. ಹಂಪಣ್ಣ ಬಾಲ್ಯದಲ್ಲಿ ಶಿಕ್ಷಣ ಪಡೆಯಲು ಮನಸ್ಸು ಮಾಡಲಿಲ್ಲ. ವ್ಯಾಪಾರ ಮಾಡುವುದಕ್ಕೂ ಆತ ಮನಸ್ಸು ಮಾಡಲಿಲ್ಲ. ಅಧ್ಯಾತ್ಮದತ್ತ ಒಲವನ್ನು ಬೆಳೆಸಿಕೊಂಡ ಈತ ಬರಬರುತ್ತ ಒಬ್ಬ ಅನುಭಾವಿ ಕವಿಯಾಗಿ ತತ್ವಪದಕಾರನಾಗಿ ಬೆಳೆದು ಬಂದ. ಬಾಲ್ಯದಲ್ಲಿಯೇ ಈತನ ತಾಯಿ ತಂದೆ ತೀರಿ ಹೋಗಲು ಈತನ ಅಣ್ಣತಮ್ಮಂದಿರು ಈತನನ್ನು ಮನೆಬಿಟ್ಟು ಹೊರಹಾಕಿದರು. ಆಗ ಈತ ಗೊಬ್ಬೂರಿಗೆ ಬಂದು ನೆಲೆಸಿದ.


ದೇವದುರ್ಗ ತಾಲೂಕಿಗೆ ಸೇರಿದ ಗೊಬ್ಬೂರು ಒಂದು ಐತಿಹಾಸಿಕ ಸ್ಥಳ. ಈ ಊರಿನ ಅರ್ಷಿಣಗಿ ಎಂಬುವರ ಮನೆಯಲ್ಲಿ ಆಶ್ರಯ ಪಡೆದ ಹಂಪಣ್ಣ ಅರಿಷಿಣ ಹಾಗೂ ಬಳ್ಳೊಳ್ಳಿಯನ್ನು ಬುಟ್ಟಿಯಲ್ಲಿ ಹೊತ್ತು ಮಾರಾಟ ಮಾಡ ತೊಡಗಿದ. ಆತನಿಗೆ ಸಂಸಾರದಲ್ಲಿ ಅಷ್ಟಾಗಿ ಆಸಕ್ತಿ ಇರಲಿಲ್ಲ. ಆದರೂ ಊರವರ ಒತ್ತಾಯಕ್ಕೆ ಮಣಿದು ಆತ ಆ ಊರಿನ ಸಿದ್ದಮ್ಮ ಎಂಬುವವಳನ್ನು ಮದುವೆಯಾದ. ಮುಂದೆ ಮೂರು ನಾಲ್ಕು ವರ್ಷ ಸಂಸಾರ ಸಾಗಿಸುವಷ್ಟರಲ್ಲಿ ಸಿದ್ದಮ್ಮ ತೀರಿಕೊಂಡಳು. ಸಿದ್ದಮ್ಮನ ಸಾವು ಹಂಪಣ್ಣನ ಬದುಕಿನಲ್ಲಿ ಬದಲಾವಣೆಯನ್ನು ತಂದಿತು. ಹಂಪಣ್ಣ ಈಗ ಸಂಸಾರದಲ್ಲಿ ವಿರಕ್ತಿ ತಾಳಿ, ಆ ಊರಿನ ಸಾಲಿ ದೊಡ್ಡಬಸಪ್ಪನವರಿಂದ ದೀಕ್ಷೆ ಹೊಂದಿ, ಅನುಭಾವಿಯಾದ. ಮುಂದೆ ಆತ ಬರಬರುತ್ತ ಮಣಿಪುರವರ – ಘನವೃಷಬೇಂದ್ರ ಅಂಕಿತದಲ್ಲಿ ತತ್ವ ಪದಗಳನ್ನು ಕಟ್ಟಿ ಹಾಡತೊಡಗಿದ. ಆತ ರಚಿಸಿದ ತತ್ವಪದಗಳಲ್ಲಿ ೭೮ ತತ್ವಪದಗಳನ್ನು ಶ್ರೀಯಲಿಬೂದ್ಯೆಪ್ಪ ಅಧ್ಯಾತ್ಮಿಯವರು ಸಂಗ್ರಹಿಸಿ "ಕೈವಲ್ಯ ಕೈದೀಪಿಗೆ" ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದ್ದು, ಇದನ್ನು ಹುಟಗಿಯ ಶ್ರೀತಪಸ್ವಿಯೋಗಿ ರಾಜೇಂದ್ರ ಶಿವಾಚಾರ್ಯ ಹಿರೇಮಠ ಅವರು ೧೯೮೨ರಲ್ಲಿ ಪ್ರಕಟಿಸಿರುವರು. ಹಂಪಣ್ಣನವರು ಕ್ರಿ.ಶ. ೧೮೭೮ರಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿ ಗೊಬ್ಬೂರಿನಲ್ಲಿದೆ. ಅವರಿಗೆ ಸಂಬಂಧಿಸಿದ ಸ್ಮಾರಕಗಳನ್ನಿಲ್ಲಿ ಕೊಡಲಾಗಿದೆ.




ದೇವದುರ್ಗ ತಾಲೂಕಿನ ತತ್ವಪದಕಾರ ಗೊಬ್ಬೂರು ಹಂಪಣ್ಣನವರ ಸಮಾಧಿಯ ಗದ್ದುಗೆಯ ಚಿತ್ರ. ಈ ಗದ್ದುಗೆ ಗೊಬ್ಬೂರಿನ ಮಹಾನಂದೀಶ್ವರ ದೇವಾಲಯದ ಪ್ರಾಂಗಣದಲ್ಲಿದೆ

ಗೊಬ್ಬೂರಿನ ತತ್ವಪದಕಾರ ಹಂಪಣ್ಣನು ವಾಸಿಸಿದ ಮನೆಯ ಮುಂದೆ ಅವರ ಸಂಬಂಧಿಕರಾದ ಶ್ರೀ ಸೂಗಪ್ಪ ಪಂಪಣ್ಣ ಅರಿಸಿಣಗಿ ಹಾಗೂ ಶ್ರೀ ಸೂಗಪ್ಪನವರ ತಾಯಿ ಪಾರ್ವತಮ್ಮ ನಿಂತಿರುವ ಚಿತ್ರ ಗೊಬ್ಬೂರು ತಾ – ದೇವದುರ್ಗ.





ತತ್ವಪದಕಾರ ಗೊಬ್ಬೂರು ಹಂಪಣ್ಣನ ಅಧಿದೈವವಾದ ಗೊಬ್ಬೂರಿನ ಮಹಾನಂದೀಶ್ವರ ದೇವಾಲಯದ ಹೊರಚಿತ್ರ ಗೊಬ್ಬೂರು, ತಾ. ದೇವದುರ್ಗ



ಗೊಬ್ಬೂರಿನ ಮಹಾನಂದೀಶ್ವರ
ದೇವಾಲಯದ ಗರ್ಭಗುಡಿಯ ಚಿತ್ರ,
ಗೊಬ್ಬೂರು,
ತಾ – ದೇವದುರ್ಗ.

ಗೊಬ್ಬೂರು ಹಂಪಣ್ಣನ ಮೂರು ತತ್ವಪದಗಳನ್ನು ಡಾ. ಬಸವರಾಜ ಸಬರದ ಅವರು ಸಂಪಾದಿಸಿದ "ಹೈದರಾಬಾದ ಕರ್ನಾಟಕದ ತತ್ವಪದಗಳು" ಎಂಬ ಗ್ರಂಥದಿಂದ ಹಾಗೂ ಶ್ರೀ ಶಾಂತರಸ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡ "ತತ್ವಪದಗಳು" (ಪ್ರಾತಿನಿಧಿಕ ಸಂಕಲನ) ಕೃತಿಯಿಂದ ಒಂದು ತತ್ವಪದವನ್ನು ಆಯ್ದು ಇಲ್ಲಿ ಕೊಡಲಾಗಿದೆ.

೧. ನಿನ್ನನೀ ತಿಳಿಯಲೋ ಮೂಢ

ನಿನ್ನ ನೀ ತಿಳಿಯಲೋ ಮೂಢ
ನಿನ್ನ ತಿಳಿಯದೆ ಕುನ್ನಿ ಮನುಜ ಕೆಡಬ್ಯಾಡ ॥ ಪ ॥

ಮೂರು ದಿನದ ಸಿರಿಯಿದು ದೇಹ
ನೀರ ಗುಳ್ಳೆಯ ತೆರ ತಿಳಿಯದೆ ನೀನು ।
ಚೋರತನದಿ ಒಡಲನ್ನು ಹೊರೆದು
ನರಕಕೀಡಾಗಿ ನಡೆದೆಲ್ಲೋ ನೀನು ॥ ೧ ॥

ಪಾಪದಿಂದಲಿ ಗಿಡ ಮರ ಕ್ರಿಮಿ
ರೂಪಾಗಿ ಜನಿಸಿ ಬರುವದಿದು ಘೋರ ।
ಈಪರಿಯಲತ್ತ ಸಂಸಾರ ವ್ಯರ್ಥ
ಕೂಪದೊಳಗೆ ಮುಳುಗಿ ಹೋದೆಲೋ ನೀ ಪೂರಾ ॥ ೨ ॥

ಪರಧನ ಪರಸತಿಗೂಡಿ ನೀನು
ಪರದೇಶಿಯಾಗಿ ಸಂಚರಿಪೆಲ್ಲೋ ಖೋಡಿ ।
ದುರಿತ ದುರ್ಗುಣಗಳೀಡ್ಯಾಡಿ ಮಣಿ
ಪುರವರ ನಡಿ ಜಡ ಜವನ ಕೊಂಡಾಡಿ ॥ ೩ ॥

೨. ಶರೀರದೊಳೊಬ್ಬಳು ನಾರಿ ಬಣ್ಣಗೆಟ್ಟವಳು

ಶರೀರದೊಳೊಬ್ಬಳು ನಾರಿ ಬಣ್ಣ ಗೆಟ್ಟವಳು
ಸರ್ವ ಗೆಳೆಯರ ಕೂಡಿದಳು ಕೇಳು ॥ ಪ ॥

ಭವಕಂಡು ಬೆರಗುಗೊಂಡು ಮರುಗತಲಿರುತಿಹನು
ಆವುದರಿಯಿದ ಗಂಡನು ತಾನು ।
ಭಾವುಕ ಮೈದುನ ಕೇಳಿ ಮನದೊಳಳುತಿಹನು ॥ ೧ ॥

ಮಾವ ಅತ್ತೆ ನೆಗೆವೆಂಣಿರಿಗಿನ್ನು
ಸಾವು ಬಾರದ್ಯಾಕೆ ಅವರಿಗೆ । ದೇವರು ತರುವನೆಂದೀಗೆ
ಜೀವದೊಳಗೆ ಕುದಿವಳಳ್ಳೀಗೆ । ಈ
ಭವದಿ ಬಂದುದು ಹ್ಯಾಗೆ ॥ ೨ ॥

ನೋಟದಿಂದ ಬಲು ಬ್ಯಾಟವ ಮಾಡುವಳು । ಭುವ
ನಾಟವನಾಡುವಳಾಕಿ । ಕೂಟ ಸುಪ್ತಿಯಲಿ
ಭೂಟಕಳಾಗುವಳು । ಮತ್ತು ನಟಿಸುತಿರುವಳು ಕೇಳು
ನೀಟಿಲ್ಲ ಇವಳ ಸಂಗವದು । ಕೋಟಿಗೊಬ್ಬ ಶರಣ ಪಿಂಗಿಹನು
ಸಾಟಿಲ್ಲದ ಶಿವಲಿಂಗವನು ಅವಳಾಟಕೆ ಇಡಿಸಿರುವನು ॥ ೩ ॥

ಮೂರು ಊರು ಕೇರಿ ಕೇರಿಯ ತಿರುಗುವಳು ।
ಆರು ತೆರದಲಿ ತೋರುವಳಾಕಿ । ಮತ್ತು
ಮೂರು ತಾಪ ಮಲ ಮೂರಕೆ ಗುರಿಯಿವಳು
ದೂರಮಾಡಬೇಕಿವಳನ್ನು ಊರೊಳಗೆ ಥರವಲ್ಲಿನ್ನು
ಚಾರುಮಣಿ ಪುರುಪತಿ ಮೆಚ್ಚ್ಯಾನು ಜಾರಿ ಚೋರಿ ಭೀಮಾರಿವಳನ್ನು ॥ ೪ ॥

೩. ಸತ್ತ ಚೇಳೇ ಬೆನ್ನತ್ತಿ ಕಚ್ಚಿತೆ

ಸತ್ತ ಚೇಳೇ ಯವ್ವ ಬೆನ್ನತ್ತಿ ಕಚ್ಚಿತೆ ಕೇಳವ್ವ
ಮತ್ತೆ ಬ್ಯಾನೆ ಎದೆ ಕುತ್ತಿಗಿ ಕಂಹೊಳು ।
ಚಿತ್ತ ಚಂಚಲದಲಿ ಎತ್ತೆತ್ತಲಾಗುತಿದೆ ॥ ಪ ॥

ಏಳು ಗೇಣು ಇತ್ತು ಮಣಿಗಳು ಏಳು ಅದಕೆ ಮುತ್ತು
ಕೇಳೆ ಬದುಕಿದದು ಬಹಳ ಆಶ್ಚರ್ಯವದೆ ।
ಭಾಳ ನಯನ ಗುರು ಬಂದನಾ ವ್ಯಾಳ್ಯಾದಿ ॥ ೧ ॥

ಎದ್ದರೆ ಮತ್ತಷ್ಟೆ ಕುಂತಡ್ಡಬಿದ್ದರದರಷ್ಟೆ
ಉದ್ದ ಬಿದ್ದರಲ್ಲಿ ಎದ್ದು ಬರುವದ್ಹೇಗೆ ।
ಎದ್ದರೆ ಮೊದಲಿದ್ದಂತಿರುವದು ಕಾಂತೆ ॥ ೨ ॥

ಮಣಿಪುರವರ ತಾ ಮಂತ್ರಿಸಿದ ಮೂರು ಪದಗಳನು
ಕರಗಿತು ಬಾಧೆ ಅರೆಕ್ಷಣದೊಳು ತಾನೆ ।
ನಾ ನಿನ್ನನುಪಮ ಸುಖದಲಿರುವೆನು ಕಾಂತೆ ॥ ೩ ॥

೪. ದೇವಾರು ಹಾನೆ ಅಕರಾಮ

ದೇವಾರು ಹಾನೆ ಅಕರಾಮ ದೊಡ್ಡು ಪೀರ
ಭವದಲ್ಲಿ ಭಜಿಸೋ ನೀರಾ ॥ ಪ ॥

ಆಧಾರದಿಂದ ಆರುಚಕ್ರವನಡರಿದನು ಭ್ರೂ ಮಧ್ಯಕೆ ತೊಡರಿದನಾಕಿ
ಮೋದದಿ ದಶವಿಧನಾದವು ಕೇಳಿದನು
ಹದಿನಾಲ್ಕು ಬಾಜಾರದೊಳಿನ್ನು
ಸಾಧಿಸಿದ ಸಹಸ್ರದರಗವನು
ಶೋಧಿಸಿದ ಒಂದು ಗೋರಿಯನು
ಆಧಾರಮಾಡಿ ಅಲ್ಲಿಹನು ಆರರಿಯದಂತೆ ಅವ ತಾನು ॥ ೧ ॥

ನಾನು ನೀನು ಎಂಬಕೂನಗುರುತು ಇಲ್ಲದಿಹನು
ಹಾನಿವೃದ್ಧಿಗಳಳಿದಿಹ ನಾಕಿ
ಭಾನುಕೋಟಿ ಪ್ರಕಾಶವ ಮೀರಿ ಬೆಳಗುತಿಹನು
ಧ್ಯಾನಧಾರಣ ಸಮಾಧಿ ಮೌನವನು

ಏನೇನು ಇಲ್ಲ ನಿರ್ದ್ವಂದ್ವ ತಾನಿರುವ ಸಚ್ಚಿದಾನಂದ
ಮನ್ಮಥನ ಮೀರಿದರಿಂದ
ವಿನುತೋರಿಸಬಾರದರಿಂದ ॥ ೨ ॥

ಅನುಪಮನದ್ವಯ ಜನನಮರಣರಹಿತ
ಘನ ಮೂರುತಿ ತಾನರರೆ ಮಣಿಪುರನಾಥ ಅಕರಾಮ ಸಾಹೇಬ ಪ್ರಖ್ಯಾತ
ಮನದೋರವು ಕೊಡುವಂಥ ದಾತ
ಇನಿತರಿಯದಿರ್ದ ಆತನನು ಘನ ವೃಷಭತಾನೆ ತಾನುಳುಹಿದನು
ಅನುದಿನದಿ ಸ್ಮರಿಸು ಆತನನು ಘನಮುಕ್ತಿ ಪದವಿ ಕೊಡವಾನು ॥ ೩ ॥

೩. ಅಂಕಲಿ ಮಠದ ನಿರುಪಾಧೀಶ್ವರ ಮಹಾಸ್ವಾಮಿಗಳು

(೧೭೯೭–೧೮೭೭)

ರಾಯಚೂರ ಜಿಲ್ಲೆಯ ಮಾನ್ವಿ ತಾಲೂಕಿನ ತೊಪ್ಪಲದೊಡ್ಡಿ ಎಂಬ ಗ್ರಾಮದಲ್ಲಿ ಕ್ರಿ.ಶ. ೧೭೯೭ರಲ್ಲಿ ನಿರುಪಾಧಿ ಮಹಾಸ್ವಾಮಿಗಳ ಜನನವಾಯಿತು. ಇವರ ತಂದೆ ಹಿರೇಮಠದ ಗುರುಲಿಂಗಯ್ಯ ತಾಯಿ ರಾಚಮ್ಮ. ಈ ದಂಪತಿಗಳಿಗೆ ಹಂಪಿಯ ವಿರೂಪಾಕ್ಷನ ಕೃಪೆಯಿಂದ ಜನಿಸಿದವರೇ ನಿರುಪಾಧಿ ಸ್ವಾಮಿಗಳು. ಇವರ ಮೊದಲ ಹೆಸರು ವಿರೂಪಾಕ್ಷ ಎಂದಿತ್ತು. ಹಂಪಿಯ ವಿರೂಪಾಕ್ಷನ ಕೃಪೆಯಿಂದ ತಮಗೆ ಗಂಡು ಸಂತಾನವಾಗಲು ತಾಯಿ ತಂದೆಗಳು ಸಂತುಷ್ಟರಾದರು. ಮಗು ವಿರೂಪಾಕ್ಷ ಬಾಲ್ಯದಲ್ಲಿ ತೇಜಃಪುಂಜನಾಗಿದ್ದ. ಆತ ಆರು ವರ್ಷದವನಾಗಲು ಆತನನ್ನು ಶಾಲೆಗೆ ಕಳಿಸಿದರು. ಅಲ್ಲಿ ಗುರುಗಳ ಬೋಧನೆಗಿಂತ ಮುಂದೆಯೇ ಇರುತ್ತಿದ್ದ. ವಿದ್ಯಾಭ್ಯಾಸ ಚೆನ್ನಾಗಿ ನಡೆಯಿತು. ಮುಂದೆ ಆತನಿಗೆ ಹನ್ನೆರೆಡು ವರ್ಷ ತುಂಬಲು ಆತನ ತಂದೆ ತಾಯಿಗಳು ಹಂಪಿಯ ವಿರೂಪಾಕ್ಷನ ಸನ್ನಿಧಿಯಲ್ಲಿ ಜವುಳ ಕಾರ್ಯ ಮುಗಿಸಿದರು. ನಂತರ ಆತನ ಅಯ್ಯಾಚಾರ ಅಂದರೆ ದೀಕ್ಷಾಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಮುಂದೆ ವಿರೂಪಾಕ್ಷನು ಯೌವನಕ್ಕೆ ಕಾಲಿರಿಸಲು ಊರೂರು ಸುತ್ತಿ ಅಲ್ಲಿನ ದೇವಾಲಯಗಳಲ್ಲಿ ನಾಲ್ಕಾರು ಜನರೆದುರಿಗೆ ಅಧ್ಯಾತ್ಮ ವಿಚಾರಗಳನ್ನು ತನ್ನದೇ ಆದ ವಿಚಾರಗಳನ್ನು ಹೇಳತೊಡಗಿದ. ಒಮ್ಮೆ ಆತನಿಗೆ ಜಾದೂಗಾರನೊಬ್ಬನ ಭೆಟ್ಟಿಯಾಯ್ತು. ಆತ ಜಾದೂ ಕಲಿಯಬೇಕೆಂದು ಕೇಳಿಕೊಂಡಾಗ ಆ ಜಾದೂಗಾರ, ಪೂಜ್ಯರೆ ಈ ವಿದ್ಯೆ ಹೊಟ್ಟೆ ಪಾಡಿನದು. ನನಗೆ ಕಲಿಸಲು ಆಗದು. ನಿಮಗೆ ಕಲಿಯಬೇಕೆನಿಸಿದರೆ ಮಲೆಯಾಳ ದೇಶಕ್ಕೆ ಹೋಗಿರಿ ಎನ್ನುವನು. ಆಗ ವಿರೂಪಾಕ್ಷ ಸ್ವಾಮಿ ಯಾರಿಗೂ ಹೇಳದೆ ಗುರುವನ್ನು ಹುಡುಕಿಕೊಂಡು ಮಲೆಯಾಳ ದೇಶಕ್ಕೆ ಹೋಗುವರು. ಅಲ್ಲಿ ಮಾಂತ್ರಿಕ ಗುರುವೊಬ್ಬರಿಂದ ವಿದ್ಯೆ ಕಲಿತು ಬರುವರು. ಬರುವಾಗ ಆ ಮಾಂತ್ರಿಕ ಗುರು ಇವರಿಗೆ ಒಂದು ಬೆತ್ತವನ್ನು ಕೊಟ್ಟು, ಇದನ್ನು ಎಲ್ಲಿ ಹೋದರೂ ಕೈಯಲ್ಲಿ ಹಿಡಿದುಕೊಂಡು ಹೋಗಿರಿ, ನಿಮ್ಮ ಕೆಲಸಗಳು ಆಗುವವು. ಮತ್ತು ಈ ಬೆತ್ತ ನಿಮ್ಮಿಂದ ಯಾವಾಗ ಅಗಲಿ ಹೋಗುವುದೋ ಆಗ

ನೀವು ವೈರಾಗ್ಯಮೂರ್ತಿಗಳಾಗುವಿರಿ ಎಂದು ಹೇಳಿ ಕಳಿಸಿದನು. ಆಗ ವಿರೂಪಾಕ್ಷ ಸ್ವಾಮಿಗಳು ಮಾಂತ್ರಿಕ ವಿದ್ಯೆ ಕಲಿತು ಬೆತ್ತ ಹಿಡಿದುಕೊಂಡು ತಮ್ಮ ಹುಟ್ಟೂರಾದ ತೊಪ್ಪಲದೊಡ್ಡಿಗೆ ಬರುವರು. ಬರುವಷ್ಟರಲ್ಲಿ ಅವರ ತಂದೆ ಲಿಂಗೈಕ್ಯರಾಗಿದ್ದರು. ತಾಯಿ ತನ್ನ ತವರೂರಾದ ಬಳಗಾನೂರಿಗೆ ಹೋಗಿದ್ದಳು. ವಿರೂಪಾಕ್ಷ ಸ್ವಾಮಿ ಅಂದು ತೊಪ್ಪಲ ದೊಡ್ಡಿಯಲ್ಲಿಯೇ ವಾಸ್ತವ್ಯ ಹೂಡುವರು. ಅಂದು ರಾತ್ರಿ ಮಲಗಿದಾಗ ಅವರಿಗೆ ಕನಸೊಂದು ಬಿತ್ತು. ಕನಸಿನಲ್ಲಿ ಅವರ ತಂದೆ ಬಂದು, ಈ ವಿದ್ಯೆ ಕಲಿತುದೇನೋ ಸಂತೋಷ, ಆದರೆ ಕೆಲದಿನ ಇದು ನಿನ್ನನ್ನು ಕಾಡುವುದು ಎಂದು ಹೇಳಿ ಅದೃಶ್ಯನಾಗುವನು. ವಿರೂಪಾಕ್ಷ ಸ್ವಾಮಿ ಬೆಳಿಗ್ಗೆ ಎದ್ದು ತನ್ನ ತಾಯಿಯ ತವರೂರು ಬಳಗಾನೂರಿಗೆ ಬರುವರು. ತಮ್ಮೊಂದಿಗೆ ತಂದಿದ್ದ ಬೆತ್ತವನ್ನು ಮನೆಯ ಜಂತೆಯಲ್ಲಿ ಇಡುವರು. ಅವರ ತಾಯಿ ಹಾಗೂ ಸೋದರ ಮಾವ ಸೇರಿ ಮುಂದೆ ಅವರ ಮದುವೆಯನ್ನು ಚೆನ್ನಮ್ಮ ಎನ್ನುವವಳೊಡನೆ ಮದುವೆ ಮಾಡುವರು. ಮುಂದೆ ಒಂದು ವರ್ಷದಲ್ಲಿ ಅವರಿಗೆ ಗಂಡು ಮಗು ಜನಿಸುವುದು. ಅದಕ್ಕೆ ಸುವರ್ಣಸ್ವಾಮಿ ಎಂದು ಹೆಸರಿಡುವರು. ಒಂದು ವರ್ಷವಾದರೂ ಚಿಕ್ಕವರಂತೆಯೇ ಚೇಷ್ಟೆಯಲ್ಲಿ ವಿರೂಪಾಕ್ಷ ಸ್ವಾಮಿ ತೊಡಗಿದುದನ್ನು ಜಂತೆಯಲ್ಲಿರಿಸಿದ ಬೆತ್ತವನ್ನು ಹಿಡಿದುಕೊಂಡು ಅಡ್ಡಾಡುವುದನ್ನು ಗಮನಿಸಿದ ಅವರ ಮಾವ ಒಂದು ದಿನ ಅವರ ಬೆತ್ತವನ್ನು ಒಲೆಯಲ್ಲಿ ಹಾಕಿ ಸುಟ್ಟು ಬಿಟ್ಟನು. ವಿರೂಪಾಕ್ಷ ಸ್ವಾಮಿಗಳು ಎಂದಿನಂತೆ ಜಂತೆಯಲ್ಲಿರಿಸಿದ ಬೆತ್ತ ತೆಗೆದುಕೊಳ್ಳಲು ಹೋದಾಗ ಅದು ಅಲ್ಲಿರಲಿಲ್ಲ. ಎಷ್ಟು ಹುಡುಕಿದರೂ ಅದು ಸಿಗಲಿಲ್ಲ. ಆಗ ಅವರು ಚಿಂತಾಕ್ರಾಂತರಾದರು, ಹೆಂಡತಿ ಮಕ್ಕಳನ್ನು ತ್ಯಜಿಸಿ ಹೊರ ನಡೆದರು.


ವಿರೂಪಾಕ್ಷ ಸ್ವಾಮಿಗಳು ಅಲ್ಲಲ್ಲಿ ಸಂಚರಿಸುತ್ತ ಕೆಲಕಾಲ ಗುಡ್ಡ ಬೆಟ್ಟಗಳಲ್ಲಿ ತಪಸ್ಸನ್ನು ಮಾಡಿದರು. ಒಂದು ದಿನ ಅವರು ಪೂಜೆ ಮುಗಿಸಿಕೊಂಡು ಕಣ್ತೆರೆಯುವಷ್ಟರಲ್ಲಿ ದೇವಿ ಪ್ರತ್ಯಕ್ಷಳಾದಂತೆ ಆಯ್ತು. ಆಕೆ ಈತನಿಗೆ ನೀನಿನ್ನೂ ಲೋಕಕಲ್ಯಾಣ ಕಾರ್ಯ ಮಾಡಬೇಕಿದೆ. ಅದಕ್ಕೆ ನೀನು ಪಶ್ಚಿಮ ದಿಕ್ಕಿಗೆ ಪಯಣಿಸು. ಅಲ್ಲಿ ನಿನಗೆ ಯೋಗ್ಯಗುರು ಸಿಗುತ್ತಾನೆ ಎಂದು ಹೇಳಿದಂತಾಯ್ತು. ಆ ಪ್ರಕಾರ ವಿರೂಪಾಕ್ಷ ಸ್ವಾಮಿಗಳು ಅಲ್ಲಿಂದ ಪ್ರಯಾಣ ಬೆಳೆಸಿದರು. ಅವರು ಅಂಕಲಗಿ ಮಠಕ್ಕೆ ಬಂದರು. ಅಲ್ಲಿನ ಗುರುಗಳನ್ನು ಕಂಡು ನಮಸ್ಕರಿಸಲು, ಅವರು ಶಾಂತಚಿತ್ತರಾಗಿ ಸಂತೋಷ ಪಟ್ಟು ಅಡವಿಸಿದ್ಧನ ಗದ್ದುಗೆಯ ಪೂಜೆಯನ್ನು ತಪ್ಪದೇ ಮಾಡು ನೀನು ಧನ್ಯನಾಗುವಿ, ಎಂದರು. ಕೆಲಕಾಲ ವಿರೂಪಾಕ್ಷ ಸ್ವಾಮಿಗಳು ಅಡವಿ ಸಿದ್ಧೇಶ್ವರರ ಸಾನ್ನಿಧ್ಯದಲ್ಲಿ ಇರುವರು. ಗುರುಗಳಿಗೆ ತಕ್ಕ ಶಿಷ್ಯನಾಗಿ ಬೆಳೆದುನಿಂತ ವಿರೂಪಾಕ್ಷ ಸ್ವಾಮಿಗಳನ್ನು ಅಡವಿ ಸಿದ್ಧೇಶ್ವರರು ಕರೆದು ಇಂದಿನಿಂದ ನಾವು,

ನಿನ್ನನ್ನು 'ನಿರುಪಾಧಿಕ' ನೆಂದು ಕರೆಯುವೆವು, ಎಂದು ಆಶೀರ್ವದಿಸಿದರು. ಅಂದಿನಿಂದ ವಿರೂಪಾಕ್ಷ ಸ್ವಾಮಿಗಳು ನಿರುಪಾಧೀಶ್ವರ ಮಹಾಸ್ವಾಮಿಗಳೆನ್ನಿಸಿದರು.


ಅಡವಿ ಸಿದ್ಧೇಶ್ವರ ಗುರುಗಳು ನಿರುಪಾಧೀಶ್ವರರಿಗೆ ಇನ್ನು ಮುಂದೆ ನೀವು ಜ್ಞಾನಮಾರ್ಗವನ್ನು ಜಗತ್ತಿಗೆ ತಿಳಿಸಬೇಕು. ಬಡವ-ಬಲ್ಲಿದ, ಮೇಲ್ವರ್ಗ-ಕೇಳವರ್ಗ ಎಂಬ ಭೇದ ಮಾಡದೆ ಎಲ್ಲರನ್ನು ಸಮಾನರೆಂದು ಕಾಣುತ್ತ ನಡೆಯಬೇಕು ಎಂದು ಹೇಳಿದರು. ಮತ್ತು ನೀವಿನ್ನು ಇಲ್ಲಿಂದ ಪೂರ್ವದಿಕ್ಕಿಗಿರುವ ಚಿಕ್ಕೊಪ್ಪ ಎಂಬ ಗ್ರಾಮಕ್ಕೆ ಹೋಗಬೇಕು, ಅಲ್ಲಿ ಭೀಮರಾಯಪ್ಪ ಎಂಬ ಭಕ್ತನಿದ್ದಾನೆ, ಆತನನ್ನು ಕಾಣಿರಿ ಎಂದರು. ಆ ಪ್ರಕಾರ ನಿರುಪಾಧೀಶ್ವರರು ಚಿಕ್ಕೊಪ್ಪಕ್ಕೆ ಒಂದು ಆ ಭಕ್ತನ ಮನೆಯಲ್ಲಿ ಉಳಿದು ಪೂಜೆ, ಪ್ರಸಾದ ಮುಗಿಸಿ ಭಕ್ತರಿಗೆಲ್ಲ ಶಿವಾನುಭವ ತತ್ವಗಳನ್ನು ಉಪದೇಶಿಸಿದರು. ಮುಂದೆ ಅವರು ಊರೂರು ಸಂಚರಿಸುತ್ತ ಜನರಿಗೆ ಶಿವಾನುಭವ ತತ್ವಗಳನ್ನು ಹೇಳುತ್ತ ಸಿರಸಬಂಧನಪುರಕ್ಕೆ ಅಂದರೆ ಈಗಿನ ಲಿಂಗಸುಗೂರ ತಾಲೂಕಿನ ತಲೆಕಟ್ಟು ಗ್ರಾಮಕ್ಕೆ ಬಂದು ನೆಲೆಸಿದರು. ಗುರು ನಿರುಪಾಧೀಶ್ವರ ಮಹಾಸ್ವಾಮಿಗಳವರ ವಾಸ್ತವ್ಯದ ಈ 'ತಲೆಕಟ್ಟು' ಊರಿನ ಪ್ರದೇಶವೇ ಈಗ ಅಂಕಲಿ ಮಠವಾಗಿದೆ. ಈ ಮಠಕ್ಕೆ ದೂರ ದೂರದಿಂದ ಈಗ ಭಕ್ತಾದಿಗಳು ಬರುವುದುಂಟು. ನಿರುಪಾಧೀಶ್ವರ ಮಹಾಸ್ವಾಮಿಗಳು ಕ್ರಿ.ಶ. ೧೮೭೭ರಲ್ಲಿ ಇಲ್ಲಿಯೇ ಲಿಂಗೈಕ್ಯರಾದರು. ಅವರ ಗದ್ದುಗೆ ಅಂಕಲಿ ಮಠದಲ್ಲಿದೆ. ನಾವಿಲ್ಲಿ ಸ್ಮಾರಕಗಳ ರೂಪದಲ್ಲಿ ಅವರ ಮಠ, ಗದ್ದುಗೆಗಳ ಚಿತ್ರ ನೀಡಿದ್ದೇವೆ.



ಅಂಕಲಿಮಠದ ಮಹಾಸ್ವಾಮಿಗಳೂ,
ತತ್ವಪದಕಾರರೂ ಆದ ಶ್ರೀಗುರು
ನಿರುಪಾಧಿ ಮಹಾಸ್ವಾಮಿಗಳವರ ಚಿತ್ರ,
ಅಂಕಲಿಮಠ, ತಾ - ಲಿಂಗಸುಗೂರು.



ಅಂಕಲಿಮಠದಲ್ಲಿರುವ ಶ್ರೀ ಗುರುನಿರುಪಾಧಿ ಮಹಾಸ್ವಾಮಿಗಳ ಗದ್ದುಗೆಯ ಚಿತ್ರ, ಅಂಕಲಿಮಠ, ತಾ – ಲಿಂಗಸುಗೂರು



ಅಂಕಲಿಮಠದ ಹೊರಭಾಗದ ಚಿತ್ರ, ಅಂಕಲಿಮಠ, ತಾ– ಲಿಂಗಸುಗೂರು

ಅಂಕಲಗಿಯ ಅಡವೀಶ್ವರರ ಶಿಷ್ಯತ್ವ ಪಡೆದ ನಿರುಪಾಧೀಶ್ವರ ಮಹಾಸ್ವಾಮಿಗಳು ಅಧ್ಯಾತ್ಮ ಶಕ್ತಿಯನ್ನು ಸಂಪಾದಿಸಿಕೊಂಡಿದ್ದರು. ಅವರಲ್ಲಿ ಆಶುಕವಿತ್ವ ಶಕ್ತಿಯೂ ಜನ್ಮಜಾತವಾಗಿ ಒಲಿದು ಬಂದಿತ್ತು. ಸಂಗೀತದಲ್ಲೂ ಅವರು ಅಪಾರ ಜ್ಞಾನಗಳಿಸಿದ್ದರು. ಅವರು ಬರೆದ ಅನೇಕ ತತ್ವ ಪದಗಳಲ್ಲಿ ಅನುಭಾವ ಸುಪ್ತವಾಗಿ ಹುದುಗಿದುದನ್ನು ಗುರುತಿಸುವೆವು. ನಿರುಪಾಧೀಶ್ವರರು ಬರೆದ ತತ್ವಪದಗಳಲ್ಲಿ ೧೧೯ ತತ್ವಪದಗಳನ್ನು ಆಯ್ದು ಕೊಂಡು ಶ್ರೀ ಗಿರಿರಾಜ ಹೊಸಮನಿಯವರು "ಅಂಕಲಿ ಮಠದ ನಿರುಪಾಧಿಗಳು ರಚಿಸಿದ ಅನುಭಾವ ಗೀತೆಗಳು" ಎಂಬ ಸಂಕಲನವನ್ನು ಪ್ರಕಟಿಸಿರುವರು. ಅವರ ಈ ಸಂಕಲನದಿಂದ ನಿರುಪಾಧೀಶ್ವರರ ಆರು ತತ್ವಪದಗಳನ್ನು ಇಲ್ಲಿ ಆಯ್ಕೆ ಮಾಡಿ ಕೊಡಲಾಗಿದೆ.

೧. ಬುದ್ಧಿ ಬಾರದು ಮನಕೆ ಬುದ್ಧಿ ಬಾರದು

ಬುದ್ಧಿ ಬಾರದು ಮನಕೆ ಬುದ್ಧಿ ಬಾರದು ।
ಸಾಧ್ಯ ಮಾಡಿ ಶಿದ್ಧ ನಡೆಯೆಯೊಳ್‌ಯಿದ್ದು ಬ್ರಹ್ಮನಾಗುವಂತಾ ॥ ॥ ಪ ॥

ಗುರುವಿನೊಚನ ಕೇಳಿ ತನ್ನ । ಅರವು ಗುರುತು ಓಡಿದು ನಿತ್ಯ ।
ಮರಿಯದಲೆ ತನ್ನ ನಿಜದೀ । ಬೆರೆತು ವಸ್ತುವಾಗುವಂತಾ ॥ ॥ ೧ ॥

ಯಿದರ ನುಡಿಯ ಗುರುವಿಗ್ವಾಡೋ । ಚದುರಗಾರಕೀಯ ಬಿಟ್ಟು
ಸದಮಲಾನಂದವಾಗೋ । ಮಧುರ ಮುಕ್ತಿಯಾಗುವಂಥಾ ॥ ॥ ೨ ॥

ಕಠಿಣ ವಾಕ್ಯಗಳನು ಬಿಟ್ಟು । ಕುಟಿಲತನಗಳನ್ನು ಸುಟ್ಟು
ಹಟವು ಕಳದು ಶಾಂತ ಗುಣದೀ । ಘಟವೆ ಲಿಂಗವಾಗುವಂತಾ । ॥ ೩ ॥

ಸುಳ್ಳು ಮಾತಿನಿಂದ ಕಷ್ಟ । ಕಳ್ಳ ವಚನ ಮಹಾ ಕನಿಷ್ಠ
ಎಳ್ಳಿನಷ್ಟು ಸುಖವಿಲ್ಲಂತಾ । ವಳ್ಳೇಬ್ಯೆಲು ಆಗುವಂತಾ ॥ ೪ ॥

ಅಡವಿಸ್ವಾಮಿ ನಿರುಪಾಧೀ । ಬೆಡಗು ಅಲ್ಲವೆಂದು ತಿಳಿದು
ದೃಢದಿ ನಂಬಿ ಶುದ್ಧವಾಗಿ । ಮೃಡನು ತಾನೇ ಯಾಗುವಂತಾ ॥ ॥ ೫ ॥

೨. ತೊಗಲಿನಾಟವು ತಿಳಿಯದಣ್ಣಾ

ತೊಗಲಿನಾಟವು ತಿಳಿಯದಣ್ಣಾ । ನಿತ್ಯ ಅಘಹರನ ಮುಂದೆ ತಾ ।
ಪೂಜೆಗೊಂಬುವದು ತೊಗಲಿನಾಟವು ತಿಳಿಯದಣ್ಣ ॥ ಪ ॥

ಸಿದ್ದನ ಮುಂದೆ ಬಾರಿಸುವ ಸಮಾಳ ತೊಗಲು
ಮದ್ದಲಿ ದಮ್ಮಡಿ ಹೊಳೆದಾಟೋ ಹರಗೋಲೂ ತೊಗಲು
ಬುದ್ದಲಿ ನಗಾರಿ ಡೋಲು ತಪ್ಪಡಿ ತೊಗಲು
ಜತ್ತಿಗೆ ಮಿಣಿ ಕಣ್ಣ ಪಾದರಕ್ಷೆಯು ತೊಗಲು
ಉತ್ತಮರು ಕೆಟ್ಟವರು ಹುಟ್ಟೋದ್ದಶೆ ತೊಗಲು ॥ ೧ ॥

ಕರಡಿ ಜೇರುಬಂದು ಪಟದಾಳಿ ಬಾರು
ಹರಿಯದ್ದುಡುಗರು ಹಾಡೋ ಹಲಗಿ ದಿಮ್ಮು ತೊಗಲು
ಕುರುಬರ ಬೀರನದು ವಂದೇ ಡೊಳ್ಳು ತೊಗಲು
ಪರಿಶಿವನ ಹೊದಿಕೆ ಗಜ ವ್ಯಾಘ್ರ ಯರಡರ ತೊಗಲು
ಪರಿಯ ತಿಳಿಯಲು ನಿನ್ನ ಶರೀರವೆ ತೊಗಲು ॥ ೨ ॥

ತೊಗಲು ನಾ ತೊಗಲು ಹುಟ್ಟೋದು ಹುಟ್ಟೋದೊಂದು ತೊಗಲು
ಪ್ರೀತಿಯಿಂದಲೇ ಎತ್ತಿ ಮುದ್ದಾಡೊ ಶಿಶು ತೊಗಲು
ನೂತನ ಧಾನ್ಯ ಪದಾರ್ಥ ಬೆಳೆವದು ತೊಗಲು
ಯಾತರ ಶೀಲ ಹಾಲು ಬರುವ ಮಲಿ ತೊಗಲು
ಜ್ಯೋತಿ ರೂಪಗೆ ಸಂಗವೇನೋ ನಿರುಪಾಧಿ ತೊಗಲಿನಾಟವು ತಿಳಿಯದಣ್ಣ
॥ ೩ ॥

೩. ಸಕಲ ತಾಪತ್ರಯದ ಭಾರ ನಿನ್ನಗ್ಹತ್ತೇದೆ

ಸಕಲ ತಾಪತ್ರಯದ ಭಾರ ನಿನ್ನಗ್ಹತ್ತಿದೆ
ಸುಖದಿ ನಿನ್ನ ಧ್ಯಾನ ಮಾಡೋದೆನಗೆಹತ್ತಿದೆ ॥ ಪ ॥

ಮಡದಿ ಮನೆಯು ಪಶುವು ಚಿಂತೆ ನಿನಗೆ ಹತ್ತಿದೆ
ಷಡು ಚಕ್ರಂಗಳ ಸುಳುವು ಕಾಣೋದೆನಗೆ ಹತ್ತಿದೆ
ಸಡಗರಾನಂದ ಚಿಂತೆ ನಿನಗೆ ಹತ್ತಿದೆ
ಅಡಿಯ ಧ್ಯಾನ ಮಾಡ ಲಹರಿ ಯನಗೆ ಹತ್ತಿದೆ ॥ ೧ ॥

ಪುತ್ರ ಪೌತ್ರನ ಮದುವೆ ಚಿಂತೆ ನಿನ್ನಗ್ಹತ್ತಿದೆ
ನಿತ್ಯ ನಿನ್ನ ನಾಮ ಸ್ತುತಿಪದು ಯನಗೆ ಹತ್ತಿದೆ
ಅತ್ಯೆ ಮಾವ ಅಳಿಯನೆಂಬೊದು ನಿನಗೆ ಹತ್ತಿದೆ
ಚಿತ್ತ ನಿನ್ನೊಳಗಾಗಿ ನಿಲ್ಲೊದೆನಗೆ ಹತ್ತಿದೆ ॥ ೨ ॥

ಮುತ್ತು ಭಂಗಾರ ಬೆಳ್ಳಿ ಅರವಿ ನಿನ್ನಗ್ಹತ್ತಿದೆ
ಕರ್ತುರ್ ಮುಕ್ತಿ ಪಾಲಿಶಂಬುದೆನಗೆ ಹತ್ತಿದೆ
ಮಿಥ್ಯದಾಟ ಮಾಡಿ ತೋರೊದು ನಿನಗೆ ಹತ್ತಿದೆ
ಸತ್ಯವಾದ ವಸ್ತು ಬೆರೆವದು ಯನಗೆ ಹತ್ತೇದೆ ॥ ೩ ॥

ಕಾಲ ಕಾಲದಲ್ಲಿ ಕಾವದು ನಿನಗೆ ಹತ್ತಿದೆ
ಲೋಲ ಮೂರ್ತಿಯಾಗಿ ಚರಿಪೊದೆನೆಗೆ ಹತ್ತಿದೆ
ಮಾಲಿ ಹಾಕಿ ಮೆರೆಸುವದು ನಿನಗೆ ಹತ್ತಿದೆ
ಕೀಲನರಿದು ಕೊಂಡಾಡೋದು ಯನಗೆ ಹತ್ತಿದೆ ॥ ೪ ॥

ಚರಣ ಧೂಳೀ ನನ್ನವೆಂಬೊದು ನಿನಗೆ ಹತ್ತೀದೆ
ಗುರುವು ಅಂಕಲಗೀಶನೆಂಬೊದು ಯನಗೆ ಹತ್ತೀದೆ
ಪರಿ ಪರಿಯು ಕಾಯ್ದು ಬರುವದು ನಿನಗೆ ಹತ್ತೀದೆ
ಅರಮರಿಲ್ಲಾ ನಿರುಪಾಧಿ ಯನಗೆ ಹತ್ತೇದೆ ॥ ೫ ॥

೪. ಹೋಗತೀನಿ ನಾನು ಹೋಗತೀನಿ

ಹೋಗತೀನಿ ನಾನು ಹೋಗತೀನಿ
ನಾನು ಹೋಗತೀನಿ ಯೋಗಿ ಅಡವೀಶನಾ ಕಂಡು ಮುಕ್ತಿಗೆ ॥ ಪ ॥

ಹಿಂದೇಳು ಜನ್ಮದ ಪಾಪ ಹರಿದು ಸಂಶಯ ಹುರಿದು
ಸಂದೇಹ ಗುಣಗಳೆಲ್ಲ ಮರದು ನಿಜದೊಳು ಬೆರದು
ಕುಂದು ಕೊರತಿ ಎಲ್ಲಾ ನೀಗಿ ತೂಗಿ ಬ್ರಹ್ಮ ತಾನಾಗಿ
ಅಂದು ಇಂದು ಯೇನು ಇಲ್ಲ, ನೀನಾಗಿ ಸುಗುಣದ ಭೋಗಿ ॥ ೧ ॥

ಯೇನು ಹೇಳಲಿ ಇಲ್ಲಿ ಇರುವಂತ ಸೂಯೇಕಾಂತ
ಸ್ವಾನುಭಾವದ ಸುಖ ನಿಶ್ಚಂತ ಹೋಯಿತು ಪಂಥಾ
ಕೂನದೊಳಗೆ ಚಿಂತೆಯೇನು ಇಲ್ಲ ಶಿವ ಜಗವೆಲ್ಲಾ
ತಾನಾದ ಬ್ರಹ್ಮವು ಸೀಬೆಲ್ಲಾ ಹೇಳುದಕಿಲ್ಲಾ ॥ ೨ ॥

ಅಲ್ಲಿ ಬೀರು ಸುಖ ನಿರುಪಾಧಿ ಎಲ್ಲವುಪಾಧಿ
ಬಲ್ಲಿದ ಭವ ಜೈಸುವ ಹಾದೀ ಯೇನಿಲ್ಲವಾದೀ
ಸೊಲ್ಲು ಸೊಲ್ಲಿಗೆ ಗುರುನಾಮ ವಳಗೆ ನುಡಿಯುತ ಬೆಳಗೇ
ಯಳ್ಳಷ್ಟು ಬಾರ ಇಳಿಗೆ ಆನಂದ ವಳಗೆ ॥ ೩ ॥

೫.ಯಂತಾ ಕರುಣಿ ನೋಡೇ ಅಡವಿಸಿದ್ಧಾ

ಯಂತಾ ಕರುಣಿ ನೋಡೇ ಅಡವಿಸಿದ್ಧಾ
ಯಂತಾ ಕರುಣಿ ನೋಡೇ
ಯಂತಾ ಕರುಣಿಯು ಚಿಂತೆ ದೂರಮಾಡಿ
ಪ್ರಾಂತಿನ ಪ್ರಭೆಮೂರ್ತಿಹಂತೇಲೇ ಯಳಕೊಂಡಾ ‖ ಪ ‖

ಐವತ್ತಾರು ದೇಶದೀ ನಾಮದ ಕೀರ್ತಿ
ಸ್ವಯ ಮೂರ್ತಿ ಯನಿಸುವದೂ
ಕೈವಲ್ಯ ಕೈಲಾಸ ಸ್ವರ್ಗ ಮೂರು ತನ್ನ
ವಿವರಿಸಿದರೆ ಕೆಟ್ಟ ಭವದ ಕಳಿಯಲಿಕ್ಕೆ ‖ ೧ ‖

ಬಂದ ಜಂಗಮ ಭಕ್ತರಾ
ಊಟ ಉಡಗಿ ಚಂದನೋಡುತಲಿ
ಕಂದಗೆ ಹಾಲ್ತುಪ್ಪ ಹಣ್ಣು ಕೊಟ್ಟಂತೆ
ಬಂದವರ ಇದ್ದವರ ಒಂದೆಂದು ಕಾಣುವಾ ‖ ೨ ‖

ನಿರುಪಾಧಿ ನಿಶ್ಚಯವೂ
ಮೂರು ಸಲ ಅರುವಿಲಿ ಜೈಸಿದನೂ
ಗುರುಲಿಂಗ ಜಂಗಮ ಅನುಭವಿಯೀತಾ
ಪರಿ ಪರಿ ವಿಧದಿಂದ ಪೊರೆವ ಜೀವಿಗಳಾ ‖ ೩ ‖

೬. ಏನು ಹೇಳಬೇಕು ಜೀವಗೆ

ಏನು ಹೇಳಬೇಕು ಜೀವಗೆ। ಅಡವೀಶ ಕೊಡುವಾ ಖೂನವನರಿಯದೆಲೆ ಬಳಲುವಾ॥
ಧ್ಯಾನದೊಳಗೆ ಐಕ್ಯವಾಗೆ । ಬೋನ ಬಟ್ಟೆ ದುಡ್ಡು ರುಚಿಯೂ ।
ತಾನೆ ನಡೆಸುವಂತ ದೇವಾ । ಮೌನ ಮೂರುತಿಯು ಸಿದ್ಧಾ ‖ ಪ ‖

ಕೊಡುವದರಿಯದಲೆ ಚಿಂತಿಯ । ಮನದೊಳಗೆ ತಾನು
ಹಿಡಿದು ಹೊಯ್ಯದಾಡಿ ವರುಲುವಾ । ವಡೆಯನಾಗ್ನೆ ಅರಿಯ ಮಂತ್ರ
ಪಡೆದು ವಳಗೆ ಜಪಿಸಿದಾಗಲೆ ವಡಲ ಆಶೆಗಳಲುವಾನು ।
ದೃಡವು ಇಲ್ಲಾ ಬಯಕೆ ಬಿಡದು ‖ ೧ ‖

ನಾಥನಾಟ ಅರಿಯದಲೆಯೂ । ಸಂಶಯದಿ ತಾನೆ
ಕೋತಿಯಂತೆ ಕುಣಿದು ಕೆಡುವನು । ನೀತಿ ಭೀತಿಯರಡು ಮರೆತು ।

ಕಾತುರದಿ ಕಂಡ ಕಡೆಗೆ । ಪ್ರೀತಿ ಇಡುವದಯ್ಯಾ ಇದರ
ಜ್ಯಾತಿ ಸುಡಲಿ ತಿಳಿಯದೆನಗೆ ॥ ೨ ॥

ಹಿತವ ಬಯಸುವದು ನಿತ್ಯದಿ । ಅರಿಯದೆ ಬಹ
ಕೃತಕವೇನು ಬೇಡಿಕೊಂಡರೇ ಪತಿತ ಪಾವನ ನಾನು ಪುಣ್ಯಾ
ಗತಿಯು ಇದ್ದಾ ಪರಿಯು ಮೂಢ್ವ ಪಥವನರಿತು ಪಾದದಲ್ಲಿ ।
ರತಿಯ ನಿಡರು ನಿಶ್ಚಯಿಲ್ಲಾ ॥ ೩ ॥

ನಾನು ನನ್ನನೆಂದು ಕೆಡುವದು । ನಿನ್ನಾಜ್ಞೆ ಮರದು ।
ಸ್ವಾನನಂತೆ ಸೊಟ್ಟ ಚರಿಪದು । ಧೇನುವಾದ ಗುರುವಿನಂಘ್ರಿಯ ।
ಮೌನದಿಂದ ಭಜಿಪದಗಲೀ । ತಾನೇ ಶ್ರೇಷ್ಠನಾಗಿ ಮನದಿ ।
ಹೀನ ಕಂಜದಾತಿ ಇಹುದು ॥ ೪ ॥

ಮೂರರಂತೆ ನಡೆಸುವಾತನು ಅಂಕಲಗಿ ಮಠದಿ
ಸಾರ ಸೌಖ್ಯ ಸಿದ್ಧಲಿಂಗನು ।
ಪೂರಣನಂದ್ಯೈಕ್ಯ ಕಾರ್ಯ ।
ಕಾರಣಡವಿಯ ಪಾಶ್ಚಾ । ಧೀರ ಗುರು ನಿರುಪಾಧಿಯಾದ ।
ಸೇರುವಿಯೊಳು ಸಮ್ಮತಿಲ್ಲ ॥ ೫ ॥

೪. ನೀರಲಕೇರಿ ಬಸವಲಿಂಗ ಶರಣ (೧೮೧೨-೧೮೭೨)

ನೀರಲಕೇರಿ ಬಸವಲಿಂಗ ಶರಣರು ಶ್ರೀ ಘನಮಠದ ನಾಗಭೂಷಣ ಶಿವಯೋಗಿಗಳ ಸಮಕಾಲೀನರು. ದೊಡ್ಡ ಅನುಭಾವಿಗಳು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ನೀರಲಕೇರಿಯಲ್ಲಿ ನೆಲೆನಿಂತು ಸಮಾಜಸೇವೆಯನ್ನು ಮಾಡಿದರು.

ಬಸವಲಿಂಗ ಶರಣರು ಮೂಲತಃ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಗುಡೂರು ಎಂಬ ಗ್ರಾಮದಲ್ಲಿ ಕ್ರಿ.ಶ ೧೮೧೨ರಲ್ಲಿ ಜನಿಸಿದರು. ಇವರ ತಂದೆ ರಾಚಯ್ಯ ತಾಯಿ ಮಹಾದೇವಮ್ಮ .ಇವರ ತಾಯಿ-ತಂದೆಗಳು ಇವರನ್ನು ಎಂಟುವರ್ಷದವರು ಇರುವಾಗ ಚಿತ್ತರಗಿಯ ಮಹಾಂತ ಸ್ವಾಮಿಗಳಿಗೆ ಒಪ್ಪಿಸಿದರು. ಮಹಾಂತ ಸ್ವಾಮಿಗಳು ಕೆಲಕಾಲ ಇವರನ್ನು ಬೆಳೆಸಿ ಮುಂದೆ ಲಿಂಗಸುಗೂರಿನ ಸಾವಿರ ದೇವರ ಮಠದ ಪಂಚಾಕ್ಷರಿ ಸ್ವಾಮಿಗಳಿಗೆ ಒಪ್ಪಿಸಿದರು.ಆಗ ಬಸವಲಿಂಗನಿಗೆ ೧೬ ವರ್ಷ ವಯಸ್ಸಾಗಿತ್ತು. ಬಸವಲಿಂಗರು ವಿದ್ಯಾಭ್ಯಾಸದ ಜೊತೆಗೆ ಯೋಗಾಭ್ಯಾಸವನ್ನೂ ಮಾಡಿ ಶರೀರ ಸೌಷ್ಠವವನ್ನು ಹೆಚ್ಚಿಸಿಕೊಂಡರು. ಅಧ್ಯಾತ್ಮದತ್ತ ಒಲವನ್ನು ಬೆಳೆಸಿಕೊಂಡರು. ಪಂಚಾಕ್ಷರಿ ಸ್ವಾಮಿಗಳು ಮುಂದೆ ಲಿಂಗೈಕ್ಯರಾದ ತರುವಾಯದಲ್ಲಿ ಬಸವಲಿಂಗ ಶರಣರು ಮಠದ ಅಧಿಕಾರವನ್ನು ಸ್ವೀಕರಿಸಿದ ನಂತರ ಅನೇಕ ತತ್ವ ಪದಗಳನ್ನು ರಚಿಸಿದರು. ಅವರು ಮಹಾಜ್ಞಾನಿಗಳು, ಹಠಯೋಗಿಗಳು ಶಿವಯೋಗಿಗಳು ಆಗಿದ್ದರೆಂಬುದು ಅವರು ರಚಿಸಿದ ತತ್ವಪದಗಳಿಂದ ವಿದಿತವಾಗುವುದು. ಬಸವಲಿಂಗ ಶರಣರಿಗೆ ಯೋಗ ಸಿದ್ಧಿಯಾಗಿರುವುದರಿಂದ ಆತ್ಮ ಸಾಕ್ಷಾತ್ಕಾರವಾಗಿತ್ತು. ಅವರು ದೇವಿ ಉಪಾಸಕರೂ ಆಗಿದ್ದರು. ದೇವಿ ಪುರಾಣ ದೇವಿ ಪೂಜೆ, ದೇವಿ ನಾಮ ಪಾರಾಯಣಗಳನ್ನು ವಿಶೇಷವಾಗಿ ಆಚರಿಸುತ್ತಿದ್ದರು. ಅವರಿಗೆ ದೇವಿಯು ಪ್ರತ್ಯಕ್ಷಳಾಗಿ ಅವರ ಮಸ್ತಕದ ಮೇಲೆ ತನ್ನ ವರದ ಹಸ್ತವನ್ನಿರಿಸಿದ್ದಳು ಎಂದು ಜನರು ನಂಬಿದ್ದರು. ಅದು ಕಾರಣವಾಗಿ ಅವರಲ್ಲಿ ಜ್ಞಾನಬಲ ಯೋಗ ಬಲಗಳು ಅಧಿಕವಾಗಿ ಬೆಳೆದು ಬಂದವೆಂದು ಜನರು ತಿಳಿದಿದ್ದರು. ಬಸವಲಿಂಗ ಶರಣರು ಆಶುಕವಿಗಳಾಗಿದ್ದು ಅನೇಕ ತತ್ವಯುಕ್ತ ಅಧ್ಯಾತ್ಮ ಅನುಭಾವಗಳಿಂದ ಕೂಡಿದ ಪದಗಳನ್ನು ರಚಿಸಿದರು. ಜೊತೆಗೆ ಅವರು ಜನಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.


ನೀರಲಕೇರಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ ಇವರು ಜನತೆಯ ಕಣ್ಣೀರನ್ನು ಒರೆಸಿದರು. ಜನರಲ್ಲಿದ್ದ ಮೌಢ್ಯವನ್ನು ಹೋಗಲಾಡಿಸಲು ಯತ್ನಿಸಿದರು. ಇವರ ಜನಸೇವೆಯನ್ನು ಕಂಡು ಕೆಲವರು ಹೊಟ್ಟೆ ಕಿಚ್ಚು ಪಟ್ಟುಕೊಂಡು ಇವರಿಗೆ ಆಹಾರದಲ್ಲಿ (ಅಫೀಮು) ಬೆರೆಸಿಕೊಟ್ಟರು. ಅವರ ಇಷ್ಟಲಿಂಗವನ್ನು ಕಳುವುಮಾಡಿದರು. ಹೀಗಾದರೂ ಬಸವಲಿಂಗ ಶರಣರು ಎಳ್ಳಷ್ಟು ಧೃತಿಗೆಡದೆ ಧೈರ್ಯದಿಂದ ಮುನ್ನಡೆದರು. ಇವರಿಗೆ ತೊಂದರೆ ಕೊಟ್ಟ ವೈರಿಗಳು ಮುಂದೆ ಇವರಿಗೆ ಬಾಗಿ ನಡೆಯ ತೊಡಗಿದರು. ಇವರ ಖ್ಯಾತಿಯನ್ನು ಕೇಳಿ ತಿಳಿದುಕೊಂಡ ಘನಮಠದ ನಾಗಭೂಷಣ ಶಿವಯೋಗಿಗಳು ಇವರನ್ನು ಕಾಣಲು ನೀರಲಕೇರಿಗೆ ಆಗಮಿಸಿದರು. ಆಗ ಬಸವಲಿಂಗ ಶರಣರು ಊರ ಹೊರವಲಯದಲ್ಲಿ ಎಮ್ಮೆಗಳನ್ನು ಕಾಯುತ್ತಿದ್ದರು. ಇದನ್ನು ನೋಡಿ ಸೋಜಿಗಗೊಂಡ ಘನ ಮಠದ ನಾಗಭೂಷಣ ಶಿವಯೋಗಿಗಳು ದಿವ್ಯ ಜ್ಞಾನವೆತ್ತ ಎಮ್ಮೆ ಕಾಯುದೆತ್ತ ಎರಡಕ್ಕೂ ಎತ್ತಣಿಂದೆತ್ತ ಸಂಬಂಧವಯ್ಯ ಎಂದು ಬೆಕ್ಕಸಬೆರಗಾಗಿ ಕೇಳುವರು. ಆಗ ಬಸವಲಿಂಗ ಶರಣರು, "ತಮ್ಮಾ ಕೇಳೊ ಎನ್ನುದ್ಯೋಗ ಎನ್ನ ವ್ಯವಹಾರ ಹಮ್ಮಳಿದು ಪರಬೊಮ್ಮ ಚಿಂತೆಯೊಳು ಸುಮ್ಮಾನಿರುತಲೆರಡೆಮ್ಮೆ ಕಾಯ್ತೀನಿ" ಎಂದು ಒಗಟಿನರೂಪದಲ್ಲಿ ಉತ್ತರಿಸಿದರು. ಯಾವ ಕಾಯಕವು ಶ್ರೇಷ್ಟವಲ್ಲ ಮತ್ತು ಕೀಳಲ್ಲ, ಎಲ್ಲಾ ಕಾಯಕಗಳು ಸರಿಸಮಾನ ವಾದುವೇ, ಎಂಬ ಶರಣರ ಕಾಯಕ ಸಿದ್ಧಾಂತವನ್ನು ಬಸವ ಲಿಂಗ ಶರಣರು ಅರಿತು ಆಚರಣೆಯಲ್ಲಿ ತಂದ್ದದ್ದು ವಿದಿತವಾಗುವುದು. ನೀರಲಕೇರಿಗೆ ಬಂದ ಘನಮಠದ ನಾಗಭೂಷಣ ಶಿವಯೋಗಿಗಳು ಅಲ್ಲಿ ಕೆಲದಿನವಿದ್ದು ಬಸವಲಿಂಗರೊಡನೆ ಅನುಭಾವದ ಚರ್ಚೆಯಲ್ಲಿ ತೊಡಗಿದರು. ಆಗ ಬಸವಲಿಂಗ ಶರಣರ ನೀರಲಕೇರಿ ಮಠವು ಅನುಭವ ಮಂಟಪವಾಗಿ ಪರಿವರ್ತನೆ ಗೊಂಡಿತು. ಹೀಗೆ ಬಸವಲಿಂಗ ಶರಣರ ಖ್ಯಾತಿಯೂ ದಿನದಿನಕ್ಕೆ ಹೆಚ್ಚಾಗ ತೊಡಗಲು ಇತ್ತ ಕುಹಕಿಗಳ ಕಾಟವು ದುರ್ವರ್ತನೆಯೂ ಹೆಚ್ಚಾಯಿತು. ಕೆಲವು ಕುಹಕಿಗಳು ಬಸವಲಿಂಗ ಶರಣರಿಗೆ ಪರಿಪರಿಯಾದ ತೊಂದರೆಗಳನ್ನು ಕೊಡ ತೊಡಗಿದರು. ಅವರಿಗೆ ಅವರ ಹೆಸರಿಗೆ ಕಳಂಕ ತರಲು ಮುಂದಾದ ಕುಹಕಿಗಳೊಂದಿಗೆ ಅಲ್ಲಿರಲು ಬಸವಲಿಂಗ ಶರಣರಿಗೆ ಮನಸ್ಸಾಗಲಿಲ್ಲ. ಆಗ ಬಸವಲಿಂಗ ಶರಣರು ನೀರಲಕೇರಿಯನ್ನು ಬಿಟ್ಟು ಐದನಾಳು ಎಂಬ ಗ್ರಾಮಕ್ಕೆ ಬಂದು ವಾಸಿಸ ತೊಡಗಿದರು. ಮುಂದೆ ಅವರು ಐದನಾಳು ಗ್ರಾಮದಲ್ಲಿಯೇ ಕ್ರಿ.ಶ ೧೮೭೭ ರಲ್ಲಿ ಲಿಂಗೈಕ್ಯರಾದರು. ಆ ಊರಿನಲ್ಲಿಯೇ ಅವರ ಸಮಾಧಿ ಇರುವುದನ್ನು ಗುರುತಿಸುವೆವು. ಇವರಿಗೆ ಸಂಬಂಧಿಸಿದ ಸ್ಮಾರಕಗಳನ್ನಿಲ್ಲಿ ಚಿತ್ರಗಳ ರೂಪದಲ್ಲಿ ನೀಡಿದೆ.




ತತ್ವಪದಕಾರ ಶ್ರೀ ನೀರಲಕೇರಿ ಬಸವಲಿಂಗ ಶರಣರ ಚಿತ್ರ, ನೀರಲಕೇರಿ, ತಾ– ಲಿಂಗಸುಗೂರು




ನೀರಲಕೇರಿ ಬಸವಲಿಂಗ ಶರಣರ ಮಠದೊಳಗೆ (ಗರ್ಭಗುಡಿ) ಇರುವ ಬಸವಲಿಂಗಶರಣರ ತೋರು ಗದ್ದುಗೆಯ ಚಿತ್ರ, ನೀರಲಕೇರಿ, ತಾ –ಲಿಂಗಸುಗೂರು.



ನೀರಲಕೇರಿ ಬಸವಲಿಂಗ ಶರಣರ ಮಠದ ಚಿತ್ರ, ನೀರಲಕೇರಿ, ತಾ – ಲಿಂಗಸುಗೂರು.



ನೀರಲಕೇರಿ ಬಸವಲಿಂಗ ಶರಣರ ಗುರುಗಳಾದ ಶ್ರೀ ಪಂಚಾಕ್ಷರಿ ಸ್ವಾಮಿಗಳವರ ಮಠ
ಕಸಬಾಲಿಂಗಸುಗೂರು, ತಾ– ಲಿಂಗಸುಗೂರು



ಐದನಾಳು ಗ್ರಾಮದಲ್ಲಿರುವ ಶ್ರೀ ನಿರಲಕೇರಿ ಬಸವಲಿಂಗೇಶ್ವರ ಪ್ರಶಾಂತ ಮಂದಿರದ ಹೊರ ಚಿತ್ರ, ಐದನಾಳು, ತಾ– ಲಿಂಗಸುಗೂರು



ಐದನಾಳು ಗ್ರಾಮದಲ್ಲಿರುವ ಶ್ರೀ ಬಸವಲಿಂಗೇಶ್ವರ ಪ್ರಶಾಂತ ಮಂದಿರದಲ್ಲಿ ಇರುವ ನೀರಲಕೇರಿ ಬಸವಲಿಂಗ ಶರಣರ ಸಮಾಧಿ / ಗದ್ದುಗೆಯ ಚಿತ್ರ, ಐದನಾಳು, ತಾ– ಲಿಂಗಸುಗೂರು

ಬಸವಲಿಂಗ ಶರಣರು ಬರೆದ ತತ್ತ್ವ ಪದಗಳಲ್ಲಿ ಬದುಕಿನ ಜಿಜ್ಞಾಸೆ ವ್ಯಕ್ತಗೊಂಡಿದೆ. ಅವರ ತತ್ತ್ವ ಪದಗಳಲ್ಲಿ ಸಾಮಾಜಿಕ ವಿಡಂಬನೆ ಡಂಬಾಚಾರಗಳ ಖಂಡನೆ ಹಾಗೂ ಪರಮತ ಸಹಿಷ್ಣು ಭಾವ ವ್ಯಕ್ತಗೊಂಡುದುದನ್ನು ಕಾಣುವೆವು. ವೀರಶೈವರಾಗಿದ್ದ ಬಸವಲಿಂಗ ಶರಣರು ವಿಷ್ಣುವನ್ನು ಸ್ತುತಿಸಿ ತತ್ತ್ವಪದ ರಚಿಸಿದ್ದು ಚೋದ್ಯವಾಗಿದೆ. ಇದು ಅವರ ಪರಮತ ಸಹಿಷ್ಣುತೆಗೆ ಜ್ವಲಂತ ನಿದರ್ಶನವಾಗಿದೆ. ಅವರು ಪ್ರತಿಭಾನ್ವಿತ ಕವಿಗಳಾಗಿದ್ದರೆಂಬುದು ಅವರು ಬರೆದ ತತ್ತ್ವಪದಗಳಿಂದ ಸ್ಪಷ್ಟವಾಗುವುದು. ಅವರು ತಮ್ಮ ಅನೇಕ ಹಾಡುಗಳಲ್ಲಿ ಉಪಮಾನ ಉಪಮೇಯಗಳನ್ನು ಬಳಸಿಕೊಂಡು ಅಧ್ಯಾತ್ಮದ ಅಂತರಂಗವನ್ನು ಸರಳಗೊಳಿಸಲು ಯತ್ನಿಸಿದ್ದಾರೆ. ಇವರ ತತ್ತ್ವಪದಗಳು ಸತ್ವಯುತವು, ಸರಳವಾದುವು, ಆಕರ್ಷಕ ಶೈಲಿಯಿಂದ ಕೂಡಿದುವು ಆಗಿವೆ. ಇವರು ರಚಿಸಿದ ತತ್ತ್ವ ಪದಗಳಲ್ಲಿ ೧೮೨ ಹಾಡುಗಳನ್ನು ಸಂಗ್ರಹಿಸಿ "ಕೈವಲ್ಯ ದರ್ಪಣವೆಂಬ ಜ್ಞಾನಗೀತೆಯು" ಎಂಬ ಶೀರ್ಷಿಕೆಯಲ್ಲಿ ೧೯೫೪ರಲ್ಲಿ ಗುರುಲಿಂಗಾರ್ಯ ಕೆಂಭಾವಿಯವರು ಪ್ರಕಟಿಸಿರುವರು. ಆನಂತರ ಡಾ. ಬಸವಲಿಂಗ ಸೊಪ್ಪಿಮಠ ಅವರು "ನೀರಲಕೆರೆ ಬಸವಲಿಂಗ ಶಿವಯೋಗಿಗಳ ಸ್ವರವಚನಗಳು" ಎಂಬ ಕೃತಿಯಲ್ಲಿ ಇವರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಿರುವರು. 'ಪಂಚಾಕ್ಷರ ನೀರಲಕೇರಿ' ಎಂಬ ಅಂಕಿತನಾಮವನ್ನು ಹೊಂದಿದ್ದ ಬಸವಲಿಂಗ ಶರಣರ ಈ ತತ್ತ್ವ ಪದಗಳು ರಾಯಚೂರು ಜಿಲ್ಲೆಯಾದ್ಯಂತ ತುಂಬ ಜನಪ್ರಿಯತೆಯನ್ನು ಪಡೆದಿವೆ. ಇವರು ರಚಿಸಿದ ಅನೇಕ ತತ್ತ್ವ ಪದಗಳು ಹಿಂದೂ ಮುಸ್ಲಿಂ ಜನತೆಯ ಕೋಮು ಸಾಮರಸ್ಯಕ್ಕೆ ಕನ್ನಡಿಯಾಗಿವೆ. ಇವರ ತತ್ತ್ವ ಪದಗಳಲ್ಲಿ ಬಸವಾದಿ ಶರಣರ ಅನೇಕ ತತ್ವಗಳು, ಸಂದೇಶಗಳು, ಅಧ್ಯಾತ್ಮ ಬೆರೆತು ಕೊಂಡಿರುವುದನ್ನು ಗುರುತಿಸುವೆವು. ಡಾ. ವ್ಹಿ.ಜಿ. ಪೂಜಾರ ಮತ್ತು ಡಾ. ಈಶ್ವರಯ್ಯ ಮಠ ಅವರು ಸಂಪಾದಿಸಿದ "ಆಯ್ದ ಸ್ವರವಚನಗಳು" ಎಂಬ ಸಂಕಲನದಿಂದ ಇವರ ಮೂರು ತತ್ತ್ವಪದಗಳನ್ನು ಇಲ್ಲಿ ಆಯ್ದು ಕೊಡಲಾಗಿದೆ.

೧. ಬಡಿದಿತೆನಗ ದೆವ್ವ ಬಿಡಿಸುವರಾರ ಕಾಣೆನವ್ವ

ಬಡಿದಿತೆನಗ ದೆವ್ವ
ಬಿಡಿಸುವರಾರ ಕಾಣೆನವ್ವ
ಒಡಲೊಳಗೆ ಅಡಗ್ಯಾದವ್ವ
ನಡುದಲೆಯ ಹಿಡಿದದವ್ವ ॥ ಪ ॥

ಕಾಯ ಸೇರಿ ಕೂಡಿ । ಚಿಕ್ಕ
ಪ್ರಾಯ ಮೊದಲು ಮಾಡಿ

ಛಾಯ ನೋಡಿ ಕೂಡಿ
ಆಯಾಸವಿಲ್ಲದಾಡಿ ॥ ೧ ॥
ತನುವು ಮರೆಸಿತವ್ವ

ಮನ ಬುದ್ಧಿ ಕೆಡಿಸಿತವ್ವ
ಜನಕೆ ತೋರಿತವ್ವ
ದಿನಕರನ ಕಳೆಯ ಬೊವ್ವ ॥ ೨ ॥
ಕುಂತರೆ ಕುಂದ್ರದವ್ವ ತಾ

ನಿಂತರೆ ನಿಂದ್ರದವ್ವ
ಶಾಂತರಾಳಿತಾವ್ವ ತ
ನ್ನಂತೆ ಮಾಡಿತವ್ವ ॥ ೩ ॥

ಕೈಯ ಕಾಲು ಉಸುರಿಲ್ಲೆ
ಬಾಯಿದೆರೆದು ಹೇಳುವದಲ್ಲೆ
ಸೈಯ್ಯ ತಕ ಥೈಯ್ಯ
ತೈಯ್ಯ ಥೈಯ ಮೈ ಸ್ಮರಿಣಿ ತಪ್ಪಿಸಿತಲ್ಲೇ ॥ ೪ ॥

ಗಡಿ ನೀರಲಕೇರಿ ಧಾಮ
ನಡುನಾಡಕೆ ಪ್ರೇಮ
ಒಡೆಯ ಪಂಚಾಕ್ಷರನೊಳೈಕ್ಯ
ಪಡೆಯಲಾದಿತು ಬ್ರಹ್ಮ ॥ ೫ ॥

೨. ಹೂವ್ವಾ ಸೂರ್‍ಯಾಡಿದೆನೇ ಸದ್ಗುರುವಿನ ಮೇಲೆ

ಹೂವ್ವಾ ಸೂರ್‍ಯಾಡಿದೆನೇ ಸದ್ಗುರುವಿನ ಮೇಲೆ
ಹೂವ್ವಾ ಚೆಲ್ಲಾಡ್ಯಿದೇನೆ ॥ ಪ ॥

ಹೂವ್ವಾ ಸೂರ್‍ಯಾಡಿದೆನವ್ವ
ಹೂವ್ವಾ ಚಲ್ಯಾಡಿದೆ ಭರದಿ
ಆಹ್ವಾನಿಸಿ ನಿಜವಸ್ತುವ ತೋರಿದ ವಾ
ಹವ್ವಾ ಸದ್ಗುರುವಿನ ಮೇಲೆ ॥ ೧ ॥

ತನುವ ಮರಿಸಿ ಘನ
ಚಿನುಮಯಾತ್ಮನ ಮೇಲೆ

ಅನುವನನುಗೊಳಿಸಿದ ಮುಕ್ತಿ
ವಿನಯಾತ್ಮಳ ಮೇಲೆ ॥ ೨ ॥

ದೃಷ್ಟಿಮುಚ್ಚುತ ದೃಷ್ಟಿ ತೆರೆದು
ಅಟ್ಟಿಸಿವಾಯು
ಮುಟ್ಟಿ ಬ್ರಹ್ಮರಂಧ್ರದಿ
ನಟ್ಟನವಚಕ್ರವನೇ ॥ ೩ ॥

ಶಿಸ್ತು ನೀರಲಕೇರಿ
ಬಸ್ತಿಮಸ್ತಿನ ಗಡಿಯ
ವಸ್ತು ಪಂಚಾಕ್ಷರ ನುಡಿಯು
ಪುಸ್ತಿ ಪುಣ್ಯಂಗಳ ಬಲದಿ ॥ ೪ ॥

೩. ಓಂ ನಮಃ ಶಿವಾಯೆನ್ನಿರೋ

ಓಂ ನಮಃ ಶಿವಾಯೆನ್ನಿರೋ । ವೈಯ್ಯಾರದೋ
ಳೊನ್ನಮಶ್ಶಿವಾಯೆನ್ನಿರೋ ।
ಓಂ ನಮಃ ಶಿವಾಯೆನ್ನುತಜಹರಿಸುರರೆಲ್ಲ ।
ಮುನ್ನ ಕೈವಲ್ಯವ ಪಡೆದರೆಂಬುದ ಕೇಳಿ । ॥ ಪ ॥

ಮಾಸಪಕ್ಷದೊಳೇತಕೆ ಉಪವಾಸದೊಳ್ ।
ಧ್ಯಾಸ ದಂಡನೆಯೇತಕೋ ।
ನಾಶವಾಗುವ ದೇಹ ವಾಸನೆ ಹಿಡಿಯದೆ ।
ಈಶನ ನೆನೆಯಿರೊ ಮೋಸದೊಳಗಲದೆ ॥ ೧ ॥

ಜಪಮೌನ ವ್ರತವಿಲ್ಲದೆ । ತಾಪಸವೆಂಬ
ಕಪಟಭ್ರಾಂತಿಗಳಿಲ್ಲದೆ ।
ಗುಪಿತದೊಳ್ ಗುರುತಿಟ್ಟು ಉಪಮವರಿಯದೆಮತಿ ।
ವಿಪರೀತವಾಗದೆ ಹಗಲಿರುಳೆನ್ನದೆ ॥ ೨ ॥

ನಡುನಾಡದೊಳ್ ಗಡಿಯ ನೀರಲಕೇರಿ
ಮೃಡ ಪಂಚಾಕ್ಷರ ನಡಿಯ
ಬಿಡದೇಳು ಕೋಟಿ ಮಂತ್ರಕೆ ತಾಯಿಯೊಡಲಾದ
ಬೆಡಗಿನ ಶಿವಮಂತ್ರ ದೃಢದಿಂದ ನೆರೆನಂಬಿ ॥ ೩ ॥

೫. ಘನಮಠದ ನಾಗಭೂಷಣ ಶಿವಯೋಗಿ

(೧೮೨೮-೧೮೮೦)

ಶ್ರೀ ಘನಮಠದ ನಾಗಭೂಷಣ ಶಿವಯೋಗಿಗಳು ಮೂಲತಃ ಆಂಧ್ರ ಪ್ರದೇಶದವರು. ಆಂಧ್ರನಾಡಿನಲ್ಲಿ ಜನಿಸಿ, ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡ ಅನುಭಾವಿಗಳು. ಕೃಷಿ ಜ್ಞಾನ ಪ್ರದೀಪಿಕೆ ಹಾಗೂ ತತ್ವ ಪದಗಳನ್ನು ರಚಿಸಿ ಶ್ರೇಷ್ಠ ಕೃಷಿ ತಜ್ಞರು, ತತ್ವಪದಕಾರರು ಎನಿಸಿಕೊಂಡಿದ್ದಾರೆ. ಇವರು ಆಂಧ್ರಪ್ರದೇಶದ ರಂಗಾರೆಡ್ಡಿ ಜಿಲ್ಲೆಯ ವಿಕಾರಾಬಾದ ಮತ್ತು ತಾಂಡೂರುಗಳ ಮಧ್ಯ ಇರುವ ದೋರ್ವಾಡ (ದಾರೂರು) ಎಂಬ ಗ್ರಾಮದಲ್ಲಿ ವೀರಯ್ಯ ಮತ್ತು ವೀರಾಂಬೆವೆಂಬ ಪುಣ್ಯ ದಂಪತಿಗಳ ಉದರದಲ್ಲಿ ಕ್ರಿ.ಶ. ೧೮೨೮ರಲ್ಲಿ ವಿರೋಧಿನಾಮ ಸಂವತ್ಸರ ಆಶ್ವಿಜ ಶುದ್ಧ ೫ ಮಂಗಳವಾರದಂದು ಜನಿಸಿದರು. ಕರ್ನಾಟಕದ ಬಯಲು ಸೀಮೆಯಂತೆ ಇರುವ ದಾರೂರಿನ ಜನ ಭಕ್ತಿ ಹೃದಯವುಳ್ಳವರು. ಒಕ್ಕಲುತನವೇ ಅವರ ಮೂಲ ಉದ್ಯೋಗ. ಅಲ್ಲಿ ವೀರಶೈವ ಧರ್ಮದವರು ಹೆಚ್ಚಾಗಿರುವರು. ಆದ್ದರಿಂದ ಇಂದಿಗೂ ಅಲ್ಲಿ ಕೆಲವು ವೀರಶೈವ ಮಠಗಳಿರುವುದನ್ನು ಕಾಣುವೆವು. ಆ ಊರಿನಲ್ಲಿ ಪೆದ್ದ ಮಠವೆಂಬುದೊಂದು ಇದೆ. ನಾಗಭೂಷಣರು ಬಾಲಕರಿದ್ದಾಗ ಈ ಪೆದ್ದ ಮಠದ ಸ್ವಾಮಿಗಳ ಪರಿಸರದಲ್ಲಿ ಬೆಳೆಯುವರು. ಆದ್ದರಿಂದ ಇವರಲ್ಲಿ ಭಕ್ತಿ ಅಧ್ಯಾತ್ಮಗಳು ಸಹಜವಾಗಿ ನೆಲೆನಿಂತವು. ನಾಗಭೂಷಣರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ೫ನೇ ವಯಸ್ಸಿನಲ್ಲಿ ಪ್ರಾರಂಭಿಸಿದರು. ಅವರಿಗೆ ೮ನೇ ವಯಸ್ಸಿನಲ್ಲಿ ವೀರಮಾಹೇಶ್ವರ ದೀಕ್ಷೆಯನ್ನು ಕೊಡಿಸಲಾಯಿತು. ಬೆಳೆವ ಸಿರಿ ಮೊಳಕೆಯಲ್ಲಿ ಕಾಣು ಎಂಬಂತೆ ನಾಗಭೂಷಣರವರು ಬಾಲ್ಯಾವಸ್ಥೆಯಲ್ಲಿಯೇ ಬಸವಾದಿ ಶಿವಶರಣ ಚರಿತ್ರೆಯನ್ನು ಓದಿ ತಿಳಿದುಕೊಂಡರು. ಬಸವಣ್ಣನವರ ಅಗಾಧ ವ್ಯಕ್ತಿತ್ವಕ್ಕೆ ಮಾರು ಹೋಗುವರು. ಶಿವ ಶರಣರ ಚರಿತ್ರೆಗೆ ನಾಗಭೂಷಣರು ಮಾರು ಹೋದಂತೆ ಅವರು ಒಕ್ಕಲುತನದಲ್ಲೂ ಆಸಕ್ತಿಯನ್ನು ಬೆಳೆಸಿಕೊಂಡರು. ಬಾಲ್ಯದಲ್ಲಿ ತಮ್ಮ ತಂದೆಯೊಂದಿಗೆ ನಾಗಭೂಷಣರು ಕೃಷಿ ಕಾಯಕದಲ್ಲಿ ತೊಡಗುತ್ತಿದ್ದರು. ಆಗ ಕೆಲ ಭಕ್ತರು ಕೃಷಿಕಾಯಕವನ್ನು ನೀವೇಕೆ ಮಾಡುವಿರಿ? ಗುರುಗಳೇ ನೀವು ಪಾದ ಪೂಜೆಗೆ ಯೋಗ್ಯರು ಎನ್ನುವರು. ಆಗ ಅವರು ನಾನು ಒಕ್ಕಲಿನಾಗುವೆನು ಎನ್ನುವರು.

ಒಮ್ಮೊಮ್ಮೆ ಮಠಕ್ಕೆ ಸ್ವಾಮಿಗಳು ವಿರಕ್ತರು ಬಂದಾಗ ನಾನು ನಿಮ್ಮಂತೆಯಾಗುವೆನು ಎನ್ನುವ ಅಪೇಕ್ಷೆಯನ್ನು ವ್ಯಕ್ತಪಡಿಸುವರು. ಆಗ ಸ್ವಾಮಿಗಳು ಬೇಡಪ್ಪ ನಮ್ಮಂತೆ ಸನ್ಯಾಸಿಯಾಗಬೇಡ ನೀನು ಮದುವೆ ಮಾಡಿಕೊಂಡು ಸಂಸಾರಿಯಾಗು ಎನ್ನುವರು. ಬಾಲ್ಯದಲ್ಲಿ ನಾಗಭೂಷಣರು ತುಂಬಾ ಚುರುಕಾಗಿದ್ದರು. ಅವರಿಗೆ ಏಳು ವರ್ಷವಾದಾಗ ಅವರ ತಂದೆ ವೀರಯ್ಯನವರು ಅವರ ಮನೆಯ ಗುರುಗಳಾದ ಶ್ರೀ ಚನ್ನವೀರ ಶಿವಚಾರ್ಯರಿಂದ ಲಿಂಗದೀಕ್ಷೆಯನ್ನು ಕೊಡಿಸಿದರು. ಇವರು ಪ್ರಾಪ್ತ ವಯಸ್ಸಿಗೆ ಬರಲು ಇವರ ತಂದೆ–ತಾಯಿಗಳು ಹಾಗೂ ಗುರುಗಳು ಮದುವೆಯ ಪ್ರಸ್ತಾಪವನ್ನು ಮಾಡುವರು. ನಾಗಭೂಷಣರು ಕಡಾ ಖಂಡಿತವಾಗಿ ನಾನು ಮದುವೆಯಾಗಲಾರೆ ಸಂಸಾರಿಯಾಗಲಾರೆ ಎಂದರು. ಆಗ ಆತನ ತಂದೆ ತಾಯಿಗಳಿಗೆ ಮಗ ಸನ್ಯಾಸಿಯಾಗುವನೆಂದು ಚಿಂತೆಯಾಗುವುದು. ಕ್ರಾಂತರಾಗುವರು. ನಾಗಭೂಷಣನಿಗೆ ದೀಕ್ಷೆಯನ್ನು ಕೊಟ್ಟ ಚೆನ್ನವೀರ ಶಿವಾಚಾರ್ಯರಿಂದ ಬುದ್ಧಿ ಹೇಳಿಸಿದರು. ಶಿವಾಚಾರ್ಯರು "ಸಂಸಾರವೆಂಬುದು ತುಚ್ಛವಲ್ಲ ಶರಣರು ಸಂಸಾರವನ್ನು ಹೀನವಾಗಿ ಕಾಣಲಿಲ್ಲ, ಸಂಸಾರದಲ್ಲಿದ್ದುಕೊಂಡೇ ಅವರು ಸದ್ಗತಿಯನ್ನು ಪಡೆದರು. ನಿನ್ನ ತಂದೆ ತಾಯಿ ಹೇಳುವುದು ಸರಿ ಇದೆ. ಅವರ ಮನಸ್ಸನ್ನು ನೋಯಿಸದೇ ನೀನು ಮದುವೆ ಮಾಡಿಕೋ ಎಂದು ಹೇಳುವರು. ಆಗ ನಾಗಭೂಷಣನು ಗುರುಗಳ ಮಾತಿಗೆ ಕಟ್ಟು ಬಿದ್ದು ನಿರ್ವಾಹವಿಲ್ಲದೆ ಮದುವೆ ಮಾಡಿಕೊಳ್ಳಲಿಕ್ಕೆ ಒಪ್ಪಿಗೆ ಸೂಚಿಸುವನು. ಇವರ ಒಪ್ಪಿಗೆಯನ್ನೇ ಕಾಯುತ್ತಿದ್ದ ಇವರ ತಂದೆ–ತಾಯಿಗಳು ರಂಗಾರೆಡ್ಡಿ ಜಿಲ್ಲೆಯ ಸರಗಿ ತಾಲೂಕಿನ ಮೋತಕೂರಿನಲ್ಲಿದ್ದ ಸಂಗಮ್ಮ ಎಂಬ ಸಾಧ್ವಿಯೊಂದಿಗೆ ಇವನಿಗೆ ಮದುವೆ ಮಾಡುವರು.

ನಾಗಭೂಷಣರು ಮದುವೆ ಮಾಡಿಕೊಂಡರೂ ಅವರ ಮನಸ್ಸು ಸಂಸಾರದತ್ತ ಹರಿಯಲಿಲ್ಲ. ಅವರು ಸಂಸಾರದ ಯಾವ ಜಂಜಾಟವನ್ನು ಹಚ್ಚಿಕೊಳ್ಳದೆ ಕೆಸರಿನಲ್ಲಿಯ ಕಮಲವಿದ್ದಂತೆ ನಿರ್ಲಿಪ್ತರಾಗಿಯೇ ಇರತೊಡಗಿದರು. ತಮ್ಮ ಜ್ಞಾನದ ಬಲದಿಂದಾಗಿಯೇ ಅನೇಕ ಭಕ್ತರಿಗೆ ಬೋಧೆ ಮಾಡುತ್ತ ಬಸವಾದಿ ಶರಣರ ಸಂದೇಶ ತಲುಪಿಸುತ್ತ ಜೀವನ ಸಾಗಿಸ ತೊಡಗಿದರು. ಹೆಂಡತಿ ಮಕ್ಕಳೊಂದಿಗೆ ಇವರು ಮೌನಿಯಾಗಿಯೇ ಇರುತ್ತಿದ್ದರು. ಅಕ್ಕ ಪಕ್ಕದ ಜನರೊಂದಿಗಾದರೂ ಒಂದು ಮಾತೂ ಆಡುತ್ತಿರಲಿಲ್ಲ. ಯಾವಾಗಾದರೊಮ್ಮೆ ಗುರುಗಳು ಬಂದರೆ ಆಯಿತು, ಅವರೊಂದಿಗೆ ಗಂಟೆಗಟ್ಟಲೆ ಅಧ್ಯಾತ್ಮ ಧರ್ಮಗಳ ಕುರಿತು ಒಂದೇ ಸಮನೆ ಚರ್ಚೆ ಮಾಡುವರು. ಹೀಗೆ ಕೆಲವರ್ಷಗಳು ಉರುಳಿದವು. ನಾಗಭೂಷಣರಿಗೆ ಒಂದು ಹೆಣ್ಣು ಮಗುವೊಂದು ಜನಿಸಿತು. ಮಗುವಿಗೆ ಗಿರಿಜಾ ಎಂದು ನಾಮಕರಣ

ಮಾಡುವಾಗ ಬಂಧು ಬಳಗದವರು ಅಜ್ಜ-ಅಜ್ಜಿಯಂದಿರು ಎತ್ತಿ ಮುದ್ದಾಡಿದರು. ನಾಗಭೂಷಣರು ಮಾತ್ರ ಮಗುವನ್ನು ಎತ್ತಿ ಆಡಿಸಲಿಲ್ಲ. ಎಲ್ಲ ಗಂಡಂದಿರು ಇರುವಂತೆ ತನ್ನ ಗಂಡ ಇರದೇ ವಿಕ್ಷಿಪ್ತನಾಗಿರುವ ತನ್ನ ಗಂಡನಿಗಾಗಿ ಸಂಗಮ್ಮ ಮನಸ್ಸಿನಲ್ಲಿ ಕೊರಗುವಳು. ಒಮ್ಮೆ ಸಾಂಸಾರಿಕ ಜೀವನದಲ್ಲಿ ಭಿನ್ನಾಭಿಪ್ರಾಯ ತಾರಕಕ್ಕೇರಿ ಮನೆ ಬಿಟ್ಟು ಹೊರಡುತ್ತಾರೆ. ಇದು ಅವರ ವೈರಾಗ್ಯದ ಬದುಕಿಗೆ ನಾಂದಿಯಾಗುತ್ತದೆ. ಕಲ್ಯಾಣದ ಬಸವಣ್ಣನವರ ಬಗ್ಗೆ ತೆಲುಗಿನ ಬಸವಪುರಾಣದಿಂದ ಅಪಾರವಾಗಿ ತಿಳಿದುಕೊಂಡಿದ್ದ ಇವರು, ಶಿವಶರಣರ ಜೀವನವನ್ನೇ ಆದರ್ಶವಾಗಿಸಿಕೊಂಡು ಕರ್ನಾಟಕಕ್ಕೆ ಬರುತ್ತಾರೆ. ಬಸವಾದಿ ಶರಣರ ವಚನಗಳನ್ನು ಅವರು ತಿಳಿಯಬಯಸಿದ್ದರಿಂದ ಕನ್ನಡ ಲಿಪಿಯ ಜ್ಞಾನ ಅವರಿಗೆ ಅವಶ್ಯಕವಾಗುತ್ತದೆ. ಹಾಗಾಗಿ ತಮಗೆ ಕನ್ನಡವನ್ನು ಕಲಿಸುವ ಯೋಗ್ಯ ವ್ಯಕ್ತಿಯ ಹುಡುಕಾಟದಲ್ಲಿದ್ದಾಗ, ಬಿಜಾಪೂರ ಜಿಲ್ಲೆಯ ಯಲಗೋಡಿನ ಶ್ರೀ ರೇವಣಸಿದ್ಧಯ್ಯ ಎಂಬುವವರು ಇವರಿಗೆ ಕನ್ನಡ ಕಲಿಸುತ್ತಾರೆ. ಇವರು ಕಾವಿ ವೇಷ ಧರಿಸಿ, ತಲೆಗೆ ರೂಮಾಲು ಧರಿಸಿ ಕಾಲಲ್ಲಿ ಹಾವುಗೆ ಮೆಟ್ಟಿ ಕೈಯಲ್ಲಿ ಆಳೆತ್ತರದ ಕೋಲು ಹಿಡಿದು ತಲೆಯಲ್ಲಿ ಬಿಳಿಯ ಕಂಬಳಿಯ ಕಪ್ಪೆ ಹಾಕಿಕೊಂಡು ಗಡ್ಡ ಮೀಸೆ ಬಿಟ್ಟುಕೊಂಡು ಕರ್ನಾಟಕದ ಕೆಲ ಹಳ್ಳಿಗಳಲ್ಲಿ ಸಂಚಾರ ಮಾಡತೊಡಗಿದರು. ತಮ್ಮ ಗುರುಗಳಾದ ಪೆದ್ದ ಮಠದ ಸ್ವಾಮಿಗಳ ಹೆಸರಿನಿಂದ ಘನಮಠದಪ್ಪ ಎಂದು ತಮ್ಮನ್ನು ಕರೆದುಕೊಳ್ಳುತ್ತ ಬಸವಾದಿ ಶರಣರ ವಚನಗಳನ್ನು ಸಂಗ್ರಹಿಸುತ್ತ ದೇಶ ಪರ್ಯಟನೆ ಮಾಡುವರು. ಶಿವಶರಣರ ಜಾಗೃತ ಸ್ಥಳಗಳಿಗೆ ಭೇಟಿ ಕೊಡುತ್ತ ಅಲ್ಲಲ್ಲಿ ಕೆಲಕಾಲ ನೆಲೆ ನಿಂತು ಘನಮಠಾಧೀಶ ಅಂಕಿತದಲ್ಲಿ ತತ್ವ ಪದಗಳನ್ನು ಕಟ್ಟಿ ಹಾಡುತ್ತ ಊರೂರು ಅಲೆದರು. ಇವರು ಹಾಡಿದ ಅನೇಕ ತತ್ವ ಪದಗಳನ್ನು ಭಕ್ತರು ಬರೆದುಕೊಂಡರು. ಇವರು ವಿಶೇಷವಾಗಿ ಬಿಜಾಪುರ ಹಾಗೂ ಗುಲಬರ್ಗಾ ಜಿಲ್ಲೆಗಳಲ್ಲಿ ತಿರುಗಾಡಿದರು. ಈ ಪ್ರದೇಶದಲ್ಲಿನ ಜನ ಬರಗಾಲದಿಂದ ತತ್ತರಿಸುವುದನ್ನು ಕಂಡರು. ಅವರ ಒಕ್ಕಲುತನದ ದುಸ್ಥಿತಿಯನ್ನು ಕಂಡು ಮರುಗುವರು. ಹಳ್ಳಿಯ ಒಕ್ಕಲು ಮಕ್ಕಳಿಗೆ ಕೃಷಿ ಪದ್ಧತಿಯ ಬಗೆಗೆ ತಿಳಿಸಿ ಹೇಳಿದರು. ಯಾದಗಿರಿ ಹತ್ತಿರ ಬಿಜಾಸಪುರದಲ್ಲಿ ಕಲ್ಲು ನೆಲದ ಮೇಲೆ ಬಾವಿ ತೋಡಿಸಿ ಯಶಸ್ವಿಯಾಗುವರು. ಇವರು ಕೃಷಿ ಜ್ಞಾನವನ್ನು ಆಳವಾಗಿ ಹೊಂದಿದ್ದರು. ತಾವು ಹೊಂದಿದ್ದ ಜ್ಞಾನವನ್ನು ಕುನ್ನಾಳ ಗ್ರಾಮದ ಸಿದ್ರಾಮಪ್ಪನಿಗೆ ಹೇಳಿ ಕೃಷಿ ಜ್ಞಾನ ಪ್ರದೀಪಿಕೆಯೆಂಬ ಗ್ರಂಥವನ್ನು ಬರೆಸಿದರು. ಇವರಿಗೆ ಸಂಚಾರ ಸಮಯದಲ್ಲಿ ಭೇಟಿಯಾದ ಕುಷ್ಠ ರೋಗಿ ವೀರಭದ್ರಪ್ಪನ ಕುಷ್ಠ ರೋಗವನ್ನು ಅನುಷ್ಠಾನ ಗೈದು ಕಳೆಯುವರು. ಅಲ್ಲಮ ಪ್ರಭುಗಳ ತಪೋಭೂಮಿಯಾದ ದೇವದುರ್ಗ ತಾಲೂಕಿನ ಗೂಗಲ್ಲಿಗೂ ಬರುವರು. ಅಲ್ಲಿ ಧಾರಾಕಾರವಾಗಿ ಮಳೆ ಸುರಿಯ ತೊಡಗಲು ತಾವು ಹೊತ್ತು ತಂದಿದ್ದ ಬಸವಾದಿ ಶರಣರ ವಚನ ಕಟ್ಟುಗಳು ತೊಯ್ದು ಹಾಳಾಗುತ್ತವೆ

ಎಂದು ಅಲ್ಲಿಯೇ ಇರುವ ಒಂದು ವಿಶಾಲವಾದ ಬಂಡಿಯೊಂದರ ಮೇಲೆ ಆ ಕಟ್ಟುಗಳ ಗಂಟನ್ನು ಇಟ್ಟು ಅದರ ಮೇಲೆ ತಾವು ಬೋರಲಾಗಿ ಮಲಗಿ ಅವುಗಳನ್ನು ರಕ್ಷಿಸಿಸುವರು. ಭಕ್ತರು ಕೊಡಲು ಬಂದ ಯಾವ ವಸ್ತುಗಳನ್ನೂ ಸ್ವೀಕರಿಸುತ್ತಿರಲಿಲ್ಲ. ತಮ್ಮ ಪ್ರಸಾದಕ್ಕಾಗಿ ಇವರು ದಿನನಿತ್ಯ ಐದು ಮನೆಗಳಿಗೆ ಹೋಗಿ ಅವರು ನೀಡಿದ್ದನ್ನು ಬಸವ ಪಾಕವೆಂದು ಮಿಶ್ರಣಮಾಡಿ ಲಿಂಗಯ್ಯನಿಗೆ ಎಡೆ ಮಾಡಿ ಸ್ವೀಕರಿಸುತ್ತಿದ್ದರು. ಹೀಗೆ ನಾಗರ ಪಂಚಮಿಯ ದಿನದಂದು ಭಿಕ್ಷೆಗೆಂದು ಹೋದಾಗ ಒಂದು ಮನೆಯ ಯಜಮಾನ ಇನ್ನೂ ನಾಗಪ್ಪನಿಗೆ ಹಾಲನ್ನು ಎರೆದಿಲ್ಲ ನಿನಗೆಲ್ಲಿ ನೀಡುವುದು? ಎಂದು ಒರಟಾಗಿ ಹೇಳಿದಾಗ ಅವರ ಅಜ್ಞಾನಕ್ಕೆ ರೋಸಿಹೋಗುವರು. ಇಂಥ ಅಜ್ಞಾನ ಪ್ರೇರಿತ ಭಕ್ತಿಯನ್ನು ಕಂಡು ಇವರದೆಂಥ ಭಕ್ತಿ ಎಂದು ಗೇಲಿ ಮಾಡುವರು. ಒಮ್ಮೆ ಚಿಂಚೋಳಿ ಗ್ರಾಮದಲ್ಲಿ ಬಸವ ಪುರಾಣದ ಮಂಗಳೋತ್ಸವ ನಡೆದಾಗ ಕೆಲ ಪರಮತ ವಾದಿಗಳು ಬಸವಣ್ಣನನ್ನು ನಿಂದಿಸುವರು. ಆಗ ಇವರು ತತ್ವಪದವೊಂದನ್ನು ಕಟ್ಟಿ ಹಾಡಿ ಅವರಿಗೆ ತಕ್ಕ ಉತ್ತರವನ್ನು ನೀಡಿದರು. ಮತ್ತು ಅಲ್ಲಿ ನಡೆಯಬಹುದಾಗಿದ್ದ ಗಲಭೆ ದೊಂಬಿಗಳನ್ನು ತಡೆದು ಕೋಮುವಾದಿಗಳನ್ನು ತಣ್ಣಗಾಗಿಸಿದರು. ಅಲ್ಲಿ ನೆರೆದ ಎಲ್ಲರ ನಡುವೆ ಐಕ್ಯತೆಯನ್ನು ಕೋಮುಸೌಹಾರ್ದತೆಯನ್ನು ಮೂಡಿಸಲು ಯತ್ನಿಸಿದರು. ಒಮ್ಮೆ ಇವರು ಸೊಲ್ಲಾಪುರದ ಸಿದ್ಧರಾಮೇಶ್ವರನ ದರ್ಶನಕ್ಕೆ ಹೋದಾಗ ಅಲ್ಲಿನ ಅರ್ಚಕರು ರಾತ್ರಿಯಾಗಿದೆಯೆಂದು ಇವರಿಗೆ ದರ್ಶನಕ್ಕೆ ಅವಕಾಶ ನೀಡಲಿಲ್ಲ. ಇವರು ಎಷ್ಟು ವಿನಂತಿಸಿದರೂ. ಅಲ್ಲಿನ ಅರ್ಚಕರು ಮುಚ್ಚಿದ ಬಾಗಿಲು ತೆರೆಯಲಿಲ್ಲ. ಆಗ ನಾಗಭೂಷಣರು ಸಿದ್ಧರಾಮನನ್ನು ಸ್ತುತಿಸುತ್ತ ಅಲ್ಲಿಯೇ ತತ್ವ ಪದವನ್ನು ಕಟ್ಟಿ ಹಾಡಿದರು. ಆಗ ದೇವಾಲಯದ ಬಾಗಿಲು ತಾನೇ ತೆಗೆಯಿತಂತೆ. ಹೀಗೆ ಶರಣರ ತಾಣಗಳನ್ನು ಸುತ್ತುತ್ತ ತತ್ವಪದಗಳನ್ನು ಕಟ್ಟಿ ಅಲ್ಲಲ್ಲಿ ಹಾಡುತ್ತ ಇಲಕಲ್ಲಿಗೆ ಬರುವರು. ಅಲ್ಲಿ ಶ್ರೀ ವಿಜಯ ಮಹಾಂತ ಶಿವಯೋಗಿಗಳ ಅಡ್ಡ ಪಲ್ಲಕ್ಕಿಯಲ್ಲಿ ಮೆರವಣಿಗೆ ಹೊರಟಿರುವುದನ್ನು ಕಂಡು ವಿರಕ್ತರಿಗೆ ಇದು ಸಲ್ಲದು ಎಂದು ತಿಳಿಯ ಹೇಳುವರು. ಅಲ್ಲಿಂದ ನಾಗಭೂಷಣ ಶಿವಯೋಗಿಗಳು ಹುನಗುಂದಕ್ಕೆ ಬರುವರು. ಅಲ್ಲಿ ತಾವು ಹೇಳಿದ ಕೃಷಿ ಜ್ಞಾನ ಪ್ರದೀಪಿಕೆಯನ್ನು ಬರೆದ ಕುನ್ನಾಳ ಸಿದ್ರಾಮಪ್ಪನು ಆ ಗ್ರಂಥದೊಂದಿಗೆ ಬರುವನು. ಆ ಗ್ರಂಥವನ್ನು ಪರಿಶೀಲಿಸಿ ಅದರ ಕೊನೆಗೆ ಶುಭಾಶೀರ್ವಾದ ಬರೆದು ಆತನನ್ನು ಹರಸುವರು. ಅಲ್ಲಿಂದ ಅವರು ಸಂಚಾರ ಮಾಡುತ್ತ ಲಿಂಗಸುಗೂರು ಊರಿಗೆ ಬರುವರು. ಅಲ್ಲಿ ಕೆಲದಿನ ತೋಂಟದಾರ್ಯ ಮಠದಲ್ಲಿ ತಂಗುವರು. ಅಲ್ಲಿಂದ ಬಸವಲಿಂಗ ಶರಣರು ವಾಸವಾಗಿದ್ದ ನೀರಲಕೇರಿಗೆ ಬರುವರು. ಆ ಊರಿನ ಮುಂದೆ ಹೊರವಲಯದಲ್ಲಿ ದನ ಕಾಯುತ್ತಿದ್ದ ಊರಿನವರನ್ನು ಕುರಿತು ಬಸವಲಿಂಗರ ಬಗ್ಗೆ ಕೇಳಿದಾಗ ಆತ ತಮ್ಮಾ ಕೇಳೋ

ನೀ ಎನ್ನುದ್ಯೋಗ ಕೇಳೋ ಎನ್ನ ವ್ಯವಹಾರ ಹಮ್ಮಳಿದು ಪರಬ್ರಹ್ಮ ಚಿಂತೆಯೊಳು ಸುಮ್ಮನಿರುತ್ತ ಎರಡೆಮ್ಮೆ ಕಾಯುತ್ತೀನಿ ಎಂದು ಹಾಡುತ್ತ ಆತ ತನ್ನನ್ನು ಪರಿಚಯಿಸಿಕೊಂಡನಂತೆ. ಆಗಲೇ ಬಸವಲಿಂಗ ಶರಣ ಹಾಗೂ ನಾಗಭೂಷಣರು ಅನುಭಾವದ ಎರಡು ಪರ್ವತಗಳು ಕೂಡುವವು. ಅಲ್ಲಿಂದ ನಾಗಭೂಷಣ ಶಿವಯೋಗಿಗಳು ಲಿಂಗಸುಗೂರಿಗೆ ಬರುವರು. ಅಂಕುಶ ದೊಡ್ಡಿಯ ವೀರಭದ್ರಪ್ಪ ನೊಡನೆ ನಾಗಭೂಷಣರು ಹೊರಟಾಗ ನಡು ದಾರಿಯಲ್ಲಿ ಸಂತೆ ಕೆಲ್ಲೂರು ಎಂಬ ಊರು ಹತ್ತುವದು. ಆ ಊರಿನ ಹಿರಿಯರಾದ ಶ್ರೀ ಹೆಸರೂರು ದೊಡ್ಡಪ್ಪ, ಪಿ.ಪಿ. ರುದ್ರಪ್ಪ, ಲೇವಡಿ ರುದ್ರಪ್ಪ, ರೇವತಿ ಚೆನ್ನಪ್ಪ ಮುಂತಾದ ಭಕ್ತರು ನಾಗಭೂಷಣರಿಗೆ ತಮ್ಮೂರಿನಲ್ಲಿಯೇ ಇರಬೇಕೆಂದು ವಿನಂತಿಸಿಕೊಳ್ಳುವರು. ಅವರು ಒಂದೆಡೆಯಲ್ಲಿಯೇ ಖಾಯಂ ಆಗಿ ನೆಲೆನಿಲ್ಲಲಾರೆ ಎಂದರು. ಮತ್ತು ತಮ್ಮ ಹೆಸರಿನಲ್ಲಿ ಮಠ ಕಟ್ಟಿಸುವುದಾಗಲಿ ಗದ್ದುಗೆ ನಿರ್ಮಿಸುವುದಾಗಲಿ ಮಾಡಬಾರದು ಹಾಗೆ ಮಾಡಿದ್ದೇ ಆದರೆ ಮಾಡಿದವರ ವಂಶ ವಿನಾಶವಾಗುತ್ತದೆ ಎಂದು ನುಡಿದರು. ಆದರೂ ನಾಗಭೂಷಣ ಶಿವಯೋಗಿಗಳ ವಿಚಾರಗಳನ್ನು ಒಪ್ಪದ ಭಕ್ತರು ಅವರನ್ನು ಸಂತೆ ಕೆಲ್ಲೂರಿನ ಶ್ರೀ ತೋಂಟದಾರ್ಯ ಮಠದಲ್ಲಿರಿಸಿಕೊಳ್ಳುವರು. ಅವರು ಲಿಂಗೈಕ್ಯರಾದ ನಂತರ ಅವರ ಸಮಾಧಿಯನ್ನು ಸಂತೆ ಕೆಲ್ಲೂರಿನ ಆ ಮಠದಲ್ಲಿಯೇ ಸಿದ್ದಮ್ಮ ಎಂಬುವರು ಕಟ್ಟಿಸುವರು. ನಾಗಭೂಷಣ ಶಿವಯೋಗಿಗಳ ಅಪ್ಪಣೆಯನ್ನು ಮೀರಿ ಅವರ ಸಮಾಧಿಯನ್ನು ಕಟ್ಟಿಸಿದ ಸಿದ್ದಮ್ಮನ ವಂಶ ಮುಂದೆ ನಿರ್ವಂಶವಾಗುವುದು. ನಾಗಭೂಷಣ ಶಿವಯೋಗಿಗಳು ಸಂತೆ ಕೆಲ್ಲೂರಿನಲ್ಲಿ ಲಿಂಗೈಕ್ಯರಾದುದು ಕ್ರಿ.ಶ. ೧೮೮೦ರಲ್ಲಿ ಎಂದು ತಿಳಿದು ಬರುವುದು.


ಘನ ಮಠದ ನಾಗಭೂಷಣ ಶಿವಯೋಗಿಗಳು ತಮ್ಮ ೨೧ನೇ ವಯಸ್ಸಿನಲ್ಲಿಯೇ ತಾವು ಹುಟ್ಟಿದ ಮನೆಯನ್ನು ಮಡದಿ ಮಕ್ಕಳನ್ನು ಊರನ್ನು ಬಿಟ್ಟು ವಿರಾಗಿಗಳಾಗಿ ಜಂಗಮರಾಗಿ ತಮ್ಮ ಮೈ ಮನಗಳಲ್ಲಿ ಬಸವಣ್ಣನನ್ನೇ ತುಂಬಿಕೊಂಡು ಕನ್ನಡ ನಾಡಿಗೆ ಆಗಮಿಸುವರು. ಅವರು ವಿಶೇಷವಾಗಿ ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಸಂಚರಿಸುವರು. ಕಲ್ಯಾಣದ ಶರಣರು ನೆಲೆಗೊಂಡ ಸ್ಥಳಗಳಿಗೆ ವಿಶೇಷವಾಗಿ ಭೇಟಿ ನೀಡುತ್ತ ಊರೂರು ಸಂಚರಿಸುತ್ತ ಅಲ್ಲಿಲ್ಲಿ ಕಂಡ ಅನುಭವಿಸಿದ ಘಟನೆಗಳ ಕುರಿತಾಗಿ "ಘನ ಮಠೇಶ, ಘನಮಠವಾಸ" ಎಂಬ ಅಂಕಿತದಲ್ಲಿ ಆಶು ಕವಿಯಾಗಿ ತತ್ವ ಪದಗಳನ್ನು ಕಟ್ಟಿ ಹಾಡುವರು. ಸರ್ಪಭೂಷಣ ಶಿವಯೋಗಿಗಳಂತೆ ಇವರು ತಮ್ಮ ಹಾಡುಗಳನ್ನು ಸ್ಥಲ ಕಟ್ಟುಗಳಲ್ಲಿ ರಾಗತಾಳ ನಿರ್ದೇಶನಗಳಲ್ಲಿ ಪಂಡಿತ ಕವಿಗಳಂತೆ ನಾಶವಾಗುವ ಹಾಳೆಗಳಲ್ಲಿ ಬರೆಯಲಿಲ್ಲ. ಇದಕ್ಕೆ ಬದಲಾಗಿ ಅವರು ಹಾಡುಗಳನ್ನು ಕಟ್ಟಿ ಹಾಡುತ್ತ ನಡೆದರು. ಅವರೇ ತಮ್ಮ ತತ್ವ ಪದಗಳನ್ನು ಭಕ್ತರ ನಾಲಿಗೆಯ ಮೇಲೆ ಬರೆದರು.

ಇವರ ತತ್ವ ಪದಗಳು ಪಲ್ಲವಿ ಅನುಪಲ್ಲವಿ ಹಾಗೂ ಹಲವು ಚರಣಗಳಿಂದ ಕೂಡಿವೆ. ಅವರ ಎಲ್ಲ ತತ್ವ ಪದಗಳಲ್ಲಿ ಅನುಪಲ್ಲವಿ ಕಡ್ಡಾಯವಾಗಿ ಬರುವುದಿಲ್ಲ. ಚರಣಗಲ್ಲಿಯೂ ವೈವಿಧ್ಯತೆ ಇದೆ. ಒಂದು ಸಾಲಿನ ಎರಡು ಸಾಲಿನ ಹಾಗೂ ನಾಲ್ಕು ಸಾಲಿನ ಚರಣಗಳೊಂದಿಗೆ ನುಡಿಗಳೊಂದಿಗೆ ತ್ರಿಪದಿ ಹಾಗೂ ಷಟ್ಪದಿಗಳ ರಚನೆಯೊಂದಿಗೆ ಕ್ವಚಿತ್ತಾಗಿ ಕಂಡು ಬಂದಿವೆ.


ನಾಗಭೂಷಣ ಶಿವಯೋಗಿಗಳು ತತ್ವ ಪದಗಳನ್ನು ಭಕ್ತಿ ಭಾವ ತುಂಬಿ ಹಾಡುತ್ತಿದ್ದರು. ಅವರ ತತ್ವ ಪದಗಳಿಗೆ ಕನ್ನಡದಲ್ಲಿ ವಿಶಿಷ್ಟ ಸ್ಥಾನವಿದೆ. ಅವರ ನಿಷ್ಠುರ ನುಡಿಗಳ ಭಾಷೆ ಭಕ್ತಿ ವೈರಾಗ್ಯದ ಅನನ್ಯಭಾವ ಹಾಗೂ ಸಂಗೀತದ ನಾಡಿ ಇವುಗಳ ಹೊಂದಾಣಿಕೆಯಿಂದ ಇವು ಸತ್ವಪೂರ್ಣವಾದ ಹಾಡಾಗಿ ರೂಪ ಪಡೆದಿವೆ. ಇವರ ತತ್ವ ಪದಗಳಲ್ಲಿ ಸಾಮಾಜಿಕ ಕಳಕಳಿ ಬಸವ ನಿಷ್ಠೆ ಅನುಭಾವದ ಔನ್ನತ್ಯ ಭಕ್ತಿಭಾವ ಕೆನೆಗಟ್ಟಿದೆ. "ಹೊತ್ತಿರಲಿಕ್ಕೆ ಊರಿಗೆ ಸೇರೋ ದಾರಿ ಕತ್ತಲೊಳ ತಿರುಗುವರ್‍ಯಾರೋ" ಎಂಬ ಅನುಭವದ ನುಡಿ ನಾಗಭೂಷಣರ ಕಾವ್ಯ ಶಕ್ತಿಗೆ ಒರೆಗಲ್ಲಾಗಿದೆ. ನಾಗಭೂಷಣರ ಧರ್ಮನಿಷ್ಠೆ ಸಮಾಜ ಪ್ರೀತಿ ತುಂಬ ಪ್ರಖರವಾದುದು. ಅವರು ಬದುಕನ್ನು ಲೌಕಿಕ ಅಲೌಕಿಕವೆಂದು ಬೇರ್ಪಡಿಸದೇ ಎರಡನ್ನೂ ಒಟ್ಟಾಗಿ ಇರಿಸಿ ನೋಡಿದರು.

ನಾಗಭೂಷಣ ಶಿವಯೋಗಿಗಳು ಕಟ್ಟಿ ಹಾಡಿದ ತತ್ವ ಪದಗಳನ್ನು ಮೊದಲು ಸಂಗ್ರಹಿಸಿ ೧೯೪೩ರಲ್ಲಿ ಪ್ರಕಟಿಸಿದವರು ಪ್ರೊ.ಸಂ.ಶಿ. ಭೂಸನೂರಮಠ ಅವರು "ಭಕ್ತಿ ಸುಧಾಸಾರ" ಎಂಬ ಶೀರ್ಷಿಕೆಯಲ್ಲಿ ನಾಗಭೂಷಣರ ೧೪೮ ತತ್ವ ಪದಗಳನ್ನು ಸಂಗ್ರಹಿಸಲಾಗಿದೆ. ಆನಂತರ ೧೯೭೦ರಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರು ನಾಗಭೂಷಣರ ೧೪೭ ತತ್ವ ಪದಗಳನ್ನು "ಘನ ಮಠೇಶ ತತ್ವಪದಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದರು.

ಘನಮಠದ ನಾಗಭೂಷಣ ಶಿವಯೋಗಿಗಳು ಸಂತೆ ಕೆಲ್ಲೂರಿನ ಶ್ರೀ ಮಠದಲ್ಲಿಯೇ ಲಿಂಗೈಕ್ಯರಾಗಿದ್ದು, ಅವರ ಸಮಾಧಿಯ ಮೇಲೆ ಇಂದು ಗದ್ದುಗೆಯನ್ನು ನಿರ್ಮಿಸಲಾಗಿದೆ. ಅವರು ತಮ್ಮ ಜೀವಿತದ ಕೊನೆ ಗಾಲದಲ್ಲಿ ವಾಸ್ತವ್ಯ ಹೂಡಿದ್ದ ಸಂತೆ ಕೆಲ್ಲೂರಿನ ಘನಮಠದ ಚಿತ್ರವನ್ನೂ, ಅವರ ಸಮಾಧಿಯ ಚಿತ್ರವನ್ನೂ ಹಾಗೂ ಅವರು ಹುಟ್ಟಿದ ದಾರೂರಿನಲ್ಲಿನ ಮನೆ ಅಲ್ಲಿನ ಪೆದ್ದಮಠ ಮುಂತಾದ ಚಿತ್ರಗಳನ್ನು ಇಲ್ಲಿ ಸ್ಮಾರಕಗಳ ರೂಪದಲ್ಲಿ ಸಂಗ್ರಹಿಸಿ ಕೊಡಲಾಗಿದೆ.



ದಾರೂರಿನ ಪೆದ್ದ ಮಠದಲ್ಲಿರುವ ಶ್ರೀ ನಾಗಭೂಷಣ ಶಿವಯೋಗಿಗಳ ಚಿತ್ರ.
ದಾರೂರು, ಜಿಲ್ಲೆ : ರಂಗಾರೆಡ್ಡಿ, ರಾಜ್ಯ – ಆಂಧ್ರಪ್ರದೇಶ.



ಶ್ರೀ ನಾಗಭೂಷಣ ಶಿವಯೋಗಿಗಳು ಹುಟ್ಟಿ ಬೆಳೆದು ವಾಸವಾಗಿದ್ದ ಮನೆಯ ಚಿತ್ರ, ದಾರೂರು.
ಜಿಲ್ಲೆ – ರಂಗಾರೆಡ್ಡಿ, ರಾಜ್ಯ – ಆಂಧ್ರಪ್ರದೇಶ.




ದಾರೂರಿನಲ್ಲಿರುವ ಪೆದ್ದಮಠದ ಚಿತ್ರ. ದಾರೂರು, ಜಿಲ್ಲೆ : ರಂಗಾರೆಡ್ಡಿ, ರಾಜ್ಯ – ಆಂಧ್ರಪ್ರದೇಶ.

ದಾರೂರಿನಲ್ಲಿರುವ ಪೆದ್ದ ಮಠದ
ಪಕ್ಕದಲ್ಲಿರುವ ಕಪಿಲೇಶ್ವರ ಗುಡಿಯ
ಆವರಣದಲ್ಲಿರುವ ವೀರಭದ್ರನ ಮೂರ್ತಿ.
ದಾರೂರು, ಜಿಲ್ಲೆ : ರಂಗಾರೆಡ್ಡಿ,
ರಾಜ್ಯ – ಆಂಧ್ರಪ್ರದೇಶ.







ಕಪಿಲೇಶ್ವರ ಗುಡಿಯ ಆವರಣದಲ್ಲಿರುವ ನಾಗವಿಗ್ರಹ, ದಾರೂರು, ಜಿಲ್ಲೆ : ರಂಗಾರೆಡ್ಡಿ,
ರಾಜ್ಯ – ಆಂಧ್ರಪ್ರದೇಶ.




ದಾರೂರಿನಲ್ಲಿರುವ ಶ್ರೀ ಪೆದ್ದಮಠಕ್ಕೆ ಹತ್ತಿಕೊಂಡಿರುವ ಕಪಿಲೇಶ್ವರ, ವೀರಭದ್ರ ಹಾಗೂ
ಪಾರ್ವತಿ ಗುಡಿಯ ಒಳ ಚಿತ್ರ. ದಾರೂರು, ಜಿಲ್ಲೆ : ರಂಗಾರೆಡ್ಡಿ, ರಾಜ್ಯ – ಆಂಧ್ರಪ್ರದೇಶ.



ದಾರೂರಿನಲ್ಲಿರುವ ಶ್ರೀ ಪೆದ್ದಮಠಕ್ಕೆ ಹತ್ತಿಕೊಂಡಿರುವ ಕಪಿಲೇಶ್ವರ ಗುಡಿಯ ಆವರಣದಲ್ಲಿರುವ ನಂದಿ ವಿಗ್ರಹ. ದಾರೂರು, ಜಿಲ್ಲೆ : ರಂಗಾರೆಡ್ಡಿ, ರಾಜ್ಯ – ಆಂಧ್ರಪ್ರದೇಶ.




ದಾರೂರಿನಲ್ಲಿನ ಶ್ರೀ ಪೆದ್ದಮಠಕ್ಕೆ ಹತ್ತಿಕೊಂಡಿರುವ ನೂತನವಾಗಿ ನಿರ್ಮಿಸಲಾದ ಕಪಿಲೇಶ್ವರ, ವೀರಭದ್ರ ಮತ್ತು ಪಾರ್ವತಿ ಗುಡಿಯ ಚಿತ್ರ. ದಾರೂರು, ಜಿಲ್ಲೆ : ರಂಗಾರೆಡ್ಡಿ,



ತತ್ವ ಪದಕಾರ ಶ್ರೀ ಘನಮಠ ನಾಗಭೂಷಣ ಶಿವಯೋಗಿಗಳ ಚಿತ್ರ, ಸಂತೆ ಕೆಲ್ಲೂರು,
ತಾ – ಲಿಂಗಸುಗೂರು



ಸಂತೆ ಕೆಲ್ಲೂರಿನಲ್ಲಿರುವ ಶ್ರೀ ಘನಮಠ ನಾಗಭೂಷಣ ಶಿವಯೋಗಿಗಳ ಮಠದ ಹೊರಭಾಗದ
ಚಿತ್ರ ಸಂತೆ ಕೆಲ್ಲೂರು. ತಾ – ಲಿಂಗಸುಗೂರು.



ಸಂತೆ ಕೆಲ್ಲೂರಿನ ಘನಮಠದಲ್ಲಿರುವ ಶ್ರೀ ಘನಮಠ ನಾಗಭೂಷಣ ಶಿವಯೋಗಿಗಳ ಗದ್ದುಗೆ,
ಸಮಾಧಿಯ ಚಿತ್ರ, ಸಂತೆಕೆಲ್ಲೂರು, ತಾ – ಲಿಂಗಸುಗೂರು.



ಸಂತೆಕೆಲ್ಲೂರಿನ ಸದ್ಯದ ಶ್ರೀಗಳಾದ ಶ್ರೀ ಮ.ನಿ.ಪ್ರ. ಗುರುಬಸವ ಮಹಾಸ್ವಾಮಿಗಳು.
ಶ್ರೀ ಘನಮಠೇಶ್ವರ ಮಠ, ಸಂತೆಕೆಲ್ಲೂರು, ತಾ – ಲಿಂಗಸುಗೂರು.

ಅವರು ಬರೆದ ತತ್ವಪದಗಳಲ್ಲಿ ಇಲ್ಲಿ ಏಳು ತತ್ವಪದಗಳನ್ನು ಡಾ. ಕೆ. ಶಶಿಕಾಂತ ಅವರು ಸಂಪಾದಿಸಿದ "ಶ್ರೀ ಘನಮಠ ಶಿವಯೋಗಿಗಳವರ ಸ್ವರವಚನಗಳು" ಎಂಬ ಕೃತಿಯಿಂದ ಆಯ್ಕೆ ಮಾಡಿಕೊಡಲಾಗಿದೆ.

೧. ಓದಿ ಓದಿ ಏನಾದಿ ಮರುಳೆ

ಓದಿ ಓದಿ ಯೇನಾದಿ ಮರುಳೆ ಯದರಾಗಿ ತಿಳಿಯಲಿಲ್ಲ ।
ಓದಿದ ಫಲ ಸದ್ಭಕ್ತ ಜನರಿಗಹುದೀ ಧರೆಯೊಳು ಖುಲ್ಲ ॥ ಪ ॥

ಹಲವು ಶಾಸ್ತ್ರ ತಂತ್ರಗಳನೋದಿ ತ್ರೈಮಲವನು ಬಿಡಲಿಲ್ಲ ।
ಫಲವೇನ್ಯೆ ಗಿಳಿಯೋದಿ ಮಲವ ತಿಂದೊಲದಾಯತದಲ್ಲ ॥
ಮಲವಿರಹಿತ ಶರಣರ ನಡೆ ನುಡಿಗಳ ತಿಳಿದು ಚರಿಸಬಲ್ಲ ।
ಬಲವಂತನೆ ಪಂಡಿತನವಗೀ ಜಗದೊಳಗಾರ್ ಸರಿಯಲ್ಲ ॥ ೧ ॥

ವೇದ ಶಾಸ್ತ್ರ ಪೌರಾಣಾದಿಗಳವು ಹಾದರದೋದಲ್ಲ
ಶ್ರೀದಸಖನ ನಿಜವರಿಯದೆ ಕೂಗುತೆ ಗಾದಿಯಾದವಲ್ಲ ॥
ವೇದ ಶಾಸ್ತ್ರ ಪುರಾಣಗಳೋದಿದ ವೇದಾದಿಗಳೆಲ್ಲ
ಭೇದವ ನರಿಯದೆ ಭಂಗಬಟ್ಟವರು ಪೋದುವು ನಿಜವಲ್ಲ ॥ ೨ ॥

ಕುಂದದಾಸೆಯಿಂದೋದಿ ಜನರ ನೊಲಿಸಿಂದು ಬಾಳ್ವುದೆಲ್ಲ ।
ಹಂದಿ ತಪವ ಮಾಡುತೆ ಪಾಳ್ಮನೆಯನ್ನೊಂದೆ ಪಡಿವೊಲಲ್ಲ ॥
ಛಂದಸಾದಿ ಷಟ್ ಶಾಸ್ತ್ರಗಳವು ಶಿವನಂದವರಿಯಲಿಲ್ಲ ।
ಮಂದ ಮನುಜ ಯವನನು ಕರಿಸುತೆ ಗರ್ವಾಂಧನಾದಿಯಲ್ಲ ॥ ೩ ॥

ಆನೆಯ ಕಂಡಾ ಶುನಕ ಬೊಗಳಲದಕೇನು ಕೊರತೆಯಿಲ್ಲ ।
ಹೀನ ಮಾನವರು ಜರಿಯಲದಕೆ ಸುಜ್ಞಾನಿಯಳುಕಲಿಲ್ಲ ॥
ಕಾಣದೊಂದು ಕಂಡೊಂದಾಡಲ್ಕನುಮಾನವಗೊಳಲಿಲ್ಲ ।
ಭಾನುವಿಂಗೆ ಮಣ್ ತೂರಲು ಕಣ್ಣೊಳ್ ತಾನೆ ಬೀಳ್ವುದಲ್ಲ ॥ ೪ ॥

ಜಾತಿ ಹೀನರಿಗೆ ಜಾರಜನರಿಗೀ ನೀತಿ ಸೊಗಸದಲ್ಲ ।
ನೀತಿವಂತರಿಗೆ ನಿಜಮಹೇಶ್ವರರ್ಗೀತೆರ ಪಾಲ್ವಳ್ಳಾ ॥
ಮಾತುಗಳ್ಳರಿಗೆ ಪಾತಕೇಷ್ಟರಿಗಿದೇ ತೊರೆಯದೆ ಸಲ್ಲ ।
ಪ್ರೀತಿಲಿ ಘನಮಠನಾಥ ಕೃಪೆ ವಡೆದಾತನಿದನು ಬಲ್ಲ ॥ ೫ ॥

೨. ಏನಾದಿ ಮನುಜ ಏನಾದಿ

ಏನಾದಿ ಮನುಜ ಏನಾದಿ ಶಿವ
ಜ್ಞಾನವರಿಯದೆ ನೀನೇನಾದಿ ॥ ಪ ॥

ಕಾಶಿ ಹಂಪಿ ಕೇದಾರ ಪರ್ವತ ನಿವಾಶಿಯೆನಿಸಿ ನೀನೇನಾದಿ ।
ಆಶೆ ಪಾಶದೊಳು ಸಿಲ್ಕಿ ಪೊರಗೆ ಸನ್ಯಾಸಿಯಾಗಿ ನೀನೇನಾದಿ ॥ ೧ ॥

ವೇದ ವೇದಾಂತ ಶಾಸ್ತ್ರಾಗಮ ತರ್ಕವನೋದಿ ಬಳಲಿ ನೀನೇನಾದಿ ।
ಮೇದಿನಿಯೊಳು ಬರೆ ಬೋಧೆ ಪಡೆದು ದಶನಾದವಾಲಿಸಿ ನೀನೇನಾದಿ ॥ ೨ ॥

ಚಪಲತನದಿ ಬಹು ಜಪವನೆಣಿಸಿ ಘೋರತಪವ ಮಾಡಿ ನೀನೇನಾದಿ ।
ಕಪಟ ಲಾಂಛನವನು ತಾಳುತೆ ಮರ್ತ್ಯದೊಳು ನಿಪುಣನೆನಿಸಿ ನೀನೇನಾದಿ ॥ ೩ ॥

ಸ್ನಾನ ಮೌನ ನೇಮ ಧ್ಯಾನ ಕ್ರಿಯಾದ್ಯನುಷ್ಠಾನವ ಮಾಡಿ ನೀನೇನಾದಿ
ಪ್ರಾಣಾಪಾನಗಳನು ಮಾಣದೆ ಬಂಧಿಸಿ ಮೌನವಿರ್ದು ನೀನೇನಾದಿ ॥ ೪ ॥

ಸೃಷ್ಟಿಯೊಳಷ್ಟವಿಧಾರ್ಚನೆ ಕ್ರಿಯೆಗಳ ಮುಟ್ಟಿಮಾಡಿ ನೀನೇನಾದಿ ।
ಶ್ರೇಷ್ಠ ಶ್ರೀಘನಮಠವಾಸನನರಿಯದೆ ಕಷ್ಟಬಟ್ಟು ನೀನೇನಾದಿ ॥ ೫ ॥

೩. ಹೊತ್ತಿರಲಿಕೆ ಊರಿಗೆ ಸೇರೋ

ಹೊತ್ತಿರಲಿಕೆ ಊರಿಗೆ ಸೇರೋ । ದಾರಿ
ಕತ್ತಲೆಯೊಳಗರುಪುವರಾರೊ ॥ ಪ ॥

ಬೀಜದ ನೆಲ್ಲು ಕುಟ್ಟಿಯು ಕೊಟ್ಟು । ಚಲ್ಲು
ತೋಚೆಯಿಂ ಶುದ್ಧ ಭಾಂಡದೊಳಟ್ಟು ॥
ಮಾಜದೆ ಜಂಗಮೇಶನಿಗೆ ಕೊಟ್ಟು । ಘನ
ತೇಜ ಪ್ರಸಾದವನುಂಡುಟ್ಟು ॥ ೧ ॥

ಅಖಿಳ ಪಂಚಾಂಗವಾಲಿಸೆ ಕೇಡು । ಶಿವ
ಲಿಖಿತ ಪ್ರಮಾಣ ಸತ್ಯದಿ ನೋಡು ॥
ಸಖ ಬಂಧು ಜನರ ಹಿಂದಕೆ ಮಾಡು । ಪದ್ಮ
ಸಖನಿರುತಲೆ ಮನೆಯೊಳಗಾಡೊ ॥ ೨ ॥

ಮೂರು ಬೆಟ್ಟಗಳ ಯುಕ್ತಿಲಿ ದಾಟೊ । ಅಲ್ಲಿ
ದಾರಿ ತಪ್ಪಿದರೆ ಪುಲಿಯಕಾಟೊ ॥
ಆರು ಮಂದಿ ಕಳ್ಳರಿರುವ ಮಾಟೊ । ಮಹಾ
ಧೀರತ್ವದಿಂದಲಾಚೆಗೆ ದಾಟೊ ॥ ೩ ॥

ಜನರಿಗ್ಹೇಳುವೆನೆಂಬುವದ್ಯಾಕೊ । ಸಾಧು
ಜನರಿಗೊಬ್ಬರಿಗುಸುರಿದಿ ಸಾಕೊ ॥
ಅನುಮಾನವೆಲ್ಲವ ಕಡೆನೂಕೊ ॥ ಮಂದ
ಕನುಪದ ಬಳಸಿ ನಡೆಯಬೇಕೊ ॥ ೪ ॥

ಎಡಬಲದಲಿ ವಿವರಿಸಿ ನೋಡೊ । ನಟ್ಟ
ನಡುದಾರಿ ಹಿಡಿದು ಮುಂದಕೆಯೋಡೊ ॥
ಅಡವಿ ಹಣ್ಣುಗಳ ಬಯಕೆ ಬೇಡೊ । ಗಡ
ಗಡ ಪೋಗಿ ಘನ ಮಠೇಶನ ಕೂಡೊ ॥ ೫ ॥

೪. ಕಾಗಿ ಕರೆಯುತಾದೋ

ಕಾಗಿ ಕರೆಯುತಾದೋ । ಆಕಾಶದ ಕಾಗಿ ಕರಿಯುತಾದೋ
ಕಾಗಿ ಕರೆಯುತಾದೊ ಬೇಗನೆ ಬಾಯೆಂದು
ನಾಗಭೂಷಣನ ಯೋಗಾಭ್ಯಾಸಕೆ
ಕಾಗಿ ಕರೆಯುತಾದೋ ॥ ಪ ॥

ರೆಕ್ಕೆ ಇಲ್ಲದ ಕಾಗಿ, ಮೇಲುಪ್ಪರ ಮೇಲೇರಿ
ತಪ್ಪದೆ ತ್ರಿಪುರವ ತಿರುಗಿ ತಿರುಗುತ್ತಾ
ಅಪ್ಪನ ಕರೆಯೆದು ಮುಪ್ಪಿನ ಕಾಗಿ
ಕಾಗಿ ಕರೆಯುತಾದೋ ॥ ೧ ॥

ಆರು ಸ್ಥಲವ ನೇರಿ ಸಾಧಿಸಿ, ಮೂರು ಧುಮ್ಮನೆಸೇರಿ
ಸಾರಾಮೃತದ ಸವಿಸವಿದು ತಾ ಧೀರತನದಿಂದ
ಮಾರಿ ಮೇಲಕೈತ್ತಿ ಕೂಗಿ........
ಕಾಗಿ ಕರೆಯುತಾದೋ ॥ ೨ ॥

ಮೂರು ಕೊಳದ ನಡುವೆ ಮೂರೆರಡು ಐದುಸ್ಥಲವ ಮಾಡಿ
ಮೂರು ನೇತ್ರವುಳ್ಳ ಕೋರಿಸಿದ್ಧ ಪ್ರಸಿದ್ಧ

ಚರಣ ಕಮಲಕೆ ಎರಗೋಣ ಬನ್ನಿರೆಂದು
ಕಾಗಿ ಕರೆಯುತಾದೋ ॥ ೩ ॥

೫. ಮೃತ್ಯುಂಜಯ ನಾಗೋ ಎಲೊ ಎಲೊ

ಮೃತ್ಯುಂಜಯ ನಾಗೋ ಎಲೊ ಎಲೊ ಮೃತ್ಯುಂಜಯನಾಗೋ ।
ಮೃತ್ಯುಂಜಯನಾಗತ್ಯುಕ್ತಿಲಿ ಗುರು ಪುತ್ರನಾಗಿ ಸಲೆ
ಸತ್ಯವಿಡಿದು ನೀ ॥ ಪ ॥
ಚಲನಗುಣವನೀಗಿ ಮನವುಜ್ವಲ ಲಿಂಗದೊಳಾಗಿ ।
ಮಲತ್ರಿವಿಧದ ಸಂಗಳಿದು ಷಟ್‌ಸ್ಥಲ ಲಿಂಗಾಂಗದ ನೆಲೆ
ತಿಳಿಯುತೆ ನೀ ॥ ೧ ॥
ನಿನ್ನೊಳ್ ನೀ ತಿಳಿದು ಜೀವದ ಭಿನ್ನಬುದ್ಧಿಯಳಿದು ।
ಸನ್ನುತ ಗುರುಪದವನ್ನು ಬಿಡದ ಅತ್ಯುನ್ನತ ಭಕ್ತಿ
ಪ್ರಸನ್ನನೆನಿಸಿ ನೀ ॥ ೨ ॥
ಕಷ್ಟಕರ್ಮವರಿಸಿ ಕರದೊಳಗಿಷ್ಟಲಿಂಗವಿರಿಸಿ ।
ಸೃಷ್ಠಿಯೊಳೊಂದಿರುವಷ್ಟದಳಾಬ್ಜವ ನೈಷ್ಠೆಯಿಂದರ್ಪಿಸಿ
ಶ್ರೇಷ್ಠನಾಗಿ ನೀ ॥ ೩ ॥
ಆಲಸ್ಯದಿ ಬೆರೆದು ಸುಮ್ಮನೆ ಕಾಲವನತಿಗಳೆದು ।
ಕಾಲಕಿಂಕರರಿಗಾಳಾಗದೆ ನಿಜಮೂಲ ಮಂತ್ರದೊಳು
ಲೋಲನಾಗಿ ನೀ ॥ ೪ ॥
ಆಶೆಪಾಶವರಿದು ರಾಗದ್ವೇಷವಾಸನಳಿದು ।
ಸಾಸಿರದಳ ಪದ್ಮಾಸನನಾಗಿಹ ದೇಶಿಕ ಘನಮಠ
ವಾಸನೊಳ್ಬೆದಿ ನೀ ॥ ೫ ॥

೬. ಸಾಕೋ ಹೇ ಭ್ರಾಂತ

ಸಾಕೋ ಹೇ ಭ್ರಾಂತ ಯಾವನೊ ನಿಶ್ಚಿಂತ ಎಲ್ಲರಿಗಿಂತ ನಾನು
ಬಹಳ ಬಲ್ಲವನೆಂದು ಕೂಗುವೆ ।
ಖುಲ್ಲತನದಿ ಕಳ್ಳದಾರಿಯಲ್ಲಿ ಪೋಗಿ ಸಾಯುವೆ ॥ ೧ ॥
ಜಾತಿಗೋತ್ರವೆಂದು ಬಹು ಪ್ರಖ್ಯಾತಿಯಲ್ಲಿ ಪೇಳುವೆ ನೀತಿ ।
ಮಾತೆ ಸೂತಕದಿಂದೆಯಾದುದೀತನುವಲ್ಲೇನೋ ಕೋತಿ ॥ ೨ ॥

ಹೆಚ್ಚು ಕುಂದುಯೆಂದು ಬೋಕನಚ್ಚಿಕೊಂಡು ನುಡಿವಿಯೊ ।
ಮುಚ್ಚಿಕೊಳ್ಳೊ ನಿನ್ನ ಬಾಳು ಬಚ್ಚಲ ಭುವಿಯೊಲಿದ್ದಿಯೊ ॥ ೩ ॥

ಮೌನವ ವ್ರತವ ಪಿಡಿದು ನೀನು ಶಿವನ ಭಕ್ತನೆಂಬುವೆ ।
ಹೀನಮನದೊಳಾಶೆಯಿಂದ ಮಾನವರನೇ ನಂಬುವೆ ॥ ೪ ॥

ಚಿಲುಮೆ ನೀರ ಕುಡಿದು ನಮ್ಮ ಜನ್ಮ ಪಾವನವೆಂಬಿಯೋ ।
ಮಲಮೂತ್ರದ ಕುಳಿಯೊಳಗೆ ಮುಳುಗಿ ಮುಳುಗಿ
ಸಬಂದೆಯೋ ॥ ೫ ॥

ಉಪ್ಪನುಳ್ಳಿಯ ಬಿಟ್ಟು ನಾನು ಸಪ್ಪೆಯ ನುಂಡೆ ನಿಂತೀದಿ ।
ಉಪ್ಪನರಿಯದ ನಾಯಿನರಿಗಳಿಗಪ್ಪುವದೆ ಷಟ್‌ಸ್ಥಲದ ಹಾದಿ ॥ ೬ ॥

ಗುಂಭ ಮಂತ್ರಧ್ಯಾನದೊಳಗೆ ತುಂಬಿತೀ ಮನವೆಂದೆಂಬ ।
ಸಂಭ್ರಮದಿಂದಲಿ ತಗಣಿ ಬೆನ್ನಿನಲಿ ಚುಂಬನಂಗೊಡಲಾಗೇ
ನಂಬಿ ॥ ೭ ॥

ಬೆಳ್ಳಿ ತಾಮ್ರದೇವರು ಬಹು ಸತ್ಯುಳ್ಳದೆಂದು ಕೂಗುವೆ ।
ಕಳ್ಳರು ಒಯ್ದು ಕಡಿದು ಕರಗಿದಡೆಲ್ಲಿಗೈದಿದವೋ ಭವಿ ॥ ೮ ॥

ಮೊಸಲು ಹಾಕಿ ದೇವರಿಗೆಂದು ಲೇಸಾದಡಿಗೆ ಮಾಡುವೆ ।
ವಾಸಿಸಿಕೊಂಡು ದೇವರನಗಲಿ ಧ್ಯಾಸಗುಟಿಕೆ ನುಂಗುವೆ ॥ ೯ ॥

ಪ್ರಸಾದ ಮುಗಿದೇನೆಂದು ಹುಸಿಯನೇಕೆ ನುಡಿವೆಯೋ ।
ಪ್ರಸಾದ ಮುಗಿದ ಬಳಿಕ ಮತ್ತೆ ಹಸಿವು ತೃಷೆ ಮತ್ತೆಲ್ಲಿಯೊ ॥ ೧೦ ॥

ಲಿಂಗದೊಳು ಪ್ರಸಾದ ಕಾಯಸಂಗವಾಯಿತ್ತೆಂಬುವೆ ।
ಭಂಗಿತನೆ ಪ್ರಸಾದಕಾಯ ಹ್ಯಾಂಗೆ ಭುವಿಯೋಳ್
ಹೂಳುವೆ ॥ ೧೧ ॥

ರಕ್ತಿಯಲ್ಲ ಬಿಟ್ಟು ವಿರಕ್ತನಾದೆನೆಂಬೆಯೊ ।
ಭುಕ್ತಿಗಿಲ್ಲದಿದ್ದರೇನು ಕೊರ್ತೆ ಮಾಡಿ ತಿಂಬೆಯೋ ॥ ೧೨ ॥

ಹೊತ್ತು ಹೋಗದೆಂದು ಪುರಾಣ ಹತ್ತಯೆಂಟು ವೋದುವಿಯೋ ।
ಗೊತ್ತು ವೊಂದಿಲ್ಲದೆ ಕಡೆಗೆ ಸುತ್ತು ಸತ್ತು ಹೋದಿಯೊ ॥ ೧೩ ॥

ಬಸವನ ಸಾಂಪ್ರದಾಯಕರೆಂದು ಬಸವನ ಪೂಜೆ ಮಾಡುವೆ ।
ಬಸವನ ಹೂಡಿ ಹೇರಿ ಬಹಳ ಘಸಣಿ ಮಾಡಿ ಕೊಲ್ಲುವೆ ॥ ೧೪ ॥

ಗಡ ಗಡನೆ ಗಣ ಸಹಸ್ರನಾಮ ಎಡವಿಡದೆ ನೀನೋದುವೆ ।
ಒಡೆಯ ಜಂಗಮು ಹಸಿದು ಬಂದರೆ ನಡೆ
ನಡೆನಡೆಯಂದೆಂಬುವೆ ॥ ೧೫ ॥

ಇಲ್ಲದ ಹೊನ್ನು ಹೆಣ್ಣು ಮಣ್ಣು ನೊಲ್ಲೆ ನೊಲ್ಲೆ ನೆಂಬುವೆ ।
ಪುಲ್ಲಕಂಬಳಿ ಮೇಲೆ ಕನಸಿನಲ್ಲಿ ಬರತೇನಂತಿದಿ ॥ ೧೬ ॥

ಆಶೆ ಮೂರ ತೊರೆದು ನಾ ಸನ್ಯಾಸಿಯಾದೆನೆಂತಿದೆ ।
ಕಾಸು ದಾರಿಯೊಳಿದ್ದರದಕೇಸು ಯುಕ್ತಿ ತರತಿದಿ ॥ ೧೭ ॥

ಕುಟಿಲ ವೇಷವ ತಾಳಿ ಜಗದೋಳ್ ನಟಿಸಿ ನಟಿಸಿ ತೋರುವಿ
ಘಟವ ಬಿಡುವ ವೇಳೆ ಮತ್ತೆ ದಿಟವದಾವುದ ನಿನಗೋವಿ ॥ ೧೮ ॥

ಅರಿತ ಬಳಿಕ ಕೆಲಸಲ್ಲವದನರಿಯದ ಮಾಡಿದಡೇನಿಲ್ಲ ।
ಅರಹು ಘನಮತ ವಾಸನೋಳ್ ನಿಜಶರಣ ತಾನೆ ತಾ ಬಲ್ಲ ॥ ೧೯ ॥

೭. ಮೂಢ ಮನುಜ ಕೆಡಬೇಡ

ಮೂಢ ಮನುಜ ಕೆಡಬೇಡ ಸತಿಯ–।
ರೊಡಗೂಡಿ ಬರಿದೆ ಸಾರಿದೆನಿಲ್ಲಿ ॥
ನಾಡೆ ಶಿವನ ನಿ ನೋಡಿ ಭಜಿಸು–।
ತೀಡ್ಯಾಡೋಜನನ ಮರಣನ ತಳ್ಳಿ ॥ ಪ ॥

ಪಾಪವೊಂದು ರೂಪಾಗಿ ಸತಿಯಳೆನಿ–।
ಸೀ ಪರಿಯೊಳು ಜಗದೊಳು ಜನಸಿ–॥
ಕಾಪಟ್ಯ ಪರುಷರನೊಳ ಕೈದೆಮ–।
ಕೊಪಕೊಯ್ವಳದ ನೀ ಬಯಸಿ ॥ ೧ ॥

ಮೃತ್ಯುಗನ್ನಿಕೆಯರರ್ಥದಾಸೆಯರು ।
ಮರ್ತ್ಯದೊಳಗೆ ಹಿತವುರಿಯರು ॥
ಭ್ರಾತ್ರ್ಯವನುಜರೋಳ್ ಬೆರ್ತು ಬಹಳ ದು–। ಷ್ಕೃತ್ಯ
ವರ್ತನದಿ ನಟಿಸವರು ॥ ೨ ॥

ಮಾಯಾಗಾರ್ತಿಯರು ಹೇಯ ಚರಿತೆಯರು–।
ಮಾಯವತಿಯರ ಮಡಿಲ ನೋಡಿ ॥

ಕಾಯ ಮಧ್ಯದೊಳ್ ಮಾಯದ ಹುಣ್ಣದ ।
ಕಾಯ್ದಿರ್ಪವರಿಗಹುದ ಪೀಡೆ ॥ ೩ ॥

ಕಾಮಿನಿಯೆನ್ನವಳೆಂದು ಮನದೊಳಗೆ ।
ನೀ ಮಮಕರಿಸಿ ಪಡೆವೆ ಬೆರಗು ॥
ಕಾಮಿನಿ ಕಾಮುಕರೊಡೆವೆಯೆಂದು ಶ್ರುತಿ–।
ಪ್ರೇಮದಿಂದೆ ನೇಮಿಸಿ ನುಡಿಗು ॥ ೪ ॥

ಸೊಗಸುದೋರುತಲಿ ಜಿಗುಳಿಯಂದದಲಿ ।
ಮಿಗೆ ಪುರುಷರ ತಾವೆಡೆ ಬಿಡದೆ ॥
ನಗುತಲವನ ಹಣಗುಣವ ತ್ರಾ–।
ಣ ತೊಟ್ಟನೆ ಹೀರುವಿರೀ ಜಗದಿರದೆ ॥ ೫ ॥

ತರುಣಿಯರೊಲವದು ಸ್ಥಿರವಲ್ಲಲೆ ಚಾ–।
ತರದಿ ಪುರಷನೊಲಿಸಿ ಸಿರಿಯ ॥
ಭರದಿ ಸೆಳೆದವರ ಶಿರದ ಮೇಲೆ ಕೆರ ।
ಹೊರಿಸುವರೆಲೆ ಹೊರೆ ಹೊರೆ ಹೊರೆಯ ॥ ೬ ॥

ಘುಲ್ಲ ಶರನ ರೂಪುಳ್ಳನಾಗಿ ಸ್ವಯ ।
ವಲ್ಲಭನಿರುತಿರಲಾ ಸತಿಯರ್ ॥
ಬಳ್ಳಿಯಂತೆ ಮತ್ತೆಲ್ಲ ಪುರಷನು
ನಿಲ್ಲದೆ ಮನದೊಳಗಂ ನೆನೆವರ್ ॥ ೭ ॥

ಒಡವೆ ವಸ್ತ್ರಗಳ ಕೊಡುವ ತನಕ ಬಲ್ ।
ಸಡಗರದಿಂದುಪಚರಿಸುವರು ॥
ಬಡವನಾಗಿ ತಮ್ಮೆಡೆಗೆ ಬರಲ್ ಘುಡಿ–।
ಘುಡಿಸಿ ನುಡಿದು ಹೊರ ನೂಕುವರು ॥ ೮ ॥

ತನುವೊಳೊಬ್ಬ ಮನಸಿನೊಳಗೊಬ್ಬನಾ–।
ತ್ಮನಯನದೊಳಗೊಬ್ಬನ ನೆರೆವ ॥
ಘನ ಜಾರದ ಚೋರದ ಕಾಪಟ್ಯದ ।
ವನಿತೆಯರಿಗೆ ಸೋಲುತೆ ಮನವ ॥ ೯ ॥

ಮಾನಭಂಗ ಧನಹಾನಿ ದೀನತನ
ನಾಣುಗೆಡಕು ಕುಲನಾಶವ ।

ಮಾನಸವ್ಯಥೆ ನಿರ್ವಾಣ ಭಕ್ತಿಗುಣ ।
ಹೀನವೆನಿಪ ವೇಶ್ಯಳಿಗೊಲಿದು ॥ ೧೦ ॥

ಎಲವು ಮಾಂಸ ನರತೊವಲು ರಕ್ತದು–।
ರ್ಜಲಮಲಯುತಮಾಗಿಹ ಸತಿಯ ॥
ನಳಿತೋಳ್ಗಳ ಕುಚಗಳ ಕಾಣುತ ಕಳ–।
ವಳಸಿ ಪೋಗಿ ನೆರವನೆ ಹೊಲೆಯ ॥ ೧೧ ॥

ಮಲದ ಭಾಂಡು ಎಲು ಹುಳದ ಕೊಂಡ ಬಿಗು ।
ಮೊಲೆಯಖಂಡವದನಿಹ ಲಲನೆ–॥
ಗೆಳೆವ ಭಂಡಗೆಮಪೊಳಲ ದಂಡವಹು–।
ದಲೆಲೆ ಪುಂಡನೀ ತಿಳಿದದನೆ ॥ ೧೨ ॥

ನೋಟ ಸರಳ ವಿಷದೂಟವಧರ ರಸ–।
ಕೂಟವೆ ಮಹಾ ನರಕದ ಕಾಟ ॥
ಕೋಟಿ ಜಪತಪದ ಪಾಟಿಗೆಡಸಿ ಬಲ್ ।
ಕೋಟಲೆ ಬಡಿಸುವದರಾಟ ॥ ೧೩ ॥

ಮತ್ತೆ ವಿಷಯ ತೀರಲ್ಕೊಡನಾಸತಿ ।
ಯತ್ತ ನೋಡಲವಳಾಕಾರ ॥
ಸತ್ತ ಶವದಕಿಂದತ್ತಲೆನಿಸಿ ನಿರ ॥
ಯಾರ್ಥವಾಗಿ ಕಾಣಿಸುಘೋರ ॥ ೧೪ ॥

ತುರಿಯ ಮೇಲೆ ಯುಗರಿಟ್ಟಿರೆ ಹಿತವಾ–।
ಗಿರುವುದು ಕ್ಷಣಮಾತ್ರವು ಬಹಳ–॥
ವುರಿಯಾಗುವ ಪರಿ ಸುರತದೊಳತಿಸುಖ ।
ಸುರತಾಂತಕ್ಕೆಯಹಿತದುರುಳ ॥ ೧೫ ॥

ಹರಿಣಿಪಾದ ದೋಲಿರುವ ಯೋನಾಗಿ–।
ಗುರುವಣಿಸುತ ಜನರಿಚ್ಛೈಸಿ ॥
ಸೆರೆಯಾಳಾಗಿ ಕೆಟ್ಟರು ಸುಖವಣು ಘನ–।
ತರದ ದುಃಖವದನನುಕರಿಸಿ ॥ ೧೬ ॥

ತೋರಿಕೆಡುವ ಮುಂಗಾರಿ ಮಿಂಚಿನೋಲ್ ।
ಮಾರಕೇಳಿಯದು ಸ್ಥಿರವೆಂದು ॥

ಧಾರುಣಿಯೋಳ್ ಸತಿಮೋಹದಿರಲ್ಕತಿ ।
ಘೋರಭವದೊಳ್ವೊಂದುವಿ ಕುಂದು ॥ ೧೭ ॥

ಇಂದ್ರ ಚಂದ್ರನಸುರೇಂದ್ರನು ರಾಮ ।
ವೃಂದವೆಲ್ಲಿ ಸತಿಯರಿಗಾಗಿ ॥
ಕುಂದು ಪಡೆದು ಮೃತಿ ಹೊಂದಿ ಹೋದರದ ।
ನಿಂದು ತಿಳಿದು ನೀ ಮರುಳಾಗಿ ॥ ೧೮ ॥

ಶುನಕ ನೆಲವು ಕಡಿವಲ್ಲಿ ಬಾಯಜೊ ।
ಲ್ಲನೆ ಹಿತವೆನಿಸುವ ಪರಿ ನಿನ್ನ ॥
ತನು ಬಿಂದುವೆ ಸತಿಯನುಕೂಲದಲೊಸೆ ।
ದುಣಲಸುಖವಿತ್ತು ಸರಿಗುಪಣ್ಯ ॥ ೧೯ ॥

ಇಲಿ ಹೆಗ್ಗಣ ಸೂಸಲಿಗೆಳಸುತಲಾ ।
ಬಲಿಯೊಳಗಾಗಿ ಕೆಡುವಂದದೊಳು ॥
ಇಳೆಯಭೋಗವಿಚ್ಛೈ ಸುತೀ ಸತಿಯ ।
ರೊಳು ಬೆರೆಯಲು ತೋರುಗುಮರಳು ॥ ೨೦ ॥

ಹೆಣ್ಣಿನ ಬಣ್ಣಕೆ ಕಣ್ಣುಗೆಟ್ಟುಬಿಲು ।
ಬಿನ್ನಬಡದೆ ಧಾರುಣಿಯೊಳಗೆ ॥
ಚೆನ್ನ ಘನಮಠೇಶನ್ನ ನೆನದು ಬಹು ।
ಮಾನ್ಯನೆನಿಸಿ ಬೆರೆ ಶಿವನೊಳಗೆ ॥ ೨೧ ॥


೬. ಅರವಲಿ ಬಿಜಲಿವಸ್ತಾದಿ (೧೮೩೦-೧೯೦೦)

ಅರವಲಿ ಬಿಜಲಿ ವಸ್ತಾದಿ ರಾಯಚೂರು ಜಿಲ್ಲೆಯ ಪ್ರಪ್ರಥಮ ಮುಸ್ಲಿಂ ತತ್ವ ಪದಕಾರ. ಹುಟ್ಟಿನಿಂದ ಮುಸ್ಲಿಂನಾದರೂ ಶಿವಭಕ್ತಿ ಪರಿಸರದಲ್ಲಿ ಬೆಳೆದುದರಿಂದ ಶಿವಭಕ್ತನೆನಿಸಿಕೊಂಡ. ಈತನು ಯಾವ ಊರಿನಲ್ಲಿ ಜನಿಸಿದ ಎಂಬುದು ಇದುವರೆಗೆ ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಆದರೂ ಈತ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಅರವಲಿ ಎಂಬ ಗ್ರಾಮದಲ್ಲಿ ವಾಸವಾಗಿದ್ದುದರಿಂದ ಜನ ಈತನನ್ನು ಅರವಲಿಯವನೆಂದೇ ಭಾವಿಸಿದ್ದಾರೆ. ಅರವಲಿ ಗ್ರಾಮದಲ್ಲಿ ಈತನು ರಚಿಸಿದ ತತ್ವ ಪದಗಳನ್ನು ಹಾಡುವವರು ಈಗಲೂ ಸಿಗುವರು. ಈತನು ಮರ್ಸಿಯಾ ಮತ್ತು ರಿವಾಯತ ಪದಗಳನ್ನೂ ಬರೆದಿರುವನು. ಈತನು ಕ್ರಿ.ಶ. ೧೮೬೨ರಲ್ಲಿ ಜೀವಿಸಿದ್ದನೆಂಬುದಕ್ಕೆ ಮರ್ಸಿಯಾದಲ್ಲಿ ಆಧಾರವಿದೆ. ಡಾ|| ಎಂ.ಎಸ್. ಲಠ್ಠೆ ಅವರು ಈತನ ಕಾಲವನ್ನು ಕ್ರಿ.ಶ. ೧೮೩೦ ರಿಂದ ೧೯೦೦ ಎಂದು ತಮ್ಮ 'ಜನಪದ ಕವಿ ಚರಿತೆ' ಪುಟ-೪೭ರಲ್ಲಿ ಗುರುತಿಸಿ ಉಲ್ಲೇಖಿಸಿರುವರು.

ಶ್ರೀ ಶಾಂತರಸ ಅವರು ಈತನ ಕಾಲ ಕ್ರಿ.ಶ. ೧೮೬೦ ಎಂದು ತಮ್ಮ ಎಡೆದೊರೆ ನಾಡಿನ ಅನುಭಾವಿ ಕವಿಗಳು (ಪುಟ-೭೧) ಕೃತಿಯಲ್ಲಿ ದಾಖಲಿಸಿರುವರು. ಇವರೀರ್ವರ ಹೇಳಿಕೆಯನ್ನು ಆಧರಿಸಿ ಅರವಲಿ ಬಿಜಲಿ ವಸ್ತಾದಿಯ ಕಾಲ ೧೯ನೇ ಶತಮಾನದ ಉತ್ತರಾರ್ಧವೆಂದು ತಿಳಿಯುವುದು ಸೂಕ್ತವೆನಿಸುತ್ತದೆ.

ಅರವಲಿ ಬಿಜಲಿ ವಸ್ತಾದಿ ತತ್ವಪದಗಳನ್ನು ಬರೆಯುವುದರ ಜೊತೆಗೆ ನಮ್ಮಲ್ಲಿಯ ಶೋಕ ಗೀತೆಗಳನ್ನು ಹೋಲುವ ಮರ್ಸಿಯಾ ಪದಗಳನ್ನು ಪುರಾಣ ಕಥೆಗಳನ್ನು ಹೋಲುವ ರಿವಾಯತ ಪದಗಳನ್ನು ರಚಿಸಿರುವನು. ಈತನು ಬರೆದ ರಿವಾಯತ ಪದಗಳು ಹೆಚ್ಚಾಗಿ ಸಿಗುವವು. ಆದರೆ ಈತ ಬರೆದ ತತ್ವ ಪದಗಳು ಅಷ್ಟಾಗಿ ಸಿಗುತ್ತಿಲ್ಲ. ಕೆಲವೇ ತತ್ವ ಪದಗಳು ಉಪಲಬ್ಧವಾಗಿದ್ದು, ಅವು ಬಿಜಲಿ ವಸ್ತಾದಿಯ ಧರ್ಮ ಸಮನ್ವಯ ಭಾವನೆಗೆ ಕೋಮು ಸಾಮರಸ್ಯ ಭಾವನೆಗೆ ನಿದರ್ಶನವಾಗಿವೆ. ಸೂಗೂರೇಶ್ವರ, ವೀರಭದ್ರೇಶ್ವರ ಮುಂತಾದ ಹಿಂದೂ

ದೇವರುಗಳನ್ನು ಕುರಿತು ಬರೆದ ಈತನ ತತ್ವಪದಗಳು ತುಂಬ ಜನಪ್ರಿಯವಾಗಿವೆ. ಹುಟ್ಟಿನಿಂದ ಬಿಜಲಿ ವಸ್ತಾದಿ ಮುಸ್ಲಿಂನಾದರೂ ವೀರಶೈವ, ಹಿಂದೂ ದೇವರುಗಳನ್ನು ತನ್ನ ತತ್ವಪದಗಳಿಗೆ ವಸ್ತುವಾಗಿ ಆಯ್ದುಕೊಂಡುದು ಆತನ ಧರ್ಮ ಸಮನ್ವಯ ಭಾವನೆಗೆ ನಿದರ್ಶನವಾಗಿದೆ. ಈಶ್ವರ ಮತ್ತು ಅಲ್ಲಾ ಒಂದೇ ಎಂದು ಹೇಳುವ ಈತನ ತತ್ವಪದಗಳು ಧರ್ಮ ಸಮನ್ವಯಕ್ಕೆ ಭಾವೈಕ್ಯತೆಗೆ ಜ್ವಲಂತ ನಿದರ್ಶನವಾಗಿವೆ. "ಜ್ಞಾನದಿಂದ ಶಿವಧ್ಯಾನವ ಮಾಡಣ್ಣಾ" "ರಾಮ ರಹೀಮರ ಸ್ಮರಣೆಯ ಮಾಡು" ಇಂಥ ಕೆಲವು ಆತನ ತತ್ವಪದಗಳು ತುಂಬ ಜನಪ್ರಿಯವಾಗಿವೆ. ರಾಯಚೂರು ಪ್ರದೇಶದಲ್ಲಿ ಈತನಿಗೆ ಅನೇಕ ಶಿಷ್ಯರಿದ್ದುದು, ಈಗಲೂ ಈತನ ತತ್ವಪದಗಳನ್ನು ಜನ ಭಜನೆಯ ಸಂದರ್ಭದಲ್ಲಿ ಹಾಡುತ್ತಿದ್ದುದು ತಿಳಿದು ಬರುವುದು. ಈತನ ತತ್ವಪದಗಳು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿಲ್ಲ. 'ಬಿಜಲಿ' ಅಂಕಿತದಲ್ಲಿರುವ ಈತನ ತತ್ವಪದಗಳ ಸಂಗ್ರಹಕಾರ್ಯ ನಡೆಯಬೇಕಿದೆ. ಈತನು ಕ್ರಿ.ಶ. ೧೯೦೦ರಲ್ಲಿ ಅರವಲಿಯಲ್ಲಿಯೇ ನಿಧನನಾದನೆಂಬುದು ತಿಳಿದು ಬರುವುದು. ನಾವು ಕ್ಷೇತ್ರಕಾರ್ಯಕ್ಕೆ ಹೋದಾಗ ಅಲ್ಲಿನ ಜನ ಆತ ವಾಸವಾಗಿದ್ದ ಮನೆ ಹಾಗೂ ಆತನ ಸಮಾಧಿ ಸ್ಥಳದ ಬಗ್ಗೆ ಮಾಹಿತಿಯನ್ನು ಒದಗಿಸಿರುವರು. ನಾವು ಸಂಗ್ರಹಿಸಿದ ಮಾಹಿತಿಯ ಹಿನ್ನೆಲೆಯಲ್ಲಿ ಆತನಿಗೆ ಸಂಬಂಧಿಸಿದ ಕೆಲ ಸ್ಮಾರಕಗಳನ್ನು ನಾವು ಚಿತ್ರೀಕರಿಸಿಕೊಂಡಿದ್ದು, ಆ ಚಿತ್ರಗಳನ್ನಿಲ್ಲಿ ಕೊಟ್ಟಿರುವೆವು.



ತತ್ವಪದಕಾರ ಅರವಲಿ ಬಿಜಲಿ ವಸ್ತಾದಿ ವಾಸಿಸಿದ ಮನೆಯ ಚಿತ್ರ, ಅರವಲಿ ತಾ – ಮಾನ್ವಿ , ಜಿ – ರಾಯಚೂರು.



ತತ್ವಪದಕಾರ ಅರವಲಿಬಿಜಲಿ ವಸ್ತಾದಿಯವರ ಸಮಾಧಿ ಹೊಂದಿದ ಸ್ಥಳ, ಅರವಲಿ.
ತಾ – ಮಾನ್ವಿ , ಜಿ – ರಾಯಚೂರು.

ಡಾ. ಬಸವರಾಜ ಸಬರದ ಅವರು "ಹೈದರಾಬಾದ ಕರ್ನಾಟಕದ ತತ್ವಪದಗಳು" ಎಂಬ ಗ್ರಂಥದಲ್ಲಿ ಸಂಗ್ರಹಿಸಿದ ಅರವಲಿ ಬಿಜಲಿ ವಸ್ತಾದಿ ಅವರ ಮೂರು ತತ್ವಪದಗಳನ್ನಿಲ್ಲಿ ಆಯ್ದು ಕೊಟ್ಟಿದೆ.

೧. ಜ್ಞಾನದಿಂದ ಶಿವಧ್ಯಾನವ ಮಾಡಣ್ಣಾ

ಜ್ಞಾನದಿಂದ ಶಿವಧ್ಯಾನವ ಮಾಡಣ್ಣಾ । ಹೇ ಜಾಣ
ಜ್ಞಾನದಿಂದ ಶಿವಧ್ಯಾನವ ಮಾಡಣ್ಣಾ ॥ ಪ ॥

ಕಾಮ ಕ್ರೋಧಗಳ ಕಡೆಪಡೆ ಮಾಡು
ಮದ ಮತ್ಸರಗಳ ಗೊಡವೆಯ ಬಿಡು ।
ಮೂರು ಮಲಗಳನು ಮನದಿ ಸುಡು
ನಾನೆಂಬುದನೀ ಮರೆತು ಬಿಡಣ್ಣಾ ॥ ೧ ॥

ಕತ್ತಲಾದರೆ ಬೆಳಕನು ಮಾಡು
ಉತ್ತಮ ಮತಿಯ ಹೆಂಡತಿ ಕೂಡು ।

ರಾತ್ರಿ ಆರು ತಾಸಿಗೆ ಭೋಗವ ಮಾಡು
ನಿತ್ಯ ದೇವನ ಸ್ಮರಣೆಯ ಮಾಡಣ್ಣಾ ॥ ೨ ॥

ಸಿಟ್ಟು ಬಂದರೆ ನಿಧಾನ ಮಾಡು
ಹಸಿದು ಬಂದವಗೆ ಅನ್ನವ ನೀಡು ।
ಪರನಿಂದೆಯ ಬಿಟ್ಟು ಪ್ರೀತಿಯ ಮಾಡು
ಹರಿ–ಹರ ಒಂದೇ ಲೆಕ್ಕವ ಮಾಡಣ್ಣಾ ॥ ೩ ॥

ಊರಿಗೊಂದು ನೀ ಸ್ನೇಹವ ಮಾಡು
ತಾಸೊತ್ತಿರಲಿಕೆ ವಸ್ತಿಯ ಮಾಡು ।
ವೈರಿ ಬಂದರೆ ಧೈರ್ಯವ ಮಾಡು
ರಾಮ ರಹೀಮರ ಸ್ಮರಣೆಯ ಮಾಡಣ್ಣಾ ॥ ೪ ॥

ಪ್ರಾಸವಿಟ್ಟು ಪದವನು ಮಾಡು
ತ್ರಾಸು ಬಂದರೆ ಧ್ಯಾನವ ಮಾಡು ।
ಧರೆಯೊಳ್ ಅರವಲಿ ಮಕಾಮ್ ಮಾಡು
ಅಲ್ಲಿ ಬಿಜಲಿಯ ಆಶ್ರಯ ಪಡೆಯಣ್ಣಾ ॥ ೫ ॥

೨. ಅಲಾವಿ ನೋಡಿರಣ್ಣ

ಅಲಾವಿ ನೋಡಿರಣ್ಣ ಮದೀನದಲಾವಿ ನೋಡಿರಣ್ಣಾ
ಕೆಂವ್‌ಸೇನ್ ಬೌಂವ್‌ಸೇನೆಂದು ಹಾಡಿರಣ್ಣಾ ॥ ಪ ॥

ಕಿಲ್ಲೆ ಸುತ್ತ ನೀ ನೋಡೋ । ತಮ್ಮಣ್ಣಾ
ಡೋಲಿ ಮೇಲಕ ಹೋಯಿತಲ್ಲಣ್ಣಾ ।
ಕತ್ತಲ ಕಾಳಗ ಕರ್ಬಲ್ ದೊಳಗ
ಇತ್ತ ಧೂಮಕೇತು ಮೂಡಿತಲ್ಲಣ್ಣಾ ॥ ೧ ॥

ಅಲ್ಲಿ ತಿರುಗಿ ನೋಡೊ ತಿಮ್ಮಣ್ಣಾ
ಒಲ್ಲೆನೆಂದರೂ ಕರ್ಮ ಬಿಡದಣ್ಣಾ
ಕಾಶೀಮ ಶರಣರು ಸಮರ ಕ್ಹೋಗಿ
ಐಸುರ್ ಮೋಹರಮ್ ಹಾಡಿದರಣ್ಣಾ ॥ ೨ ॥

ಕಾಳಗದ ಖೇಲ್ ನೋಡೋ ತಮ್ಮಣ್ಣಾ
ಕೂಡಿ ರಿವಾಯತ್ ಹಾಡುವದಣ್ಣಾ ।

ಈಶ್ವರ ಅಲ್ಲಾ ಒಂದೇ ತಿಳಿಯಣ್ಣಾ
ಅರವಲಿ ಬಿಜಲಿ ನಿಮ್ಮವನಣ್ಣಾ ॥ ೩ ॥

೩. ಹೋಗೋಣ ನಡಿ ತೇರಿಗೆ

ಮಡಿಯ ಸಂಗತ ನಡಿರಿ ಮಟಮಾರಿಗೆ
ನಮ್ಮ ಶ್ರೀ ಗುರು ವೀರಭದ್ರಸ್ವಾಮಿ ದರ್ಶನಕೆ ॥ ಪ ॥

ಮಡದಿ ಮಕ್ಕಳ ಕೂಡಿ ಭಂಡಿ ಸರ್ನಾಟಗಾಗಿ
ಎತ್ತು ಕುದುರೆಯ ಹೂಡಿ ಪ್ರಸ್ತವ ಮಾಡಿ
ಲಡ್ಡು ಮಿಠಾಯಿ ಜಂಗಮರಿಗೆ ನೀಡಿ
ಕರ್ಪೂರ ಊದಿನಕಡ್ಡಿ ಮಂಗಳಾರತಿ ಪಾಡಿ
ಬೇಡೋಣ ನಡಿ ಸೆರಗೊಡ್ಡಿ ಎರಡು ಕೈಗಳ ಜೋಡಿಸಿ
ಹೋಗೋಣ ನಡಿ ತೇರಿಗೆ ನಮ್ಮ ಶ್ರೀ ಗುರು ವೀರಭದ್ರಸ್ವಾಮಿಗೆ
ಹೋಗೋಣ ಮಡಿಲಿಂದಲಿ ವಿಶ್ವಾಸದಿಂದಲಿ ॥ ೧ ॥

ಜಾತ್ರೆಯು ಬಲು ಛಂದ ನೋಡಲಿಕ್ಕೆ ಅರ್ತಿಲಿಂದ
ಸೇನೆ ಸಡಗರದಿಂದ ನಂದಿ ಕೋಲುಗಳಿಂದ
ಪಾತ್ರದವರಾಡುವರು ಪಸಂದ
ಪ್ರೀತಿಯಿಂದ ಮಾತಾ ಪಿತನ ಬೆಳಕಿಲಿ ಪ್ರದಕ್ಷಿಣ
ಹೋಗೋಣ ನಡಿ ತೇರಿಗೆ ನಮ್ಮ ಶ್ರೀ ಗುರು ವೀರಭದ್ರ ಸ್ವಾಮಿಗೆ ॥ ೨ ॥

ಹೋಗೋಣ ನಡಿಯಿರಿ ಅಯ್ಯನ ಜಾತ್ರಿಗಿ
ಐಶ್ವರ್ಯ ಏನ್ಹೇಳಲಿ ನೌಬತ್ತು ನಗಾರಿ
ತುತೂರಿ ಶಂಕು ಸೋನಾಯಿ ಜಾತ್ರಿ
ಕೊಡೆಯು ಆಪ್ತಗಿರಿ ಚವರಿ ನವಲ್ಗರಿ
ಶಂಭು ಜಾಗಟಿ ಭೇರಿ ವಾದ್ಯಗಳು ಪರಿಪರಿ
ಏಕನಾದ ತಂಬೂರಿ ಕೇಳಿ ಸೇವೆಯ ಮಾಡೋದಕೆ
ಹೋಗೋಣ ನಡಿ ತೇರಿಗೆ ನಮ್ಮ ಶ್ರೀ ಗುರು ವೀರಭದ್ರ ಸ್ವಾಮಿಗೆ ॥ ೩ ॥

ವಾದ್ಯ ಮದ್ದಲಿ ತಾಳ ಗೊಂಬೆ ಆಟದ ಮೇಳ
ನೂಪು ಜಂಗಮರು ಬಹಳ ಧೂಮಂತ್ರ ಮಟ್ಟತಾಳ
ಗುಡಿಸುತ್ತರವಳ ಝುಳ ಕೆಂಧೂಳ ಆಗ್ಯಾನ ನಿರ್ಮಾಳ ॥ ೪ ॥

ಗುಡಿಯೊಳು ಶೃಂಗಾರ ಸ್ವಾಮಿ ಶಿವಶಂಕರ
ಆತನ ಆಕಾರ । ಮದ ಗಜಗಮನೆಯರು
ಕಮಲ ಮುಖಿಯರು ನೆರೆಮನೆಯ ಸ್ತ್ರೀಯವರು
ಗಂಡುಳ್ಳ ಗರತಿಯರು ಚದುರೆಯರು ಚೆಲ್ವೆಯರು
ಚಿಕ್ಕ ಪ್ರಾಯದವರು ನಗುಮುಖದ ಬಾಲೆಯರು
ಕಂಡು ಕಳಸದವರು ನಿತ್ಯದಲಿ ಬೆಳಗುವರು ॥ ೫ ॥

ಆರು ಗಾಲಿಯ ತೇರು ನೋಡಲಿಕೆ ಶೃಂಗಾರ
ಬಡಿಗೇರು ಕಂಬಾರು ಮಾಡುವರು ತಯ್ಯಾರ
ಕಳಸಾದ ಬಂಗಾರ ಮೇಲ್ಗಡೆ ಝುರತಾರ
ಪಟಗಳು ದಿನಸಾರ ಗೊಂಬೆಗಳು ಚಿತ್ತಾರ
ಬಾಳೆಗಿಡಗಳು ಐದಾರ ಸುತ್ತ ಹೂವಿನ ಹಾರ
ಪರಿಪರಿಯ ಅವತಾರ ಹೋಗೋಣ ನಡಿ ತೇರಿಗೆ ॥ ೬ ॥

ತೇರು ಎಳಿಯುವಾಗ ಜನವೆಷ್ಟು ಝುಗಝುಗ
ಗೋಲ್ಗುಡಿ ಬಿಡುವಾಗ ಚಪ್ಪಾಳೆ ಇಡುವಾಗ
ತೆಂಗಿನಕಾಯಿ ಒಡಿವಾಗ ರಥಸಾಗಿ ಕಳ್ಳರು ಕದಿವಾಗ
ಕಳಕೊಂಡು ಹುಡಕಾಗ ಎಷ್ಟು ಐಶ್ವರ್ಯ ನೋಡಾಕ
ಹೋಗೋಣು ನಡಿ ತೇರಿಗೆ ನಮ್ಮ ಶ್ರೀ ಗುರು ವೀರಭದ್ರಸ್ವಾಮಿಗೆ ॥ ೭ ॥

ಸುತ್ತ ಸರಕಾರದವರು ರಾಯ್ಚೂರು ಹವಲ್ದಾರರು
ಝುಂಗಿ ಪೋಲಿಸಿದವರು ಗೌಡ ಕುಲಕರ್ಣ್ಯಾರು
ನಾಡಿಗೆ ಜಮೇದಾರ ಶೇಖ್ ಸಂದಿ ತಳವಾರರು
ಮೇಲೆ ಶಿವಭಕ್ತರ ಉಘೇ ಉಘೇ ಎಂಬವರು
ಧರೆಯೊಳು ಅರವಲಿ ಬಿಝುಲಿ ಉಸ್ತಾದಿಯವರು
ಕರಕೊಂಡು ಹೊರಟರು ತಮ್ಮ ಶಿಷ್ಯರು
ಹೋಗೋಣ ನಡಿ ತೇರಿಗೆ ನಮ್ಮ ಶ್ರೀ ಗುರು ವೀರಭದ್ರ ಸ್ವಾಮಿಗೆ ॥ ೮ ॥


೭. ದೇವದುರ್ಗದ ಚೆನ್ನಮಲ್ಲ ಕವಿ.(೧೮೫೦-೧೯೨೦)

ರಾಯಚೂರು ಜಿಲ್ಲೆಯ ತಾಲೂಕು ಸ್ಥಳವಾದ ದೇವದುರ್ಗದಲ್ಲಿ ಚೆನ್ನಮಲ್ಲ ಕವಿಯು ಕ್ರಿ.ಶ ೧೮೫೦ರಲ್ಲಿ ಜನಿಸಿದ. ಪ್ರಾಥಮಿಕ ವಿದ್ಯಾಭ್ಯಾಸವನ್ನು ದೇವದುರ್ಗದಲ್ಲಿಯೇ ಪೂರೈಸಿ ಮುಂದೆ ಈತ ಗೃಹಸ್ಥ ಜೀವನಕ್ಕೆ ಕಾಲಿರಿಸಿದ. ಕೆಲಕಾಲ ದಾಂಪತ್ಯ ಜೀವನವನ್ನು ಸಾಗಿಸಿದ. ಈತನಿಗೆ ಒಂದು ಹೆಣ್ಣು, ಒಂದು ಗಂಡು ಮಕ್ಕಳಾದುವು. ಶಾಲಾ ಶಿಕ್ಷಕನಾಗಿದ್ದ ಈತ ಹಳ್ಳಿಗಳಲ್ಲಿ ನಡೆಯುವ ಭಜನೆ. ಪುರಾಣ-ಪುಣ್ಯ ಕಥೆಗಳನ್ನು ಆಲಿಸುವುದರತ್ತ ಮನಸ್ಸು ಹಾಕಿದ. ಅನಂತರ ಈತನ ಪತ್ನಿ ಹಾಗೂ ಮಗ ತೀರಿಕೊಳ್ಳಲು ಸಂಸಾರದಲ್ಲಿ ಆಸಕ್ತಿಯನ್ನು ಕಳೆದುಕೂಂಡು ವೈರಾಗ್ಯವನ್ನು ತಾಳಿದ. ತನ್ನ ಮಗಳನ್ನು ದೇವದುರ್ಗದಲ್ಲಿ ಮದುವೆ ಮಾಡಿಕೊಟ್ಟ. ಮುಂದೆ ಈತ ಶಾಲಾ ಶಿಕ್ಷಕನಾಗಿ ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ಸತ್ಯಂಪೇಟೆಗೆ ಹೋದನೆಂದು ತಿಳಿದು ಬರುತ್ತದೆ. ಅಲ್ಲಿ ಆತ-ತತ್ವಪದಗಳನ್ನು. ಬರೆಯ ತೊಡಗಿದ. ಸಂಸ್ಕೃತ ಹಾಗೂ ಕನ್ನಡ ಎರಡೂ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ ಚೆನ್ನಮಲ್ಲ ಕವಿಯು "ಕರುಣೇಶ್ವರ ಪುರಾಣ"ಹಾಗೂ" ಭಿಕ್ಷಾವರ್ತಿ ಶಿವಯೋಗಿಗಳ ಪುರಾಣ"ಗಳನ್ನು ಬರೆದುದಾಗಿ ತಿಳಿದು ಬರುವುದು. ಆದರೆ ಇವು ಪ್ರಕಟಗೊಂಡಿಲ್ಲ. ಈತನು ಬರೆದ ತತ್ವಪದಗಳೂ ಪ್ರಕಟಗೊಂಡಿಲ್ಲ. "ಸುರದುರ್ಗನಾಥ"ಅಂಕಿತದಲ್ಲಿ ಈತನು ಅನೇಕ ತತ್ವ ಪದಗಳನ್ನು ಬರೆದಿರುವನು. ಈಗಲೂ ಸುರಪುರ-ರಂಗಂಪೇಟೆ ಭಾಗಗಳಲ್ಲಿ ಈತನ ಹಾಡುಗಳನ್ನು ಭಜನಾ ಸಂದರ್ಭದಲ್ಲಿ ಜನರು ಹಾಡುವುದುಂಟು. ವೀರಶೈವ ತತ್ವಸಿದ್ಧಾಂತಗಳನ್ನು ಚೆನ್ನಾಗಿ ತಿಳಿದುಕೊಂಡ ಈತ ತನ್ನ ತತ್ವಪದಗಳಲ್ಲಿ ಶರಣರ ಸಂದೇಶಗಳನ್ನು ವ್ಯಕ್ತಪಡಿಸಿದ್ದಾನೆ. ಭಕ್ತಿ. ಅಧಾತ್ಮ, ಮಳೆ, ಬೆಳೆ ಮುಂತಾದ ವಿಷಯಗಳು ಈತನ ತತ್ವಪದಗಳಿಗೆ ವಿಷಯವಾದುದನ್ನು ಗುರುತಿಸುವೆವು. ಪವಾಡಪುರುಷನಾಗಿ ಅಧ್ಯಾತ್ಮಯೋಗಿಯಾಗಿ ಸಾಮಾನ್ಯ ಜನರ ದೃಷ್ಟಿಯಲ್ಲಿ ದೈವೀಪುರಷನಾಗಿ ರಾರಾಜಿಸಿದ ಚೆನ್ನಮಲ್ಲಕವಿ ಬರಗಾಲಬಿದ್ದಾಗ ಮಳೆ ತರಿಸುತ್ತಿದ್ದನೆಂದೂ, ಅತಿವೃಷ್ಟಿಯಾದಾಗ ಮಳೆಯನ್ನು ತಡೆಯುತ್ತಿದ್ದನೆಂದೂ ಈಗಲೂ ಸತ್ಯಂಪೇಟೆ ಭಾಗದ ಜನ ಹೇಳುವರು. ಈತನು ಬರೆದ ತತ್ವಪದಗಳಲ್ಲಿ ಲಿಂಗ ಬಾರೊ ಎನ್ನಮನಕೆ ಲೀಲೆ ತೋರೊ" "ಮಳೆನಿಲ್ಲಿಸು


ಮಹಾದೇವ"ಮುಂತಾದುವು ತುಂಬ ಜನಪ್ರಿಯವಾಗಿವೆ. ಚೆನ್ನಮಲ್ಲಕವಿಯು ತನ್ನ ಜೀವಿತದ ಬಹುಭಾಗವನ್ನು ಸುರಪೂರ ತಾಲೂಕಿನ ಸತ್ಯಂಪೇಟೆಯಲ್ಲಿಯೇ ಕಳೆದನು. ಮುಂದೆ ಕ್ರಿ.ಶ ೧೯೨೦ ರ ಸುಮಾರಿಗೆ ಅಲ್ಲಿಯೇ ಲಿಂಗೈಕ್ಯನಾಗುವನು. ಈತನ ಸಮಾಧಿ ಸತ್ಯಂಪೇಟೆಯಲ್ಲಿದೆ. ಈತ ದೇವದುರ್ಗದಲ್ಲಿ ವಾಸವಾಗಿದ್ದಮನೆ, ಆತನ ಮನೆ ಬಳಿಯಿರುವ ಗುರುಲಿಂಗ ಶಿವಾಚಾರ್ಯರ ಮಠ, ಸತ್ಯಂಪೇಟೆಯಲ್ಲಿರುವ ಆತನ ಸಮಾಧಿ ಚಿತ್ರಗಳನ್ನಿಲ್ಲಿ ಸ್ಮಾರಕಗಳ ರೂಪದಲ್ಲಿ ಕೊಡಲಾಗಿದೆ.




ದೇವದುರ್ಗದ ತತ್ವಪದಕಾರ ಚೆನ್ನಮಲ್ಲ ಕವಿಯು ವಾಸಿಸಿದ ಮನೆ. ಆ ಮನೆಯೆದುರು
ನಿಂತವರು ಅವರ ವಂಶಜರಾದ ಸಿದ್ಧಯ್ಯಸ್ವಾಮಿಯವರು.
ದೇವದುರ್ಗ, ಜಿಲ್ಲೆ – ರಾಯಚೂರು.



ದೇವದುರ್ಗದ ತತ್ವಪದಕಾರ ಚೆನ್ನಮಲ್ಲ ಅವರ ಮನೆ ಬಳಿಯಿರುವ ಗುರುಲಿಂಗ ಶಿವಾಚಾರ್ಯರ
ಮಠ ಆ ಮಠದೆದುರು ನಿಂತ ಸಿದ್ದಯ್ಯ ಸ್ವಾಮಿಯವರು. ದೇವದುರ್ಗ.



ಸತ್ಯಂಪೇಟೆಯಲ್ಲಿರುವ ದೇವದುರ್ಗದ ಚೆನ್ನಮಲ್ಲ ಕವಿಯ ಸಮಾಧಿ ಚಿತ್ರ. ಸತ್ಯಂಪೇಟೆ.
ತಾ – ಸುರಪುರ. ಜಿಲ್ಲೆ – ಯಾದಗಿರಿ.



ಸತ್ಯಂಪೇಟೆಯಲ್ಲಿರುವ ದೇವದುರ್ಗದ ಚೆನ್ನಮಲ್ಲ ಕವಿಯ ಸಮಾಧಿಯ ಮೇಲೆ
ನಿರ್ಮಾಣಗೊಳ್ಳುತ್ತಿರುವ ಗುಡಿಯ ಚಿತ್ರ. ಸತ್ಯಂಪೇಟೆ
ತಾ – ಸುರಪುರ, ಜಿಲ್ಲೆ – ಯಾದಗಿರಿ.

ಚೆನ್ನಮಲ್ಲ ಕವಿಯು ಬರೆದ ತತ್ವಪದಗಳ ಸಂಗ್ರಹಕಾರ್ಯ ನಡೆಯಬೇಕಾಗಿದೆ. ಡಾ. ಬಸವರಾಜ ಸಬರದ ಅವರು ತಮ್ಮ "ಹೈದರಾಬಾದ ಕರ್ನಾಟಕದ ತತ್ವಪದಗಳು"ಎಂಬ ಕೃತಿಯಲ್ಲಿ ಪ್ರಕಟಿಸಿದ ಚೆನ್ನಮಲ್ಲಕವಿಯ ತತ್ವಪದವೊಂದನ್ನಿಲ್ಲಿ ನೀಡಿದೆ.

೧.ಲಿಂಗ ಬಾರೊ ಎನ್ನಮನಕೆ

ಲಿಂಗಬಾರೊ ಎನ್ನ ಮನಕೆ ಲೀಲೆಯ ತೋರೊ
ಶೃಂಗಾರದಂಗದಿ ಶಂಭು ಬರುತಾನೆ ದಾರಿಯ ತೋರೊ ॥ ಪ ॥

ವಿಷಯ ಗುಣವನಳಿದು ಹಸನಾಗಿ ಬೆಳೆಸಯ್ಯ
ನಸುನಗೆಯಿಂದಾಲಿ ಮನವನು ತಣಿಸಯ್ಯ ।
ನೊಸಲ ವಿಭೂತಿ ಮಿಗೆ ಶೋಭಿಸುವದಯ್ಯ
ಆಸೆಯನತಿಗಳಿದು ಲೇಸದಿ ಕೂಡಯ್ಯ ॥ ೧ ॥

ಅಖಿಲ ವೇದಾಂತ ತರ್ಕ ಆಗಮಾತೀತನೆ ಬಾರೊ
ಮುಕುತಿ ರೂಪನೆ ಬಾರೊ ಮೋಹನಾಂಗನೆ ಬಾರೊ।
ಭಕುತಿ ಲೋಲನೆ ಬಾರೊ ಭವ್ಯ ಮೂರುತಿ-ಬಾರೊ
ಮುಖವ ತೋರುತ ನಿನ್ನ ಮಹಿಮೆಯ ಸಾರೊ ॥ ೨ ॥

ಮನವೆಂಬ ಮರ್ಕಟವ ಕಳಿಸುವೆನು ಹೊರಗೆ
ಚಿನುಮಯ ಕಾಂತನೆ ರೂಪ ತೋರಿಸು ಕೊನೆಗೆ ।
ಅನುಮಾನವಿಲ್ಲದೆ ಸನುಮತವಾಗು ಎನಗೆ
ಘನ ಸುರದುರ್ಗನಾಥ ಬಂದು ಕೂಡುವೆ ನಿನಗೆ ॥ ೩ ॥

೮. ವೇಂಕಟಾಪುರದ ಖೇಮಣ್ಣ (೧೮೫೦-೧೯೨೫)

ರಾಯಚೂರು ತಾಲೂಕಿನ ವೆಂಕಟಾಪುರದಲ್ಲಿ ಕ್ರಿ.ಶ. ೧೮೫೦ರಲ್ಲಿ ಖೇಮಣ್ಣನ ಜನನವಾಯಿತು. ಖೇಮಣ್ಣನವರ ಮನೆತನ ಪಾಂಚಾಳರದು. ಇವರ ಮನೆಯ ವೃತ್ತಿ ಅಕ್ಕಸಾಲಿಗ. ಖೇಮಣ್ಣನ ಮದುವೆ ಸಂಗಮ್ಮ ಎಂಬುವವರೊಡನೆ ಆಗಿತ್ತು. ಇವರಿಗೆ ಮೌನೇಶ ಎಂಬ ಹೆಸರಿನ ಮಗನಿದ್ದುದಾಗಿ ತಿಳಿಯುವುದು.

ಆಂಧ್ರಪ್ರದೇಶದಲ್ಲಿರುವ ಪೂಲಚಿಂತಿಯಲ್ಲಿ ಅದ್ವೈತ ಪರಂಪರೆಯ ಪೀಠವೊಂದಿದ್ದು ಈ ಪೀಠದ ಗುರುವು ಬಂಡೇ ಗುರು ಎಂಬುವವರಿದ್ದರು. ಇವರನ್ನು ಖೇಮಣ್ಣ ತನ್ನ ಗುರುಗಳಾಗಿ ಸ್ವೀಕರಿಸಿದುದಾಗಿ ತಿಳಿಯುವುದು. ಖೇಮಣ್ಣ ತನ್ನ ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆದು ಶಿವಾನುಭವಿಯಾದ. ಬರಬರುತ್ತ ಈತ ತತ್ವಪದಗಳನ್ನು ರಚಿಸತೊಡಗಿದ. ಈತ ಬರೆದ ನೂರಾರು ತತ್ವಪದಗಳಲ್ಲಿ ೮೧ ತತ್ವಪದಗಳನ್ನು "ವಿದೇಹ್ಯ ಕೈವಲ್ಯ ಸಾರಾಮೃತ"ವು ಎಂಬ ಶೀರ್ಷಿಕೆಯಲ್ಲಿ ಬಂಡಪ್ಪನವರು, ಹಾಗೂ ಶಾಂತ ಮೂರ್ತಿಗಳು ಪ್ರಕಟಿಸಿರುವರು.

ಖೇಮಣ್ಣ ಹಳ್ಳಿಗಾಡಿನ ಜನತೆಯೊಡನೆ ಬೆರೆತು ಲೋಕಾನುಭವವನ್ನು ಪಡೆದ. ರಾಯಚೂರು ಸುತ್ತಮುತ್ತಲಿರುವ ಪೂಲಚಿಂತಿ, ಕಡಬೂರು, ಗಣದಿನ್ನಿ, ಉಮ್ಮಡಗಿ, ಬಲ್ಲಟಗಿ, ಬಾಗಲವಾಡ ಮುಂತಾದ ಊರುಗಳನ್ನು ಸುತ್ತಿ ಜೀವನಾನುಭವವನ್ನು, ಲೋಕಾನುಭವವನ್ನು ಪಡೆದುಕೊಂಡ. ಬಂಡೇಶ, ಬಂಡೇಗುರು ಮುದ್ರಿಕೆಯನ್ನು ಹೊಂದಿದ ಈತನ ತತ್ವಪದಗಳು ತುಂಬ ಜನಪ್ರಿಯವಾಗಿವೆ. ಈತ ಕ್ರಿ.ಶ. ೧೯೨೫ರಲ್ಲಿ ವಿಧಿವಶನಾದ. ಈತನ ಸಮಾಧಿ ವೆಂಕಟಾಪುರದಲ್ಲಿದೆ. ಕ್ಷೇತ್ರಕಾರ್ಯಕ್ಕೆಂದು ನಾವು ಹೋದಾಗ ಈತ ವಾಸಿಸಿದ ಮನೆ, ಈತನ ಸಮಾಧಿಯನ್ನು ಚಿತ್ರಿಸಿಕೊಂಡು ಇಲ್ಲಿ ಸ್ಮಾರಕಗಳ ರೂಪದಲ್ಲಿ ನೀಡಿದೆ.



ವೆಂಕಟಾಪುರ ಗ್ರಾಮದ ತತ್ವಪದಕಾರ ಖೇಮಣ್ಣನು ವಾಸಿಸಿದ್ದ ಹಾಳು ಮನೆ / ಬಿದ್ದ ಮನೆಯ ಚಿತ್ರ, ವೆಂಕಟಾಪುರ, ತಾ – ರಾಯಚೂರು.



ವೆಂಕಟಾಪುರ ಗ್ರಾಮದ ತತ್ವಪದಕಾರ ಖೇಮಣ್ಣನು ವಾಸಿಸಿದ್ದ ಬಿದ್ದ ಮನೆಯ ಮುಂದೆ ಅವರ ಶಿಶುಮಕ್ಕಳಾದ ರಂಗಣ್ಣ ದಾಸನ ಪಲ್ಲಿ ಹಾಗೂ ಚಿನ್ನಾರೆಡ್ಡಿ ಯಾದವ ಅವರು ನಿಂತಿರುವ ಚಿತ್ರ, ವೆಂಕಟಾಪುರ, ತಾ – ರಾಯಚೂರು.



ರಾಯಚೂರು ತಾಲೂಕಿನ
ವೆಂಕಟಾಪುರದ ತತ್ವಪದಕಾರ
ಖೇಮಣ್ಣನವರ ಗದ್ದುಗೆಯ ಚಿತ್ರ.
[ಈ ಗದ್ದುಗೆಯು (ಸಮಾಧಿ)
ವೆಂಕಟಾಪುರ ಗ್ರಾಮದ
ಹೊರಗಿರುವ ಮರಿಗಂಗಪ್ಪನವರ
ಹೊಲದಲ್ಲಿದೆ] ವೆಂಕಟಾಪುರ,
ತಾ – ರಾಯಚೂರು.



ತತ್ವಪದಕಾರ ಖೇಮಣ್ಣನ ಗುರು
ಪೂಲ್‌ಚಿಂತಿ ತಾತನವರ
ಗರ್ಭಗುಡಿಯ ಒಳಚಿತ್ರ ಹಾಗೂ
ಗುರು ಪೂಲ್‌ಚಿಂತಿ ತಾತನವರ
ಕಂಚಿನ ಪ್ರತಿಮೆಯ ಚಿತ್ರ.
ವೆಂಕಟಾಪುರ,
ತಾ – ರಾಯಚೂರು.

ಈತನ ಕೆಲವು ತತ್ವಪದಗಳನ್ನು ಡಾ॥ ಬಸವರಾಜ ಸಬರದ ಅವರು ಸಂಗ್ರಹಿಸಿ ತಮ್ಮ ಹೈದರಾಬಾದ ಕರ್ನಾಟಕದ ತತ್ವಪದಗಳು ಕೃತಿಯಲ್ಲಿ ಪ್ರಕಟಿಸಿರುವರು. ಅವುಗಳಿಂದ ಇಲ್ಲಿ ಐದನ್ನು ಆಯ್ದು ಕೊಟ್ಟಿದೆ.

೧. ಆವ ಕುಲವಾದಡೇನಾತನೆ ಘನವೋ

ಆವಕುಲವಾದಡೇನಾತನೇ ಘನವೋ ।
ಜೀವ ಶಿವನೆಲೆ ತಿಳಿಸಿದಂಥವನೆ ಗುರುವೊ ॥ ಪ ॥

ಆರು ಚಕ್ರದ ಸ್ಥಲವು ಮೂರು ಲಿಂಗಾದಿರವು ।
ಮೂರು ಲಕ್ಷದ ಕುರುಹು ತನ್ನೊಳಗಿನರುವು ।
ಮೂರೈದು ಅಕ್ಷರಕೆ ಮೂಲ ಅಕ್ಷರವೇ ಮುಕ್ತಿ ।
ಮಾರ್ಗದಿರಲಾತನೇ ಗುರುವು ॥ ೧ ॥

ಅಂಗಗುಣಗಳ ಅಳಿಸಿ ಲಿಂಗದೇಹದಿ ನಿಲಿಸಿ ।
ಗಂಗೆ ಯಮುನೆ ನದಿಯ ಸ್ನಾನಗೈದು ।
ಶೃಂಗಾರವಾದಂತ ರಂಗು ಪೀಠದಿ ನಿಜ ।
ಲಿಂಗ ಪದವಿಯು ತೋರಿದಾತನೆ ಗುರುವು ॥ ೨ ॥

ಸ್ಥೂಲತನುಗಳ ವಿವರ ಸೂಕ್ಷ್ಮ ಸಾಂಖ್ಯವಿಚಾರ ।
ಫಾಲಭಾಗದಲಿರುವ ಪಶ್ಚಿಮದ್ವಾರಾ ।
ನೀಲ ಸುನೀಲ ಶುದ್ಧ ಸ್ಥಟಿಕ ತೇಜದಿ ಬೆರಸಿ ।
ಕಾಲ ಕರ್ಮವ ಕೆಡಸಿದಾತನೆ ಗುರುವು ॥ ೩ ॥

ನಾದು ಬಿಂದು ಕಳೆದೋರಿ ಆದಿ ಅಂತ್ಯವನರುಹಿ ।
ಸಾಧಿಸೋ ನಿಜಬೊಧೆ ಗುರಿಯನು ಸಾರಿ ।
ಮೋದುವ ದಶವಿಧ ನಾದದೀಮನಗೊಳಿಸಿ ।
ವಾದ ಭೇದವು ಬಿಡಿಸಿದಾತನೆ ಗುರುವು ॥ ೪ ॥

ಮಂಡಲ ತ್ರಯವನು ಅಂಡಪಿಂಡಾಂಡವನು ।
ಕುಂಡಲಿ ಕುಟಿರದೋಳ್ ಬ್ರಹ್ಮಾಂಡವಿನ್ನೂ ।
ಥಂಡಥಂಡೋ ಪಾಖಂಡ ಮೂರ್ತಿ ಬಂಡೇಶನಾ ।
ಖಂಡಿತದಿ ತೋರಿದಂಥವನೇ ಗುರುವು ॥ ೫ ॥

೨. ಮೂರು ಕಾಲಿನ ಪಕ್ಷಿ

ಮೂರು ಕಾಲಿನ ಪಕ್ಷಿ ಮುಗಲ ಮ್ಯಾಲಿರುತಿಹುದು ಕೇಳಿರಣ್ಣಾ ।
ಮೂರು ಕಾಲಿಗೆ ಆರು ಪ್ರತಿಕಾಲುಗಳಿರುವ್ಹೋವು ನೋಡಿರಣ್ಣಾ ॥ ಪ ॥

ಯರಡಾರು ಡಿಂಬಗಳು ಬಿಂಬವಂದನು ಅದಕೆಯಿರುವದಣ್ಣಾ ।
ಯರಡೆಂಟು ಯೇಳೊಂದು ನಖದಿಂದೆರಡಾದ ಮಧ್ಯೆನಿಂತಾದಣ್ಣಾ ॥ ೧ ॥

ಪಕ್ಕಗಳು ಪಕ್ಷೀಗೆ ಮೂರೆಂಟು ಯಿರುತಿಹವು ನೋಡಿರಣ್ಣಾ ।
ಪಕ್ಕಪಕ್ಕರೆ ಯೆಂಟೇಳ್ ಚುಕ್ಕೆಗಳು ಲೆಕ್ಕಾದಿಂದಿರುವ್ಹೋವಣ್ಣಾ ॥ ೨ ॥

ರೆಕ್ಕೆಗಳು ಮುನ್ನೂರು ಅರವತ್ತು ಇರುತಿಹವೊ ಪಕ್ಷಿಗಣ್ಣಾ ।
ರೆಕ್ಕೀಗೆ ಅರವತ್ನಾಲ್ಕು ತೆತ್ತೀಸಕೊಟೀಯೆಸಳವಣ್ಣಾ ॥ ೩ ॥

ಗರಿಗಾಳಿಪ್ಪತ್ತೇಳು ಮತ್ತೆ ಮೂರೊಂಬತ್ತು ವರ್ಣವಣ್ಣಾ ।
ಗರಿಗಾಳ್ ಕೂಡಿಸಿ ಗುಣಿಸಿಬಾಗಿಸಿದರನ್ನೆರಡು ವಳವ್ಹೋವಣ್ಣಾ ॥ ೪ ॥

ಆರೊಂದು ವಾರುಧಿ ಧರಿಸುತ್ತ ಚರಿಸುವದು ನೋಡಿರಣ್ಣಾ ।
ಆರೈದು ಕರುಣಾದಿ ಅತಿಗೋಪ್ಯಾನಂದಾದಿಂದಿರುಫೋದಣ್ಣಾ ॥ ೫ ॥

ಬೆಂಕೀಯ ತಿಂದು ತಾ ಘಾಳಿ ಕುಡದು ನೀರೊಳಗಿರೋದಣ್ಣಾ ।
ಝೋಂಕಾರ ಸ್ವರದಿಂದ ಝುಗ್ಗಿ ಭೋರ್ಗರಿವುತಾ ಯಿರುವ್ಹೋದಣ್ಣಾ ॥ ೬ ॥

ಸಾವು ಹುಟ್ಟು ಎರಡಿಲ್ಲ ದಿವರಾತ್ರಿ ಮೊದಲಿಲ್ಲಾ ಬಯಲೆ
ನಿರ್ಬಯಲೋಳಣ್ಣಾ ।
ಸಾಕ್ಷ್ಯಾಗಿ ಲೋಕೆಲ್ಲಾ ಸಹ್ಮಾರಮಾಡಿನ್ನು ಸಲಹೋದಣ್ಣಾ ॥ ೭ ॥

ಕುಂತಿಲ್ಲ ನಿಂತಿಲ್ಲ ಯೆದ್ದಿಲ್ಲ ಮಲಗಿಲ್ಲಾ ಕೇಳಿರಣ್ಣಾ ।
ಭ್ರಾಂತಿಮಾಯರಿಗಿದರ ಅಂತು ತಿಳಿಯದೆ ತಾನಿರುವ್ಹೋದಣ್ಣಾ ॥ ೮ ॥

ಅರವತ್ತು ವರುಷಾಂತ ಹಿರಿಯರಿಗೆ ಅರ್ಥ ಅರಿವ್ಹೋದಣ್ಣಾ ।
ಅರವತ್ತು ವರುಷ ಇಲ್ಲದ ಮಾನ್ವರಿಗೆ ಅರ್ಥಾ ಆಗದಣ್ಣಾ ॥ ೯. ॥

ವಗಟು ಅಂದಿರಿ ನೀವು ವಗಟು ಅಲ್ಲವು ಇದವು ಕೇಳಿರಣ್ಣಾ ಆತ್ಮಾ ।
ತೊಗಟಿ ತೆಗೆದು ನಿಗಮಾಗಮ ಫಲದಿಂದೆ ನುಡಿದೆನಣ್ಣಾ ॥ ೧೦ ॥

ಬಂಡೇ ಗುರುಕರುಣಾ ಕಂಡೊಪ್ಪು ಹೇಳಿದೆನೊ ಮುಂದಿಗಣ್ಣಾ ।
ಮಂಡೆ ಬಾಗಿರುವೆನು ಖಂಡೀತ ಶರಣರಿಗೆ ಕೇಳಿರಣ್ಣಾ ॥ ೧೧ ॥

೩. ರವಿ ಚಂದ್ರ ಪುರದಲ್ಲಿ

ರವಿಚಂದ್ರಪುರದಲ್ಲಿ ಶಾವಂತುವ್ವಿನ ವೃಕ್ಷಾಯಿರುವೋದಣ್ಣಾ । ಮಹಾ
ಶಿವಜೀವರಿಬ್ಬಾರು ಕಾವಲಿಯಿರುತಿಹರೂ ನೋಡಿರಣ್ಣಾ ॥ ಪ ॥

ಕೊಂಬೆಗಳು ಗಿಡಕೆರಡು ಅಂಬಾರ ಪರಿಯಂತ್ರಾ ಬೆಳೆದವಣ್ಣಾ । ಮತ್ತೆ
ಕೊಂಬೆ ಕೊಂಬಿಗೆ ಯಲಿಗಾಳಿಂಬಾಗೆರಡದಿನಾ ಯಿರುವೋದಣ್ಣಾ ॥ ೧ ॥

ಥಳಥಳಿಸುತ ಪಂಚವರ್ಣಾಗಿಳಿಗಳೈದು ಕುಂತಾವಣ್ಣಾ । ಯಿನ್ನು
ಗಿಳಿಗಾಳ ಮಹಿಮಾವು ಹೇಳಾಲಿಕ್ಕಳವಲ್ಲ ತಿಳಿದ್ಹೇಳಣ್ಣಾ ॥ ೨ ॥

ಪಶ್ಚಿಮ ದೇಶದಲಿಂದಾಶ್ವರ್ಯ ಪಕ್ಷೊಂದು ಬಂದಿತಣ್ಣಾ । ಯದ್ದ
ಪಕ್ಷಿಗಲ್ಲಿಡದು ತಾ ಭಕ್ಷೀಸ ಬಿಟ್ಟೀತೊ ಯಂಥದಣ್ಣಾ ॥ ೩ ॥

ಕರ್ಪೂರ ಬಣ್ಣಾದ ಸರ್ಪಗಿಡದಡಿಯಲ್ಲೀಯಿರ್ಪೂದಣ್ಣಾ । ಅದರ
ದರ್ಪಕ್ಕೆ ಧರೆನಡಿಗಿ ಧೈರ್ಯಸಾಲದೆ ತ್ರಿಪುರಾಕೂರ್ಪಿತಣ್ಣಾ ॥ ೪ ॥

ಅಂಗಾಗುಣಗಳು ಬಿಟ್ಟು ಜಂಗಾಮಸ್ಥಾನವು ತಿಳಿಯಿರಣ್ಣಾ । ಗುರು
ಲಿಂಗಬಂಡೇಶನ ಸಂಗವಾಯಿತು ಎನಗೆ ಕೇಳಿರಣ್ಣಾ ॥ ೫ ॥

೪. ಗಾಂಜಿ ಸೇದಬೇಕೋ

ಗಾಂಜಿಸೇದಬೇಕೋ ಮನವು ನಿರಂಜನದಿರಬೇಕೋ ।
ಗಾಂಜಿಸೇದಬೇಕು ಅಂಜನ ಗವಿಯೊಳು ।
ಮಂಜಿನ ಮನೆಯಲ್ಲಿ ರಂಜನೆಯಿಂದಲಿ ॥ ಪ ॥

ಬೀಜ ಆಯಬೇಕೊ ।
ಬೀಜದ ನಿಜವನರಿಯಬೇಕೊ ।
ಬೀಜ ಆಯಬೇಕು ಸೂಜನಸಂಗದಿ ।
ಮೂಜಗದೊಡೆಯನ ಮೂಲ ತಿಳಿದು ಘನ ॥ ೧ ॥

ಹದಾಮಾಡಬೇಕೋ ಅದರಾ ।
ಸ್ವಾದವು ಸವಿಬೇಕೋ ।
ಹದಾ ಮಾಡಬೇಕು ಆರು ಅರಿಯದಂತೆ ।
ಸದಾಚಾರದಿಂದ ಮದಾ ಕ್ರೋಧಬಿಟ್ಟು ॥ ೨ ॥

ಕಡ್ಡಿ ಅರಸಬೇಕೋ ಕಾಯದ ಕರ್ಮವು ಕಳಿಬೇಕೋ ।
ಕಡ್ಡಿ ಅರಸಬೇಕು ಕಣ್ಣಲಿ ನೋಡುತ ।
ಅಡ್ಡ ಬರದಂತೆ ಇರಬೇಕೊ
ಅಡ್ಡಿಯಿಲ್ಲದೆ ಆತ್ಮದೆನಿಂತೊ ॥ ೩ ॥

ಸೊಂಗೆ ತುಂಬಬೇಕೊ ।
ಸೊಂಗೆದ ಸೊಡಕನರಿಯಬೇಕೊ ।
ಸೊಂಗೆ ತುಂಬಬೇಕು ಸೊಬಗಿನಂದಲಿ ।
ಅಂಗದೊಳಗೆ ಮಹಲಿಂಗನ ನೆನವೂತಾ ॥ ೪ ॥

ಬೆಂಕಿಯೇರಬೇಕೊ ।
ಬಿಂಕದ ಬಿರಿನುಡಿ ಬಿಡಬೇಕೊ ।
ಬೆಂಕಿಯೇರಬೇಕು ಶಂಕರಧ್ಯಾನದಿ ।
ಓಂಕಾರ ಬಂಡೆಗುರುವಾಂಕಿತದಿಂದಲಿ ॥ ೫ ॥

೫. ಯಾವೂರು ಅಂದರೆ ಯೇನೇಳಲಯ್ಯಾ

ಯಾವೂರು ಅಂದರೆ ಯೇನೇಳಲಯ್ಯಾ ।
ಯಲ್ಲವೂರುಗಳೆಲ್ಲ ನಮವೇ ನೋಡಯ್ಯಾ ॥ ಪ ॥

ಹುಟ್ಟು ಹುಟ್ಟಿದವೂರು ಹುಟ್ಟು ಅಳಿವಂತೂರು ॥
ಘಟ್ಟಿಗಾಶೃಷ್ಟಿಯೊಳು ಶ್ರೇಷ್ಠವಾದೂರು ।
ಅಷ್ಟದಳಮಧ್ಯದಲಿ ದ್ರಿಷ್ಟಿಗೋಚರವಾದ ।
ಬಟ್ಟಬಯಲೇ ಬಯಲು ಅದೇ ನಮ್ಮವೂರು ॥ ೧ ॥

ಯೆಂಟು ಕೋಟಿಗಳಿಂದ ಯೆಂಟು ವಿಧಿಗಳಿಂದ ।
ಯೆಂಟು ಸ್ತಂಭಗಳಿಂದ ಜಂಟೆವಾದೂರು ।
ಯೆಂಟೆರಡು ಕಳಿಯದೋಳ್ ಮೇಲು ಮಂಟಪದಲ್ಲಿ ।

ಘಂಟೆ ಶಬ್ದಾಗುವದೇ ಅದೇ ನಮ್ಮವೂರು ॥ ೨ ॥
ಆರು ಅಗಳ್ತಿಯವೂರು ಆರು ವರ್ಣದವೂರು ।
ಆರು ಮತದವರಿಗೆ ಸೇರಿಕೊಂಡರೂ ।
ಭೇರಿ ನಾದದಲಿಂದ ದ್ವಾರ ಪಶ್ಚಿಮದಲ್ಲಿ ।
ಮೂರು ಮೂರ್ತಿಗಳಿರುವೊ ಅದೇ ನಮ್ಮವೂರು ॥ ೩ ॥

ಪಾಪಮಧ್ಯದಿವೂರು ಪಾಪಕಳಿಯೋವೂರು ।
ತಾಪಮನುಜರಿಗೆಲ್ಲ ಗೋಪ್ಯಯೀವೂರು ।
ಪಾಪವಳಪಾಪಿನಲಿ ದೀಪರೂಪಕನಾಗಿ ।
ದಿವ್ಯದಿಂಬೆಳಗುವದೆ ಅದೇ ನಮ್ಮವೂರು ॥ ೪ ॥

ಮಂಡಲತ್ರಯವೂರು ಅಂಡಾಬ್ರಹ್ಮಾಂಡೂರು ।
ದಂಡುಕೋಟೆಯವೂರು ಖಂಡಿತಾವೂರು ।
ಕುಂಡಲಿಯ ಕುದುರಿನೋಳ್ ತಾಂಡವಾಡುವಂತ ।
ಬಂಡೆ ಗುರುವಿರುವದೇ ಅದೇ ನಮ್ಮವೂರು ॥ ೫ ॥

೯. ಹೊಸಪೇಟೆಯ ಅಯ್ಯಪ್ಪ ಪಂಥೋಜಿ
೧೮೫೨ – ೧೯೨೩

ರಾಯಚೂರು ತಾಲೂಕಿನ ಹೊಸಪೇಟೆ ಎಂಬ ಗ್ರಾಮದಲ್ಲಿ ಕ್ರಿ.ಶ. ೧೮೫೨ರಲ್ಲಿ ಅಯ್ಯಪ್ಪ ಪಂಥೋಜಿಯವರ ಜನನವಾಯಿತು. ಮಡಿವಾಳ ಮನೆತನದಲ್ಲಿ ಜನಿಸಿದ ಅಯ್ಯಪ್ಪ ಗೊಬ್ಬೂರು ಹಂಪಣ್ಣನ ಶಿಷ್ಯನಾಗಿದ್ದ. ಅಯ್ಯಪ್ಪ ಬರಬರುತ್ತ ಅಧ್ಯಾತ್ಮದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡ. ಈತ ಕೆಲಕಾಲ ಶಾಲಾ ಶಿಕ್ಷಕನಾಗಿಯೂ ಕೆಲಸ ಮಾಡಿದ. ಈತನ ಮದುವೆ ರಂಗಾಪುರದ ಬಸಮ್ಮನೊಡನೆ ಆಗಿತ್ತು. ಇಪ್ಪತ್ತು ವರ್ಷಗಳ ಕಾಲ ಶಿಕ್ಷಕನಾಗಿ ರಾಯಚೂರ ಜಿಲ್ಲೆಯ ಹೆಂಬೇರಾಳು, ತಿಮ್ಮಾಪೂರ, ಬಸವಂತಪುರ, ಮುಂತಾದ ಊರುಗಳಲ್ಲಿ ಕಾರ್ಯನಿರ್ವಹಿಸಿದ. ಮುಂದೆ ಈತನಿಗೆ ಬರಬರುತ್ತ ಸಂಸಾರದಲ್ಲಿ ನಿರಾಸಕ್ತಿ ಮೂಡಿತು. ಈತನಿಗೆ ಒಂದು ಗಂಡು, ಎರಡು ಹೆಣ್ಣು ಮಕ್ಕಳು ಇದ್ದುದಾಗಿ ತಿಳಿದು ಬರುವುದು. ಹೊಸಪೇಟೆಯಲ್ಲಿ ಈಗಲೂ ಈತನ ವಂಶಸ್ಥರಿರುವುದನ್ನು ಗುರುತಿಸುವೆವು.

ಅಯ್ಯಪ್ಪನಿಗೆ ನಡು ವಯಸ್ಸಿನಲ್ಲಿಯೇ ವೈರಾಗ್ಯ ಭಾವ ಮೂಡಲು ಆತ ಹೊಸಪೇಟೆಯನ್ನು ತ್ಯಜಿಸಿ ಹೆಂಬೇರಾಳಿನ ಸಮೀಪ ಇರುವ ಸುಟ್ಟಮಾಗಿ ಹಳ್ಳಿಯಲ್ಲಿ ಒಂದು ಆಶ್ರಮ ಮಾಡಿಕೊಂಡು ವಾಸಿಸತೊಡಗಿದ. ಇದೇ ವೇಳೆಗೆ ಆತನಿಗೆ ಗೊಬ್ಬೂರು ಹಂಪಣ್ಣನ ದರ್ಶನವಾಗಲು, ಆತನಿಂದ ಅನುಗ್ರಹ ಪಡೆದುದಾಗಿ ತಿಳಿದು ಬರುವುದು. ಗುರು ಗೊಬ್ಬೂರು ಹಂಪಣ್ಣ ಅಯ್ಯಪ್ಪನಿಗೆ ತಿಳಿಹೇಳಿ ಮತ್ತೆ ಸಂಸಾರಿಯಾಗಿ ಬಾಳು ಎಂದು ಹೇಳುವನು. ಗುರುವಿನ ಮಾತಿನಂತೆ ಪುನಃ ಅಯ್ಯಪ್ಪ ಸಾಂಸಾರಿಕ ಜೀವನ ಸಾಗಿಸುವನು. ಉಪಜೀವನಕ್ಕಾಗಿ ರಾಯಚೂರಿನ ಪತ್ಯಾಪುರದ ಅಡತಿ ಅಂಗಡಿಯೊಂದರಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ಸೇರಿಕೊಳ್ಳುವನು.

ಅಯ್ಯಪ್ಪನು ಬಹುಮುಖ ಆಸಕ್ತಿಯ ವ್ಯಕ್ತಿ. ಬಯಲಾಟದಲ್ಲೂ ಕೆಲಕಾಲ ಪಾತ್ರ ವಹಿಸಿದ. ತತ್ವಪದಗಳನ್ನು ಕಟ್ಟಿದ. ಭಜನೆಯ ಸಂದರ್ಭದಲ್ಲಿ ಜನ ಈತನ ತತ್ವಪದಗಳನ್ನು ಹಾಡತೊಡಗಿದರು. 'ಪಂಪಾಪತಿ' ಅಂಕಿತದಲ್ಲಿ ರಚಿಸಿದ. ಈತನ ತತ್ವಪದಗಳ ಸಂಗ್ರಹಕಾರ್ಯವಿನ್ನೂ ನಡೆದಿಲ್ಲ. ಈತ ಹೊಸಪೇಟೆಯಲ್ಲಿ ವಾಸವಾಗಿದ್ದ ಮನೆಯ ಚಿತ್ರವನ್ನಿಲ್ಲಿ ಸ್ಮಾರಕದ ರೂಪದಲ್ಲಿ ನೀಡಿದೆ.



ರಾಯಚೂರು ತಾಲೂಕಿನ ಹೊಸಪೇಟೆಗ್ರಾಮದ ತತ್ವಪದಕಾರ ಅಯ್ಯಪ್ಪ ಪಂಥೋಜಿಯವರು ವಾಸಿಸಿದ್ದ ಮನೆಯ ಚಿತ್ರ , ಹೊಸಪೇಟೆ.



ತತ್ವಪದಕಾರ ಅಯ್ಯಪ್ಪ ಪಂಥೋಜಿ ವಾಸಿಸಿದ್ದ ಪಕ್ಕದ ಮನೆಯ ಅವರ ಸಮೀಪದ ಸಂಬಂಧಿಕರಾದ ರಾಜಶೇಖರ ಅವರು ತಮ್ಮ ಮನೆ ಮುಂದೆ ನಿಂತ ಚಿತ್ರ. ಹೊಸಪೇಟೆ. ತಾ – ರಾಯಚೂರು.

ಈತ ಬರೆದ ತತ್ವಪದಗಳಲ್ಲಿ ಒಂದನ್ನು ಸಂಗ್ರಹಿಸಿದ ಡಾ. ಬಸವರಾಜ ಸಬರದ ಅವರ "ಹೈದರಾಬಾದ ಕರ್ನಾಟಕದ ತತ್ವಪದಗಳು" ಕೃತಿಯಿಂದ ಆಯ್ದು ಕೊಟ್ಟಿದೆ.

೧. ನೋಡಿದೆನು ಕೈಲಾಸವನು

ನೋಡಿದೆನು ಕೈಲಾಸವನು । ನಾ
ಹಾಡಿದೆನು ಶಿವನಾಮವನು ॥ ಪ ॥

ನೋಡಿದೆ ಕೈಲಾಸಪುರವ । ಅಲ್ಲಿ
ರೂಢಿಗೀಶ್ವರನ ಮಂದಿರವ । ಮಾಂತ
ರಾಡುವ ನಲಿವ ಸಂಭ್ರಮವ । ಬಂದು
ಕೂಡುವ ಸತಿಯರೊಯ್ಭವವ । ವರ
ಈಡಪಿಂಗಳ ನಡುನಾಡಿ ಗೂಡಿನೊಳು
ಗಾಢದಿಂದುನ್ಮನಿ ಚೌಕು ಮಧ್ಯದೊಳು ॥ ೧ ॥

ಮೂರು ಮೂರ್ತಿಗಳ ತಾಣವನು । ಸಣ್ಣ
ದ್ವಾರದೊಳ್ ಹೊಕ್ಕು ನೋಡಿದೆನು । ಸುರ
ನರ ದಾದಿಗಳ ಗಾನವನು । ಮನ
ಸೂರೆಗೊಂಡಿತು ಹೇಳೆನದನು । ಇತ್ತ
ಬಾರದಾದವು ಪ್ರಾಣ ಮಾರುತನು । ಅತ್ತ
ಭೇರಿ ಗಂಟೆಯ ನಾದ ನಿಂತು ಹೋದುದ ॥ ೨ ॥

ಸಾಲು ಮುತ್ತಿನ ಗೊಂಚಲುಗಳ । ವಜ್ರ
ಕೀಲಿ ವೈಭವದ ಸ್ತಂಭಗಳ । ದೀಪ್ತಿ
ಮೇಳೈಸಿ ಮೆರೆವ ಭಿತ್ತಿಗಳ । ಅಲ್ಲಿ
ಮೇಲಾದ ಪಟ ಝಲ್ಲಿಗಳ । ನಡುವೆ
ಮೂಲ ಪ್ರಣವ ಪೀಠದೋಲೈಸಿ । ಕುಳಿತಿರುವ
ಕಾಲ ಕಾಲನು ದಿವ್ಯ ಲೀಲೆಯಲಿ ಪೊಳೆಯುಃವದ ॥ ೩ ॥

ಕಂಗಳ ಮಧ್ಯದ ಸ್ಥಾನ । ಧವ
ಳಾಂಗನ ಸನ್ನುತ ಸದನ । ಅಲ್ಲಿಲಿಂ
ಗಾಂಗ ಸಮರಸ ಕೂನ । ಮುಕ್ತಿ
ಯಾಂಗನೆಗೈವ ಬಹುಮಾನ । ಭವ
ಭಂಗ ಗುರು ಪಂಪಾಪತಿಯ ಪಾದವ ಕಂಡು
ಹಿಂಗದೆ ನರಜನ್ಮ ಭಂಗ ಬರುವ ಮುನ್ನ ॥ ೪ ॥

೧೦. ದಿನ್ನಿಯ ತಾಳಪಲ್ಲಿ ವೆಂಕಯ್ಯ (೧೮೫೮-೧೯೨೫)

ಕ್ರಿ.ಶ. ೧೮೫೮ರಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹೊಕ್ರಾಣಿ ಎಂಬ ಊರಿನಲ್ಲಿ ವೆಂಕಯ್ಯ ಜನಿಸಿದ. ವೈಶ್ಯಮನೆತದಲ್ಲಿ ಹುಟ್ಟಿದ ವೆಂಕಯ್ಯನು ರಾಗಲಪರ್ವಿ ಬಸಯ್ಯನನ್ನು ತನ್ನ ಗುರುವಾಗಿಸಿಕೊಂಡ. ವೈಶ್ಯನಾದರೂ ವೆಂಕಯ್ಯ ತನ್ನ ಗುರುವಿನಿಂದ ವೀರಶೈವ ತತ್ವಗಳನ್ನು ಅರಿತುಕೊಂಡು ವೀರಶೈವ ಸಾಹಿತ್ಯದ ಪ್ರಭಾವಕ್ಕೊಳಗಾದನು. ಮುಂದೆ ಆತ ಜನಿಸಿದ ಹೊಕ್ರಾಣಿಯನ್ನು ತ್ಯಜಿಸಿ ರಾಯಚೂರ ತಾಲೂಕಿನ ದಿನ್ನಿ ಗ್ರಾಮಕ್ಕೆ ಬಂದು ನೆಲೆನಿಂತ. ವೆಂಕಯ್ಯ ಸಂಸಾರಿಯಾಗಿದ್ದ. ಆತನಿಗೆ ಹನುಮಂತಯ್ಯ ಶೆಟ್ಟಿ ಹಾಗೂ ಭೀಮಯ್ಯ ಶೆಟ್ಟಿ ಎಂಬ ಇಬ್ಬರು ಗಂಡು ಮಕ್ಕಳಾದರು. ವೈಶ್ಯಧರ್ಮದಲ್ಲಿ ಜನಿಸಿದರೂ ವೆಂಕಯ್ಯ ವೀರಶೈವ ತತ್ವಗಳನ್ನು ಮೈಗೂಡಿಸಿಕೊಂಡು ಬೆಳೆದ. ಆತ ಬರಬರುತ್ತ ಅನೇಕ ತತ್ವಪದಗಳನ್ನು ರಚಿಸಿದ. ತತ್ವಪದಗಳ ಜೊತೆಗೆ ಆತ ಭಾಮಿನಿ ಷಟ್ಪದಿಯಲ್ಲಿ "ಗುಡಗುಂಟಿ ಅಮರೇಶ್ವರ ಪುರಾಣ"ವನ್ನು ಬರೆದುದಾಗಿಯೂ ತಿಳಿದುಬರುವುದು. ಆತ ಒಬ್ಬ ಅನುಭಾವಿ ಕವಿಯಾಗಿ, ಪುರಾಣಕಾರನಾಗಿ ಪ್ರವಚನಕಾರನಾಗಿ ತುಂಬ ಪ್ರಸಿದ್ಧಿಯನ್ನು ಪಡೆದನು. ಈತ ವೈಶ್ಯಕುಲಭೂಷಣ ಎಂಬ ಪ್ರಶಸ್ತಿಗೂ ಭಾಜನನಾಗಿದ್ದ. ವೆಂಕಯ್ಯ 'ದಿನ್ನಿ'ಯಲ್ಲಿಯೇ ೧೯೨೫ರಲ್ಲಿ ನಿಧನನಾದ. ಈತನ ಸಮಾಧಿಯು ಈ ಊರ ಹೊರಗಿದೆ. ಇಲ್ಲಿ ಈತ ವಾಸಿಸಿದ ಮನೆ ಈತನ ವಂಶಜರು ಹಾಗೂ ಈತನ ಸಮಾಧಿ, ಚಿತ್ರಿಸಿ, ಸ್ಮಾರಕದ ರೂಪದಲ್ಲಿ ಇಲ್ಲಿ ಕೊಟ್ಟಿದೆ.




ದಿನ್ನಿ ಗ್ರಾಮದ ತತ್ವಪದಕಾರ ತಾಳಪಲ್ಲಿ ವೆಂಕಯ್ಯನವರ ಭಾವಚಿತ್ರ, ದಿನ್ನಿ, ತಾ – ರಾಯಚೂರು.



ರಾಯಚೂರು ತಾಲೂಕಿನ ದಿನ್ನಿ ಗ್ರಾಮದ ತತ್ವಪದಕಾರ ತಾಳಪಲ್ಲಿ ವೆಂಕಯ್ಯನವರು
ವಾಸವಾಗಿದ್ದ ಮನೆಯ ಚಿತ್ರ. ದಿನ್ನಿ, ತಾ – ರಾಯಚೂರು.



ರಾಯಚೂರು ತಾಲೂಕಿನ ದಿನ್ನಿ ಗ್ರಾಮದ ತತ್ವಪದಕಾರರಾದ ಶ್ರೀ ತಾಳಪಲ್ಲಿ ವೆಂಕಯ್ಯನವರ
ಸಮಾಧಿ ಚಿತ್ರ. ದಿನ್ನಿ, ತಾ – ರಾಯಚೂರು.



ದಿನ್ನಿ ಗ್ರಾಮದ ತತ್ವಪದಕಾರ ತಾಳಪಲ್ಲಿ ವೆಂಕಯ್ಯನವರ ಮೊಮ್ಮಗನಾದ ಶ್ರೀನಿವಾಸಶೆಟ್ಟಿ ಹಾಗೂ ಅವರ ಕುಟುಂಬ ಸದಸ್ಯರ ಚಿತ್ರ.

ವೆಂಕಯ್ಯ ತನ್ನ ತತ್ವಪದಗಳಿಗೆ "ಬೋಳಬಸವ" "ನಗರೇಶ" ಎಂಬ ಅಂಕಿತಗಳನ್ನು ಇರಿಸಿಕೊಂಡುದು ವಿದಿತವಾಗುವುದು. ಕೋಮು ಸೌಹಾರ್ದತೆ, ಪರಧರ್ಮ ಸಹಿಷ್ಣುತೆಗೆ ಈತನ ತತ್ವಪದಗಳು ಒಳ್ಳೆಯ ಉದಾಹರಣೆಯಾಗಿವೆ. ಈತನ ತತ್ವಪದಗಳ ಸಂಗ್ರಹ ಕಾರ್ಯವಿನ್ನೂ ನಡೆದಿಲ್ಲ. ಡಾ. ಬಸವರಾಜ ಸಬರದ ಅವರು ಈತನ ಕೆಲ ತತ್ವಪದಗಳನ್ನು ತಮ್ಮ "ಹೈದರಬಾದ ಕರ್ನಾಟಕದ ತತ್ವಪದಗಳು" ಕೃತಿಯಲ್ಲಿ ಸಂಗ್ರಹಿಸಿದ್ದು, ಆ ಕೃತಿಯಿಂದ ಆಯ್ದು ಇಲ್ಲಿ ಎರಡು ತತ್ವಪದಗಳನ್ನು ಕೊಟ್ಟಿದೆ.

೧. ಭಜನೆ ಮಾಡಿರಿ ವಿಜಯ ಸಾರಥಿಯ

ಭಜನೆ ಮಾಡಿರಿ ವಿಜಯ ಸಾರಥಿಯ
ಭರದಿ ಎನ್ನ ಪೊರೆದ ಮೂರುತಿಯ ।
ಅಜಮೇಳನಿಗೊಲಿದ ಶ್ರೀಪಥಿಯ
ರಜಕ ತುಚ್ಛ ಪಾದಗಳ ಸ್ತುತಿಯ ॥ ಪ ॥

ಡಕ್ಕೆ ತಾಳ ಪೇಟಿ ಸ್ವರ ಕೂಡಿ
ಬಲು ಅಕ್ಕರದಿಂದಲಿ ರಾಗವ ಮಾಡಿ ।
ಗಕ್ಕನೆ ಸಂಗೀತಗಳನು ಪಾಡಿ
ನಮ್ಮ ರಕ್ಕು ಸಾಂತಕನ ಕೊಂಡಾಡಿ ಪಾಡಿ ॥ ೧ ॥

ನಾವು ಬಂದು ಎಲ್ಲರೊಂದುಗೂಡಿ ಗುಡಿಗೆ
ಆನಂದದಿಂದ ವಂದಿಸಿ ದೇವರಡಿಗೆ ।
ಸಂದೇಹಗೊಳ್ಳಬೇಡಿರಿ ಈ ನುಡಿಗೆ
ಗೋವಿಂದನೊಲಿದು ಪೊರೆವನು ಕಡಿಗೆ ॥ ೨ ॥

ಸನ್ನು ತಾವರೆ ದಿನ್ನಿಯ ವೆಂಕಟರಮಣ
ಇರುವ ತನ್ನ ಭಕ್ತರ ಮೇಲೆ ದಯಾಪೂರ್ಣ ।
ಎನ್ನ ಭಿನ್ನಪ ಮನ್ನಿಸಿ ಮಾಡಿರಿ ಕರುಣ ।
ನಿಮ್ಮನ್ನು ಪೊರೆವನು ಹರಶಿವನು ಭರಣ ॥ ೩ ॥

೨. ಭಜನೆ ಮಾಡಿರಿ ಬಸವನ

ಭಜನೆ ಮಾಡಿರಿ ಬಸವನ ಭಜನೆ ಮಾಡಿರಿ
ಭಜನೆ ಮಾಡಿರಿ ಭವವೀಡಾಡಿರಿ ।
ಸುಜನ ಬಾಂಧವ ತ್ರಿಜಗಭರಿತನೆಂದು ॥ ಪ ॥

ಸಾಲಿ ಓದುವ ಕಾಲದಲಿ ಸರ್ವಬಾಲರೆಲ್ಲರೂ ಬಾವಿದಂಡೆಯ
ಮೇಲೆ ಇರುತಿರೆ ಯುವಕನೋರ್ವನು ।
ಕಾಲವಾದೊಡೆ ಕರುಣೆಯಿಂದಲಿ ಕೈ ಮುಗಿದು ಕೇಳಿರಿ ॥ ೧ ॥

ನಾರಿ ಗೊಲ್ಲತಿ ಮಾರುತಿರೆ ಹಾಲನು ಭಾರಿ ಮಳೆ ಬರಲು
ಜಾರಿ ಕಾಲುಗಳ ಕಾರಣಾತ್ಮಕ ಬಸವನೆಂದೆನಲು ।
ಕ್ಷೀರ ಗಟ್ಟಿಡಿದು ಉದ್ಧಾರ ಮಾಡಿದನವನು ॥ ೨ ॥

ಚಾರುಮಂಗಲವಾಡ ಪುರದಲಿ ಭಾರಿಗರ್ವವ ಭಂಗಿಸಿ
ಧಾರುಣಿಯ ಪುಷ್ಕರಣಿಪ ಕರುಣಸಂತತ ।
ವಾರುಧಿವರ ಗುರುಚರಣ ಬೋಳು ಬಸವನ ॥ ೩ ॥

೧೧. ಬಳಗಾನೂರು ಮರಿಸ್ವಾಮಿ (೧೮೬೫–೧೯೦೯)

ಶಿವಯೋಗ ಸಿದ್ದಿಯ ಸಾಧನೆಯ ಮೂಲಕ ಲೋಕ ಕಲ್ಯಾಣಗೈದು ಜನಮಾನಸದ ಕಷ್ಟಗಳನ್ನು ಕಳೆದು ಬಾಳಿಗೊಂದು ಬೆಳಕು ನೀಡಬಲ್ಲಂಥ ಮಹಾತ್ಮರು ಸಮಾಜದಲ್ಲಿ ಅಲ್ಲೊಬ್ಬರು ಇಲ್ಲೊಬ್ಬರಂತೆ ಸಿಗುವರು. ಅಂಥ ಚರಿತ್ರ ನಾಯಕರಲ್ಲಿ ಹಳೇಕೋಟೆಯ ಬಳಗಾನೂರು ಮರಿತಾತನವರೂ ಒಬ್ಬರು. ಇವರ ಬದುಕು ವಿಶಿಷ್ಟವಾದುದು. ಗುರುಗಳ ಮಾರ್ಗದರ್ಶನದಲ್ಲಿ ಜಪ–ತಪ ಅನುಷ್ಠಾನಗೈದು ಶಿವಯೋಗ ಸಿದ್ಧಿಯನ್ನು ಸಂಪಾದಿಸಿದರು. ಜನರ ಪಾಲಿಗೆ ಶ್ರೀ ಮರಿತಾತಾ ಅನ್ನುವ ಅವರ ಹೆಸರೇ ಮಹಾಮಂತ್ರವಾಯಿತು.

ಮರಿತಾತಾನವರು ರಾಯಚೂರು ಜಿಲ್ಲೆಯ ಕ್ಷೀರಾಪುರ ಎಂಬ ಗ್ರಾಮದಲ್ಲಿ ದಿನಾಂಕ: ೫–೫–೧೮೬೫ರಂದು ಜನಿಸಿದರು. ತಂದೆ ಶಂಕ್ರಯ್ಯಾ ಸ್ವಾಮಿ ತಾಯಿ ಪಾರ್ವತಮ್ಮ ಇವರು ಕೃಷಿಯನ್ನೇ ಪ್ರಧಾನ ಕಾಯಕವಾಗಿರಿಸಿಕೊಂಡಿದ್ದರು. ಇವರು ವೇದಾಂತದ ಬಲವುಳ್ಳವರಾಗಿದ್ದು ವಿಶ್ರಾಂತಿ ವೇಳೆಯಲ್ಲಿ ಗ್ರಾಮದ ಸದ್ಭಕ್ತರಿಗೆ ಶಿವಾನುಭವ ವಿಚಾರಗಳನ್ನು, ತತ್ವಪದಗಳನ್ನು ಹೇಳಿ ಭಕ್ತರನ್ನು ಸನ್ಮಾರ್ಗಕ್ಕೆ ಕೊಂಡೊಯ್ಯುವ ಕಾಯಕ ಮಾಡುತ್ತಿದ್ದರು. ಇವರನ್ನು ಶಿವ–ಪಾರ್ವತಿಯರೆಂದೇ ಜನರು ಗುರುತಿಸುತ್ತಿದ್ದರು. ಹಲವಾರು ವರ್ಷಗಳಿಂದ ಇವರಿಗೆ ಮಕ್ಕಳಾಗದ ಕಾರಣ ಜಗನ್ಮಾತೆಯ ಆರಾಧನೆಯನ್ನು ಮಾಡಿ, ಮನದಲ್ಲಿ ಸ್ಮರಣೆಮಾಡಿಕೊಳ್ಳುತ್ತಾ ಮಲಗಿರುವಾಗ, ಕನಸಿನಲ್ಲಿ ಜಗನ್ಮಾತೆ ಕಾಣಿಸಿಕೊಂಡು "ನಿನ್ನ ಮನಸ್ಸಿನ ವಾಂಛನೆ ಫಲಕಾರಿಯಾಗುತ್ತದೆ, ನಿನ್ನ ಗರ್ಭದಲ್ಲಿ ಇಬ್ಬರು ಸುಪುತ್ರರು ಜನಿಸುತ್ತಾರೆ ಚಿಂತಿಸಬೇಡ ಎಂದು ಹೇಳಿ ಅಂತರ್ಧಾನಳಾಗಿ ಹೋದಳು" ಎಂಬ ವಿಷಯವನ್ನು ತಿಳಿಸಿದಾಗ ಶಂಕರಯ್ಯ ಸ್ವಾಮಿಗೆ ಆನಂದವಾಗುತ್ತದೆ. ದೇವವಾಣಿ ಹೇಳಿದಂತೆ ಮೊದಲನೆಯ ಸುಪುತ್ರ ನಾಗಲಿಂಗಯ್ಯ ನವರು.ಎರಡನೆಯವರಾಗಿ ನಮ್ಮ ಚರಿತ್ರ ನಾಯಕರಾಗಿರುವ ಪೂಜ್ಯ ಮರಿತಾತನವರು. ನಾಮ ಸಂವತ್ಸರ ವೈಶಾಖ ಶುದ್ಧ ಪಂಚಮಿ ಶುಭ ಸಮಯದಲ್ಲಿ ಇವರ ಜನನವಾಗಿದೆ. "ಮರೆಪ್ಪ ಮರಿತಾತಾ ಮರಿದೇವ" ಎಂದು ನಾಮಕರಣ ಮಾಡಿದರು. ಬಾಲ್ಯದಲ್ಲಿಯೇ ಭಗವಂತನ ನಾಮಸ್ಮರಣೆಯಲ್ಲಿ

ಲೀನವಾಗುತ್ತಿದ್ದರು. ಒಳ್ಳೆಯ ನಡೆ-ನುಡಿ, ಆಚಾರ-ವಿಚಾರ ನೇಮ-ನಿಷ್ಠೆಗಳನ್ನು ಪರಿಪಾಲಿಸಿಕೊಂಡು ಬಂದರು. ಶಾಸ್ತ್ರಗಳ ಮೇಲೆ ಅಪಾರ ಪ್ರೀತಿ, ಭಕ್ತಿ ಅಭಿರುಚಿ, ಅಕ್ಷರ ವಿದ್ಯೆಗಳ ಕಡೆ ಗಮನವಿರಲಿಲ್ಲ. ಗುರುಗಳು ಅಕ್ಷರ ಜ್ಞಾನಕ್ಕೆ ಗಮನಕೊಡಿ ಎಂದಾಗ ಮೋಕ್ಷಕ್ಕೆ ಎರಡಕ್ಕರವೇ ಸಾಕು ಎಂಬ ಅನುಭವವನ್ನೇ ಹೇಳಿ ಅಧ್ಯಾತ್ಮ ಮಹಾಸಾಧನೆಯ ಜೀವನಕ್ಕೆ ಅಕ್ಷರ ಜ್ಞಾನ ಅವಶ್ಯಕ ಎನಿಸಲಿಲ್ಲ ಎಂದುತ್ತರ ಕೊಟ್ಟರು.

ಮರಿತಾತನವರು ಯೌವನಕ್ಕೆ ಕಾಲಿಟ್ಟಾಗ ತಂದೆ-ತಾಯಿ ಮದುವೆ ಮಾಡಲು ಯೋಚಿಸಿದ ವಿಷಯ ತಿಳಿದು ರಾತ್ರಿಯೇ ತಂದೆ-ತಾಯಿ ಬಂಧು-ಬಳಗ ಎಂಬ ಸಂಬಂಧವನ್ನು, ಎಲ್ಲರನ್ನು ತೊರೆದು ಸನ್ಯಾಸಿಯಂತೆ ಹಳ್ಳಿ-ಹಳ್ಳಿಗೆ ಸಂಚರಿಸಿ ಪರಬ್ರಹ್ಮ ಚಿಂತನೆಯಲ್ಲಿ ತೊಡಗುತ್ತಾರೆ. ಗುರುವಿನ ಹಂಬಲದಿಂದ ಹಸಿವು-ತೃಷೆಗಳನ್ನು ಲೆಕ್ಕಿಸದೆ ಹೋಗುವಾಗ ಆಂದ್ರಪ್ರದೇಶದ ಉರವಕೊಂಡ ಗವಿಮಠಕ್ಕೆ ಆಗಮಿಸಿ ಗುರು ದರ್ಶನ ಪಡೆದು, ನಿಂತಿರುವ ಸಮಯದಲ್ಲಿ ಗುರುಗಳು, 'ತಮ್ಮ ನೀನು ಯಾರು?' ಎಂದಾಗ, ನಾನು ಯಾರು ಎಂಬುದನ್ನು ತಮ್ಮಿಂದ ತಿಳಿಯಬೇಕು ಎಂದಾಗ ಗುರುಗಳಿಗೆ ಆನಂದವಾಯಿತು. ಆಗ ಮರಿತಾತನವರಿಗೆ ದೀಕ್ಷಾಗುರು, ಮೋಕ್ಷಗುರು ಆಗಿ ದೊರೆತರು.


ಗುರು ಸೇವೆಯನ್ನು ಮಾಡಿ ಅಷ್ಟಾವರಣ, ಪಂಚಾಚಾರ ಷಟಸ್ಥಲಗಳ ಆಚರಣೆಗಳ ಜೊತೆಗೆ ಶಿವಯೋಗಾನುಸಂಧಾನ ಮಾಡಿಕೊಂಡರು. ಭವದ ಭ್ರಮೆಯನ್ನು ಬಿಟ್ಟು, ಮನದ ವ್ಯಾಕುಲ ತೊಲಗಿಸಿ, ತಮ್ಮ ಕರುಣಾ ಮೃತವನ್ನೇ ತುಂಬಿ ತಾವೇ ಅವರಾದರು-ಅವರೇ ತಾವಾದರು ಭಕ್ತಿಯ ಮೇರು ಶಿವಯೋಗಿಯಾದರು. ಪ್ರತಿ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಏಳುವುದು, ಗುರುಪೂಜೆ ಮಾಡಿ ಶಿವಪೂಜೆಯಲ್ಲಿ ಲೀನವಾಗುತ್ತಿದ್ದರು. ಇದನ್ನು ಕಂಡು ಗುರುಗಳಿಗೆ ಮಹದಾನಂದವಾಯಿತು. ಆಗ ತಮ್ಮ ತಪಶಕ್ತಿಯನ್ನೇ ಧಾರೆಯೆರೆದು ನಿರಂಜನ ಅಧಿಕಾರವನ್ನು ನೀಡಿ "ನೀನು ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಬಳಗಾನೂರು ವಿರಕ್ತ ಮಠದ ಅಧಿಕಾರಿಯಾಗು" ಎಂದು ಆಶೀರ್ವದಿಸಿ ವಿರಕ್ತ ಶ್ರೇಷ್ಠನಾಗು ಎಂಬ ಗುರುವಾಣಿ ನುಡಿದರು.

ನಿಜ ಗುರುವಿನಿಂದ ಆಶಿರ್ವಾದ ಪಡೆದು ಹಳ್ಳಿ ಪಟ್ಟಣಗಳಲ್ಲಿ ಸಂಚರಿಸುತ್ತಾ ಗುರು ತಿಳಿಸಿದ ಇಷ್ಟ ಲಿಂಗಾರ್ಚನೆಯಲ್ಲಿ ತೊಡಗಿ ಸಕಲ ಅಧ್ಯಾತ್ಮಿಕ ಸಿರಿ ಸುಖವನ್ನು ಶಿವಯೋಗಾನಂದವನ್ನು ಭಗವತ್ ಸಾಕ್ಷಾತ್ಕಾರವನ್ನು ಪಡೆದು, ಪರಮ ಮಂಗಳೆಯಲ್ಲಿ ಅಪಾರ ಭಕ್ತಿಯುಳ್ಳವರಾಗಿ, ಶಿವಯೋಗಾದ ಸಿದ್ಧಿಗಳನ್ನೆಲ್ಲ ಜನ--ಮನದ ಕಲ್ಯಾಣಕ್ಕಾಗಿ

ಧಾರೆಯೆರೆದು ನಡೆದಾಡಿದ ಜಂಗಮಲಿಂಗ ದೇವಭಕ್ತರಾದರು. ಅನೇಕ ಪವಾಡಗಳನ್ನು ಮಾಡಿ ವೈಚಾರಿಕ ರಂಗದಲ್ಲಿ, ವೈಜ್ಞಾನಿಕ ರಂಗದಲ್ಲಿ ಬೆಳೆದ ಮಹನೀಯರಲ್ಲಿ ಒಬ್ಬರಾದರು. ಮರಿತಾತನವರು.

ಮುಂದೆ ಮರಿಸ್ವಾಮಿಯವರು ರಾಯಚೂರು ಜಿಲ್ಲೆಯ ಸಿಂಧನೂರ ತಾಲೂಕಿನ ಬಳಗಾನೂರಿನ ವಿರಕ್ತ ಮಠಕ್ಕೆ ಪೀಠಾಧಿಪತಿಯಾಗಿ ಬಂದರು. ತಮ್ಮ ತಪಃ ಶಕ್ತಿಯಿಂದ ಈ ಮಠವನ್ನು ಬೆಳೆಸಿದರು. ಈ ಮಠವು ಉರಿವಕೊಂಡ ಉರಗಾದ್ರಿ ಶೂನ್ಯಪೀಠದ ಶಾಖಾ ಮಠಗಳಲ್ಲಿ ಒಂದಾಗಿತ್ತು.

ಮರಿಸ್ವಾಮಿಯವರು ತುಂಬ ಪ್ರಗತಿಪರ ವಿಚಾರವಾದಿಗಳಾಗಿದ್ದರು. ಬಡಬಗ್ಗರ ಬಗ್ಗೆ ಅವರಿಗೆ ಅಪಾರ ಕರುಣೆಯಿತ್ತು. ಅವರು ಮಾಡಿದ ಲೋಕ ಕಲ್ಯಾಣ ಕಾರ್ಯಗಳು ಪವಾಡಸದೃಶವಾದಂಥವು. ಸಮಾಜದಲ್ಲಿ ಒಳ್ಳೆಯವರೂ ಇರುತ್ತಾರೆ. ಕೆಟ್ಟವರೂ ಇರುತ್ತಾರೆ. ಇವರಿಗೆ ಕೆಟ್ಟ ಜನರ ಕಿರುಕುಳ ಹೆಚ್ಚಾಗಲು ಅವರ ಸಹವಾಸವೇ ಬೇಡವೆಂದು ಮರಿಸ್ವಾಮಿಗಳು ಹಂಪಿಗೆ ಹೋದರು. ಅಲ್ಲಿ ಕೆಲ ಕಾಲ ಇದ್ದು, ಅಲ್ಲಿಂದ ಸಿರಗುಪ್ಪದ ಹತ್ತಿರವಿರುವ ಹಳೆಕೋಟೆ ಎಂಬ ಗ್ರಾಮಕ್ಕೆ ಒಂದು ನೆಲೆನಿಂತರು. ಅಲ್ಲಿಯೇ ಕೊನೆಗೆ ಅವರು ದಿನಾಂಕ ೧೯/೪/೧೯೦೯ ರಂದು ಸೌಮ್ಯನಾಮ ಸಂವತ್ಸರ ಚೈತ್ರ ಬಹುಳ ಚತುದರ್ಶಿ ಸೋಮವಾರ ಸಾಯಂಕಾಲ ೫ ಗಂಟೆಗೆ ಶಿವಾಧೀನರಾದರು. ಅವರ ಗದ್ದುಗೆ ಹಳೆಕೋಟೆಯಲ್ಲಿದ್ದು, ಈಗಲೂ ಪೂಜೆಗೊಳ್ಳುತ್ತಿದೆ. ಅವರ ಗದ್ದುಗೆಯ ಮೇಲೆ ಅವರ ಶಿಲಾಮೂರ್ತಿಯನ್ನೀಗ ಪ್ರತಿಷ್ಠಾಪಿಸಲಾಗಿದೆ. ಇವರು ತಮ್ಮ ಜೀವಿತದ ಬಹು ಭಾಗವನ್ನು ರಾಯಚೂರು ಜಿಲ್ಲೆಯ ಸಿಂಧನೂರ ತಾಲೂಕಿನ ಬಳಗಾನೂರಿನಲ್ಲಿಯೇ ಕಳೆದರು. ಇಲ್ಲಿ ಇವರ ಸ್ಮರಣೆಗಾಗಿ ಇಂದು ಭವ್ಯವಾದ ಮಠವೊಂದನ್ನು ನಿರ್ಮಿಸಲಾಗಿದೆ. ಈ ಮಠದಲ್ಲಿ ಮರಿಸ್ವಾಮಿಗಳ ಮೂರ್ತಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಈ ಮೂರ್ತಿಯು ಇಂದಿಗೂ ಪೂಜೆಗೊಳ್ಳುತ್ತಿರುವುದನ್ನು, ಈ ಮಠಕ್ಕೆ ಈಗ ಶ್ರೀ ಸಿದ್ಧ ಬಸವ ಸ್ವಾಮಿಗಳು ಪೀಠಾಧಿಪತಿಗಳಾಗಿ ಬಂದುದನ್ನು ಗುರುತಿಸುವೆವು. ಮರಿಸ್ವಾಮಿಗಳಿಗೆ ಸಂಬಂಧಿಸಿದ ಮಠ, ಸಮಾಧಿ, ಅವರ ಭಾವಚಿತ್ರ ಹಾಗೂ ಮೂರ್ತಿ ಶಿಲ್ಪ ಇವನ್ನೆಲ್ಲ ಸ್ಮಾರಕಗಳ ರೂಪದಲ್ಲಿ ಚಿತ್ರೀಕರಿಸಿಕೊಂಡು ಇಲ್ಲಿ ಕೊಟ್ಟಿರುವೆವು.




ಬಳಗಾನೂರಿನ
ತತ್ವಪದಕಾರರಾದ
ಶ್ರೀ ಮರಿಶಿವಯೋಗಿಗಳವರ
ಭಾವ ಚಿತ್ರ,
ಬಳಗಾನೂರು,



ಬಳಗಾನೂರಿನ ಶ್ರೀ ಮರಿಸ್ವಾಮಿಗಳವರ
ವಿರಕ್ತಮಠದಲ್ಲಿ ಪೂಜೆಗೊಳ್ಳುತ್ತಿರುವ
ಮರಿಸ್ವಾಮಿಗಳವರ ಶಿಲಾಮೂರ್ತಿ,
ಬಳಗಾನೂರು, (ಸಿಂಧನೂರು. ತಾಲೂಕು)



ಬಳಗಾನೂರು ಮರಿಸ್ವಾಮಿಗಳವರ ವಿರಕ್ತಮಠದ ಚಿತ್ರ, ಬಳಗಾನೂರು, ತಾ – ಸಿಂಧನೂರು.



ಬಳಗಾನೂರು ಶ್ರೀ ಮರಿಸ್ವಾಮಿಗಳವರ ಮಠದಲ್ಲಿ ಸದ್ಯದ ಶ್ರೀಗಳಾದ ಶ್ರೀ ಸಿದ್ಧಬಸವಸ್ವಾಮಿಗಳು ನಿಂತ ಚಿತ್ರ. ಬಳಗಾನೂರು ತಾ – ಸಿಂಧನೂರು.



ಸಿರಗುಪ್ಪ ತಾಲೂಕಿನ ಹಳೆಕೋಟೆಯಲ್ಲಿರುವ ತತ್ವಪದಕಾರ ಮರಿಸ್ವಾಮಿಗಳವರ ಸಮಾಧಿ ಮೇಲಿರುವ ಅವರ ಶಿಲ್ಪ ಮೂರ್ತಿಯ ಚಿತ್ರ, ಹಳೆಕೋಟೆ, ತಾ – ಸಿರಗುಪ್ಪ. ಜಿಲ್ಲೆ : ಬಳ್ಳಾರಿ

ಶ್ರೀ ಮರಿಸ್ವಾಮಿಗಳು ಉರಗಾದ್ರಿ, ಉರಗಾದ್ರಿ ಮಠ, ಬಂಧುಶತ ಅಂಕಿತಗಳಲ್ಲಿ ತತ್ವಪದಗಳನ್ನು ಬರೆದಿರುವರು. ಅವರ ತತ್ವಪದಗಳನ್ನು ಹಳೆಕೋಟೆಯ ಶ್ರೀ ವೇ. ಚಂದ್ರಮೌಳಿ ಶಾಸ್ತ್ರಿಗಳು ಸಂಗ್ರಹಿಸಿರುವರಲ್ಲದೆ, ಮರಿಸ್ವಾಮಿಗಳವರ ಚರಿತ್ರೆಯನ್ನೂ ಬರೆದಿರುವರು. "ಹಳೆಕೋಟೆ ಬಳಗಾನೂರು ಶ್ರೀ ಮರಿತಾತನವರ ಜೀವನ ಚರಿತ್ರೆ" ಎಂಬುದು ಅವರು ಇತ್ತೀಚೆಗೆ ಬರೆದು ಪ್ರಕಟಿಸಿದ ಕೃತಿಯಾಗಿದೆ. ಈ ಕೃತಿಯಿಂದ ಮರಿಸ್ವಾಮಿಯವರ ಐದು ತತ್ವಪದಗಳನ್ನು ಆಯ್ಕೆ ಮಾಡಿಕೊಂಡು ಇಲ್ಲಿ ಕೊಟ್ಟಿದೆ.

೧. ಋಣಾನುಬಂಧ ತನಗಿಲ್ಲ

ಋಣಾನುಬಂಧ ತನಗಿಲ್ಲದನ್ಯಾಗ್ರಾಮದಾ
ಆಶಾಪಾಶಾಘಾಸಿಯಾತಕ್ಕೆ ಪಡುವಿ ॥ ಪ ॥

ಕುಟಿಲತ್ವದಿ ಘಟವಿರ್ಪುದೆ ಮಠಬರ್ಪುದೆ ।
ದಿಟವೇನಿದೆ ಹಟವೇನಿದೆ ಸಟೆಯಿಲ್ಲದೆ ।
ಕುಟಿಲತ್ವ ತ್ಯಜಿಸು ನಿಟಿಲಾಕ್ಷನಿಹನು ॥ ೧ ॥

ಪುತ್ರೇಷಣ ಅರ್ಥೇಷಣ ದಾರೇಷಣ ಆಪಾಷಾಣ ।
ಮೃತಿದರುಶನ ಪರಸ್ವಾಧೀನ । ಶಿವನಾಧೀನ ಜನಿಸಿದೆ ಜ್ಞಾನ ॥ ೨ ॥

ಧರ್ಮಕೀರ್ತಿದ್ವಯವು ನೈರ್ಮಲ್ಯದಿಂದಿಹವು ।
ದುರ್ಮನವ ನಿಗ್ರಹಿಸು ಸಾರ್ವಭೌಮ ಶಂಭುವಿನ ಮರೆದ ॥ ೩ ॥

೨. ಮೃಡರೂಪ ಜಡಿರಾಯ

ಮೃಡರೂಪ ಜಡಿರಾಯ ।
ನಡಿಯ ಭಜಿಸೊ ಮನವೇ ॥ ಪ ॥

ನಸಿಸಿ ಹೋಗುವ ದೇಹ ।
ಕೊಸೆದು ಮಾಡ ।
ದೆ ಮೋಹ ಅಸಮಾನ ಆರೂಢ ವಿಭುವಿನಾ ॥ ೧ ॥

ಕ್ಷಣ ಭಂಗುರ ಸಂಸಾ ।
ರವಿದನು ಸ್ವಪ್ನದ ತೆರ ।
ನೆಣಿಸೀ ಕ್ಷಣದೊಳೆ ನೀ ॥ ೨ ॥

ಮಡದಿಯರ ವಶದಲ್ಲಿ
ತೊಡಗಿಯತಿಕಷ್ಟವನು ।
ಪಡುವುದಿದ ಬಿಡುತಲಿ ನೀ ॥ ೩ ॥

ಎಂದಿಗಾದರು ಮೃತ್ಯು ।
ಸಂಧಿಸದೆ ಇರುವುದೇ ।
ಮಂದಭಾಗ್ಯ ಗ್ರಹಿಸಿ ॥ ೪ ॥

ಮೋಕ್ಷಸ್ಥ ನೀತಾತ ।
ದಕ್ಷಿಣ ಕಾಶಿನಾಥ ।
ತ್ರ್ಯಕ್ಷ ಉರಗಾದ್ರಿ ಗುರುವೀತ ॥ ೫ ॥

೩. ಈಶಾ ಈ ಘಟದಿ ನೀ ವಾಸಿಸಿರುವೆ

ಈಶಾ ಈ ಘಟದಿ ನೀ
ವಾಸಿಸಿರುವೆ ಇಂಥಾ ಆಶಾ
ಭೂತಾವೇಶ ಮಹಾದೋಷ ಮಹಾಪಾಶಾ ಈಶಾ ॥ ಪ ॥

ಈಷಣತ್ರಯ ತ್ರಿಮಲ ಮೋಹವು ।
ಕ್ಲೇಶ ಪಂಚಕ ಸಪ್ತವ್ಯಸನವು ।
ಈಸುಪರಿಯಲಿ ದ್ವೇಷಿಯಂದದಿ ।
ಘಾಸಿ ಗೊಳಿಸಲುಲ್ಲಾಸವೇ ಶಿವ ॥ ೧ ॥

ಕಠಿಣೋಕ್ತಿ ಕುಟಿಲತ್ವ ।
ಚಟುಲಚಾಪಲ ಗುಣ ।
ಹಟದೀ ಮಿಥ್ಯಾ ಮತದಿ ಸಂ ।
ಘಟ ವ್ಯರ್ಥ ದಿಟದಿ ।
ನಿಟಲ ನಯನನೆ ದುಷ್ಕರ್ಮಮಂ ಆಹಾ ।
ಘಟದಿ ಲೇಪಿಸಿ ದುರ್ಬುದ್ಧಿಯೆಂಬುಧಿ ।
ಘಟಕ ಮಧ್ಯದಿ ಕೆಡಹಿ ಪುಣ್ಯ ।
ಸ್ಫುಟ ವಿರಾಜಿಸಿ ಪೊರೆಯದಿರುವರೆ ॥ ೨ ॥

ನೀಲಗ್ರೀವಾ ಈರೇಳುಲೋಕವೆ ನಿಮ್ಮ
ಲೀಲಾ ಮಾಯಾಜಾಲಾ ಸರ್ವೇಶಾ ಮಾಂಪಾಲಾ ।
ಬಾಲಶಶಿಧರ ಜೀವಿಗಳ ಸನ್ಮೋದ ಚೇತನವೆನಿಸಿ ಈ ವಿಧ ।
ಸ್ಥೂಲದೇಹದಿ ನಟಿಸಿ ಈ ಪರಿ ।
ಕಾಲನೊಶದಲಿ ಗೈವುದುಚಿತವೆ ? ॥ ೩ ॥

ಬೋಧಮೋಕ್ಷ ಬಂಧ ವೇಧಿಸಿರುವಿ ।
ವೇದ ಮಿಥ್ಯಾಸಾಧಿಸುತ್ತ ಸಂಭ್ರಮಣ ವಾದೆವ್ಯರ್ಥ ।
ಮೇಧಿನಿ ಸರ್ವಾತ್ಮ ತ್ವಂ ಗಿರಿಜಾದೇವಿಯೇ ಮತಿಯು ಎನುತಿರೆ ।

ಭೇದಗೊಳಿಪರೆ ಭೋ ದಯಾನ್ವಿತ
ಸಾದರದಿ ಸದ್ಧರ್ಮವೇ ? ಶಿವಾ ॥ ೪ ॥

ತನುವಿನ ಭ್ರೂಮಧ್ಯ ।
ಮನೆಮಾಡಿದಖಿಳ ಪ್ರೇರಣೆಯೋ । ಚೇತನೆಯೋ ।
ಸಿತೋಷ್ಣದ ದೊಣೆಯೋ ।
ಅಣೋರಣಿಯಾನ್ ಮಹತೋಮಹೀಯಾನ್ ।
ಎನುತ ಶ್ರುತಿ ಸ್ಮೃತಿ ಪೊಗಳುತಿರುತಿರೆ ।
ಪ್ರಣಮರೂಪ ನೀನಿಲ್ಲದಿರೆ ಜನಜನಿಸಳಿವುದುಂಟೇ ॥ ೫ ॥

ಶಂಭುವೇ ಉರಗಾದ್ರಿ ।
ಸಂಭ್ರಮದಂಬುಧಿಚಂದ್ರಾ ।
ಕರಿ ವೃಷಭೇಂದ್ರಾ ।
ಪರಮ ದಯಾಸಾಂದ್ರಾ ।
ಎಂಬತ್ತು ನಾಲ್ಕಾದಿ ಲಕ್ಷಗದ ಪ್ರಾಣಿಗಳ ।
ಹೃದಯದಿ ನಿಜದಿತುಂಬಿರುವ ಸಾಂಬೆಂಬ ಉಪನಿಷತ್ ।
ಡಂಭಚಾರದ ವಾಕ್ಯವೇ ? ಶಿವಾ ॥ ೬ ॥

೪. ಶ್ರೀ ಶಿವಲಿಂಗದ ಮಹಿಮೆ

ಶ್ರೀ ಶಿವಲಿಂಗದ ಮಹಿಮೆಯ ನಾ ಕರುಣದಿಂದೊರೆವೆ
ಲೋಕ ಪಾಲಿಸುವ ಶಿವಲಿಂಗವ ಕುರಿತು ಪಾಡುವೆ ॥ ಪ ॥

ಪ್ರಣಮ ನಿಗಮಾಗಮ ದೂರ
ಅಗಣಿತಾಖ್ಯಾನ ಧೀರ
ಸುಗುಣ ಸುಂದರ ಪಾರ್ವತೀ
ಪತಿಯನು ಬಗೆಗೊಳಿಸುವ ವಿವರಾ ॥ ೧ ॥

ಮುರಹರಿ ಬ್ರಹ್ಮರು
ಶಿವನ ಕುರುಹು ಅರಿಯಲೋಸುಗ
ಧರಣಿಯಂಬರವನು ಚರಿಸಿ
ದಣಿದು ತಾವು ಮರಳಿ ತಿರುಗಿದರ್ಮರುಗಿ ॥ ೨ ॥

ಉರಗಾದ್ರೀಶನ ಧ್ಯಾನ
ಭರದಿ ನಡೆವುದು ಅನುದಿನ

ಸ್ಮರಿಸಿದ ಮಾರ್ಕಂಡೆಯನ ಭವ
ಪರಿಹರಿಸಿದ ಶಂಕರನ ॥ ೩ ॥

೫. ಪಶುಪತಿ ಮತವೇ ಬಸವನ ಮತವೊ

ಪಶುಪತಿ ಮತವೇ ಬಸವನ ಮತವೊ
ಬಸವನ ಮತವೇ ಪಶುಪತಿ ಮತವೊ ॥ ಪ ॥

ಬಸವನ ನಂಬದೆ ಪಾತಕಿ ಬಿದ್ದ
ಬಸವನ ನಂಬಿದ ಹರಳಯ್ಯ ಗೆದ್ದ ॥ ೧ ॥
ಬಸವನ ನಂಬದೆ ಬಿಜ್ಜಳ ಬಿದ್ದ
ಬಸವನ ನಂಬಿದ ಗುಂಡಯ್ಯ ಗೆದ್ದ ॥ ೨ ॥
ಬಸವ ಬಂಧುಶತ ಪಶುಪತಿದಾಸ
ಶಶಿಧರ ಪಶುಪತಿ ಬಸವನೊಳು ವಾಸ ॥ ೩ ॥

೧೨. ದೇವದುರ್ಗದ ಆದಿ ಅಮಾತೆಪ್ಪ (೧೮೬೫–೧೯೩೫)

ಆದಿ ಅಮಾತೆಪ್ಪ ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಕ್ರಿ.ಶ. ೧೮೬೫ರಲ್ಲಿ ಜನಿಸಿದ. ಅಮಾತೆಪ್ಪನವರದು ಶ್ರೀಮಂತ ದೇವಾಂಗ ಮನೆತನವಾಗಿತ್ತು. ಇವರ ಮನೆತನದ ವೃತ್ತಿ ನೇಕಾರಿಕೆಯಾಗಿತ್ತು. ದೇವದುರ್ಗದ ಶ್ರೀಮಂತ ಮನೆತನಗಳಲ್ಲಿ ಇವರದೂ ಒಂದಾಗಿತ್ತು. ೧೯೧೪ರಲ್ಲಿ ಬರ ಬಿದ್ದಾಗ ಇವರು ಬಾವಿ ತೋಡಿಸಿ ಬಡಜನರ ಉಪಜೀವನಕ್ಕೆ ದಾರಿ ಮಾಡಿಕೊಟ್ಟರು. ನಿಜಾಂ ಸರ್ಕಾರದ ಲೋಕಲ್ ಪಂಡ ಸಮಿತಿಯ ಸದಸ್ಯರಾಗಿಯೂ ಇವರು ಕಾರ್ಯ ನಿರ್ವಹಿಸಿರುವರು.

ಆದಿ ಅಮಾತೆಪ್ಪ ಅವರು 'ಸದಾನಂದ' ಎಂಬ ಕಾವ್ಯನಾಮವನ್ನಿರಿಸಿಕೊಂಡು ಅನೇಕ ವಚನಗಳನ್ನು 'ದೇಹ ದುರ್ಗಾಧೀಶ' ಎಂಬ ಅಂಕಿತವನ್ನಿರಿಸಿಕೊಂಡು ಅನೇಕ ತತ್ವಪದಗಳನ್ನು ಬರೆದಿರುವರು. ಇವರು ಬರೆದ ತತ್ವಪದಗಳು 'ಕೈವಲ್ಯನವನೀತ' ಎಂಬ ಕೃತಿಯಲ್ಲಿ ಸಮಾವೇಶಗೊಂಡಿವೆ. ಈ ಕೃತಿಯು ೧೯೧೯ರಲ್ಲಿ ಮೊದಲು ಪ್ರಕಟಗೊಂಡಿದ್ದು, ಇದನ್ನು ಗದುಗಿನ ತೋಂಟದಾರ್ಯ ಬುಕ್‌ಡೀಪೋದವರು ಪ್ರಕಟಿಸಿರುವರು.


ಸಂಸಾರವು ತ್ಯಾಜ್ಯವೆಂದು ಬಗೆಯದೆ ಅಮಾತೆಪ್ಪ ಅದರಲ್ಲಿದ್ದುಕೊಂಡೇ ಅಧ್ಯಾತ್ಮ ಸಾಧನೆಯನ್ನು ಮಾಡಬೇಕೆಂದು ತನ್ನ ತತ್ವಪದಗಳಲ್ಲಿ ಸಾರಿರುವನು. ಈತನ ತತ್ವಪದಗಳನ್ನು ಜನ ಭಜನಾ ಸಂದರ್ಭದಲ್ಲಿ ಹಾಡುವುದುಂಟು. ಈತ ಕ್ರಿ.ಶ. ೧೯೩೫ರಲ್ಲಿ ದೇವದುರ್ಗದಲ್ಲಿ ನಿಧನ ಹೊಂದಿದ. ಈತನಿಗೆ ಸಂಬಂಧಿಸಿದ ಸ್ಮಾರಕಗಳನ್ನು ಚಿತ್ರಿಸಿ ಇಲ್ಲಿ ಕೊಟ್ಟಿದೆ.



ದೇವದುರ್ಗದ ತತ್ವಪದಕಾರ ಆದಿ ಅಮಾತೆಪ್ಪನವರ ಭಾವಚಿತ್ರ, ದೇವದುರ್ಗ.
ಜಿಲ್ಲೆ – ರಾಯಚೂರು.



ಆದಿ ಅಮಾತೆಪ್ಪನವರು ವಾಸವಾಗಿದ್ದ ಮನೆಯ ಚಿತ್ರ
ದೇವದುರ್ಗ, ಜಿಲ್ಲೆ: ರಾಯಚೂರು.



ದೇವದುರ್ಗದ ತತ್ವಪದಕಾರ ಆದಿ ಅಮಾತೆಪ್ಪನವರ ಮೊಮ್ಮಗ ವಕೀಲ ಆದಿರಾಜಶೇಖರರು
ಅವರ ಧರ್ಮಪತ್ನಿಯೊಂದಿಗಿರುವ ಚಿತ್ರ ದೇವದುರ್ಗ.



ಆದಿ ಅಮಾತೆಪ್ಪನವರ ಮರಿಮೊಮ್ಮಗಳಾದ ವಕೀಲ ಆದಿ ರಾಜಶೇಖರ ಅವರ ಮಗಳಾದ
ಜೋತ್ಸನಾರಾಣಿ ಹಾಗೂ ಅವರ ಪುತ್ರರ ಭಾವಚಿತ್ರ ದೇವದುರ್ಗ.

ಈತ ಬರೆದ ತತ್ವಪದಗಳಲ್ಲಿ ಇಲ್ಲಿ ನಾಲ್ಕನ್ನು ಡಾ. ಬಸವರಾಜ ಸಬರದ ಅವರ ಸಂಕಲನಗಳಿಂದ ಆಯ್ಕೆ ಮಾಡಿ ಕೊಟ್ಟಿದೆ.

೧. ತನುವು ತನ್ನದಲ್ಲ ತಮ್ಮ

ತನುವು ತನ್ನದಲ್ಲ ತಮ್ಮ । ತನುವು ನಂಬಿಗಿಲ್ಲ ತಮ್ಮ
ತನುವಿನೊಳಗಿನ್ನೆಲ್ಲ ತಮ್ಮ । ತಿಳಿಯಬೇಕು ಎಲ್ಲ ತಮ್ಮ ॥ ಪ ॥

ತನುವಿನ ಗುಣವಲ್ಲ ತಮ್ಮ । ಬಿಡಬೇಕು ಎಲ್ಲ ತಮ್ಮ
ಸಗುಣ ಗುಣ ಅಳಿಯೋ ತಮ್ಮ । ನಿರ್ಗುಣದಿಂದ ನುಡಿಯೋ ತಮ್ಮ ॥ ೧ ॥

ಪ್ರಪಂಚಯೆಂಬುದು ತಮ್ಮ । ನಾಲ್ಕು ದಿವಸ ಸಂತೋಷ ತಮ್ಮ
ನೀರು ಮೇಲಿನ ಗುರುಳಿಯಂತೆ । ಅಡಗಿ ಹೋಗುವುದು ತಮ್ಮ ॥ ೨ ॥

ದೇಶಕ್ಕಧಿಕನೋ ತಮ್ಮ । ದೇಹ ದುರ್ಗೇಶನೊ ತಮ್ಮ
ಕೂಡಿಕೊಂಡು ಇದ್ದರೆ ತಮ್ಮ । ಅಂತಃಕರಣ ಮಾಡುವನೋ ತಮ್ಮ ॥ ೩ ॥

೨. ನರರಿಗೆ ಯಾವದು ಸ್ಥಿರವಿಲ್ಲ

ನರರಿಗೆ ಯಾವದು ಸ್ಥಿರವಿಲ್ಲ ।
ಗುರುವಿನಕಿಂತಧಿಕ ಯಾರ್ಯಾರಿಲ್ಲ ॥ ಪ ॥

ಬಂಧು ಬಳಗ ತಮ್ಮವರೆಂದು । ನಂಬಿಕೊಂಡು ಇರುವರಲ್ಲ ।
ಯಮಧೂತರು ಬಂದು ಎಳೆವಾಗ ತಮ್ಮನು ಬಿಡಿಸುವರಾರಿಲ್ಲ ॥ ೧ ॥

ನಾನಾ ಜನ್ಮದಲಿ ಹುಟ್ಟಿಬಂದು ಸ್ಥಿರವೆಂದು ಅರಿಯುವರಲ್ಲ ।
ಎಷ್ಟು ಕಾಲವಾದರೂ ತಮಗೆ ಮರಣವೆಂದಿಗೂ ತಪ್ಪುವುದಿಲ್ಲ ॥ ೨ ॥

ಹುಟ್ಟಿದಾರಭ್ಯ ನರ ಜನರು ತಾವು ಸುಖ ಬಯಸುವರಲ್ಲ ।
ಏನೇನು ಮಾಡಲು ನರಜನ್ಮಕೆ ಕಿಂಚಿತ್ತು ಸುಖವಿಲ್ಲ ॥ ೩ ॥

ಹೆಂಡರು ಮಕ್ಕಳಿಗೆ ಮುಂದೆ ಬೇಕೆಂದು ಸಂಕಟಪಟ್ಟು ಗಳಿಸುವರಲ್ಲ ।
ಮರಣ ಕಾಲದಿ ತಮ್ಮ ಸಂಗಡ ಯಾವುದೂ ವಯ್ಯುವುದಿಲ್ಲ ॥ ೪ ॥

ತಮ್ಮ ಕಾಯವು ನಿಜವೆಂದು ತಿಳಿದು ಬೇಕಾದ್ದು ಮಾಡುವರಲ್ಲ ।
ಒಂದಾನೊಂದಿನ ಪಕ್ಷಿಹೋದಂತೆ ಹಾರಿ ಹೋಗುವರಲ್ಲ ॥ ೫ ॥

ದೇವರು ಕೊಟ್ಟ ಕಾಲಕ್ಕೆ ದಾನ ಧರ್ಮ ಮಾಡಲಿಲ್ಲ ।
ಪರರಿಗೆ ಕೊಡದೆ ಉಂಡುಟ್ಟು ಸುಖವ ತಾವು ಪಡಲಿಲ್ಲ ॥ ೬ ॥

ದೇಶಕಧಿಕ ದೇಹ ದುರ್ಗಾಧೀಶನ ಕೂಡಿಕೊಂಡಿರಲಿಲ್ಲ ।
ನಾಶಗೊಳ್ಳುವ ನರ ಮನುಜರಿಗೆ ನಾಕ ದೊರೆಯಲಿಲ್ಲ ॥ ೭ ॥

೩. ಏಕಪ್ಪ ಇದು ಬೇಡಪ್ಪ

ಏಕಪ್ಪ ಇದು ಬೇಡಪ್ಪ । ಇದರಿಂದ ಸುಖ ನಿನಗಿಲ್ಲಪ್ಪ
ಸನ್ಯಾಸಿ ಆಚರಣೆ ದುಃಖವಪ್ಪ । ಇಹದಲ್ಲಿರುವುದು ಲೇಸಪ್ಪ ॥ ಪ ॥

ಹೆಂಡರ ಸಂಗಡ ಲೋಲಾಡಪ್ಪ
ಮಕ್ಕಳ ಕೂಡಿ ನೀನು ಆಡಪ್ಪ ।
ಹೋಳಿಗೆ ಪಾಯಸ ಉಣಬೇಕಪ್ಪ
ಉಂಡುಂಡು ಖುಷಿಲಿಂದ ತಿರುಗಪ್ಪ ॥ ೧ ॥

ದೊಡ್ಡಮನೆ ನೀ ಕಟ್ಟಿಸಪ್ಪ
ಒಳ್ಳೆ ಭೂಮಿ ನೀ ಮಾಡಪ್ಪ ।
ವ್ಯಾಪಾರ ಮಾಡಿ ಗಳಿಸಪ್ಪ
ಹೆಂಡರು ಮಕ್ಕಳಿಗೆ ಕೊಡಪ್ಪ ॥ ೨ ॥

ಇಹಕ್ಕಿಂತ ಸುಖ ನಿನಗಿಲ್ಲಪ್ಪ
ಚಂದವಾಗಿ ನೀನು ತಿಳಿಯಪ್ಪ ।
ದೇಹಕ್ಕಧಿಕ ದೇಹದುರ್ಗಾಧೀಶಪ್ಪ
ಸದಾ ಕೂಡಿಕೊಂಡು ಇರಬೇಕಪ್ಪ ॥ ೩ ॥

೪. ಎಲ್ಲಿ ಭಕ್ತಿ ಎಲ್ಲಿ ಮುಕ್ತಿ

ಎಲ್ಲಿ ಭಕ್ತಿ ಎಲ್ಲಿ ಮುಕ್ತಿ । ಈ ಮೂಢ ಜನರಿಗೆ
ಎಲ್ಲಿ ಭಕ್ತಿ ಎಲ್ಲಿ ಮುಕ್ತ್ಯಣ್ಣ ॥ ಪ ॥

ಬ್ರಹ್ಮಜ್ಞಾನಿಯಿರುವೆವು ನಾವೆಂದು
ನುಡಿದಂತೆ ನಡೆದಿರುವೆವೆಂದು ।
ಒಂದು ಬಿಡದೆ ಮನಸಿಗೆ ತಂದು
ಎಲ್ಲ ತಿಳಿದಿಹೆವೆಂದು ಹೇಳುವ ಜನರಿಗೆ ॥ ೧ ॥

ಗಡ್ಡ ಬಿಟ್ಟು ಮಡ್ಡಿ ಕಡಿದು
ವಡ್ಡ ಕೊರವರಂತೆ ತಾವು ।
ಅಡ್ಡಿ ಇಲ್ಲದೆ ಒದರಿಕೋತ
ತಿರುಗುವಂತಹ ಮನುಜರಿಗೆ ॥ ೨ ॥

ಆರೂಢಾಚಾರ ಇದೇ ಇರುವದೆಂದು
ಮನಬಂದ ಹಾಗೆ ಕಂಡ ಕಂಡವರ ।
ಮನೆಯಲುಂಡು ಬೇಡಿಕೊಂಡು
ಮದ್ಯ ಮಾಂಸ ತಿಂದು ತಿರುಗುವರಿಗೆ ॥ ೩ ॥

ಬಿಡದೆ ಗಾಂಜಿಯನ್ನು ಸೇದಿ
ದಾರಿಗೆಟ್ಟು ಬಿದ್ದು ಕೊಂಡು ।
ಆತ್ಮದನುವ ತಿಳಿಯಲಾರದೆ
ನೆಲದ ಮೇಲೆ ಉರಳಾಡೊ ಮನುಜರಿಗೆ ॥ ೪ ॥

ನುಡಿದಂತೆ ಒಂದು ದಿನವೂ ನಡೆಯಲಿಲ್ಲ
ಎಂದಿಗೂ ಛಲ ಬಿಡಲೇ ಇಲ್ಲ ।
ದೇಶಕಧಿಕ ದೇಹ ದುರ್ಗಾಧೀಶನ
ಚರಣ ಕಮಲಕೆರಗದ ಮೂಢಜನರಿಗೆ ॥ ೫ ॥


೧೩. ಗೊಬ್ಬೂರು ಮಾರ್ತಾಂಡಪ್ಪ (೧೮೮೦-೧೯೬೦)

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗೊಬ್ಬೂರು ಮಾರ್ತಾಂಡಪ್ಪನು ಜನಿಸಿದ ಊರು. ಕ್ರಿ.ಶ. ೧೮೮೦ರಲ್ಲಿ ಕಬ್ಬೇರ ಮನೆತನದಲ್ಲಿ ಜನಿಸಿದ ಮಾರ್ತಾಂಡಪ್ಪನ ತಂದೆಯ ಹೆಸರು ಲಚುಮಣ್ಣ. ಮಾರ್ತಾಂಡಪ್ಪನು ರಾಯಚೂರು ತಾಲೂಕಿನ ವೆಂಕಟಾಪುರದ ಖೇಮಣ್ಣನ ಶಿಷ್ಯನಾಗಿದ್ದ. ಖೇಮಣ್ಣ ಈತನಿಗೆ ಅಧ್ಯಾತ್ಮದ ಗುರುವಾಗಿದ್ದ. ಮಾರ್ತಾಂಡಪ್ಪ ತನ್ನ ಬಾಲ್ಯದ ದಿನಗಳನ್ನು ಗಬ್ಬೂರಿನಲ್ಲೇ ಕಳೆದ. ಆತನಿಗೆ ಬಸಮ್ಮ, ರಾಚಮ್ಮ ಹಾಗೂ ಅಕ್ಕಮ್ಮ ಎಂಬ ಹೆಸರಿನ ಮೂವರು ಪತ್ನಿಯರು ಇದ್ದರೆಂದೂ ಪ್ರಭು, ಬಂಡೆಪ್ಪ ಹನುಮವ್ವ ಎಂಬ ಮೂವರು ಮಕ್ಕಳು ಇದ್ದರೆಂದೂ ತಿಳಿಯುವುದು. ನಾವು ಕ್ಷೇತ್ರ ಕಾರ್ಯಕ್ಕೆ ಗೊಬ್ಬೂರಿಗೆ ಹೋದಾಗ ಅವರ ವಂಶಸ್ಥರಿಂದ ಇವರ ಇತಿವೃತ್ತದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುವೆವು.


ಮಾರ್ತಾಂಡಪ್ಪ ಸಂಸಾರದಲ್ಲಿ ಬರಬರುತ್ತ ನಿರಾಸಕ್ತನಾದ. ವೆಂಕಟಾಪುರದಲ್ಲಿದ್ದ ತನ್ನ ಗುರು ಖೇಮಣ್ಣನ ಪ್ರಭಾವಕ್ಕೊಳಗಾಗಿ ಕ್ರಮೇಣ ಅನುಭಾವದ ಎತ್ತರಕ್ಕೆ ಏರಿದ. ಗೊಬ್ಬೂರನ್ನು ತ್ಯಜಿಸಿದ ಮಾರ್ತಾಂಡಪ್ಪ ಲೋಕ ಸಂಚಾರ ಕೈಕೊಂಡ. ದೂರದ ಮುಂಬೈ, ಪುನಾ, ಆದೋನಿ, ಪೂಲಚಿಂತಿ ಮುಂತಾದೆಡೆ ಸಂಚರಿಸಿ ಅಪಾರವಾದ ಲೋಕಾನುಭವವನ್ನು ಪಡೆದುಕೊಂಡ. ಆತ ಬರಬರುತ್ತ ತತ್ವಪದಗಳನ್ನು ಕಟ್ಟಿ ಹಾಡತೊಡಗಿದನು. "ಖೇಮಾರ್ಯ" ಎಂಬ ಅಂಕಿತದಲ್ಲಿ ಈತ ರಚಿಸಿದ ಅನೇಕ ತತ್ವಪದಗಳನ್ನು ನಾವೀಗ ಗುರುತಿಸುವೆವು. ಆದರೆ ಇವು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿಲ್ಲ. ಮಾರ್ತಾಂಡಪ್ಪನು ರಾಯಚೂರು ಜಿಲ್ಲೆಯ ಅನೇಕ ಊರುಗಳನ್ನು ಸುತ್ತಿದ. ಬಹುತೇಕ ರಾಯಚೂರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಈತನ ಶಿಷ್ಯರಿರುವರು. ಈತನು ಅನೇಕ ಪವಾಡಗಳನ್ನು ಮಾಡಿದನೆಂದೂ ಜನರು ಹೇಳುವರು. ಈತನನ್ನು ಜನ ದೈವೀಸ್ವರೂಪದಲ್ಲಿ ಕಂಡು ಆರಾಧಿಸುತ್ತಿರುವುದನ್ನು ನಾವೀಗ ಗುರುತಿಸುವೆವು.

ಗೊಬ್ಬೂರಿನಲ್ಲಿ ಈತನ ಗುಡಿ ನಿರ್ಮಾಣವಾಗಿದೆ. ಗರ್ಭಗುಡಿಯಲ್ಲಿ


ಮಾರ್ತಾಂಡಪ್ಪನ ಶಿಲಾಮೂರ್ತಿಯನ್ನಿರಿಸಿ ಜನ ಈಗಲೂ ಪೂಜೆ ಸಲ್ಲಿಸುವುದನ್ನು ನಾವಿಂದು ಸ್ಮಾರಕದ ರೂಪದಲ್ಲಿ ಕಾಣಬಹುದಾಗಿದೆ. ಗೊಬ್ಬೂರಿನಲ್ಲಿ ಮಾರ್ತಾಂಡಪ್ಪನ ಗುಡಿ, ಆತ ವಾಸವಾಗಿದ್ದ ಮನೆಯನ್ನು ಕಾಣುವೆವು. ಆತ ತನ್ನ ಜೀವಿತದ ಕೊನೆಯ ಅವಧಿಯನ್ನು ರಾಯಚೂರು ತಾಲೂಕಿನ ಕೊರ್ವಿಹಾಳದಲ್ಲಿ ಕಳೆದಂತಿದೆ. ಆತ ೧೯೬೦ರಲ್ಲಿ ನಿಧನನಾದನು. ಆತನ ಸಮಾಧಿ ಕೊರ್ವಿಹಾಳದಲ್ಲಿರುವುದನ್ನು ಗುರುತಿಸುವೆವು. ಆತನಿಗೆ ಸಂಬಂಧಿಸಿದ ಎಲ್ಲ ಸ್ಮಾರಕಗಳನ್ನು ಚಿತ್ರೀಕರಿಸಿಕೊಂಡು ಇಲ್ಲಿ ಚಿತ್ರ ರೂಪದಲ್ಲಿ ಕೊಟ್ಟಿದೆ.




ಗೊಬ್ಬೂರು ಗ್ರಾಮದ ತತ್ವಪದಕಾರರಾದ ಮಾರ್ತಾಂಡಪ್ಪ ಅವರ ಭಾವಚಿತ್ರ, ಗೊಬ್ಬೂರು, ತಾ – ದೇವದುರ್ಗ.




ಗೊಬ್ಬೂರಿನ ತತ್ವಪದಕಾರ ಮಾರ್ತಾಂಡಪ್ಪನ ಗುಡಿಯಲ್ಲಿರುವ ಮಾರ್ತಾಂಡಪ್ಪನ ಮೂರ್ತಿ ಚಿತ್ರ , ಗೊಬ್ಬೂರು, ತಾ – ದೇವದುರ್ಗ.




ಗೊಬ್ಬೂರಿನ ತತ್ವಪದಕಾರ ಮಾರ್ತಾಂಡಪ್ಪನ ಗುಡಿಯ ಹೊರಚಿತ್ರ , ಗೊಬ್ಬೂರು.
ತಾ – ದೇವದುರ್ಗ



ಗೊಬ್ಬೂರು ಗ್ರಾಮದ ತತ್ವಪದಕಾರ ಮಾರ್ತಾಂಡಪ್ಪ ಅವರು ವಾಸಿಸಿದ ಮನೆಯ ಎದುರುಗಡೆ ಅವರ ವಂಶಜರಾದ ಮಲ್ಲಪ್ಪ ಖರೇಲಿ ಅವರು ನಿಂತ ಚಿತ್ರ , ಗೊಬ್ಬೂರು, ತಾ – ದೇವದುರ್ಗ



ತತ್ವಪದಕಾರ ಗೊಬ್ಬೂರು ಮಾರ್ತಾಂಡಪ್ಪನ ಸಮಾಧಿಯ ಚಿತ್ರ, ಕೊರ್ವಿಹಾಳ,
ತಾ – ರಾಯಚೂರು



ತತ್ವಪದಕಾರ ಗೊಬ್ಬೂರು ಮಾರ್ತಾಂಡಪ್ಪನವರ ವಂಶಸ್ಥರು, ಕೊರ್ವಿಹಾಳ,
ತಾ – ರಾಯಚೂರು.



ತತ್ವಪದಕಾರ ಗೊಬ್ಬೂರು ಮಾರ್ತಾಂಡಪ್ಪನವರು ಪ್ರವಾಸಿಗರಿಗೆ ವಾಸಿಸಲು ಕಟ್ಟಿಸಿದ ಮನೆಯ ಚಿತ್ರ, ಕೊರ್ವಿಹಾಳ, ತಾ – ರಾಯಚೂರು.

ಮಾರ್ತಾಂಡಪ್ಪನು ಬರೆದ ತತ್ವಪದಗಳನ್ನು ರಾಯಚೂರು ಸುತ್ತಮುತ್ತಲಿನ ಜನ ಈಗಲೂ ಭಜನಾ ಸಂದರ್ಭದಲ್ಲಿ ಹಾಡುವುದುಂಟು. ಆತನ ತತ್ವಪದಗಳಲ್ಲಿ ಸತಿ–ಪತಿ–ಭಾವ, ಅರಿಷಡ್ ವರ್ಗಗಳ ಪ್ರಸ್ತಾಪ ಹೆಚ್ಚಾಗಿ ಕಾಣಿಸಿಕೊಂಡಿದೆ. ಜನ ಸಾಮಾನ್ಯರಿಗೆ ಈತನ ತತ್ವಪದಗಳು ತುಂಬ ಪ್ರಿಯವಾದುವಾಗಿವೆ. ಅಧ್ಯಾತ್ಮ ವಿಷಯವನ್ನು ಲೋಕ ವಿಸ್ತಾರದ ಸಂಗತಿಗಳೊಂದಿಗೆ ಮೇಳೈಸಿ ಹೇಳಿದ್ದು ಈತನ ತತ್ವಪದಗಳ ವೈಶಿಷ್ಟ್ಯವಾಗಿದೆ. ಈತನ ತತ್ವಪದಗಳಲ್ಲಿ ಎರಡನ್ನು ಡಾ. ಬಸವರಾಜ ಸಬರದ ಅವರ "ಹೈದರಾಬಾದ ಕರ್ನಾಟಕದ ತತ್ವಪದಗಳು" ಸಂಕಲನದಿಂದ ಆಯ್ಕೆ ಮಾಡಿ ಕೊಡಲಾಗಿದೆ.

೧. ಓಡಿ ಹೋಗೂಣು ಬಾ

ಓಡಿ ಹೋಗೂಣು ಬಾ ಸುಂದರೀ
ಕಡೆ ನೋಟಗಣ್ಣಿನ ವೈಯಾರಿ ।
ತಡ ಮಾಡದಲಿ ಹಿಡಿ ಗುಡಿದಾರಿ
ಉಡಲಿಕ್ಕೆ ಕೊಡುವೆನು ಸೀರೆ ಜರ್ತಾರಿ ॥ ಪ ॥

ಅತ್ತೆ ಮಾವಗ ಮೋಸ ಮಾಡಿ
ತುರ್ತು ಭಾವ ಗಂಡಗ ಮೆಚ್ಚು ಮಾಡಿ ।
ಹತ್ತೆಂಟು ಬಳಗಕ್ಕೆ ಮರ್ಯಾದಿ ಮಾಡಿ
ಮತ್ತೇಳು ಮಂದಿಗೆ ಸಿಗದಂಗೆ ಓಡಿ ॥ ೧ ॥

ಊರ ಬಳಗೆ ಆರು ಮಂದಿ
ಪಾರು ತಿರುಗತಾರೆ ಸರ್ವಸಂಧಿ ।
ಘೋರ ರಾತ್ರಿಯೊಳು ಪೂರಾ ಎಚ್ಚರದಿಂದಿ
ಆರಿಗೆ ಸಿಗದಂಗೆ ಸಣ್ಣ ಗಾಡಿಲಿ ಬಂದಿ ॥ ೨ ॥

ಒಳಗೆ ನೋಡಲು ಬಹಳ ಮೋಹ
ಗಿಳಿ ಕೋಗಿಲೆಗಳ ಕಲಲ ಧ್ವನಿಯು ।
ಥಳಥಳ ಹೊಳಿಯುವ ಪವಳದಾರತಿಯು
ಬಿಳಿ ಪುಷ್ಪ ರಾಶಿಯೊಳು ಬರಿ ಏಕಾಂತವು ॥ ೩ ॥

ನೋಡು ಮೂಡಲ ಕೆಂಪೇರಿತು
ಗಾಢ ಕತ್ತಲ್ಹರಿದು ಬೆಳಕಾಯಿತು ।

ಅಡಿಯಿಡು ಮನದೊಳು ತೊಡರೇಕಾಯಿತು
ಕಡೆಗಾಗಿ ಆತ್ಮವು ಸನಿಹಕ್ಕೆ ಬಂತು ॥ ೪ ॥

ನನಗೆ ನಿನಗೆ ಬಲು ಭೇದವಿಲ್ಲ
ನೀನು ತಾನಾದ ಸುಖ ಖೇಮ ಬಲ್ಲ ।
ನಾನು ನೀನೆಂಬ ಭೇದವಿನ್ನು ಸರಿಯಲ್ಲ
ಸನ್ಮತದಿಂದಲಿ ಕೂಡಿ ಬಾಳೋಣ ಎಲ್ಲ ॥ ೫ ॥

೨. ವೆಂಕಟಾಪುರಕ ಹೋಗೂನು

ವೆಂಕಟಾಪುರಕ ಹೋಗೂನು ನಡಿಯಮ್ಮಾ
ಸಂಕಟಾ ದೂರು ಮಾಡೊ ಗುರುವು ಹಾನಮ್ಮಾ ॥ ಪ ॥

ಗುರುವಿನ ದರ್ಶನ ಅಲ್ಲಿ ಪಡೆಯಮ್ಮಾ ।
ಅರಿವಿನ ವಿಷಯ ಬಲ್ಲಿ ತಿಳಿಯಮ್ಮಾ ॥ ೧ ॥

ಭಕ್ತಿಯಿಂದ ಮಾಂಸಾ ಹಿಡಿಯಮ್ಮಾ
ಶಕ್ತಿಲಿಂದ ಮಲ್ಲಿಗೆಯಾಯ್ತಮ್ಮಾ ॥ ೨ ॥

ಒಂದೇ ಮನದಿ ಹೆಂಡಾ ಕುಡಿಯಮ್ಮಾ
ಅಂದೇ ಅದು ಹಾಲು ಆಯಿತಮ್ಮಾ ॥ ೩ ॥

ಅಂದು ಇಂದು ಎನ್ನ ಬೇಡಮ್ಮಾ
ಇಂದೇ ಗುರುವಿನ ಪೂಜೆ ಮಾಡಮ್ಮಾ ॥ ೪ ॥


ಖೇಮಾ ಎಂಬೋದು ಆತನ ಹೆಸರಮ್ಮಾ
ಹೋಮಾ ಹವನಾ ಏನೂ ಬೇಡಮ್ಮಾ ॥ ೫ ॥

೧೪. ಗೋನವಾರದ ರಾಮದಾಸ (೧೮೮೨-೧೯೪೨)

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜೋಳದ ಹೆಡಿಗೆ ಎಂಬ ಗ್ರಾಮದಲ್ಲಿ ಕ್ರಿ.ಶ. ೧೮೮೨ರಲ್ಲಿ ರಾಮದಾಸರು ಜನಿಸಿದರು. ಮುಸಲ್ಮಾನ ಧರ್ಮದ ಪಂಗಡವಾದ ಪಿಂಜಾರ ಮನೆತನಕ್ಕೆ ಸೇರಿದ ಇವರ ತಂದೆ ತಾಯಿ ಇಟ್ಟ ಹೆಸರು ಬಡೇಸಾಬ. ಇವರ ತಂದೆ ಹೆಸರು ಖಾಜಾ ಸಾಹೇಬ ತಾಯಿಯ ಹೆಸರು ಪೀರಮ್ಮ. ಜೋಳದ ಹೆಡಿಗೆ ಗ್ರಾಮದಲ್ಲಿಯೇ ಬಡೆಸಾಹೇಬರು ತಮ್ಮ ಬಾಲ್ಯದ ಬದುಕನ್ನು ಬಡತನದ ಬವಣೆಯಲ್ಲಿ ಕಳೆದರು. ಕೆಲ ವರ್ಷ ಅದೇ ಊರಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪಡೆದರು. ಕನ್ನಡದಲ್ಲಿ ಓದಲಿಕ್ಕೆ ಬರೆಯಲಿಕ್ಕೆ ಬರುವಷ್ಟು ವಿದ್ಯಾಭ್ಯಾಸವನ್ನು ಪೂರೈಸಿದ ಬಡೆಸಾಹೇಬರು ಮುಂದೆ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಜೋಳದ ಹೆಡಿಗೆಯ ಮಾಲಿಪಟೇಲರ ಅಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡರು. ಕೆಲ ಕಾಲ ಈ ಕೆಲಸ ಪೂರೈಸಿ ಮುಂದೆ ಅವರು ಮಾನ್ವಿ ತಾಲೂಕಿನ ಹಣಗಿ ಗ್ರಾಮದಲ್ಲಿ ಖಾಸಗಿ ಶಿಕ್ಷಕರಾಗಿ ಶಾಲೆಯನ್ನು ತೆರೆದರು. ಅಲ್ಲಿ ಅವರ ಜೀವನ ನಿರ್ವಹಣೆಗೆ ಕಷ್ಟವಾಗಲು ಅದನ್ನು ಬಿಟ್ಟು ಪುನಃ ಊರಿಗೆ ಬಂದರು. ಇದೇ ವೇಳೆಗೆ ಇವರ ಮದುವೆ ದೇವದುರ್ಗದ ಹುಸೇನಮ್ಮ ಅವರೊಂದಿಗೆ ನಡೆಯಿತು. ಮನೆಯ ಸಂಸಾರ ತೂಗಿಸುವುದು ಇವರಿಗೆ ಕಷ್ಟವಾಗತೊಡಗಿತಲ್ಲದೆ, ಇವರ ತಾಯಿ ತಂದೆಗಳೂ ಈಗ ತೀರಿ ಹೋದರು. ಈಗ ಬಡೆಸಾಹೇಬರು ಈ ಊರನ್ನು ಬಿಟ್ಟು ತಮ್ಮ ಕುಟುಂಬದೊಂದಿಗೆ ಹೊಟ್ಟೆ ಹೊರೆದುಕೊಳ್ಳಲು ಲಿಂಗಸುಗೂರು ತಾಲೂಕಿನ ಗೋನವಾರ ಗ್ರಾಮಕ್ಕೆ ಬಂದು ನೆಲೆಸಿದರು. ಮೃದು ಸ್ವಭಾವದ, ಸುಸಂಸ್ಕೃತ ಮನಸ್ಸಿನ ಬಡೇಸಾಹೇಬರು ಗೋನವಾರದ ಜನತೆಯ ಮನಸ್ಸನ್ನು ಗೆದ್ದರು. ಅಲ್ಲಿ ಅವರು ಖಾಸಗೀ ಶಾಲೆಯೊಂದನ್ನು ಪ್ರಾರಂಭಿಸಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸತೊಡಗಿದರು. ಹುಟ್ಟಿನಿಂದ ಬಡೇಸಾಹೇಬರು ಮುಸ್ಲಿಂರಾದರೂ ಗೋನವಾರದ ಹಿಂದೂಗಳ, ವೈದಿಕರ ಮನಸ್ಸನ್ನು ಗೆದ್ದರು. ಅಧ್ಯಾತ್ಮ ಪ್ರವೃತ್ತಿಯ ಬಡೇಸಾಹೇಬರಿಗೆ ವೈದಿಕ ಸಮಾಜದ ಗೆಳೆಯರೊಡನೆ ಒಡನಾಟ ಹೆಚ್ಚಾದುದರಿಂದ ಸಂಗೀತ, ಭಜನೆ, ಕೀರ್ತನೆ, ತತ್ವಪದ, ಪುರಾಣ, ಪ್ರವಚನ, ಸಂಸ್ಕೃತ ಸಾಹಿತ್ಯದ

ಪರಿಚಯುವಾಯಿತು. ಅಲ್ಲಿನ ಜೋಯಿಸ ಮನೆತನದ ದಿ. ಶ್ರೀ. ವೆಂಕಟಭೀಮಾಚಾರ್ಯ ಮತ್ತು ಶ್ರೀ ಹನುಮಂತಾಚಾರ್ಯ ಇವರ ಸಂಪರ್ಕದಿಂದ ಬಡೇಸಾಹೇಬರ ವ್ಯಕ್ತಿತ್ವದಲ್ಲಿ ಪರಿಣಾಮಕಾರಿಯಾದ ಬದಲಾವಣೆಯಾಯಿತು. ಇವರ ಮೃದು ಹಾಗೂ ಮುಗ್ಧ ವ್ಯಕ್ತಿತ್ವವನ್ನು ಮೆಚ್ಚಿಕೊಂಡ ಗೋನವಾರದ ಶ್ರೀನಿವಾಸ ಕುಲಕರ್ಣಿ ಅವರು ಇವರಿಗೆ ಬೆಂಗಾವಲಾಗಿ ನಿಂತರು. ಆಶ್ರಯ ನೀಡಿದರು. ಇದೇ ವೇಳೆಗೆ ಇವರ ಪತ್ನಿ ಹುಸೇನಮ್ಮ ಬೇರೆಯಾದ ಕಾರಣದಿಂದಾಗಿ ಬಡೇಸಾಹೇಬರು ಲಿಂಗದಳ್ಳಿಯ ಅಲ್ಲಮ್ಮ ಎಂಬುವವಳನ್ನು 'ಉಡುಕಿ' ಮದುವೆ ಮಾಡಿಕೊಂಡರು. ಇವರಿಗೆ ಮೊದಲನೇ ಹೆಂಡತಿಯಿಂದ ಹುಟ್ಟಿದ ಸೋಫಿಯೆಂಬ ಮಗನಿದ್ದ. ಈತನನ್ನು ಎರಡನೇ ಹೆಂಡತಿ ಅಲ್ಲಮ್ಮನವರೇ ಸಾಕಿದರು. ಕೆಲಕಾಲ ಬಡೇಸಾಹೇಬರು ಗೋನವಾರದಲ್ಲಿ ಸಂಸಾರ ನಡೆಸಿದರು. ಸಂಸಾರದಲ್ಲಿ ಏಕೋ ಅವರಿಗೆ ನಿರಾಸಕ್ತಿ ಮೂಡಿತು. ಆಗ ಅವರು ಗೋನವಾರದಿಂದ ರಾಯಚೂರಿಗೆ ಬರುವರು. ಅಲ್ಲಿ ಒಬ್ಬ ಸಾಧುವಿನ ಕರೆಯ ಮೇರೆಗೆ ಹಂಪಿಗೆ ಹೋದರು. ಅಲ್ಲಿ ಕೆಲಕಾಲ ಅವರೊಂದಿಗೆ ಇರುವಾಗಲೇ ಅವರು ಇವರನ್ನು ಬಿಟ್ಟು ಹೋದರು. ಅಲ್ಲಿ ಒಬ್ಬಂಟಿಗರಾಗಿ ಯೋಚಿಸುತ್ತಿರುವಾಗ ವೃದ್ಧ ಸಾಧು ರಾಮಾವಧೂತರು ಇವರನ್ನು ಕರೆದುಕೊಂಡು ತಮ್ಮ ಮನೆಗೆ ಹೋದರು. ಅಲ್ಲಿ ರಾಮಾವಧೂತ ದಂಪತಿಗಳ ಸೇವೆ ಮಾಡುತ್ತ ಇವನು ಕೆಲಕಾಲ ಇದ್ದರು. ಹೀಗಿರುವಾಗ ಬಡೇಸಾಹೇಬರಿಗೆ ಊರ ಕಡೆಗೆ ನೆನಪಾಯಿತು. ಇದನ್ನರಿತ ರಾಮಾವಧೂತರು, "ನೀನೀಗ ಊರಿಗೆ ಹೋಗು ಮುಂದಿನ ವರ್ಷ ಇದೇ ದಿನ ಇಲ್ಲಿಗೆ ಬಂದೆಯೆಂದರೆ ನನ್ನ ಭೇಟಿಯಾಗುವುದು" ಎಂದು ಹೇಳಿ ಕಳಿಸಿದರು. ಆ ಪ್ರಕಾರ ಇವರು ಅಪಾರ ಜ್ಞಾನಿಗಳಾಗಿ ಗೋನವಾರಕ್ಕೆ ಬಂದರು. ಬಂದು ಭಜನೆ, ಕೀರ್ತನೆ, ತತ್ವಪದಗಳನ್ನು ಬರೆಯತೊಡಗಿದರು. ಜನರೆಲ್ಲ ಇವರನ್ನು ದೈವೀಪುರಷರಂತೆ ಕಾಣತೊಡಗಿದರು. ತಮ್ಮ ಗುರುಗಳ ಆದೇಶದಂತೆ ಒಂದು ವರ್ಷವಾದೊಡನೆ ಅವರ ಭೆಟ್ಟಿಗೆ ಹಂಪಿಗೆ ಹೋದರು. ಹೋಗುವಾಗ ಒಂದು ದಿನ ತಡವಾದ್ದರಿಂದ ಗುರುಗಳು ಅಲ್ಲಿರಲಿಲ್ಲ. ಮನೆಗೆ ಬೀಗ ಹಾಕಿದುದನ್ನು ಕಂಡು ಅಲ್ಲೇ ಮನೆ ಮುಂದೆ ಮೂರು ದಿನ ಕುಳಿತರು. ಅವರು ಬಾರದೇ ಇದ್ದುದರಿಂದ ಬೇಸರಿಸಿಕೊಂಡು ಅಲ್ಲಿನ ಚಕ್ರತೀರ್ಥದಲ್ಲಿ ಹಾರಿ ಪ್ರಾಣ ಬಿಡಬೇಕೆಂದು ನಿಶ್ಚಯಿಸಿ ಹಾರಿದರು. ಆದರೆ ಅವರು ಸುರಕ್ಷಿತವಾಗಿ ದಂಡೆಯ ಮೇಲೆ ಬಂದಿದ್ದರು. ರಾಮನಾಮವನ್ನವರು ಆಗ ಜಪಿಸುತ್ತಿದ್ದರು. ಈಗ ಪ್ರಾಪಂಚಿಕ ದುಃಖ ಮರೆಯಾಗಿ ಅವರಲ್ಲಿ ಅಧ್ಯಾತ್ಮಿಕ ವಿಚಾರಗಳು ತುಂಬಿಕೊಂಡವು. ಅವರಿಗೆ ದಿವ್ಯಜ್ಞಾನ ಲಭ್ಯವಾಯಿತು. ಅಲ್ಲಿಂದ ಅವರು ಗೋನವಾರಕ್ಕೆ ಬಂದರು. ಗುರುಗಳ ಭೆಟ್ಟಿ ಅವರಿಗೆ ಆಗಲಿಲ್ಲವಾದರೂ, ಆ ಗುರುವನ್ನು ತಮ್ಮ ಆತ್ಮದಲ್ಲಿ ತುಂಬಿಕೊಂಡು ಬಂದಿದ್ದರು. ಅಂದಿನಿಂದ

ರಾಮದಾಸರೆಂದು ನಾಮಾಂಕಿತಗೊಂಡರು. ಶ್ರೀರಾಮನ ಅಂಕಿತವನ್ನು ಇಟ್ಟುಕೊಂಡು ಅನೇಕ ಕೀರ್ತನೆ, ತತ್ವಪದಗಳನ್ನು ರಚಿಸಿದರು. ಜನರ ಕಣ್ಣಲ್ಲಿ ಇವರು ಜಾತಿ ಮತಗಳನ್ನು ಮೀರಿನಿಂತ ಸಂತರಾಗಿ ಕಂಡರು. ಬಡೇಸಾಹೇಬರು ಈಗ ರಾಮದಾಸರಾದರು. ಅಧ್ಯಾತ್ಮದ ಶಕ್ತಿಯನ್ನು ಹೊಂದಿದ್ದರೂ ಎಳ್ಳಷ್ಟೂ ಗರ್ವ ಅವರಲ್ಲಿರಲಿಲ್ಲ. ಸರಳ ಸಾದಾ ಉಡುಪು ಅವರದಾಗಿತ್ತು. ಧೋತರ, ಅಂಗಿ, ಪೇಟಾ ಧರಿಸುತ್ತಿದ್ದರು. ಇವರ ಮಗ ಸೋಫಿ ಹನ್ನೆರಡು ವರ್ಷದವನಾಗಿದ್ದಾಗ ಜಡ್ಡಿನಿಂದ ತೀರಿಹೋದ. ಆಗ ಇವರು ತುಂಬ ನಿರ್ಲಿಪ್ತರಾಗಿದ್ದರು. ಜನ ಬಂದು ನಿಮ್ಮ ಮಗನಿಗೆ ಹೀಗಾಗಬಾರದಿತ್ತು ಎಂದರೆ, ಅವರು ಹೋಗಲಿ ಬಿಡು, ಅಂದರಂತೆ, ಆಗಿನಿಂದ ಅವರಿಗೆ ಸಂಸಾರದಲ್ಲಿ ನಿರಾಸಕ್ತಿ ಮೂಡಿತು. ಅವರು ತಮ್ಮ ಜೀವಿತದ ಕೊನೆಯ ದಿನಗಳನ್ನು ತಮ್ಮ ಹೆಂಡತಿ ಅಲ್ಲಮ್ಮಳ ತವರೂರಾದ ದೇವದುರ್ಗ ತಾಲೂಕಿನ ಲಿಂಗದಳ್ಳಿಯಲ್ಲಿ ಕಳೆದರು. ಗೋನವಾರವನ್ನು ಇವರು ಬಿಟ್ಟು ಬಂದರೂ ಗೋನವಾರದ ಜನ ಇವರನ್ನು ಮರೆಯಲಿಲ್ಲ. ಕೊನೆಗೆ ರಾಮದಾಸರು ಲಿಂಗದಳ್ಳಿಯಲ್ಲಿಯೇ ಕ್ರಿ.ಶ, ೧೯೪೨ರ ಮಾರ್ಗಶಿರ ಬಹುಳದಶಮಿ ದಿನದಂದು ತಮ್ಮ ದೇಹವನ್ನು ತ್ಯಜಿಸಿದರು. ಈಗ ಅವರ ಸಮಾಧಿಯ ಸುತ್ತಲೂ ಇಲ್ಲಿ ತುಳಸಿಯ ವನಾಂತರವನ್ನೇ ನಿರ್ಮಿಸಲಾಗಿದೆ. ಇಲ್ಲಿಯೇ ಇವರ ಗದ್ದುಗೆ ಇದೆ. ಇವರ ಪತ್ನಿ ಸಾಧ್ವಿ ಅಲ್ಲಮ್ಮನವರು ಸಹಿತ ಲಿಂಗದಳ್ಳಿಯಲ್ಲಿಯೇ ತಮ್ಮ ದೇಹ ತ್ಯಾಗ ಮಾಡಿದರು. ಇವರ ಸಮಾಧಿಯೂ ಇಲ್ಲಿಯೇ ಇದೆ. ಇವನ್ನೆಲ್ಲ ಸ್ಮಾರಕಗಳ ರೂಪದಲ್ಲಿ ಚಿತ್ರಿಸಿಕೊಂಡು ಇಲ್ಲಿ ಕೊಟ್ಟಿದೆ.




ಲಿಂಗಸುಗೂರು ತಾಲೂಕಿನ ಗೋನವಾರದಲ್ಲಿನ ಶ್ರೀನಿವಾಸ ಕುಲಕರ್ಣಿ ಅವರ ಮನೆಯಲ್ಲಿ ಪೂಜೆಗೊಳ್ಳುತ್ತಿರುವ ತತ್ವಪದಕಾರ ರಾಮದಾಸರ ಭಾವಚಿತ್ರ, ಗೋನವಾರ.



ಗೋನವಾರದಲ್ಲಿನ ಶ್ರೀನಿವಾಸ ಕುಲಕರ್ಣಿಯವರ ಮನೆಯ ಮುಂದಿನ ಕಟ್ಟೆಯ ಮೇಲೆ
ರಾಮದಾಸರು ಕೂಡ್ರುತ್ತಿದ್ದ ಸ್ಥಳ, ಗೋನವಾರ, ತಾ – ಲಿಂಗಸುಗೂರು.




ತತ್ವಪದಕಾರ ಗೋನವಾರದ ರಾಮದಾಸರು ಮೂವತ್ತು ವರ್ಷ ವಾಸವಾಗಿದ್ದ
ಗೋನವಾರದಲ್ಲಿನ ಶ್ರೀನಿವಾಸರಾವ್ ಕುಲಕರ್ಣಿಯವರ ಮನೆಯಚಿತ್ರ, ಗೋನವಾರ,
ತಾ – ಲಿಂಗಸುಗೂರು.



ಲಿಂಗದಳ್ಳಿ ಊರ ಹೊರಗಿರುವ ರಾಮದಾಸ ಕಟ್ಟೆ, ಗುಡಿಯೊಳಗಿರುವ ರಾಮದಾಸ ಅವರ ಸಮಾಧಿಯ ಚಿತ್ರ, ಲಿಂಗದಳ್ಳಿ, ತಾ – ದೇವದುರ್ಗ.




ಲಿಂಗದಳ್ಳಿ ಹೊರವಲಯದಲ್ಲಿರುವ ಶ್ರೀ ಗೋನವಾರ ರಾಮದಾಸರ ಕಟ್ಟೆ – ಗುಡಿಯ ಹೊರಚಿತ್ರ ಲಿಂಗದಳ್ಳಿ ತಾ – ದೇವದುರ್ಗ.



ಲಿಂಗದಳ್ಳಿಯ ಹತ್ತಿರವಿರುವ ರಾಮದಾಸರ ಗುಡಿಯ ಕಟ್ಟೆಯ ಚಿತ್ರ ಲಿಂಗದಳ್ಳಿ,
ತಾ – ದೇವದುರ್ಗ.



ಗೋನವಾರದ ರಾಮದಾಸರ ಎರಡನೇ ಪತ್ನಿ ಅಲ್ಲಮ್ಮನವರ ಚಿತ್ರ ಲಿಂಗದಳ್ಳಿ,
ತಾ – ದೇವದುರ್ಗ.



ಗೋನವಾರದ ರಾಮದಾಸರ ಎರಡನೇ ಪತ್ನಿ
ಅಲ್ಲಮ್ಮನವರ ಸಮಾಧಿ ಚಿತ್ರ ಲಿಂಗದಳ್ಳಿ,
ತಾ – ದೇವದುರ್ಗ.

ಗೋನವಾರದ ರಾಮದಾಸರ ಮೊಮ್ಮಗಳಾದ
ತಾರಾಭಿಯವರು ಲಿಂಗದಳ್ಳಿ
ಹೊರವಲಯದಲ್ಲಿರುವ ರಾಮದಾಸ ಕಟ್ಟೆಯ
ಎದುರಿಗಿರುವ ಮನೆಯಲ್ಲಿ ವಾಸಿಸುತ್ತಿರುವ
ಚಿತ್ರ, ತಾ – ದೇವದುರ್ಗ.



ಇವರ ಮೂರು ತತ್ವಪದಗಳನ್ನು ಡಾ. ಬಸವರಾಜ ಸಬರದ ಅವರು ಸಂಪಾದಿಸಿದ "ಹೈದರಾಬಾದ ಕರ್ನಾಟಕದ ತತ್ವಪದಗಳು" ಕೃತಿಯಿಂದ ಆಯ್ದುಕೊಂಡು ಇಲ್ಲಿ ಕೊಟ್ಟಿದೆ.

೧. ಎಲ್ಲಿಂದ ಬಂದಿದ್ದೆಲೆ ಖೋಡಿ

ಎಲ್ಲಿಂದ ಬಂದಿದ್ದೆಲೆ ಖೋಡಿ ನೀ
ನೆಲ್ಲಿಗೆ ಹೋಗತಿದ್ದಿ ತ್ವರೆ ಮಾಡಿ ॥ ಪ ॥

ಕಲ್ಲು ಮುಳ್ಳೆನ್ನದೆ ಮುಂದೆ ನೋಡಿ । ಜರ
ನಿಲ್ಲದೆ ಹೋಗ್ತಿದ್ದಿ ಓಡೋಡಿ ॥ ಅ. ಪ ॥

ಏಳು ಗೇಣಿನ ಕುದರೇರಿದ್ದಿ । ಭವ
ಮಾಲೆ ಕೊರಳಿಗೆ ಹಾಕಿದ್ದಿ
ಮೂಲ ಲಗಾಮವೆ ತೆಗೆದಿದ್ದಿ । ನೀ
ಬೀಳುವ ಎಚ್ಚರ ಮರೆತಿದ್ದಿ ॥ ೧ ॥

ಶೀಲ ಸನ್ಮಾರ್ಗವ ಬಿಟ್ಟಿದ್ದಿ । ಕರಿ
ಕಾಳ ಕತ್ತಲಹಾದಿ ಹಿಡಿದಿದ್ದಿ
ಕಾಲನಾಳಿನ ಕೈಗೆ ಸಿಗುತಿದ್ದಿ । ಬಹು
ಗೋಳಿನೊಳಗೆ ಹೋಗಿ ಬೀಳುತಿದ್ದಿ ॥ ೨ ॥

ಅಸ್ಥಿರ ಕುದುರೆ ಹತ್ತಿದ್ದಿ । ಬಲು
ಮಸ್ತಿಲಿಂದ ಕಣ್ಣು ಮುಚ್ಚಿದ್ದಿ
ಪುಸ್ತಿಯಿಲ್ಲದ ದಾರಿ ಹಿಡಿದಿದ್ದಿ । ಮುಂದೆ
ಸ್ವಸ್ಥತೆ ಹ್ಯಾಂಗೆ ನೀ ಪಡಿತಿದ್ದಿ ॥ ೩ ॥

ಯಾರನ್ನು ಬೇಡಿ ಬಂದಿದ್ದಿ । ನೀ
ನಾರ ಸೇವೆಯನ್ನು ಕೈ ಕೊಂಡಿದ್ದಿ
ದಾರಿತಪ್ಪಿ ದಾರಿ ಹಿಡಿದಿದ್ದಿ । ಸುವಿ
ಚಾರ ಪಥವ ಧಾರೆರೆದಿದ್ದಿ ॥ ೪ ॥

ಬಂದ ಕಾರ್ಯವನು ತೊರೆದಿದ್ದಿ । ಮನ
ಬಂದಂತೆ ಕುಣಿಕುಣಿದಾಡಿದ್ದಿ
ತಂದೆ ಶ್ರೀರಾಮನ ಮರೆತಿದ್ದಿ । ಈ
ಬಂಧುರ ಸಮಯ ವ್ಯರ್ಥ ಕಳಿತಿದ್ದಿ ॥ ೫ ॥

೨. ಕುಲವಂತನೇ ನೀನು

ಕುಲವಂತನೇ ನೀನು ಎಲೋ ಪರಮಾನಂದ
ಕುಹೀನನೇ ನಾನು ಹೇಳೆಲವೊ ಸ್ವಾಮಿ ॥ ಪ ॥

ಹೊಲೆಯ ಪೆದ್ದಯ್ಯಗೆ ಒಲಿದವನ ಆಳಾದಿ
ಕುಲದಿ ಮಾದಿಗರ್ಹರಳಯ್ಯನ ಮನೆಲುಂಡಿ
ಚೆಲುವ ಕೂಸಿನ ಕೊರತೆ ನಲಿಸಿದಿ ಬಲು ಹಿತದಿ
ಮಲಿನ ಸೀರೆಯ ನಿನ್ನ ತಲೆಗೆ ಸುತ್ತಿಕೊಂಡಿ ॥ ೧ ॥

ಡೊಂಬಿತಿಯ ಗುಡಿಸಲಲಿ ಸಂಭ್ರಮದಿ ಮಲಗಿದಿ
ಶಂಭೋ ಕುಣಿದೆಲೋ ಕುಂಬಾರಗೊಲಿದಿ
ಬೆಂಬಲಿಸಿ ತಿರುಗಿದಿ ಭಕ್ತರ ಪೊರಿದಿ
ಇಂಬು ಸುಡುಗಾಡು ನಿನಗೆ ಅಂಬುಧಿ ದರನೆ ॥ ೨ ॥

ಪುಲಿಚರ್ಮ ಹಾಸಿದಿ ಹೊಲೆಚರ್ಮವುಟ್ಟಿರುವಿ
ತಲೆ ಬುರುಡೆ ಕೊರಳಿಗೆ ಮಾಲೆ ಧರಿಸಿರುವಿ
ಎಲೊ ದೇವ ಇನಿತಿರ್ದು ಕುಲವಣಿಣಿಸುವಿ
ಒಲಿದು ಬಂದವರಿಗೆ ಶ್ರೀರಾಮನಾಗುವಿ ॥ ೩ ॥

೩. ಕೇಳವ್ವ ತಂಗಿ

ಕೇಳವ್ವ ತಂಗಿ ಕೇಳವ್ವ
ಕೇಳಿ ತಿಳಿದು ನೀ ಬಾಳವ್ವ ॥ ಪ ॥

ನೀಲವರ್ಣನ ಕೃಪೆಯಾಗಲಿಕೆ
ನಾಳೆಂದರೆ ಮನೆ ಹಾಳವ್ವ ॥ ಅ. ಪ ॥

ಅಂಬುಜಾಕ್ಷನ ಪಾದಕಮಲವ್ವ ನೀ
ನಿಂಬಿದ್ದಿ ಬಿಡಬೇಡ ಸಂಗವ್ವ
ನಂಬಿದ ಭಕ್ತರ ಬೆಂಬಲಿಸವ್ವ
ಇಂಬುಗೊಟ್ಟು ಕಾಯ್ವ ಸಂಭ್ರಮವವ್ವ ॥ ೧ ॥

ಒಂದೆ ಮನಿಸಿನ ಬಾಗವ್ವ ಗೋ
ವಿಂದನ ವರ ಪಡಿ ಚೆಂದವ್ವ

ಮಂದರಧರನನು ಹೊಂದಿಕೊಳ್ಳಲು
ಹಿಂದು ಮುಂದೆ ನೀ ನೋಡಬೇಡವ್ವ ॥ ೨ ॥

ಒಂದಿನ ಹೋಗ್ವುದು ಸತ್ಯವ್ವ । ತಂಗಿ
ಸಂದೇಹ ಪಡಬೇಡ ಹುಚ್ಚವ್ವ
ತಂದೆ ಶ್ರೀರಾಮ ಗತಿಯೆಂದು ನಂಬಲು
ಬಂಧನವೆಲ್ಲ ಬಯಲವ್ವ ॥ ೩ ॥

೧೫. ರಾಯಚೂರ ಹನುಮಂತವ್ವ (೧೯೦೪-೧೯೮೯)

ಹನುಮಂತವ್ವ ರಾಯಚೂರು ಜಿಲ್ಲೆಯ ಮೊದಲ ತತ್ವಪದಕಾರ್ತಿ. ಈಕೆಯು ದೊಡ್ಡಬಳ್ಳಾಪೂರ ತಾಲೂಕಿನ ಬನವತಿ ಎಂಬ ಗ್ರಾಮದಲ್ಲಿ. ಕ್ರಿ.ಶ. ೧೯೦೪ರಲ್ಲಿ ಜನಿಸಿರುವಳು. ಈಕೆಯನ್ನು ರಾಯಚೂರಿನ ಪಲ್ಲುಗಲ ನಾಗಯ್ಯನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಮದುವೆಯಾದ ನಂತರ ಈಕೆ ರಾಯಚೂರಿಗೆ ಬಂದು ವಾಸಿಸತೊಡಗಲು ಈಕೆಗೆ ಜನ ರಾಯಚೂರ ಹನುಮಂತವ್ವ ಎಂದು ಕರೆಯತೊಡಗಿದರು. ಈಕೆ ಜನಿಸಿದುದು ವೈಶ್ಯ ಮನೆತನದಲ್ಲಿ. ಈಕೆಯ ತಂದೆ ನಂಜುಂಡೇಶ ತಾಯಿ ಸೀತಾದೇವಿ.


'ಬೆಳೆವ ಸಿರಿ ಮೊಳಕೆಯಲ್ಲಿ ಕಾಣು' ಎಂಬಂತೆ ಎಳೆವರೆಯದಲ್ಲೇ ಹನುಮಂತವ್ವ ಅಧ್ಯಾತ್ಮದ ಕಡೆಗೆ ವಾಲಿದಳು. ಸಂಸಾರದಲ್ಲಿ ಆಕೆಗೆ ಆಸಕ್ತಿ ಕಡಿಮೆಯಾಗಲು ಆಕೆ ಗಂಡನಿಗೆ ಮತ್ತೊಂದು ಮದುವೆ ಮಾಡಿಸಿ ತಾನು ಸಂಸಾರದಿಂದ ಮುಕ್ತಿ ಪಡೆದಳು. ಆಕೆ ಅಂದಿನಿಂದ ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿರುವ ಭೀಮಾವಧೂತರ ಆಶ್ರಮವನ್ನು ಸೇರಿಕೊಂಡಳು. ಭೀಮಾವಧೂತರು ಅವಧೂತ ಪರಂಪರೆಗೆ ಸೇರಿದ ಮಹಾತ್ಮರು. ಅವರ ಮಾರ್ಗ ದರ್ಶನದಲ್ಲಿ ಅಧ್ಯಾತ್ಮ ಮಾರ್ಗದಲ್ಲಿ ಮುನ್ನಡೆದ ಹನುಮಂತವ್ವ ಹಾಡುಗಳನ್ನು, ತತ್ವಪದಗಳನ್ನು ಬರೆಯಲಾರಂಭಿಸಿದಳು. ಮುಂದೆ ಭೀಮಾವಧೂತರು ಐಕ್ಯವಾದ ನಂತರ ಅದೇ ಆಶ್ರಮದಲ್ಲಿ ಸಾಧನೆ ಮಾಡಿ ನೆಲೆಕಂಡುಕೊಂಡಳಲ್ಲದೆ ಹನುಮಾವಧೂತಳಾಗಿ ಜನಮನ್ನಣೆ ಗಳಿಸಿದಳು. ಈಕೆ ಪೂಜೆ, ಧ್ಯಾನ ಹಾಗೂ ಅನುಷ್ಠಾನದಲ್ಲಿ ತನ್ನನ್ನು ತೊಡಗಿಸಿಕೊಂಡಳು. ಇವಳು ಮೂನ್ನೂರಕ್ಕಿಂತಲೂ ಹೆಚ್ಚಿಗೆ ತತ್ವಪದಗಳನ್ನು ಬರೆದಿದ್ದು, ಅವಿನ್ನೂ ಗ್ರಂಥರೂಪದಲ್ಲಿ ಪ್ರಕಟಗೊಂಡಿಲ್ಲ. ತನ್ನ ತತ್ವಪದಗಳಿಗೆ ಹನುಮಂತವ್ವ "ಗುರು ವೆಂಕಟೇಶ"ವೆಂಬ ಅಂಕಿತವನ್ನಿರಿಕೊಂಡಿದ್ದಾಳೆ. ಹನುಮಂತವ್ವ ೧೯೮೯ರಲ್ಲಿ ನಿಧನಳಾದಳು. ಈ ಆಶ್ರಮದಲ್ಲಿಯೇ ಆಕೆಯ ಸಮಾಧಿ ಇದೆ. ಹನುಮಂತವ್ವನ ಭಾವಚಿತ್ರ, ಆಕೆ ವಾಸಿಸಿದ ಆಶ್ರಮ ಹಾಗೂ ಆಕೆಯ ಸಮಾಧಿ ಚಿತ್ರವನ್ನು ಚಿತ್ರೀಕರಿಸಿಕೊಂಡು ಇಲ್ಲಿ ಸ್ಮಾರಕದ ರೂಪದಲ್ಲಿ ನೀಡಿರುವೆವು.




ರಾಯಚೂರಿನ – ಜಹೀರಾಬಾದ ಪ್ರದೇಶದಲ್ಲಿದ್ದ ತತ್ವಪದಕಾರ್ತಿ ಹನುಮಂತವ್ವ
(ಹನುಮಾವಧೂತರ) ಭಾವಚಿತ್ರ, ರಾಯಚೂರು.



ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿರುವ ತತ್ವಪದಕಾರ್ತಿ ಹನುಮಂತವ್ವನವರ
ಭೀಮಾವಧೂತ ಆಶ್ರಮದ ಹೊರನೋಟ, ರಾಯಚೂರು.




ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿದ್ದ ತತ್ವಪದಕಾರ್ತಿ ಹನುಮಂತವ್ವನವರ ಸಮಾಧಿ/
ಗದ್ದುಗೆಯ ಚಿತ್ರ , ರಾಯಚೂರು.



ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿರುವ ಭೀಮಾವದೂತ ಆಶ್ರಮದಲ್ಲಿದ್ದ ತತ್ವಪದಕಾರ್ತಿ
ಹನುಮಂತವ್ವನವರ ಗುರು ವೆಂಕಮ್ಮನವರ ಸಮಾಧಿ / ಗದ್ದುಗೆ ಚಿತ್ರ , ರಾಯಚೂರು.



ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿದ್ದ ತತ್ವಪದಕಾರ್ತಿ ಹನುಮಂತವ್ವನವರ ಭೀಮಾವಧೂತ ಆಶ್ರಮದೆದುರು ನಿಂತ ಹನುಮಂತವ್ವನವರ ಸಂಬಂಧಿಕರಾದ ವೆಂಕಟೇಶ ಅವರ ಚಿತ್ರ, ರಾಯಚೂರು.



ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿದ್ದ ಭೀಮಾವಧೂತರ ಆಶ್ರಮದೊಳಗಿರುವ ತತ್ವಪದಕಾರ್ತಿ ಹನುಮಂತವ್ವನವರ ಗುರು ವೆಂಕಮ್ಮನವರ ಗುರುಗಳಾದ ಭೀಮಾವಧೂತರ ಸಮಾಧಿಯ ಚಿತ್ರ , ರಾಯಚೂರು.

ಹನುಮಂತವ್ವ ಬರೆದ ತತ್ವಪದಗಳನ್ನು ಡಾ. ಬಸವರಾಜ ಸಬರದ ಅವರು ತಮ್ಮ "ಹೈದರಾಬಾದ ಕರ್ನಾಟಕದ ತತ್ವಪದಗಳು" ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದು ಅವರ ಸಂಗ್ರಹದಿಂದ ಆಕೆಯ ಐದು ತತ್ವಪದಗಳನ್ನು ಆಯ್ಕೆ ಮಾಡಿಕೊಂಡು ಇಲ್ಲಿ ಕೊಟ್ಟಿದೆ.

೧. ಅಕ್ಕಸಾಲಿಗ ಬಂದ ನೋಡಮ್ಮ

ಅಕ್ಕಸಾಲಿಗ ಬಂದ ನೋಡಮ್ಮ । ತಂಗೆಮ್ಮ
ಅಕ್ಕಸಾಲಿಗ ಬಂದ ನೋಡಮ್ಮ ॥ ಪ ॥

ಅಕ್ಕಸಾಲಿಗ ಬಂದ ನೋಡಮ್ಮ । ಸಂಚಿತ
ಕರಗಿಸಿ ಚಿನ್ನ ಮಾಡುವ ಲೆಕ್ಕದ ಮಾತನಾಡಮ್ಮ ।
ಅಕ್ಕಸಾಲಿಗ ಬಂದನೋಡೇ ಸಿಕ್ಕು ಬಿಡಿಸುವ
ಇಕ್ಕಳಿಡಿದು । ಫಕ್ಕನೇ ತನ್ನತವರಿಗೆ
ಚೊಕ್ಕಚಿನ್ನ ಮಾಡಿ ಕೊಡುವ ॥ ೧ ॥

ಆದಿಯಿಂದಲಿ ಕೊಂಡು ಬಂದನೇ । ಅನಾದಿ ಚಿನ್ನವ
ಚಿನ್ನವೆಂದು ಅರಿಯದ್ಹೋದೇನೆ । ನೋಡಿದವರು
ಬಹಳ ಮಂದಿ ಚಿನ್ನವೆಂದು ಅರಿಯದಾದರೆ
ಆರು ಬಂದು ನೋಡಿದರೂ ಚಿನ್ನ
ಗುರುತು ಸಿಗದಂಗಾಯ್ತು ತಂಗೆಮ್ಮ ॥ ೨ ॥

ದೇಶದೇಶವ ಹೊತ್ತು ತಿರುಗಿದೇನೇ ।
ಸಂಚಿತ ಕರಗಿಸಿ ಶುದ್ಧ ಮಾಡುವರನ್ನು ಕಾಣೇನೆ ।
ಬಹಳ ಪರಿಯಲಿ ಬೆಂದು ನೊಂದು । ಭವ ಭವದಲಿ
ತಿರುಗಿ ಬಂದೇನೇ । ಬಾಧೆ ಪಡುವುದ ನೋಡಿ
ಬಂದನಮ್ಮ ಭವನಾಶಕವಾಗಿ ಗುರುದೇವ ॥ ೩ ॥

ತಿದಿಯು ಊದುವದನ್ನು ಕಲಿಸಿದನೇ ।
ಆಗ್ನೇಯದಲ್ಲಿ ಚಿನ್ನ ಕರಗುವದನ್ನು ತೋರಿದನೆ ।
ಭಸಭಸನೇ ತಿದಿಯ ಊದಿಸಿ । ಪಾಪ
ತಡೆಗಟ್ಟಿ ಅಗ್ನಿಯೋಳ್ ಚಿನ್ನ ತೋರಿದನೇ
ಅಕ್ಕಸಾಲಿಗ ಗುರುವೆಂಕಟೇಶನಾಗಿ ಎನಗೆ ॥ ೪ ॥

೨. ಊರು ಹಾಳಾದ ಮೇಲೆ

ಊರು ಹಾಳಾದ ಮೇಲೆ ಊರ ತೇರಿನ ಗೊಡವಿ ಇನ್ಯಾಕೆ
ತೇರಿನ ಒಳಗಿರುವ ದೇವರು ಕಂಡ ಮೇಲೆ
ತೇರಿನ ಗೊಡವಿ ನಮಗ್ಯಾಕೆ ॥ ಪ ॥

ಬಡಗಿ ಮುಟ್ಟದ ತೇರು ಬ್ರಹ್ಮ ಮಾಡಿದ ತೇರು
ಭವಭವದಲಿ ಮುಂದೆ ನಡೆದಿತ್ತೊ ।
ಪಂಚತತ್ವಗಳೆಂಬ ಪಂಚಕಳಸಗಳಿಂದ
ಪ್ರಪಂಚದೊಳಗೆ ಇದು ಸಾಗಿಬಂದಿತ್ತೊ ॥ ೧ ॥

ಅರಿಷಡ್ವರ್ಗಗಳೆಂಬ ಆರು ನುಲಿಗಳು ಅದಕೆ
ಮಿಣಿ ಮಾಡಿ ಬಿಗಿದು ಕಟ್ಟಿತ್ತೊ ।
ಮೂರು ಗುಣಗಳಿಂದ ಮಲಕನ್ನು ಬಿಗಿದು
ಮುಕ್ತಿ ದಾರಿಯ ತಡೆದು ನಿಂತಿತ್ತೊ ॥ ೨ ॥

ಅಹಂಕಾರ ಅವಿವೇಕ ಡಂಭ ದರ್ಪವೆಂಬ
ನಾಲ್ಕು ಗಾಲಿಗಳಿಂದ ಅಣಿಯಾಗಿತ್ತೊ ।
ಸುಂಟರ ಗಾಳಿಯಂತೆ ಸುತ್ತಿಸುವ ತನ್ನ
ಬಂಧು ಬಳಗದ ನಡುವೆ ನಿಂತಿತ್ತೊ ॥ ೩ ॥

ಇಂತಪ್ಪ ತೇರನ್ನು ಸಂತಶರಣರು ನೋಡಿ
ಭ್ರಾಂತ ರಹಿತರಾಗಿ ನಗುತಿದ್ದರೊ ॥
ಊರು ಹಾಳಾದರೂ ತೇರಿನ ಆಸೆಯಲಿ
ತಿರುತಿರುಗಿ ಭವಕವರು ಬರುತಿದ್ದರೊ ॥ ೪ ॥

ಉದಯ ಅಸ್ತಂಗಳಿಂದ ದಿನಕೊಂದು ಅಂಗ ಸಡಿಲಿ
ಕ್ಷಣ ಭಂಗವೆನಿಸಿತೋ ।
ಗುರುವೆಂಕಟೇಶನ ದಾಸನಾದ ಮೇಲೆ
ತೇರಿನ ಮಮತೆಯು ಬಿಟ್ಟಿತೊ ॥ ೫ ॥

೩. ಏಕಂತ ಬರಲಮ್ಮ ಈ ಊರಿಗೆ

ಏಕಂತ ಬರಲಮ್ಮ ಈ ಊರಿಗೆ
ಏನಂತ ಬರಲಮ್ಮ ಈ ಮನೆಗೆ ॥ ಪ ॥

ಆಸೆಯೆಂಬ ಮಕ್ಕಳು ಅರಸುಗಳಾಗಿ
ಆಳೋತನಕ ಏಸೋ ಸಲ ಬಂದು ಹೋಗಿದ್ದೆನೆ ।
ಆಸೆ ಅಳಿದು ಹೋದ ಮೇಲೆ ಊರು ಎರವಾಯಿತೆ ॥ ೧ ॥

ಅತ್ತಿಗೆ ನಾದಿನಿಯರು ಭಾವ ಮೈದುನರು ಅತ್ತೆ ಮಾವಂದಿರು
ಹೊತ್ತು ಮುಳುಗುವದೆಂದು ಸುತ್ತಲೂ ಹುಡುಕಲು
ಅತ್ತಿತ್ತ ಚಲಿಸದೆ ಕಾದಿದ್ದರು ॥ ೨ ॥

ಏಳು ಸುತ್ತಿನ ಕೋಟೆ ಒಳಗೆ ನಾಲ್ಕು ಪೇಟೆ । ಕೋಟೆ
ಒಳಗೆ ಹೊರಗೆ ಪಹರೆದವರು । ಕಂಡರೆ ಬಿಡರವರು
ಕಾಣದೆ ಬಂದೀನೆ । ಇನ್ನೆಂದು ಬಾರೆನು ಊರಿಗೆ ॥ ೩ ॥

ಎಂಬತ್ನಾಲ್ಕು ಲಕ್ಷ ಪುರಗಳನು ತಿರುಗಿ ಬಂದೆ । ಅರುವಿನ
ಮನೆಯೊಂದೂ ತಿಳಿಯಲಿಲ್ಲ । ಗುರುವೆಂಕಟೇಶನ
ಶಿಸುವಾದ ಮೇಲೆ ಅರಿವಿನ ಮನೆ ತಿಳಿದು ಬಯಲಾದೆ ॥ ೪ ॥

೪. ತಾಳಿಯ ಹರಕೊಂಡನೆ

ತಾಳಿಯ ಹರಕೊಂಡನೆ ಎನಗಂಡ ತಕ್ಕ ಕೆಲಸ
ಮಾಡಿದನೆ । ಹೀನಜನರ ಸಂಗ ಸೇರಿದ ಫಲದಿಂದ ॥ ಪ ॥

ಪಂಚ ಕಳಸುವ ತುಂಬಿ ಎನಗೆ ಪಂಚಗೋವಿಯ ಕುಡಿಸಿ
ಪಂಚಶರಣರ ಸಾಕ್ಷಿಯಿಂದಲಿ ಎನಗೆ ತಾಳಿಯ ಕಟ್ಟಿದ್ದನೆ ॥ ೧ ॥

ಪಂಚಶರಣರ ಸಾಕ್ಷಿಲಿ ಪರಿಪರಿ ಬುದ್ಧಿಹೇಳಿ
ಮರಳಿ ಈ ಭವಕೆ ಆಶಿಸಬೇಡೆಂದು ತಾಳಿಯ ಕಟ್ಟಿದ್ದನೆ ॥ ೨ ॥

ಶರಣರ ಮಾತು ಕೇಳಿ ಶಿರಬಾಗಿ ನಾ ನಡೆದು ಕೊಂಡೆ
ಪರಮ ಸಂತೋಷದಿ ಪರಮಾರ್ಥವ ಕೇಳಿ ಧನ್ಯನೆಂದೆನಿಸಿದನೆ ॥ ೩ ॥

ಒಂದು ದಿನ ನಾನು ಹೀನ ಜನರ ಸಂಗದಲಿ ಕೂಡಿ ಆಡಿದ
ಪರಿಯ ನೋಡಿ ಎನಗೆ ಮಾನಭಂಗವ ಮಾಡಿದನೆ ॥ ೪ ॥

ಹಿರಿಯರ್ಹೇಳಿದ ಮಾತು ಕೇಳದಲೆ ಬಹಳ ಪರಿಯಲಿ ಕೆಟ್ಟೆ
ಗುರುವೆಂಕಟೇಶನ ದಾಸರ ಸಂಗದೂರ ಎನಗಾಯಿತಮ್ಮ ॥ ೫ ॥

೫. ನೋಡಲು ಬಂದೆ ಈ ಮನೆ

ನೋಡಲು ಬಂದೆ ಈ ಮನೆ ।
ಅಲ್ಲೇ ಇರುವುದು ನಮ್ಮ ಮನೆ ॥ ಪ ॥

ಬ್ರಹ್ಮ ಕಟ್ಟಿದ ಮನೆ ಬಡಗಿ ಮುಟ್ಟದ ಮನೆ
ಭವರೋಗದಿ ನರಳಿ ಹೋಗುವ ಮನೆ ।
ಭವರಾಗ ದ್ವೇಷಗಳಿಗೆ ತವರು ಮನೆ
ಬಲ್ಲಂಥ ಶರಣರಿಗಿದು ಹಾಳು ಮನೆ ॥ ೧ ॥

ಮೂರು ದಿನದ ಮನೆ ಮುರಿದು ಬೀಳುವ ಮನೆ
ಮೂರು ಆರು ಬಾಗಿಲದಾ ಮನೆ ।
ಮಾಯವಾಗುವ ಮನೆ ಮರುಳು ಮಾಡುವ ಮನೆ
ಮೂಲ ಬಲ್ಲವರೆಲ್ಲ ಬಿಡುವ ಮನೆ ॥ ೨ ॥

ನಷ್ಟವಾಗುವ ಮನೆ ನಾತ ಹುಟ್ಟುವ ಮನೆ
ಎಷ್ಟು ದಿನವಿದ್ದರೂ ಇದು ಖಾಲಿ ಮನೆ ।
ಬಿಟ್ಟು ಹೋದ ಮೇಲೆ ಕಟ್ಟಬಾರದೆ ಮನೆ
ಸುಂಟರಗಾಳಿಯಲಿ ಹಾರಿಹೋಗುವ ಮನೆ ॥ ೩ ॥

ಪಂಚಗಿಳಿಯ ಮನೆ ಹೊಂಚುಗಾರರ ಮನೆ
ಮಿಂಚಿ ಹೋಗುವ ಮುನ್ನ ದಾರಿ ಕಾಣದ ಮನೆ ।
ಪಂಚ ಭೂತಗಳ ಕಳೆದುಳಿದ ಆ ಮನೆ
ಸಂಕೋಚಕ್ಕೊಳಗಾಗಿ ನರಳುವ ಮನೆ ॥ ೪ ॥

ಒಂಟಿ ಕಂಬದ ಮನೆ ಜಂಟಿ ದಾರಿಯ ಮನೆ
ಒಂಟಿಯಾದ ಮೇಲೆ ಹುಡುಕುವ ಮನೆ ।
ಬಂಟನಾಗಿ ಗುರುವೆಂಕಟೇಶನನ್ನು
ಅನುರಾಗದಿ ಸೇರಲು ಬಂದ ನಮ್ಮ ಮನೆ ॥ ೫ ॥

೧೬. ಕರಿಗುಡ್ಡದ ಬಸಣ್ಣ ರಾಜ ಶಿವಯೋಗಿ
(೧೯೦೭-೧೯೫೩)

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ಶರಣರ ಹರಿದಾಸರ ಹಾಗೂ ತತ್ವ ಪದಕಾರರ ನೆಲೆವೀಡಾಗಿದೆ. ದೇವದುರ್ಗ ತಾಲೂಕು ಸಾಹಿತ್ಯ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ತನ್ನದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಈ ತಾಲೂಕಿನಲ್ಲಿ ೧೯ ಹಾಗೂ ೨೦ನೇ ಶತಮಾನಗಳಲ್ಲಿ ಅನೇಕ ಅನುಭಾವಿ ಕವಿಗಳು ತತ್ವ ಪದಕಾರರು ಆಗಿ ಹೋಗಿದ್ದಾರೆ. ಇವರು ಬರೆದ ತತ್ವ ಪದಗಳು ಭಜನೆಯ ಹಾಡುಗಳು ಇಂದಿಗೂ ಜನಪ್ರಿಯವಾಗಿವೆ. ಅಂಥ ತತ್ವ ಪದಕಾರರಲ್ಲಿ ಗೂಗಲ್ಲು ಪರಪ್ಪಯ್ಯ ಗೊಬ್ಬೂರು ಹಂಪಣ್ಣ, ಚೆನ್ನಮಲ್ಲ, ಆದಿ ಅಮಾತೆಪ್ಪ, ಗೊಬ್ಬೂರು ಮಾರ್ತಾಂಡಪ್ಪ ಹಾಗೂ ಕರಿಗುಡ್ಡದ ಬಸಣ್ಣರಾಜ ಶಿವಯೋಗಿಗಳು ಪ್ರಮುಖರಾಗಿದ್ದಾರೆ.

ಕರಿಗುಡ್ಡದ ಬಸಣ್ಣ ರಾಜ ಶಿವಯೋಗಿಗಳು ಜನಿಸಿದ್ದು ಯಾದಗಿರಿ ಜಿಲ್ಲೆಯ ನಾಯ್ಕಲ್ ಗ್ರಾಮವಾದರೂ ಮುಂದೆ ಅವರು ನೆಲೆ ನಿಂತಿದ್ದು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿದುದು ದೇವದುರ್ಗ ತಾಲೂಕಿನಿಂದ ಪಶ್ಚಿಮ ದಿಕ್ಕಿಗೆ ೬ ಕಿಲೋ.ಮಿ. ಅಂತರದಲ್ಲಿರುವ ಕರಿಗುಡ್ಡದಲ್ಲಿ. ಇವರ ತಂದೆ ಬಸವಲಿಂಗಪ್ಪ ತಾಯಿ ಬಸಮ್ಮ. ಈ ಪುಣ್ಯ ದಂಪತಿಗಳಿಗೆ ೧೯೦೭ ಶ್ರೀ ಶಾಲಿವಾಹನ ಶಕೆ ೧೮-೨೮ ಪ್ರಭವನಾಮ ಸಂವತ್ಸರ ಅಶ್ವಿಜ ಶುದ್ಧ ನವರಾತ್ರಿ ಮಂಗಳವಾರದಂದು ಎಂಟನೇ ಮಗುವಾಗಿ ಜನಿಸಿದರು. ಶ್ರೀ ಬಸಣ್ಣ ಶರಣರು ತಮ್ಮ ಬಾಲ್ಯದ ಶಿಕ್ಷಣವನ್ನು ಪ್ರಪ್ರಥಮ ಸಾಧನೆ ಗೈಯುತ್ತಲೇ ಪೂರೈಸಿದರು. ಬೆಳೆವ ಸಿರಿ ಮೊಳಕೆಯಲ್ಲಿ ಕಾಣುವಂತೆ ಬೆಳೆದು ಬಂದರು.

ಶರಣ ಬಸಣ್ಣವನರ ತಂದೆ ಕೃಷಿ ಕಾಯಕದ ಜೊತೆಗೆ ಅನುಭಾವದ ಕೃಷಿಯನ್ನೂ ವಿಪುಲವಾಗಿ ಮಾಡಿದವರು. ವೈದ್ಯ ಶಾಸ್ತ್ರದ ಪ್ರಕಾಂಡ ಪಂಡಿತರಾಗಿ ರಾಜ್ಯ ವೈದ್ಯರೆನಿಸಿದವರು. ನಾಟೀ ವೈದ್ಯಕೀಯ ಬಗ್ಗೆ ಇವರು ರಚಿಸಿದ ಪುಸ್ತಕ

ತುಂಬ ಉಪಯುಕ್ತವಾಗಿದೆ. ಇವರು ಹೊಟಗಿಯ ತಪೋರತ್ನ ಪೂಜ್ಯ ಶ್ರೀಯೋಗಿ ರಾಜೇಂದ್ರ ಮಹಾಸ್ವಾಮಿಗಳಿಂದ ದೀಕ್ಷೆ ಪಡೆದು ರಾಜಯೋಗಿಗಳೆನಿಸಿದವರು. ಇವರು ಮಹಾನ್ ದಿವ್ಯಜ್ಞಾನಿಗಳು ಯಾದಗಿರಿ ಜಿಲ್ಲೆಯ ನಾಯ್ಕಲ್ ಗ್ರಾಮ ಇವರ ಮೂಲ ಸ್ಥಾನವಾಗಿದ್ದು ಇವರಿಗೆ ನೂರಾರು ಕೂರಿಗೆ ಜಮೀನು ಇದ್ದರೂ ಅದೆಲ್ಲವನ್ನು ತ್ಯಜಿಸಿ ಶರಣರಂತೆ ಬಾಳಿದವರು. ಇಂಥ ಮಹಾನ್ ಶರಣರ ಮಗನಾಗಿ ಬನಿಸಿದವರೇ ಬಸಣ್ಣ ಶರಣರು. ಬಸಣ್ಣ ಶರಣರು ಗೌರಂಪೇಟೆಯ ಜಕ್ಕಪ್ಪ ಮಾಸ್ತರರಲ್ಲಿ ಆರಂಭಿಕ ವಿದ್ಯಾಭ್ಯಾಸ ಮಾಡಿ ಮುಂದೆ ಲಿಂಗಸುಗೂರಿನ ಶಾಲೆಗೆ ಸೇರಿದರು. ಅಲ್ಲಿ ಬಸಣ್ಣ ಶರಣರು ತಮ್ಮ ಗುರುಗಳಿಗೆ ಅಧ್ಯಾತ್ಮ ಧ್ಯಾನದ ಪ್ರಶ್ನೆಗಳನ್ನು ಕೇಳ ತೊಡಗಿದರು. ಇವರ ಪ್ರಶ್ನೆಗಳಿಗೆ ಉತ್ತರಿಸಲಾಗದ ಅಲ್ಲಿಯ ಶಿಕ್ಷಕರು ಬಸಣ್ಣನವರನ್ನು ಶಾಲೆಯಿಂದ ಹೊರಗೆ ಕಳಿಸಿದರು.

ಬಸಣ್ಣ ಶರಣರು ಬಾಲ್ಯದಲ್ಲಿಂಯೇ ಅಧ್ಯಾತ್ಮ ಜೀವಿಗಳಾಗಿ ಬೆಳೆಯತೊಡಗಿದುದಕ್ಕೆ ಶಾಲೆಯಿಂದ ಅವರು ಹೊರ ಬಂದುದೇ ನಿದರ್ಶನವಾಗಿದೆ. ಅವರು ಯೌವನಾವಸ್ಥೆಗೆ ಕಾಲಿಟ್ಟಾಗ ಅವರ ತಂದೆ ಅರಿಕೇರದ ದೊಡ್ಡ ಬಸಪ್ಪನವರ ಮಗಳು ಕಲ್ಯಾಣವ್ವಳನ್ನು ಕನ್ಯೆಯಾಗಿ ಗೊತ್ತುಪಡಿಸಿ ಲಗ್ನವನ್ನು ಮಾಡಿದರು. ಬಸಣ್ಣ ಶರಣರು ಕಲ್ಯಾಣಮ್ಮನೊಂದಿಗೆ 'ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪದು ಶಿವಂಗೆ" ಎನ್ನುವಂತೆ ಸುಖದಿಂದ ದಾಂಪತ್ಯ ಜೀವನವನ್ನು ನಡೆಸಿದರು. ಈ ಶರಣ ದಂಪತಿಗಳಿಗೆ ಶರಣಪ್ಪ, ದೊಡ್ಡಪ್ಪ, ಬಸವಲಿಂಗಪ್ಪ, ಬಸವರಾಜಪ್ಪ, ಹೀಗೆ ನಾಲ್ಕು ಜನ ಗಂಡು ಮಕ್ಕಳು, ಮಲ್ಲಮ್ಮ, ಮಹಾಂತಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಜನಿಸಿದರು. ಹೀಗೆ ಬಸಣ್ಣ ಶರಣರು ಸಂಸಾರದ ಸುಖವನ್ನು ಅನುಭವಿಸುತ್ತಲೇ ಪಾರಮಾರ್ಥದ ಪ್ರಪಂಚವನ್ನು ಅಪ್ಪಿಕೊಂಡವರು, ಒಪ್ಪಿಕೊಂಡವರು.

ಬರಬರುತ್ತ ಬಸಣ್ಣ ಶರಣರು ಸಂಸಾರದಿಂದ ವಿಮುಖರಾಗಿ ಅಧ್ಯಾತ್ಮದತ್ತ ಒಲವು ಬೆಳೆಸಿಕೊಂಡರು. ದೇವದುರ್ಗ ಪಟ್ಟಣದಿಂದ ಪಶ್ಚಿಮ ದಿಕ್ಕಿಗೆ ೬ ಕಿಲೊ.ಮಿ. ಅಂತರದಲ್ಲಿರುವ ಕರಿಗುಡ್ಡವನ್ನು ತಮ್ಮ ಕರ್ಮ ಭೂಮಿಯನ್ನಾಗಿಸಿಕೊಂಡರು. ಅವರು ಅಲ್ಲಿ ನೆಲೆಸಿ ಹಲವಾರು ಭಕ್ತರಿಗೆ ಅಭಯ ನೀಡುತ್ತ ಮಾರ್ಗದರ್ಶನ ಮಾಡುತ್ತ ಕಾಲ ಕಳೆಯತೊಡಗಿದರು. ಮತ್ತು ಹಲವು ರೋಗಗಳಿಂದ ನರಳುವವರಿಗೆ ಉಚಿತ ಆಯುರ್ವೇದ ಔಷಧೋಪಚಾರ ಮಾಡಿ ಗುಣಪಡಿಸ ತೊಡಗಿದರು. ಆಗಿನ ದೊರೆ ರಾಜ ರಾಮಣಪ್ಪ ರಾಮನಿಗೆ ಭಾನಾಮತಿ ಪ್ರಯೋಗದಿಂದ ದೇಹಾಲಸ್ಯ ಹೊಂದಿ ನರಳುವಾಗ ಅವರನ್ನು ಶ್ರೀ ಬಸಣ್ಣ ಶರಣರು ಗುಣಪಡಿಸಿದರು. ಇದರಿಂದ ಅನೇಕರು ಇವರನ್ನು ಸನ್ಮಾನಿಸಿ, ಇವರಿಗೆ ರಾಜ್ಯ


ವೈದ್ಯರೆಂದು ಬಿರುದು ನೀಡಿ ತಮ್ಮ ದರ್ಬಾರಿನ ಮುಂದಿನ ಭಾಗವನ್ನು ಇವರಿಗೆ ಗುರು ಕಾಣಿಕೆಯಾಗಿ ನೀಡಿದರು.

ಬಸಣ್ಣ ಶರಣರು ವೈದ್ಯ ವೃತ್ತಿಯೊಂದಿಗೆ ತತ್ವಪದ ಸಾಹಿತ್ಯ, ವಚನಗಳನ್ನು ರಚಿಸುತ್ತ ಸಾಹಿತಿಗಳಾಗಿಯೂ ಬೆಳೆದರು. ಇವರಿಗೆ ಕನ್ನಡ ಹಾಗೂ ಸಂಸ್ಕೃತ ಭಾಷೆಗಳೆರಡರಲ್ಲಿಯೂ ಪಾಂಡಿತ್ಯವಿತ್ತು ಮತ್ತು ಪ್ರಭುತ್ವವಿತ್ತು. ಇವರು ತತ್ವ ಪದಗಳನ್ನು ಹಾಗೂ ಷಟ್ಪದಿ ವಚನ ಪದ್ಯಗಳನ್ನು ಜನ ಸಾಮಾನ್ಯರಿಗೆ ತಿಳಿಯುವಂತೆ ಬರೆದಿರುವರು. ಇವರು ಬರೆದ ೯೨ ತತ್ವ ಪದಗಳು ೮೩ ಷಟ್ಪದಿ ವಚನಗಳು ಲಭ್ಯವಾಗಿವೆ. "ಕರಿಗುಡ್ಡದ ನಿಜಶರಣ ಬಸವೇಶ" ಅಂಕಿತವನ್ನು ಇರಿಸಿಕೊಂಡು ಬರೆದ ಇವರ ತತ್ವಪದಗಳು ತುಂಬ ಜನಪ್ರಿಯವಾಗಿವೆ. ಇವರ ತತ್ವಪದ ಸಾಹಿತ್ಯದಲ್ಲಿ ಹಳ್ಳಿ ಗಾಡಿನ ಜನರ ನುಡಿಗಟ್ಟುಗಳು ತುಂಬ ಅರ್ಥಪೂರ್ಣವಾಗಿ ಪ್ರಯೋಗಗೊಂಡಿವೆ. ಇವರ ತತ್ವ ಪದಗಳಲ್ಲಿ ಅನುಭಾವ ಕೆನೆಗಟ್ಟಿದೆ.


ಶ್ರೀ ಬಸಣ್ಣ ಶರಣರು ತಮ್ಮ ಬದುಕಿನುದ್ದಕ್ಕೂ ಅನುಭಾವದ ಚಿಂತನೆಯಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡವರು. ಜೊತೆಗೆ ಗ್ರಾಮೀಣ ಭಾಗದ ಜನರಿಗೆ ಬರುವ ರೋಗ ರುಜಿನಗಳಿಗೆ ನಾಟಿ ಔಷಧವನ್ನು ನೀಡುವ ಕಲ್ಯಾಣಕಾರಿ ಕಾರ್ಯವನ್ನು ಮಾಡಿಕೊಂಡು ಬಂದವರು. ಒಟ್ಟಾರೆಯಾಗಿ ಇವರು ಸಮಾಜ ಮುಖಿ ಚಿಂತನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಂಡವರು. ಇಂಥ ಅನುಭಾವಿಗಳನ್ನು ಪಡೆದ ಕರಿಗುಡ್ಡ ನಾಡು ಪುಣ್ಯದ ತಾಣವೆನಿಸಿದೆ. ಪವಿತ್ರ ಯಾತ್ರಾ ಸ್ಥಳವಾಗಿದೆ. ಇಚ್ಛಾ ಮರಣಿಯಾದ ಶ್ರೀ ಬಸಣ್ಣ ಶರಣರು ೮೭ ವರ್ಷ ತುಂಬು ಜೀವನ ನಡೆಸಿ ದೊಡ್ಡ ಅನುಭಾವಿಗಳು ತತ್ವ ಪದಕಾರರೆನಿಸಿ, ಶ್ರೀ. ಶಕೆ ಶ್ರೀ ಮುಖನಾಮ ಸಂವತ್ಸರ ಶ್ರಾವಣ ತ್ರಯೋದಶಿ ದಿನಾಂಕ ೩೦-೦೭-೧೯೩೩ರಂದು ಕರಿಗುಡ್ಡದಲ್ಲಿ ಲಿಂಗೈಕ್ಯರಾದರು.

ಶ್ರೀ ಬಸಣ್ಣ ಶರಣರು ಹಡಪದ ಸಮಾಜಕ್ಕೆ ಸೇರಿದವರಾಗಿದ್ದು, ಅವರ ಪವಿತ್ರ ಗದ್ದುಗೆಯು ಕರಿಗುಡ್ಡದಲ್ಲಿ ಇದ್ದುದನ್ನು ನೋಡಬಹುದು.

ಅವರು ಕರಿಗುಡ್ಡದಲ್ಲಿ ವಾಸವಾಗಿದ್ದ ಮನೆಯೊಂದು ಈಗ ಬಿದ್ದು ಹೋಗಿದೆ. ಸ್ಮಾರಕಗಳ ರೂಪದಲ್ಲಿ ಅವರ ಭಾವ ಚಿತ್ರವನ್ನು ಅವರ ಸಮಾಧಿಯನ್ನು ಚಿತ್ರೀಕರಿಸಿ ಇಲ್ಲಿ ನೀಡಿದ್ದೇವೆ. ಅವರ ಬಗ್ಗೆ ನಮಗೆ ಪ್ರೊ. ಶಂಕರರಾವ್ ಉಭಾಳೆ ಅವರು ಮಾಹಿತಿ ನೀಡಿರುವರು.



ತತ್ವಪದಕಾರ ಅನುಭಾವಿ ಶರಣ ಶ್ರೀ ಬಸಣ್ಣ ಕರಿಗುಡ್ಡ ರಾಜಶಿವಯೋಗಿಗಳವರ ಭಾವಚಿತ್ರ,
ಕರಿಗುಡ್ಡ, ತಾ – ದೇವದುರ್ಗ



ಶ್ರೀಗಳ ಐಕ್ಯ ಸ್ಥಾನದ ಗದ್ದುಗೆ

ಬಸಣ್ಣ ಶರಣರು ದೊಡ್ಡ ಅನುಭಾವಿಗಳಾಗಿ ಸಂಸಾರ ಮತ್ತು ಪಾರಮಾರ್ಥ ಎರಡರಲ್ಲೂ ಯಶಸ್ಸನ್ನು ಪಡೆದ ಮಹಾನುಭಾವರು. ಅವರ ತತ್ವಪದಗಳಲ್ಲಿ ಆತ್ಮಾನುಭಾವ ನೆಲೆನಿಂತಿದೆ. ಅವರು ಗುರುವನ್ನು ಧ್ಯಾನಿಸುತ್ತ ಭವದ ಬಾಧೆಯನ್ನು ದೂರೀಕರಿಸಲು ಯತ್ನಿಸಿದರು. ಧರೆಯ ಒಡೆಯನಾದ ಹೋಟಗಿ ಈಶನನ್ನು ತಮ್ಮ ಗುರುವನ್ನಾಗಿ ಸ್ವೀಕರಿಸಿದರು. ಶ್ರೀ ಬಸಣ್ಣ ಶರಣರ ತತ್ವಪದಗಳು ಹರಿದಾಸರ ಕೀರ್ತನೆಗಳನ್ನು ಹೋಲುತ್ತವೆ. ಗುರುವಿನ ಗುಲಾಮನಾಗದ ಹೊರತು ದೊರಕದು ಮುಕ್ತಿ ಎಂಬಂತೆ ಶರಣರ ಕೃಪೆ ಆಗಬೇಕಾದರೆ ಗುರು ಕೃಪೆಗೆ ನಾವು ಪಾತ್ರರಾಗಬೇಕೆಂದು ಬಸಣ್ಣ ಶರಣರು ತಮ್ಮ ಅನೇಕ ತತ್ವಪದಗಳಲ್ಲಿ ಪ್ರಸ್ತಾಪ ಮಾಡಿರುವರು. ಅವರ ತತ್ವಪದಗಳನ್ನು ದೇವದುರ್ಗದ ಪ್ರೊ. ಶಂಕರರಾವ್ ಉಭಾಳೆ ಅವರು ಸಂಗ್ರಹಿಸಿದ್ದಾರೆ. ಅವರ "ಅನುಭಾವಿ ಶರಣ ಬಸ್ಸಣ್ಣ ಕರಿಗುಡ್ಡರವರ ಅಧ್ಯಯನ" ಎಂಬ ಕೃತಿಯಿಂದ ಐದು ತತ್ವದಗಳನ್ನು ಇಲ್ಲಿ ಆಯ್ದುಕೊಟ್ಟಿದೆ.

೧. ಮುಡಚಟ್ಟು ಅನ್ನುವರಯ್ಯ

ಮುಡಚಟ್ಟು ಅನ್ನುವರಯ್ಯ ಇವರೆಂತ ಮಳ್ಳು ಜನರಯ್ಯ ।
ಮಲ ಮೂತ್ರಗಳು ತ್ಯಜಿಸಿದಾಗ ಮುಡಚೆಟ್ಟು ಬಂತೆಂದು ।
ಸ್ನಾನ ಮಾಡುವರಯ್ಯ ಅದು ಮಾಡಿ ಆಗುವುದೇನಯ್ಯ ॥ ೧ ॥

ಮುಡಚಟ್ಟಿನೊಳಗ ಹುಟ್ಟಿ ಬಂದು ಮಲಬಾಂಡ ದೇಹದೊಳ ।
ತುಂಬಿ ಕೊಂಡು ಮೇಲೆ ಸ್ನಾನ ಮಾಡಿದರೆ ಏನಾಗುವುದು ।
ಸತ್ಯದಿಂದ ನಡಿದರೆ ಮಡಿಯಾಗುವುದು ॥ ೨ ॥

ಸತ್ಯ ನುಡಿವುದೇ ಗುರುವಿನಾಚಾರ । ಪರ ಹಿಂಸೆ ಪಡಿಸದೇ ನಡಿವದು ॥
ಮಡಿಯಾಗುವುದು । ಪರರಿಗೆ । ತನ್ನಂತೆ ತಿಳಿದು । ನಡೆಯೆಂದ ।
ನಮ್ಮ ಕರಿಗುಡ್ಡದ ಈಶ ಬಸವೇಶಾ ॥ ೩ ॥

೨. ಭಜನೆ ಮಾಡಲೋಮನುಜ

ಭಜನೆ ಮಾಡಲೋ ಮನುಜ । ನಿಜ ಶರಣ ರಾಜಯೋಗಿಯ ।
ಭಜನೆ ಮಾಡಲೋ ಮನುಜಾ ॥ ಪ ॥

ಕುಜನರ ಸಂಗವಳಿದು। ನಿಜವ ನಿನ್ನೊಳ ತಿಳಿದು । ರಾಜಯೋಗಿ।
ದಯವ ತೋರೆಂದು ॥ ೧ ॥

ಭ್ರಷ್ಟ ಸಂಸಾರವಿದನ। ನಷ್ಟ ಗೈಯುವದಯ್ಯ।
ನಿಚ್ಚೈಯು। ನಿಟಿಲದಲ್ಲಿ । ದೃಷ್ಠಿ ಗುರಿ ಗಟ್ಟಿ ಮಾಡಿ । ಏಕ ।
ಮನಸಿಲೆ ಭಜನೆ ಮಾಡಲೋ ಮನುಜಾ ॥ ೨ ॥

ಅಹಂಕಾರವನ್ನು ಬಿಟ್ಟು । ಮನುಜಾ ಕಿಂಕರತ್ವ ತೊಟ್ಟು ।
ಓಂಕಾರ ಪೀಠದಿ । ಸೋಂಕಿ ಹೊಠಗೀಶಾ ಹಠಯೋಗಿ ।
ಮದ್ಯಾನಿಸಿ । ಭಜನೆ ಮಾಡಲೋ ಮನುಜಾ ॥ ೩ ॥

ಆರು ಮೂರು ದೂರಮಾಡಿ ಮೂರರೊಳು ಮೀರಿ ಮೇಲ ।
ಉನ್ಮನಿಯೋಳ ಭೋರೆಂಬ ಶಬ್ದ ಬ್ರಹ್ಮಾನಾದದಿ ।
ಅಂಗನಿಯರೋಳ ನಿಂದ್ಯ ಪಡುವುದ್ಯಾತಕೋ । ಪಾರಮಾರ್ಥ ।
ಶಿವಯೋಗಿ । ಬಸವೇಶನ ಧ್ಯಾನದಿ ಭಜನೆ ಮಾಡಲೋ ಮನುಜಾ ॥ ೪ ॥

೩.ದೇಹವೆಂಬ ಶಿವಪುರದೊಳಗೆ

ದೇಹವೆಂಬ ಶಿವಪುರದೊಳಗೆ ಮೂರುರತ್ನಗಳೊ ಸದ್ಗುರು ।
ದೇವ ವಜ್ರದಂತೆ ಹೊಳೆವ ರತ್ನಗಳು ॥ ಪ ॥

ನವದ್ವಾರದ ಕಾಲ ಕತ್ತಲದಿ ಐದು ಮಂದಿ ಕಳ್ಳರಡಗಿಹರೂ ।
ದೇವಾದಿ ದೇವ ನಿಜವಯೊನ್ನೊಳ ದಾರಿತೋರಿದನೂ ।
ನಾನೆ ಕುಟೀಲ ಚಾಡಿನಿಂದಕರು ಈ ಮನಿಯತರದಿ ।
ಕನ್ನ ತೆಗಿದಿಹರು ಈ ಪಟ್ಟಣದಿ ಐದು ಮಂದಿ ಕಳ್ಳರಡಗಿಹರು ॥ ೧ ॥

ಸ್ಥಿತಿ ಲಯ ಹದಿನಾಲ್ಕು ಲೋಕಕ್ಕೆ ಒಂದು ರತ್ನದ ।
ಬೆಳಕು ತಿರುಗುವದು ದೇವಾ ಅದು ಎಂಥ ರತ್ನವು ।
ಈ ಉರಗ ನಗರದಿ ಅವರೆಂಥ ಕಳ್ಳರು ।
ಅವರಿಗೇ ಹಿಡಿದು ಕೊಟ್ಟವಗ ಮುಕ್ತಿಯೇ ದೊರಿಯುವದೆಂದ ।
ನಮ್ಮ ಕರಿಗುಡ್ಡದ ಈಶ ಬಸವೇಶಾ ॥ ೨ ॥

೪. ಸರ್ಪ ಕಂಡಿದಿರಾ

ಈ ನವಕಾಂಡವೆಂಬ ಹುತ್ತಿನೊಳಗೆ ಸರ್ಪ ಕಂಡಿದಿರಾ ।
ಸದ್ಗುರು ದೇವಾ ಭೋರೆಂಬ ಶಬ್ದ ಕೇಳಿದಿರಾ ಸದ್ಗುರು ।
ದೇವಾ ನವಕಾಂಡವೆಂಬ ಹುತ್ತಿನೊಳಗೆ ಯಡಬಿಡದೇ ನಿತ್ಯ ತಿರುಗುವದು ॥ ೧ ॥

ಆ ಸರ್ಪದ ತಲಿಯ ಮೇಲೆ ರತ್ನವೆಂಬ ಮಣಿಯ ಸೇರಿಹದೂ
ಆ ಬೆಳಕಿನೊಳು ನವಕಾಂಡ ತಿರುಗುವುದು ಸದ್ಗುರು ।
ದೇವಾ ಆಧಾರ ಚಕ್ರದ ನಾಲ್ಕು ಬೀದಿ ಹಿಡಿದು ಬರುವದು ॥ ೨ ॥

ಆದಿಶೇಷನ ಪಂಚಮಿಗೆ ಒಂದೊತ್ತು ಮಾಡಿ ಫಲಪಡಿವರೋ ।
ಧರೆಯೊಳ ಮೆರಿವ ಕರಿಗುಡ್ಡ ಈಶ ಬಸವನ ಮರ್ಮವ
ತಿಳಿಯಬೇಕು ದೇವಾದಿ ದೇವಾ ॥ ೩ ॥

೫. ಸಾಧು ಛಲೋವಿರಬೇಕು

ಸಾಧು ಛಲೋವಿರಬೇಕು ನಾವು ಸಾಧುಗಳು ಎಂದು ಹೇಳಿ ।
ಕೊಂಬುವರು ಸಾಧು ಯಂಬ ಯರಡಕ್ಷರದ ಮೂಲ ತಿಳಿ ।
ದಿರಬೇಕು ಪ್ರಪಂಚವಳಿದು ದೇಶ ತಿರುಗುವರೂ ॥ ಪ ॥

'ಸಾ' ಯಂಬ ಅಕ್ಷರ ಸಾಧನೆ ತಿಳಿದಿರಬೇಕು ।
'ದು' ಎಂಬ ಅಕ್ಷರ ದುರ್ಗುಣ ಅಳಿದಿರಬೇಕು ॥ ೧ ॥

ಪರಸ್ತ್ರೀ ಪರಧನ ಆಸೆ ಹಿಡಿದು ಕಾಗಿಯಂತೆ ಕೂಗಿ ಕೂಗಿ ।
ಛಲದಿಂದ ನಡಿವ ಮಂದಮತಿಗೆ ಭವ ಬಂಧನ ತಪ್ಪಿಸಲಾಗದೂ
ಸಾಧುಗಳಿರಾ ತಪ್ಪಿಸಲಾಗದು ॥ ೨ ॥

ಪರಸ್ತ್ರೀ ವಲ್ಲೆನೆಂಬ ಛಲವಿರಬೇಕು । ಪರಧನವಲ್ಲೆನೆಂಬ ಛಲವಿರಬೇಕು।
ಯೋಗಿಗೆ ಗುರುಲಿಂಗ ಜಂಗಮ ಒಂದೆಂಬ ।
ಛಲವಿರಬೇಕು ರುದ್ರಾಕ್ಷಿ ಧರಿಸುವೆನೆಂಬ ಛಲ ।
ವಿರಬೇಕು । ಸಾಧುಗಳಿರಾ ॥ ೩ ॥

ಪಾದತೀರ್ಥ ಪ್ರಸಾದ ದಿಟವೆಂಬ ಛಲವಿರಬೇಕು ।
ಮೂಲ ಮಂತ್ರ ಬಿಡದೇ ಜಪಿಸಬೇಕು । ನಡೆನುಡಿವಂದು ।
ಮಾಡಿ ನಡಿಯಬೇಕು ನಮ್ಮ ಕರಿಗುಡ್ಡ ರಾಜ ಯೋಗಿ ।
ಕೇಳಿದ ಮಾತು ದಿಟವಿರಬೇಕು ॥ ೪ ॥

೧೭. ಬುರಾನಪೂರದ ರಾಜಯೋಗಿ ಬಸನಗೌಡ (೧೯೦೮-೧೯೮೬)

ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಮದಲಾಪುರ ಎಂಬ ಗ್ರಾಮದಲ್ಲಿ ಕ್ರಿ.ಶ. ೧೯೦೮ರಲ್ಲಿ ಬಸನಗೌಡ ಅವರು ಜನಿಸಿದರು. ಇವರ ತಂದೆಯ ಹೆಸರು ಸೂಗನಗೌಡ ತಾಯಿಯ ಹೆಸರು ನರಸಮ್ಮ. ಇವರು ಉಪ್ಪಾರ ಜನಾಂಗಕ್ಕೆ ಸೇರಿದವರಾದರೂ ಊರಿನ ಪೋಲಿಸಗೌಡಕಿ ಮತ್ತು ಮಾಲಿಗೌಡಕಿ ಇವರದಾಗಿತ್ತು. ಮದಲಾಪುರ ಗ್ರಾಮವು ಮಾನ್ವಿಗೆ ಹತ್ತಿರದಲ್ಲಿ ಅಂದರೆ ಆರು ಕಿಲೋಮೀಟರ ದೂರದಲ್ಲಿದೆ. ಈ ಊರಿನ ಹತ್ತಿರವೇ ಬುರಾನಪೂರ ಎಂಬ ಊರಿದೆ. ಬಸನಗೌಡರ ಪೂರ್ವಜರು ಬುರಾನಪೂರದವರಾಗಿದ್ದು, ಈ ಕಾರಣದಿಂದಾಗಿಯೇ ಇವರ ಮನೆತನದ ಹೆಸರು ಬುರಾನಪೂರ ಎಂದಿದೆ. ಮುಂದೆ ಗೌಡರು ಬುರಾನಪೂರ ಬಿಟ್ಟು ಮದಲಾಪುರಕ್ಕೆ ಬಂದು ನೆಲೆಸಿದರು. ಈ ಎರಡೂ ಊರುಗಳಲ್ಲಿ ಬಸನಗೌಡರ ಹೊಲಗಳಿದ್ದು ಎರಡೂ ಕಡೆ ಇವರು ವ್ಯವಸಾಯ ಮಾಡಿಕೊಂಡಿದ್ದರೆಂದು ತಿಳಿದು ಬರುವುದು. ಈ ಎರಡು ಊರಿನ ಗೌಡಿಕಿ ಮಾಡುತ್ತ ರೈತರಿಂದ ಮಾಲ್ಗು ಜಾರಿಯನ್ನು ಸಂಗ್ರಹಿಸುವ ಮತ್ತು ಆ ಹಳ್ಳಿಗಳ ಜನರಲ್ಲಿ ಶಾಂತಿ ಕಾಪಾಡುವ ಪವಿತ್ರ ಕಾಯಕದಲ್ಲಿ ಗೌಡರು ತಮ್ಮನ್ನು ತೊಡಗಿಸಿಕೊಂಡಿದ್ದರು. ಬಾಹ್ಯದಲ್ಲಿ ಅವರು ಗೌಡರಾಗಿ ಕೃಷಿಕರಾಗಿ ಕಾಣಿಸಿಕೊಂಡರೂ ಅಂತರಂಗದಲ್ಲಿ ಅವರು ಅಧ್ಯಾತ್ಮ ಜೀವಿಗಳಾಗಿದ್ದರು.

ಬಸನಗೌಡರು ಸಂಸಾರ ಮತ್ತು ಪಾರಮಾರ್ಥ ಎರಡನ್ನೂ ಸರಿದೂಗಿಸಿಕೊಂಡು ನಡೆದ ಮಹನೀಯರು. ಅವರದು ಗೌಡಿಕೆ ಮನೆತನವಾದರೂ ಅವರಲ್ಲಿ ಎಳ್ಳಷ್ಟೂ ದರ್ಪ, ಅಹಂಕಾರಗಳಿರಲಿಲ್ಲ. ಇವರು ಅಧ್ಯಾತ್ಮ ಜೀವಿಯಾಗಿ ಕೈವಲ್ಯ ಜ್ಞಾನ ಪಡೆದ ಯೋಗಿಗಳಾಗಿ ಬದುಕಿದರು. ಸಂಸಾರಿಗಳಾಗಿಯೂ ಅವರು ಬದುಕು ಸಾಗಿಸಿರುವುದು ವಿಶೇಷವಾಗಿದೆ. ಇವರಿಗೆ ಸೂಗಪ್ಪ, ಶಂಕರಪ್ಪ ಮತ್ತು ವಿರೂಪಾಕ್ಷಪ್ಪ ಎಂಬ ಹೆಸರಿನ ಮೂರು ಜನ ಗಂಡು ಮಕ್ಕಳು ಹಾಗೂ ಅಂಬಮ್ಮ ಮತ್ತು ನಾಗಮ್ಮ ಹೆಸರಿನ ಹೆಣ್ಣು ಮಕ್ಕಳು ಹೀಗೆ ಐದು ಜನ ಮಕ್ಕಳಿದ್ದರು. ಸಂಸಾರದಲ್ಲಿದ್ದು ಗೌಡರು ಕೆಸರಿನೊಳಗಣ ಕಮಲದಂತೆ ಇದ್ದರು. ಕೆಸರಿನ ಲೇಪನ್ನಂಟಿಸಿಕೊಳ್ಳದ ಕಮಲದಂತೆ ಗೌಡರು ಶೋಭಾಯಮಾನರಾಗಿ ಅಧ್ಯಾತ್ಮವಾದಿಗಳಾಗಿ ಬೆಳೆದರು.

ಬಸನಗೌಡರು ಆಂಧ್ರಪ್ರದೇಶದ ಆದವಾನಿ ತಾಲೂಕಿನ ಬದಿನೆಹಾಳು ಗ್ರಾಮದ ವಿರೂಪಾಕ್ಷಪ್ಪನವರನ್ನು ತಮ್ಮ ಅಧ್ಯಾತ್ಮಗುರುಗಳನ್ನಾಗಿ ಸ್ವೀಕರಿಸಿದರು. ವಿಶ್ವಕರ್ಮ ಮತಾವಲಂಬಿಗಳಾದ ವಿರೂಪಾಕ್ಷಪ್ಪನವರು ಬಳಗಾನೂರಿನ ಹಳೆಕೋಟೆ ಮರಿಸ್ವಾಮಿಗಳ ಶಿಷ್ಯರು. ಮರಿಸ್ವಾಮಿಗಳು ಜಂಗಮರು. ಇವರ ಶಿಷ್ಯ ವಿರೂಪಾಕ್ಷಪ್ಪ ವಿಶ್ವಕರ್ಮರು. ಇವರ ಶಿಷ್ಯ ಬಸನಗೌಡರು ಉಪ್ಪಾರರು. ಇವರಾರಿಗೂ ಜಾತಿ ಮುಖ್ಯವಾಗಲಿಲ್ಲ. ಜಾತಿ ಭೇದವನ್ನು ತೊಡೆದು ಹಾಕುವುದೇ ತತ್ವಪದಕಾರರ ಧ್ಯೇಯವಾಗಿತ್ತು. ಈ ಧ್ಯೇಯ ಸಾಧನೆಗಾಗಿ ಬಹುತೇಕ ತತ್ವಪದಕಾರರು ತಮ್ಮ ಬದುಕಿನುದ್ದಕ್ಕೂ ಹೋರಾಟ ನಡೆಸಿದುದನ್ನು ಅರಿಯವೆವು.

ಬದಿನೆಹಾಳು ವಿರೂಪಾಕ್ಷಪ್ಪನವರ ಶಿಷ್ಯರಾಗಿ ಬಸನಗೌಡರು ಅಧ್ಯಾತ್ಮ ಮಾರ್ಗದಲ್ಲಿ ಮುನ್ನಡೆದರು. ಅಧ್ಯಾತ್ಮದ ಬದುಕು ಅವರನ್ನು ಭೋಗ ಜೀವನದಿಂದ ಬರಬರುತ್ತ ವಿಮುಖರನ್ನಾಗಿಸಿತು. ಅವರು ಮುಂದೆ ದೊಡ್ಡ ಯೋಗಿಗಳಾಗಿ ಬೆಳೆದರು. ಐಹಿಕ ಭೋಗ, ಭಾಗ್ಯ ಹಾಗೂ ಸಂಪತ್ತು ಅವರ ಕಾಯವನ್ನು ಬಲಿಷ್ಠಗೊಳಿಸಲಿಲ್ಲ. ಆದರೆ ಅಧ್ಯಾತ್ಮ ವಿದ್ಯೆ ಅವರನ್ನು, ಅವರ ಅಂತರಂಗವನ್ನು ಗಟ್ಟಿಗೊಳಿಸಿತು. ಅವರು ಯುಗಧರ್ಮದ ಪುಣ್ಯದ ಬೆಳೆಸು, ಎಂಬಂತೆ ಬೆಳೆದರು. ಅವರು ಉಪ್ಪಾರ ಜನಾಂಗದಲ್ಲಿ ಜನಿಸಿದರೂ ವೀರಶೈವ ತತ್ವಗಳನ್ನು ಅರಿತು ಅರಗಿಸಿಕೊಂಡರು. ಅವರು ನೂರಾರು ತತ್ವಪದಗಳನ್ನು ರಚಿಸಿದರು. ಅವರು ರಚಿಸಿದ ತತ್ವಪದಗಳಲ್ಲಿ ೧೩೪ ತತ್ವಪದಗಳನ್ನು ಸಂಗ್ರಹಿಸಿ ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರು "ರಾಜಯೋಗಿ ಬಸನಗೌಡ ಬುರಾನಪೂರ ರಚಿಸಿದ ಕೈವಲ್ಯ ಯಡಮುರಿ ಕಲ್ಪವಲ್ಲರಿ ತತ್ವಪದಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿರುವರು. ಬಸನಗೌಡರ ತತ್ವಪದಗಳಲ್ಲಿ ಅಧ್ಯಾತ್ಮ ವಿಚಾರಗಳು ವ್ಯಕ್ತಗೊಂಡಿವೆ. ತತ್ವಪದಗಳ ಜೊತೆಗೆ ಇವರು ಅನೇಕ ಬೆಡಗಿನ ಹಾಡುಗಳನ್ನೂ ಬರೆದಿದ್ದಾರೆ. ಇವರು ತಮ್ಮ ತತ್ವಪದಗಳಿಗೆ ಅಂಕಿತವನ್ನು ತಮ್ಮ ಗುರುಗಳ ಹೆಸರಾದ 'ವಿರೂಪಾಕ್ಷ' ಎಂದಿಟ್ಟು ಕೊಂಡಿರುವರು. ಗುರುಗಳ ಅನುಗ್ರಹ ಪಡೆದ ಬಸನಗೌಡರು ಅಧ್ಯಾತ್ಮ ವಿದ್ಯೆಯಲ್ಲಿ ಬಲ್ಲಿದರಾಗಿ ಅದ್ವೈತ ಮತ್ತು ಯೋಗಜ್ಞಾನವನ್ನು ಹೊಂದಿದ್ದರು. ಅವರಿಗೆ ಅಧ್ಯಾತ್ಮ ವಿದ್ಯೆ ಕರತಲಾಮಲಕವಾಗಿತ್ತು. "ಶ್ರೀಮತ್ ಪರಮಹಂಸ ವಿರೂಪಾಕ್ಷ ಯತಿ ವರೇಣ್ಯ ಪ್ರಿಯ ಶಿಷ್ಯ ಶ್ರೀ ಅದ್ವೈತಾನಂದ ರಾಜಯೋಗಿ ಬಸನಗೌಡ ಬುರಾನಪೂರ" ಎಂದು ಜನರಿಂದ ಕರೆಸಿಕೊಂಡ ಹೆಮ್ಮೆ ಅವರದಾಗಿದೆ.

ರಾಜಯೋಗಿ ಬಸನಗೌಡರು ತತ್ವಪದಕಾರರಾಗಿ, ಅನುಭಾವಿಗಳಾಗಿ ರಾಯಚೂರು ಜಿಲ್ಲೆಯಾದ್ಯಂತ ಪ್ರಸಿದ್ಧಿಯನ್ನು ಪಡೆದಿರುವರು. ಆದರೆ ಇವರ ತತ್ವಪದಗಳು ಇತ್ತೀಚೆ ಪ್ರಕಟಗೊಂಡಿವೆ. ಇವರಿಗೆ ಯಾವುದೇ ಜಾತಿ ಭೇದವಿಲ್ಲ.

ಇವರನ್ನು ವಿಧ ವಿಧ ಜಾತಿ ಧರ್ಮಗಳಿಗೆ ಸೇರಿದವರು ಗುರುಗಳನ್ನಾಗಿಸಿಕೊಂಡಿದ್ದಾರೆ. ಅಧ್ಯಾತ್ಮದ ಹಸಿವು ಹೊಂದಿ ಬಂದವರಿಗೆಲ್ಲ ಬಸನಗೌಡರು ಗುರುವಾಗಿ ಜ್ಞಾನ ದಾಸೋಹ ಮಾಡಿದ್ದಾರೆ. ಇವರ ಶಿಷ್ಯರಲ್ಲಿ ಪ್ರಮುಖರಾದವರೆಂದರೆ ಮಾರಣ್ಣ, ರಾಮಣ್ಣ, ಹಾಲ್ವಿ ರಾಮಣ್ಣ ರಬ್ಬಣಗಲ್ ಹಾಗೂ ಶಿವಶಿವಾ ಮಲಾಪುರ, ಇವರೆಲ್ಲರೂ ಹಿಂದುಳಿದ ವರ್ಗಕ್ಕೆ ಸೇರಿದವರು. ಬಸನಗೌಡರೂ ಹಿಂದುಳಿದ ವರ್ಗಕ್ಕೆ ಸೇರಿದವರಾದ್ದರಿಂದ ಅವರಿಗೆ ಹಿಂದುಳಿದ ಜನಾಂಗದವರನ್ನು ಶಿಷ್ಯರಾಗಿ ಸ್ವೀಕರಿಸುವ ಉದ್ದೇಶವಿತ್ತು. ಅಧ್ಯಾತ್ಮಲೋಕದಲ್ಲಿ ಬಹುದೂರ ನಡೆದು ಬಂದ ಬಸನಗೌಡರಿಗೆ ಅನೇಕ ಶಿಷ್ಯರಿದ್ದು, ಈಗಲೂ ಆ ಶಿಷ್ಯರು ತಮ್ಮ ಗುರುಗಳನ್ನು ಸ್ಮರಿಸುವರು.


ರಾಜಯೋಗಿ ಬಸನಗೌಡರು ಬರೆದ ತತ್ವಪದಗಳಲ್ಲಿ ವೇದಾಂತ ಹಾಗೂ ತತ್ವಶಾಸ್ತ್ರ ವಿಚಾರಗಳು ಎಡೆ ಪಡೆದಿವೆ. ದೇವಿಯ ಉಪಾಸಕರಾದ ಬಸನಗೌಡರು ಅವಧೂತ ಮಾರ್ಗದಿಂದ ಪಡೆದುಕೊಂಡ ಶಾಸ್ತ್ರವಿಚಾರಗಳನ್ನು ತಮ್ಮ ಹಾಡುಗಳ ಮೂಲಕ ಹೊರ ಹಾಕಿರುವರು. ಇವರು ಬರೆದ ೧೩೪ ತತ್ವಪದಗಳಲ್ಲಿ ಗುರುವಿನ ಮಹತ್ವ, ಅಧ್ಯಾತ್ಮ ತತ್ವಜಿಜ್ಞಾಸೆ, ಆತ್ಮ ನಿವೇದನೆ, ಲಿಂಗಾಯತ ಧರ್ಮತತ್ವ, ನೀತಿಬೋಧೆ, ಡಾಂಭಿಕರ ವಿಡಂಬನೆ, ಕಾಲಜ್ಞಾನ ವಿಚಾರ, ಆಧುನಿಕ ರಾಜಕೀಯ ವಿಷಯಗಳು ಮುಂತಾದ ಹತ್ತಾರು ವಿಷಯಗಳ ಪ್ರಸ್ತಾಪವಿದೆ. ಜಟಿಲವಾದ ತತ್ವಸಿದ್ಧಾಂತ ವಿಷಯಗಳನ್ನು ಸರಳಗೊಳಿಸಿ ಇವರು ತಮ್ಮ ತತ್ವ ಪದಗಳ ಮೂಲಕ ಹೇಳಿದ್ದು ವಿಶೇಷವಾಗಿದೆ. ಇವರ ಹಾಡುಗಳ ಭಾಷೆ ತೀರ ಸರಳವಾಗಿದ್ದು, ಹಳ್ಳಿ ಜನರಿಗೆ ಸರಳವಾಗಿ ತಿಳಿಯುವಂಥದಾಗಿದೆ.

ರಾಜಯೋಗಿ ಬಸನಗೌಡರದು ತುಂಬುಜೀವನ. ಅವರು ಅಖಂಡವಾಗಿ ೭೮ ವರ್ಷ ಬದುಕಿದ್ದರು. ಅವರು ಅಕ್ಷಯನಾಮ ಸಂವತ್ಸರ ಆಷಾಡ ಮಾಸ ಬಹುಳ ದ್ವಿತಿಯ ಗುರುವಾರ ದಿನಾಂಕ : ೨೪-೦೭-೧೯೮೬ರ ಪ್ರಶಸ್ತ ಶುಭದಿನದಂದು ದೈವಾಧೀನರಾದರು. ಅವರ ಸಮಾಧಿ ಮದಲಾಪುರದಲ್ಲಿರುವುದನ್ನು ಕಾಣುವೆವು. ಅವರ ಗುರು ವಿರೂಪಾಕ್ಷಪ್ಪ ನಿರ್ಮಿಸಿದ ಮಲ್ಲಿಕಾರ್ಜುನ ಸ್ವಾಮಿಯ ರಥವಿರುವುದನ್ನು ಬದಿನೆಹಾಳದಲ್ಲಿ ಕಾಣುವೆವು. ಬದಿನೆಹಾಳು ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನ ಹಾಗೂ ವಿರೂಪಾಕ್ಷಪ್ಪ ನಿರ್ಮಿಸಿದ ರಥಗಳನ್ನು ಇಲ್ಲಿ ಸ್ಮಾರಕಗಳ ರೂಪದಲ್ಲಿ ಸಂಗ್ರಹಿಸಿ ಕೊಡಲಾಗಿದೆ. ರಾಜಯೋಗಿ ಬಸನಗೌಡ ಬುರಾನಪೂರ ಅವರ ಭಾವಚಿತ್ರವನ್ನು ನೀಡುವುದರ ಜೊತೆಗೆ ಆ ಊರಿನ (ಮದಲಾಪುರ) ದೇವತೆಯೂ ಬಸನಗೌಡರ ಆರಾಧ್ಯದೈವವೂ ಆದ ಶ್ರೀ ಚೌಡೇಶ್ವರಿ


ದೇವಿಯ ಮೂರ್ತಿಯನ್ನು ಇಲ್ಲಿ ಸ್ಮಾರಕದ ರೂಪದಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಇವರ ಬಗ್ಗೆ ನಮಗೆ ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರು ಮಾಹಿತಿ ನೀಡಿರುವರು.




ರಾಜಯೋಗಿ ಬಸನಗೌಡ
ಬುರಾನಪೂರ ಅವರ ಭಾವಚಿತ್ರ,
ಮದಲಾಪೂರ. ತಾ – ಮಾನ್ವಿ .
ಜಿಲ್ಲೆ – ರಾಯಚೂರು.



ರಾಜಯೋಗ ಬಸನಗೌಡರ ಸಮಾಧಿ ಚಿತ್ರ,
ಮದಲಾಪೂರ ತಾ – ಮಾನ್ವಿ .
ಜಿಲ್ಲೆ – ರಾಯಚೂರು.



ಬದಿನೆಹಾಳು ಮಲ್ಲಿಕಾರ್ಜುನ ದೇವಸ್ಥಾನ ಮತ್ತು ರಥ, ಬದಿನೆಹಾಳು ತಾ – ಆದವಾನಿ,
ರಾಜ್ಯ – ಆಂಧ್ರಪ್ರದೇಶ.



ಗುರು ವಿರುಪಾಕ್ಷಪ್ಪ
ನಿರ್ಮಿಸಿದ ರಥ,
ಬದಿನೆಹಾಳು
ತಾ – ಆದವಾನಿ, ರಾಜ್ಯ
ಆಂಧ್ರಪ್ರದೇಶ.



ಮದಲಾಪುರದ ಶ್ರೀ ಚೌಡೇಶ್ವರಿದೇವಿ ಮೂರ್ತಿ ಚಿತ್ರ, ಮದಲಾಪುರ
ತಾ – ಮಾನ್ವಿ, ಜಿಲ್ಲೆ – ರಾಯಚೂರು.

ಇವರ ಒಂಬತ್ತು ತತ್ವಪದಗಳನ್ನು ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರು ಸಂಪಾದಿಸಿದ "ರಾಜಯೋಗಿ ಬಸನಗೌಡ ಬುರಾನಪೂರ ರಚಿಸಿದ ಕೈವಲ್ಯ ಯಡಮುರಿ ಕಲ್ಪವಲ್ಲರಿ ತತ್ವಪದಗಳು" ಎಂಬ ಕೃತಿಯಿಂದ ಆಯ್ದುಕೊಂಡು ಇಲ್ಲಿ ಕೊಟ್ಟಿದೆ.

೧. ದೇಹವೇ ದೇವರ ಗುಡಿಯಮ್ಮ

ದೇಹವೇ ದೇವರ ಗುಡಿಯಮ್ಮ । ದೇಹದೊಳಗೆ ದೇವರಾನಮ್ಮ ।
ದೇಹ ಬಿಟ್ಟು ದೇವರಿಲ್ಲ । ದೇಶವೆಲ್ಲ ತಿರಗೀದರಿಲ್ಲಾ ।
ಇಲ್ಲ ತಿರಗಿ ದಣದಿಯಲ್ಲ । ಅಲ್ಲಮಪ್ರಭುವಿನ ಕಾಣಲಿಲ್ಲಾ ॥ ಪ ॥

ಇಲ್ಲೇ ನಿಲ್ಲಿಸಿ ನೋಡಬೇಕಮ್ಮ । ಆನಂದದಿಂದ ಮೂಲಮಂತ್ರ ಮುದದಿ
ಪಾಡಮ್ಮ । ಈಡಪಿಂಗಳ ಮ್ಯಾಲಕೊತ್ತಿ । ನಾದದವುನ್ಮನಿಯ ಹತ್ತಿ ।
ಬ್ರಹ್ಮರಂಧ್ರ ಗುಡಿಯ ವಳಗೆ । ಬಾಲಚಂದ್ರ ಮೌಳಿಯಿರುವೋ ॥ ೧ ॥

ಚಂದ್ರ ಸೂರ್ಯರ ನಡುವೆ ಹಾನಮ್ಮ ।
ಚವುಕು ಮಂಟಪದೊಳಗೆ ಇಹನಮ್ಮ । ಚುತರ್‌ದ್ವಾರ ಕೂಡ್ವದಲ್ಲಿ ।
ಚತುರ್‌ದಿಕ್ಕಿನ ಮಧ್ಯದಲ್ಲಿ । ಚಂಚಲಾಕ್ಷಿ ಕೇಳೋ ನೀನು ।
ವಂಚನಿಲ್ಲದೆ ನೋಡು ಮುದದಿ ॥ ೨ ॥

ಚಿತ್ರಗುಪ್ತರ ನಡೊ ಮದ್ಧಮ್ಮ । ಶ್ರೀ ಗಂಧದ ಗಿಡದ ಕೆಳಗಮ್ಮ ।
ರತ್ನದಂತೆ ಹೊಳೆವತಿಹ್ಯೆನೆ । ರಾಜಶೇಖರ ಮಹಾಲಿಂಗ ।
ವಳಗೆ ವರಗೆ ತುಂಬಿತುಳಕುವ । ವಾಯದೇವ ಸೋಹಂ । ಬ್ರಹ್ಮ ॥ ೩ ॥

ಜೀವಶಿವನು ನಾಮ ಯರಡಮ್ಮ । ಶಿವನು ಜೀವನು ಏಕ ವಂದಮ್ಮಾ ।
ಜೀವ ಇದ್ದಲ್ಲಿ ಶಿವನುಹಾನೇ ಶಿವನು ಮಹಿಮವು ತಿಳಿಯಗೊಡನೆ ।
ಆರು ಚಕ್ರದ ಮ್ಯಾಲೆ ಹಾನೆ । ಆದಿ ಅನಾದಿಗೆ ನಿಲ್ಕದವನೇ ॥ ೪ ॥

ಧರಿಗೆ ಘಡಿಯಬದಿನೆಹಾಳಮ್ಮ । ವಿರೂಪಾಕ್ಷಗುರುವು ತೋರಿದ ।
ಹರವು ಯನಗಮ್ಮ । ಆರುವಿನೊಳಗಣ ಹರವು ತೋರಿದ ।
ಮಾಯೆ ಮರವೆಯಲ್ಲ ನೀಗಿದಾ । ಪಾರಮಾರ್ಥ ।
ಹಾದಿಯಿಡಶಿದ । ಪಾರು ಮಾಡಿದ ಹರನು ಯನಗೆ ॥ ೫ ॥

೨. ನಗುತಾದೆ ಕೂಸು ನಗುತಾದೆ

ನಗುತಾದೆ ಕೂಸು । ನಗುತಾದೆ ಅಂತರ
ಮಾರ್ಗದಿ ನಿಂತು ಮಧ್ಯದಲ್ಲಿ ॥ ಪ ॥

ನಗುತಾದೆ ಆ ಕೂಸು । ಯಿಳಿಸುವರ್‍ಯಾರಿಲ್ಲ ।
ಸತ್ಯಶರಣರ ಕಂಡು । ಬೋರ್‍ಯಾಡಿ ಕೂಸು ನಗುತಾದೆ ॥ ೧ ॥

ಕಣ್ಣಿಲ್ಲ ಕಿವಿಯಿಲ್ಲ ಮೂಗಿಲ್ಲ ತಲೆಯಿಲ್ಲಾ । ಬಾಯಿ ನಿಲ್ಲದ ಕೂಸು
ಬೈಲೋಳು ನಿಂತು ನಗುತಾದೆ ಕೂಸು ನಗುತಾದೆ ॥ ೨ ॥

ಧರೆಯೋಳಧಿಕವಾಗಿ ಮೆರಿವ ಬದಿನಾಳು । ಗುರು ವಿರೂಪಾಕ್ಷನ
ಯಡೆಬಿಡದೆ ಕೂಸು ನಗುತಾದೆ ಕೂಸು ನಗುತಾದೇ ॥ ೩ ॥

೩. ಆನೆನ್ನ ಆಡು ನುಂಗಿತ್ತೊ

ಆನೆನ್ನ ಆಡು ನುಂಗಿತ್ತೊ ।
ಅಕ್ಕಯ್ಯ ಆನೆನ್ನ ಆಡು ನುಂಗಿತ್ತೊ ॥ ಪ ॥

ಎತ್ತಿನ ಜತ್ತಿಗಿ ನುಂಗಿ । ಜತ್ತಿಗೀಯು ಭಂಡಿ ನುಂಗಿ ।
ಭಂಡಿವೋಡೋ ಅಣ್ಣನ್ನ । ಬಾರಕೋಲು ನುಂಗತಕ್ಕಯ್ಯೊ ॥ ೧ ॥

ಕುದುರೆನ್ನ ತಡಿ ನುಂಗಿ । ತಡಿನ್ನ ಕಾಪು ನುಂಗಿ ।
ಕುದುರೆ ನಡಸೋ ಅಣ್ಣಯನ್ನ । ಲಗಾಮು ನುಂಗಿತಕ್ಕಯ್ಯೋ ॥ ೨ ॥

ತಕ್ಕಡಿಯು ಪಳ್ಳೆ ನುಂಗಿ । ಪಳ್ಳಿಗನ್ನದಂಡಿಗಿನುಂಗಿ ।
ದಂಡಿಗಿಯಿಡದು ತೂಗೊ ಅಣ್ಣನದಾರ ನುಂಗಿತಕ್ಕಯ್ಯೋ ॥ ೩ ॥

ಗೂಟವು ತಿಗಿರಿ ನುಂಗಿ । ತಿಗಿರಿನ್ನ ಗಡಿಗಿ ನುಂಗಿ ।
ತಿಗಿರಿ ತಿರುವೋ ಅಣ್ಣಯ್ಯನ್ನ ಬಡ್ಗಿ ನುಂಗಿತ್ತಕ್ಕಯ್ಯೋ ॥ ೪ ॥

ಬಣವಿನ್ನದಡ್ಡಿ ನುಂಗಿ । ದಡ್ಡಿನ್ನ ಬೇಲಿ ನುಂಗಿ ।
ಬೇಲಿಹಚ್ಚೋ ಅಣ್ಣಯ್ಯನ್ನ । ಬ್ಯಾಕಲ್ಲು ನುಂಗಿತ್ತಕ್ಕಯ್ಯೋ ॥ ೫ ॥

ಕಡ್ಡಿ ಗುಡ್ಡನ್ನ ನುಂಗಿ । ಗುಡ್ಡವು ಭೂಮಿನ್ನ ನುಂಗಿ ।
ಭೂಮಿ ಆಳೋ ಹರಸನ್ನ । ಬಲ್ಲಿ ನುಂಗಿತಕ್ಕಯ್ಯೊ ॥ ೬ ॥

ಧರೆಯೋಳಧಿಕವಾಗಿ ಮೆರೆವ । ಬದಿನೆಹಾಳು ಗುರುವಿರೂಪಾಕ್ಷನ
ಆತ್ಮ ನುಂಗಿತಕ್ಕಯ್ಯೋ ಆನೆನ್ನ ಆಡು ನುಂಗಿತ್ತೋ ॥ ೭ ॥

೪. ಇಲ್ಲೇ ಕೈಲಾಸ ಇಲ್ಲೇ ವೈಕುಂಠ

ಇಲ್ಲೇ ಕೈಲಾಸ ಇಲ್ಲೇ ವೈಕುಂಠ । ಮುನ್ನಯಲ್ಲಿ ನೋಡಲು
ಇಲ್ಲೇ ಕೈಲಾಸ ಇಲ್ಲೇ ವೈಕುಂಠ ॥ ಪ ॥

ತನ್ನ ಬಿಟ್ಟು ದೇವರಿಲ್ಲ ।
ಮೊಣ್ಣು ಬಿಟ್ಟು ಪುಣ್ಯ ಕ್ಷೇತ್ರವಿಲ್ಲ ।
ಮನವನರಿಯದೆ ಕಳ್ಳತನವಲ್ಲ ।
ಮಾಯ ಮೋಹಕ । ಶಿಗದವನೆ ಬಲ್ಲಾ
ಪರಹೆಣ್ಣು ಪರಮಣ್ಣು ॥ ೧ ॥

ಪರವನ್ನು ಆಸೆಹಳದು ಪರಕೆ ಪರತರವಾದ ।
ಪರಬ್ರಹ್ಮನ ನೆಲೆ ತಿಳಿದ ಯತಿಗೇ ॥ ೨ ॥

ತನ್ನ ನಿಜವು ತಾನು ತಿಳದು । ಘನ್ನಘಾತಕ ತನವು ಅಳಿದು ।
ಸೃಷ್ಟಿಗೊಡಿಯನ ಶಿವನ ಭಜನಿಯು ನಿಷ್ಠಿಯಿಂದ ಮಾಡಿದವರಿಗೆ ।
ತನ್ನೊಳಗೆ ತೋರುವ ಕೈಲಾಸ ವೈಕುಂಠ
ಕರುಣನಿಧಿ ವಿರೂಪಾಕ್ಷ ಗುರುವರಾ ॥ ೩ ॥

೫. ಹಣವು ಘಳಿಸಬೇಕೆಂತ್ತಾದ್ದು

ಹಣವು ಘಳಿಸಬೇಕೆಂತ್ತಾದ್ದು ।
ನರರಿಗೆ ಕಾಣಿಸದಂತ್ತಾದ್ದು ।
ಅನುಮಾನವಿಲ್ಲದೇ ಹರಿಹರ ಬ್ರಹ್ಮರು ॥ ಪ ॥

ಹೌದೌದು ಹೌದೌದುವೆಂಬತ್ತಾದ್ದು
ಸಾಲ ಕೊಟ್ಟರೆ ತೀರದಂತ್ತಾದ್ದು ।
ತನ್ನ ಬಿಟ್ಟು ಹೊರಗೆ ಹೋಗದಂತ್ತಾದ್ದು
ಬಟ್ಟ ಬೈಲೊಳು ಗಂಟನು ಬಚ್ಚಿಟ್ಟು ಬಿಟ್ಟರೆ
ಯಾರ್‍ಯಾರಿಗೆ ಶಿಗದಂತ್ತಾದ್ದು ॥ ೧ ॥

ಕರ್ಮಕ್ಕೆ ಕೈ ಸೇರದಂತ್ತಾದ್ದು
ನಿಜ ಧರ್ಮಕ್ಕೆ ಕಾಣಿಸುವಂತಾದ್ದು ।
ನಿರ್ಮಲವಾದ ಮನಶಿನ ದಾನ ಧರ್ಮಕ್ಕೆ
ಮಿಗಿಲಾದಂತ್ತಾದ್ದು ॥ ೨ ॥

ಮರವಿಗೆ ತೋರದಂತ್ತಾದ್ದು ।
ನಿಜ ಅರುವಿನೋಳ್ ಬೈರದಿರುವಂತ್ತಾದ್ದು ।
ಗುರುವಿರೂಪಾಕ್ಷನು ದಿವ್ವ್ಯದಿಷ್ಟಿಲಿ ನೋಡಲು
ಯೇನೇನು ತಪ್ಪಿಲ್ಲದಂತ್ತಾದ್ದು ॥ ೩ ॥

೬. ಮುತ್ತು ಕಂಡೆನು ತಂಗ್ಯಮ್ಮ

ಮುತ್ತು ಕಂಡೆನು ತಂಗ್ಯಮ್ಮ । ನಾನೊಂದು ಮತ್ತು ಕಂಡೆನು ತಂಗ್ಯಮ್ಮಾ ।
ಮುತ್ತಿನ ಗುರ್ತು ಮೂಗಿನ ಕೊನಿಗಿತ್ತು ।
ಮೂರು ವರ್ನದ ಮುತ್ತು । ಮೂಗಿನ ವಳಗಿತ್ತು ॥ ಪ ॥

ಒಂದು ವರ್ನದ ಮುತ್ತು ಓಂ ನಮಃ ದಲ್ಲಿಯಿತ್ತು ।
ಎರಡು ವರ್ನದ ಮುತ್ತು ಯೀಡಪಿಂಗಳದಲ್ಲಿತ್ತು ॥ ೧ ॥

ಮೂರು ವರ್ನದ ಮುತ್ತು ಮುಕ್ಕಣ್ಣನಿಗೆ ಗೊತ್ತು ।
ನಾಲ್ಕು ವರ್ನದ ಮುತ್ತು । ನಾಶಿಖ ತುದಿಗಿತ್ತು ॥ ೨ ॥

ಐದು ವರ್ನದ ಮುತ್ತು । ಐಕ್ಯ ಸ್ಥಲದಲ್ಲಿಯಿತ್ತು ।
ಆರು ವರ್ನದ ಮುತ್ತು । ಆರೂಢನಿಗೆ ಗೊತ್ತು ॥ ೩ ॥

ಏಳು ವರ್ನದ ಮುತ್ತು । ಯೋಗ ಬಲ್ಲವಗೆ ಗೊತ್ತು ।
ಎಂಟು ವರ್ನದ ಮುತ್ತು ರಂಗು ಮಂಟಪದೊಳಗಿತ್ತು ॥ ೪ ॥

ವಂಭತ್ತು ವರ್ನದ ಮುತ್ತು ತುಂಬಿತುಳಕಲಿತ್ತು ।
ಹತ್ತು ವರ್ನದ ಮುತ್ತು । ತತ್ವ ಜ್ಞಾನಿಗೆ ಗೊತ್ತು ॥ ೫ ॥

ಹನ್ನೊಂದು ವರ್ನದ ಮುತ್ತು । ಪನ್ನಂಗಧರನಲ್ಲಿತ್ತು ।
ಹನ್ನೆರಡು ವರ್ನದ ಮುತ್ತು । ಆತ್ಮಲಿಂಗಕಂಡವಗೆ ಗೊತ್ತು ॥ ೬ ॥

ಹದಿಮೂರೊರ್ನದ ಮುತ್ತು । ಮುನ್ಮನೆಕಿಲ ಬಲ್ಲವಗೆ ಗೊತ್ತು ।
ನಿತ್ಯ ಆಡುವ ಮುತ್ತು । ಗುರುವೀರೂಪಾಕ್ಷನಿಗೆ ಗೊತ್ತು ॥ ೭ ॥

೭. ಗಂಡನ್ನ ಮಾಡಿಕೊಂಡೆ ಮುಪ್ಪಾಗದಂತ್ತಾ :

ಗಂಡನ್ನ ಮಾಡಿಕೊಂಡೆ ।
ಮುಪ್ಪಾಗದಂತ್ತಾ ಮುತ್ತೆದುತನವನು ಪಡಕೊಂಡೆ ।
ಗಂಡನ್ನ ಮಾಡಿಕೊಂಡೆ ಘಟ್ಟುಳ್ಳವನ್ನ ನೋಡಿ ।
ಸೃಷ್ಟಿಗೊಡಿಯ । ಶೇಷನೆಂದ್ಯೆನೀ ಶಿವಮಹಿಮಾನಾ ॥ ಪ ॥

ಯಡಬಲ ನೋಡಿಕೊಂಡೆ ।
ನಡುಗಡೆ ದಾರೀಯನಿಡಗೊಂಡೇ ।
ನೀಲಜ್ಯೋತಿಯ ಮದ್ಧ್ಯಜ್ವಾಲೆಯೊಳು ಬೆಳಗುವ ।
ಬಾಲನಂತಾಡುವನ ವರನನ್ನು ನೋಡಿಕೊಂಡೆ ॥ ೧ ॥

ಗಂಗೆ ಯಮುನದೊಳು
ಸ್ನಾನವ ಮಾಡಿ ಮೈಲಿಗೆ ತೊಳಕೊಂಡೆ ।
ಸಂಗಮದೊಳು ಮಿಂದು ತಾಳಿಯ ಕಟ್ಟಿಕೊಂಡೆ ।
ಅರುವುಳ್ಳ ವರ ನೋಡಿ ಭವಬಾಧೆ ಕಡಕೊಂಡೆ ॥ ೨ ॥

ಧರೆಯೋಳು ಅಳೆಕ್ವೋಟಿ
ಗುರುಮರಿದೇವನ ವರಪುತ್ರ ।
ಪರಮಪವಿತ್ರ ವಿರೂಪಾಕ್ಷನ । ಲೀಲೆಯೋಳಾಡುತ ।
ಸ್ಥಿರ ಮುಕ್ತಿ ಪಡಕೊಂಡೆ । ನರಜನ್ಮದೊಳು ಬಂದು ॥ ೩ ॥

೮. ಕಾಣಬಾರದ ಕೌತುಕವು ಕಂಡ್ಯಣ್ಣ

ಕಾಣಬಾರದ ಕೌತುಕವು ಕಂಡ್ಯಣ್ಣ ಕೌತುಕದ ಪರಿಯು ।
ಹೇಳ್ವ ಜಾಣರು ಧರೆಯೊಳಿಲ್ಲ । ಹೇಳೆಂದರೆ ಬಾಯಿಯಿಲ್ಲಾ ।
ಬಾಲಚಂದ್ರನಂತ್ತೆ ಹೊಳೆವೋ । ಶೂಲಧರನ
ಕರುಣದಿಂದ ಕಾಣಬಾರದ ಕೌತುಕವನು ಕಂಡ್ಯಣ್ಣ ॥ ಪ ॥

ಭೂಮಿ ಮುಗಲಿಗೆ ಜಗಳ ಬಿತ್ತಣ್ಣ । ಭೂಮೆದ್ದು ಹೋಡೆದರೆ
ಮುಗುಲು ಚೂರುಚೂರಾಗಿ ಹೊಯ್ತಿತಣ್ಣಾ ॥
ಮುಗಲುನಲ್ಲಿ ಈರ್ವ ಸೂರ್ಯಚಂದ್ರರು ಮೂರ್ಛಿಯಾಗಿ ಬಿದ್ದರಲ್ಲಾ ।
ಮೂರ್ಛಿಯಾಗಿ ಬಿದ್ದವರನ್ನು ಮುಂಗಲಿ ಬದು ನುಂಗಿತಲ್ಲಾ ॥ ೧ ॥

ಕಡ್ಡಿ ಗುಡ್ಡಕ್ಕೆ ಜಗಳ ಬಿತ್ತಣ್ಣ । ಕಡ್ಡೆದ್ದು ಹೊಡೆದರೆ
ಗುಡ್ಡ ಪುಡಿಪುಡಿಯಾಗಿ ಹೊಯ್ತಣ್ಣ ।
ಗುಡ್ಡ ಸುತ್ತಕಾವಲಿರುವವರು ಅಡ್ಡ ಬಿದ್ದು ಹಳುವುವಗಲ್ಲಾ ।
ಅಡ್ಡಬಿದ್ದು ಅಳುವುವರನ್ನು । ಹದ್ದು ಬಡಕೊಂಡೋಯಿತಲ್ಲಾ ॥ ೨ ॥

ಘಾಳಿ ರವದಿಗೆ ಜಗಳ ಬಿತ್ತಣ್ಣಾ । ರವದೆದ್ದು ಬಡಚರೆ ।
ಘಾಳಿ ಅಂಜಿಹೋಡಿ ವೈತಣ್ಣಾ । ಘಾಳಿ ಆಶ್ರಯದಿರುವೋ ಜಗವು ।
ಗೋಳು ಆಡುತಿರ್ವರಲ್ಲಾ । ಗೋಳು ಆಡೋತಿರ್ವ ಜಗವನು
ಗೂಗೆ ನುಂಗಿ ತೇಗಿತಲ್ಲಾ ॥ ೩ ॥

ಹಾಳು ಅರಸಿಗೆ ಜಗಳ ಬಿತ್ತಣ್ಣಾ । ಹಾಳೆದ್ದು ಹೊಡೆದರೆ ।
ಹರಸು ರಾಜ್ಯ ಬಿಟ್ಟು ಹೋದಣ್ಣಾ । ಹರಸಿನಲ್ಲಿ ಲೆೃಕ್ಕ ಬರಿವರು ।
ಹಳೂತ ನಿಂತ್ತರು ಸುತ್ತಮುತ್ತ । ಸುತ್ತಮುತ್ತ ಹಳುವುವರನ್ನು ।
ತೊತ್ತು ಬಂದು ನುಂಗಿತಲ್ಲಾ ॥ ೪ ॥

ಧರಿಗೆ ಕರ್ತ ವಿರೂಪಾಕ್ಷಣ್ಣ । ಗುರು ಕರುಣದಿಂದಲಿ ।
ಖಂಡೀ ತೇಳಿದ ಮುಂಡೀಗಿದಣ್ಣ । ಖಂಡಿತೇಳಿದ ಮುಂಡಿಗಿದು ।
ಕರ್ಮನರರಿಗೆ ತಿಳಿಯದಿದು । ಆತ್ಮವ ವಟದ ಮುಂಡೀಗಿದು ।
ಅನುಭವಿಗೆ ತಿಳಿಯುವದು ॥ ೫ ॥

೯. ತಾಳಲಾರೆನು ನಾನು ಗುರುವೇ

ತಾಳಲಾರೆನು ನಾನು ಗುರುವೇ
ತಗಣಿಯ ಕಾಟವು ಪ್ರಭುವೇ ।
ತಾಳಲಾರೆನು ನಾನು ತಗಣಿಯ ಕಾಟವು
ಸೋಮಧರನೆಯನ್ನ ಪ್ರೇಮಾದಿ ರಕ್ಷಿಸೋ ॥ ಪ ॥

ಯಂಭತ್ತು ನಾಲ್ಕು ಲಕ್ಷ ತಿರಗಿ
ಹಂಬಲಿಸುತ ಬಂದೆ ನಿನ್ನ ಬಳಿಗೆ ।
ಮಾರಹರನೆ ಯನ್ನ ಘೋರವು ಬಿಡಿಸಯ್ಯ ।
ಧರುಣಿ ಪಾಲನಿನ್ನ ಚರಣಾವು ನಂಬಿರುವೆ ॥ ೧ ॥

ಜನನ ಮರಣವನು ಬಿಡಿಸೋ ।
ಸಂಸಾರ ಜಂಝಾಟ ಬಿಡಿಸೋ ।

ಕಡುಮುದದಿಂದಲಿ ಕರಪಿಡಿಯನ್ನನು ।
ಪರಮನಂದನೆ ನಿನ್ನ ಪಾದವು ಭಜಿಸುವೇ ॥ ೨ ॥

ಕಾಯಕರ್ಮದಿಂದ ಬಂದೆ ।
ಮಾಯಮೋಹದೊಳು ಬೆಂದೆ ।
ಮಾರಮರ್ದನ ಶಂಭು ಮರಿಯಾದೆ ಪೊರಿಯನ್ನ ।
ಪೊಡವಿ ಪಾಲನೆ ನಿನ್ನ ಅಡಿಗಡಿಗೆ ನುತಿಸುವೇ ॥ ೩ ॥

ಹಸವು ತೃಷಿಗಳನ್ನು ಅಳಿಸೋ ।
ವ್ಯಸನ ವೇಳರ ಬಾಧೆ ಬಿಡಿಸೋ ।
ಪಶುಪತಿ ನಾನಿನ್ನ ಪಾದಕ್ಕೆ ಯರಗುವೆ ।
ವಸುಧೀಶಯನ್ನನು ಶಿಶುವಿನಂತೆ ಸಲವೋ ॥ ೪ ॥

ಹರನ ಗುರುವೆ ನೀನೇ ಕೇಳೋ ।
ಅರುವಿನ ಕುರುಹವನ್ನು ಪೇಳೋ ।
ದುರಿತ ದುರ್ಗ್ಗುಣ ದೂರ ಮಾಡೋ ಹರನೇ ।
ಇಷ್ಟಲಿಂಗೇಶನೆ । ಗುರುವಿರೂಪಾಕ್ಷನೇ ॥ ೫ ॥

೧೮. ರಾಯಚೂರ ಯರಮಾರೆಪ್ಪ (೧೯೨೫-೨೦೦೦)

ರಾಯಚೂರು ಜಿಲ್ಲೆಯ ಪ್ರಥಮ ದಲಿತ ತತ್ವಪದಕಾರನಾದ ಯರಮಾರೆಪ್ಪ ನಗರದ ಗಾಜಗಾರ ಪೇಟೆಯ ನವಾಬಗಡ್ಡೆಯಲ್ಲಿ ಕ್ರಿ.ಶ. ೧೯೨೫ರಲ್ಲಿ ಹುಟ್ಟಿದನು. ಈತನ ಹೆಸರು ಮಾರೆಪ್ಪ ಈತ ಕೆಂಪಗಿರುವುದರಿಂದ ಯರಮಾರೆಪ್ಪನೆಂದು ಜನ ಕರೆದಿರುವರು. ತಿಕ್ಕಯ್ಯ ಮತ್ತು ಸವರಮ್ಮ ಈತನ ತಂದೆ ತಾಯಿಗಳು. ಮಗನಿಗೆ ಹೆಚ್ಚಿನ ಶಿಕ್ಷಣವನ್ನು ಕೊಡಿಸಲಾಗದೆ ಇವರು ೨ನೇ ತರಗತಿಯವರೆಗೆ ಮಾತ್ರ ಓದಿಸಿದರು. ಮಾರೆಪ್ಪ ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳನ್ನು ಕಲಿತನು. ಈತನ ಹೆಂಡತಿ ಚಂದ್ರಮ್ಮ ಮಾರೆಪ್ಪನಿಗೆ ಮಕ್ಕಳಿರಲಿಲ್ಲ. ಶಿವಶರಣರ ಪ್ರಭಾವದಿಂದಾಗಿ ಮಾರೆಪ್ಪನು ಚಪ್ಪಲಿ ಹೊಲಿಯುವ ನಿತ್ಯದ ಕಾಯಕದೊಂದಿಗೆ ಅನೇಕ ತತ್ವಪದಗಳನ್ನು ರಚಿಸಿದ್ದಾನೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧಿ ಟೋಪಿ ಹಾಕಿದ್ದರಿಂದ ಈತನಿಗೆ ಟೋಪಿ ಮಾರೆಪ್ಪನೆಂತಲೂ ಕರೆಯುತ್ತಾರೆ. ರಾಯಚೂರಿನ ಸಾಹ್ ಕಛೇರಿ ಎದುರಿಗೆ ಮಳೆಚಳಿ, ಬಿಸಿಲು ಎನ್ನದೆ ಮರದಡಿ ಕುಳಿತು ಚಪ್ಪಲಿ ಹೊಲಿಯುತ್ತಿದ್ದನು. ಈತನ ಪುಟ್ಟ ಗುಡಿಸಲು ನವಾಬ ಗಡ್ಡೆಯಲ್ಲಿದೆ.


೧೨ನೇ ಶತಮಾನದ ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯ ಮತ್ತು ಹರಳಯ್ಯ ವಚನಕಾರರ ಪ್ರಭಾವದಿಂದ ಯರಮಾರೆಪ್ಪ ತನ್ನ ಕುಲಕಸುಬಿನ ಪರಂಪರೆಯನ್ನು ಉಳಿಸಿಕೊಂಡು ಬಂದುದನ್ನು ಕಾಣಬಹುದು. ತಿಪ್ಪಣ್ಣ ತಾತನೇ ಈತನ ದೀಕ್ಷಾ ಗುರು. ತಿಪ್ಪಣ್ಣ ತಾತ ವಯಸ್ಸಿನಿಂದ ಮಾರೆಪ್ಪನಿಗಿಂತಲೂ ಚಿಕ್ಕವನಾದರೂ ಅಧ್ಯಾತ್ಮದಲ್ಲಿ ಹೆಚ್ಚಿನ ಸಾಧನೆ ಮಾಡಿದ್ದಾನೆ. ಆದ್ದರಿಂದ ಯರಮಾರೆಪ್ಪ ಇಬ್ಬರೂ ಗುರುಗಳನ್ನು ಸ್ಮರಿಸಿ "ಹನುಮಂತೇಶ ತಿಪ್ಪಣ್ಣ ತಾತ" ಎಂಬ ಅಂಕಿತದಲ್ಲಿ ತತ್ವಪದಗಳನ್ನು ರಚಿಸಿದ್ದಾನೆ. ಮಕ್ಕಳಿಲ್ಲದಿದ್ದರೂ ಇವರು ದತ್ತುಪುತ್ರರನ್ನು ಸ್ವೀಕರಿಸಲಿಲ್ಲ. ಬಂಜೆತನದ ಭಾವ ಇವರಲ್ಲಿ ಸುಳಿಯಲಿಲ್ಲ.

"ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬ ಶರಣರ ನುಡಿಯಂತೆ ದಂಪತಿಗಳಿಬ್ಬರೂ ಬದುಕಿದರು. ಮಾರೆಪ್ಪ ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ತತ್ವ ಪದಗಳನ್ನು ರಚಿಸಿದ್ದಾನೆ. ವೃತ್ತಿ ಪ್ರತಿಮೆಯ ಮೂಲಕ


ಅನುಭಾವದೆತ್ತರವನ್ನೇ ತಲುಪುವ ಈತನ ತತ್ವಪದಗಳು ಶಿವಶರಣರ ವಚನಗಳನ್ನು ನೆನಪಿಸಿ ಕೊಡುತ್ತವೆ. ಕಾಯಕ ಜೀವಿಯಾಗಿ ಬದುಕಬೇಕೆಂಬ ಆಶಯವನ್ನು ಯರಮಾರೆಪ್ಪನು ತನ್ನ ಹಾಡುಗಳಲ್ಲಿ ದೃಷ್ಟಾಂತ ಮತ್ತು ಸಂಕೇತಗಳ ಮೂಲಕ ವ್ಯಕ್ತ ಪಡಿಸಿದ್ದಾನೆ. ಪರಮಾತ್ಮನಿಗಿಂತಲೂ ಈತ ಜೀವಾತ್ಮಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದನ್ನು ಕಾಣಬಹುದು. ಜೀವಾತ್ಮದ ಇರುವಿಕೆಯ ಕುರಿತು ಚಿಂತಿಸಿದ್ದಾನೆ. ಮನುಷ್ಯ ಬಾಹ್ಯ ಚಟುವಟಿಕೆಗಳಿಗಿಂತಲೂ ಅಂತರಂಗದ ಶುದ್ಧತೆಯನ್ನು ಕಾಪಾಡಿಕೊಂಡು ಹೋಗಬೇಕೆಂಬ ಕಳಕಳಿಯನ್ನು ಈತ ವ್ಯಕ್ತಪಡಿಸಿದ್ದಾನೆ. ಕಾಯಕವನ್ನು ಯಾವುದೇ ಭೇದಭಾವ ಮಾಡದೇ ಪ್ರಾಮಾಣಿಕವಾಗಿ ಸತ್ಯಶುದ್ಧರಾಗಿ ಮಾಡಬೇಕೆಂಬ ತಿಳುವಳಿಕೆಯನ್ನು ಜನರಲ್ಲಿ ಬೆಳೆಸುವುದೇ ಈ ತತ್ವ ಪದಕಾರನ ಮುಖ್ಯ ಉದ್ದೇಶವಾಗಿದೆ.

"ಹತ್ತಿಯ ಹೊಲದಾಗ ಎತ್ತು ಸತ್ತಾದ ಒಂದು
ಸತ್ಯ ಕತ್ತಿಯ ಹಿಡಿದು ಚರ್ಮವ ಸುಲಿ ತಂದು
ಸುಲಿದ ಚರ್ಮಕೆ ನಾನು ಸುಣ್ಣ ಧರಿಸಿದೆನು"

ಎಂದು ಕಾಯಕವನ್ನು ಕುರಿತು ಹೇಳುವ ವಿಚಾರ ಅಧ್ಯಾತ್ಮಿಕವಾಗಿದೆ. ತಾನು ವೃತ್ತಿಯಿಂದ ಜಾತಿಯಿಂದ ಹೀನನಲ್ಲ ಎಂದು ಧ್ವನಿಸುವ ಯರಮಾರೆಪ್ಪನ ಮಾತು ಚಾತುರ್ವರ್ಣ ವ್ಯವಸ್ಥೆಗೆ ಸವಾಲಾಗಿದೆ. ಗುರುವಿನ ನಾಮವನ್ನು ನೆನೆಯದಿರುವ ಮನುಷ್ಯನು ಹೀನನೇ ಹೊರತು ಕೆಳಜಾತಿಯಲ್ಲಿ ಹುಟ್ಟಿದವನು ಹೀನನಲ್ಲವೆಂಬ ಸಂಗತಿಯನ್ನು ಸ್ಪಷ್ಟ ಪಡಿಸಿದ್ದಾನೆ. ಆತನ ಭಾವಚಿತ್ರ ಆತನ ಹೆಂಡತಿ, ಬಂಧುಗಳ ಚಿತ್ರ ಹಾಗೂ ಆತ ವಾಸವಾಗಿದ್ದ ಮನೆಯ ಚಿತ್ರಗಳನ್ನಿಲ್ಲಿ ಸ್ಮಾರಕದ ರೂಪದಲ್ಲಿ ನೀಡಿದೆ. ಆತನು ದಿನಾಂಕ : ೩೧-೦೧-೨೦೦೦ರಂದು ನಿಧನನಾದನು.




ರಾಯಚೂರಿನ ಗಾಜಗಾರಪೇಟೆ -ನವಾಬ ಗಡ್ಡೆಯಲ್ಲಿದ್ದ ತತ್ವಪದಕಾರ ಯರಮಾರೆಪ್ಪ ಅವರ ಭಾವ ಚಿತ್ರ, ರಾಯಚೂರು.



ರಾಯಚೂರಿನ ಗಾಜಗಾರ ಪೇಟೆ – ನವಾಬಗಡ್ಡೆಯಲ್ಲಿದ್ದ ತತ್ವಪದಕಾರ ಯರಮಾರೆಪ್ಪ ಹಾಗೂ ಆತನ ಧರ್ಮಪತ್ನಿ ಚಂದ್ರಮ್ಮ ಅವರ ಭಾವ ಚಿತ್ರ, ರಾಯಚೂರು.



ರಾಯಚೂರಿನ ಗಾಜಗಾರಪೇಟೆ – ನವಾಬಗಡ್ಡೆಯಲ್ಲಿದ್ದ ತತ್ವಪದಕಾರ ಯರಮಾರೆಪ್ಪ ವಾಸಿಸಿದ್ದ ಬಿದ್ದ ಮನೆಯ ಚಿತ್ರ, ರಾಯಚೂರು.



ರಾಯಚೂರಿನ ಗಾಜಗಾರಪೇಟೆ – ನವಾಬಗಡ್ಡೆಯಲ್ಲಿದ್ದ ತತ್ವಪದಕಾರ ಯರಮಾರೆಪ್ಪನ ತಮ್ಮನ ಮಗ ಸಣ್ಣ ತಿಪ್ಪಯ್ಯ ಹಾಗೂ ಆತನ ಪತ್ನಿ, ಮಕ್ಕಳು ನಿಂತ ಚಿತ್ರ, – ರಾಯಚೂರು.

ಯರಮಾರೆಪ್ಪ ತನ್ನ ವೃತ್ತಿಯಲ್ಲಿ ದೈವ ಭಾವವನ್ನು ಕಾಣುವ ತತ್ವಪದಕಾರನಾಗಿ ಕುಲಕ್ಕಿಂತಲೂ ಕಸುಬು ಮುಖ್ಯವಾಗುತ್ತದೆ ಎಂದು ಹೇಳಿದ್ದು ಮುಖ್ಯವಾಗಿದೆ.

ಯರಮಾರೆಪ್ಪನು ತೆಲುಗು ಭಾಷೆಯಲ್ಲಿ "ಎಕ್ಕಡ ಎನ್ನಾಡು ರಾ ದೇವುಡು, ಚಿಕ್ಕಾಡು ದೊರಕಾಡು ರಾ" ಎಂಬ ತತ್ವಪದಗಳಲ್ಲಿ ದೇವರ ಅಸ್ತಿತ್ವ ಮತ್ತು ಕರ್ಮಸಿದ್ಧಾಂತವನ್ನು ಕುರಿತು ಹೇಳಿದ್ದಾನೆ. ದೇವರನ್ನು ಸದಾಚಾರ ಸದ್‌ವಿಚಾರಗಳಲ್ಲಿ ಕಾಣುವಂತೆ ಮತ್ತು ಕರ್ಮ ಸಿದ್ಧಾಂತವನ್ನು ಕ್ರಿಯೆಯಲ್ಲಿ ಒಳಗೊಳ್ಳುವಂತೆ ಹೇಳಿದ್ದಾನೆ. ಸಾಂಪ್ರದಾಯಿಕ ವಿಚಾರಗಳನ್ನು ಅಲ್ಲಗಳೆಯುವುದರ ಮೂಲಕ ಯರಮಾರೆಪ್ಪನು ಪ್ರಗತಿಪರನಾಗಿ ಕಾಯಕ ನಿಷ್ಠನಾಗಿ ಕಾಣುತ್ತಾನೆ. ಆತ ಬರೆದ ತತ್ವಪದಗಳ ಸಂಗ್ರಹ ಕಾರ್ಯವಿನ್ನೂ ನಡೆಯಬೇಕಾಗಿದೆ. ಆತನ ಕೆಲವು ತತ್ವಪದಗಳನ್ನು ಡಾ. ವಿಜಯಶ್ರೀ ಸಬರದ ಅವರು "ಗುರು ಶಿಷ್ಯರ ತತ್ವಪದಗಳು" ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದು, ಅವರ ಕೃತಿಯಿಂದ ಇಲ್ಲಿ ಐದು ತತ್ವಪದಗಳನ್ನು ಆಯ್ಕೆಮಾಡಿ ಕೊಡಲಾಗಿದೆ.

೧. ನಾರಿ ಹೋಗೂನು ರಾಯಚೂರಿಗೀಗ

ನಾರಿ ಹೋಗೂನು ರಾಯಚೂರಿಗೀಗ
ಜಹಿರಾಬಾದೀಗೆ ಹೋಗೂನು ಬೇಗ ।
ಸತ್ಯ ಶರಣರೆಲ್ಲಾರೊಡನೆ ಕೂಡಿ
ಮಠವ ಕಟ್ಟ್ಯಾರ ದಿಟವೊಂದೆ ಮಾಡಿ ॥ ಪ ॥

ಐದು ವರ್ಣದ ಕುಪ್ಪಸ ತೊಟ್ಟು
ಆರು ವರ್ಣದ ಸೀರೆಯನುಟ್ಟು ।
ಹಣೆಯ ಮ್ಯಾಲೊಂದು ಕುಂಕುಮದ ಬೊಟ್ಟು
ರನ್ನದ ಮೂಗುತಿ ಮೂಗಿನೊಳು ಇಟ್ಟು ॥ ೧ ॥

ಸುತ್ತ ಮುತ್ತ ಹಳ್ಳಿಗಳಿಂದ
ಬಂದು ನಿಂತಾರೆ ಸಂದಿಲ್ಲದಂಗ ।
ಪರಿ ಪರಿ ತತ್ವಗಳ ತಿಳಿವಿನಿಂದ
ಭಜನಿ ಹಾಡುವರು ಏನು ಚಂದ ॥ ೨ ॥

ನಾಲ್ಕು ಕಂಬದ ಮಂಟಪದಲ್ಲಿ
ಅಷ್ಟ ಮಧ್ಯದಳ ಕಮಲದಲ್ಲಿ ।
ವಾದದ ಭೇದವ ತಿಳಿಯುವಲ್ಲಿ
ಸತ್ಯಶರಣರು ನಿಂತಿರುವರಲ್ಲಿ ॥ ೩ ॥

ಧರಣಿಯೊಳಗೆ ರಾಯಚೂರದಲ್ಲಿ
ಶರಣ ತಿಪ್ಪಣ್ಣನಿರುವನಲ್ಲಿ ।
ಕರುಣ ಪಡೆಯಿರಿ ಹನುಮೇಶನಲ್ಲಿ
ಮುಕ್ತಿಯಾಗುವದು ನಿಮಗಲ್ಲಿ ॥ ೪ ॥

೨. ಹೀನ ಮಾನವನಾದೆನೊ

ಹೀನ ಮಾನವನಾದೆನೊ ಈ ಜಗದೊಳು
ಹೀನ ಮಾನವನಾದೆ ಗ್ನಾನವ ತಿಳಿಯದೆ
ಸ್ವಾಮಿ ನಿಮ್ಮಯ ನಾಮ ಮನದೊಳು ನೆನೆಯದೆ ॥ ಪ ॥

"ಹತ್ತಿಯ ಹೊಲದಾಗ ಎತ್ತು ಸತ್ತಾದ ಒಂದು
ಸತ್ಯ ಕತ್ತಿಯ ಪಿಡಿದು ಚರ್ಮವ ಸುಲಿ ತಂದು
ಸುಲಿದ ಚರ್ಮಕೆ ನಾನು ಸುಣ್ಣವ ಧರಿಸಿದೆನು" ॥ ೧ ॥

ತನುವೆಂಬೊ ಭಾಂಡದೊಳು ಮನವೆಂಬೊ ನೀರು ತುಂಬಿ
ಘನವೆಂಬೊ ಅಡವಿಗ್ಹೋಗಿ ಅವರೆ ಚಕ್ಕೆಯ ತಂದು
ಸುಣ್ಣದ ತೊಗಲನ್ನು ಬಣ್ಣ ಮಾಡಿದೆ ನಾನು ॥ ೨ ॥

ಬಣ್ಣ ಮಾಡಿದ ತೊಗಲು ಬಯಲಿಗೆ ನೆನೆಯಿಟ್ಟು
ಕುಟ್ಟಿ ಕುಟ್ಟಿ ಹದಮಾಡಿ ಹೊಲಿದೆ ನಿಮ್ಮ ಮೆಟ್ಟು
ಯೋಗಿ ತಿಪ್ಪಯ್ಯಗೆ ಗೊತ್ತು ಏರಿದ ಏಳು ಮೆಟ್ಟು ॥ ೩ ॥

ರಾಯಚೂರ ಪುರವಾಸ ದ್ವಾರ ನವರಂಗಧೀಶ
ಶ್ರೀ ಗುರು ಹನುಮೇಶ ನೆನೆದರೆ ಭವನಾಶ
ಜಹಿರಾಬಾದಲಿ ನೋಡು ಕುಂತಾನ ಜಗಧೀಶ ॥ ೪ ॥

೩. ಸುಮ್ಮನಿದ್ದಾರ ನಿಜ ಸಿಗೋದಿಲ್ಲ

ಸುಮ್ಮನಿದ್ದಾರ ನಿಜ ಸಿಗೋದಿಲ್ಲ
ಮಾಯಾ ಮರವಿನೊಳಗೆ ಬಿದ್ದು ಮರಿತಿಯೆಲ್ಲ ॥ ಪ ॥

ಮೂರನ್ನು ಯಾರೂ ತಿಳಿಯಲಿಲ್ಲ
ಆರನ್ನು ಅಳಿಯದೆ ಅರ್ಥವಾಗೋದಿಲ್ಲ ।
ಅಷ್ಟಮದಗಳ ನೀನು ಕಳೆಯಲಿಲ್ಲ
ಮದ ಕಳೆಯದೆ ಮಾದೇವ ನೀನಲ್ಲ ॥ ೧ ॥

ಗುರುವಿನ ಗುರುತರಿಯಲಿಲ್ಲ
ಗುರು ಕರುಣಾ ಇಲ್ಲದೆ ಗುರುತಾಗೋದಿಲ್ಲ ।
ಅರುವು ನಿನಗೆ ತಿಳಿಯಲಿಲ್ಲ
ಅರುವನ್ನು ತಿಳಿಯದೆ ಮುರಹರಿ ನೀನಲ್ಲ ॥ ೨ ॥

ನಿಜವೇನೆಂದು ನಿನಗೆ ತಿಳಿಯಲಿಲ್ಲ
ನಿಜವನ್ನು ತಿಳಿಯದೆ ನಿಜ ಯೋಗಿಯಲ್ಲ ।
ಆಸೆಯು ನೀನು ಅಳಿಯಲಿಲ್ಲ
ಆಸೆಯಳಿಯದೆ ಈಶ ನೀನಲ್ಲ ॥ ೩ ॥

ಮರೆತಿರುವದು ರಾಯಚೂರಲ್ಲ
ಜಹಿರಾಬಾದಿನಲ್ಲಿ ನಿಜ ಸಾರುವದಲ್ಲ ।
ಶಿವಯೋಗಿ ತಿಪ್ಪಣ್ಣಯ್ಯ ಬಲ್ಲ
ನಿಜ ಗುರು ಹನುಮೇಶ ತಿಳಿಸಿದ ಎಲ್ಲ ॥ ೪ ॥

೪. ಲಿಂಗವಿಲ್ಲದ ಪಕ್ಷಿ ನೋಡಮ್ಮ

ಲಿಂಗವಿಲ್ಲದ ಪಕ್ಷಿ ನೋಡಮ್ಮ ನಿನ್ನಂಗದಲ್ಲಿ ಮೂರು ಕಾಲಲಿ ನಡೆವುದಮ್ಮ
ಅಂಗವಿಲ್ಲ ಲಿಂಗವಿಲ್ಲ ಏಳು ಮಂದಿನ ನುಂಗಿತಲ್ಲ
ಮಂಗಳ ಮಹಿಮಾ ಅರಿಯಲಿಲ್ಲ ಕಣ್ಣಿಗದು ಕಾಣಲಿಲ್ಲ ॥ ಪ ॥

ಮೂರು ಆರು ಸೇರುತಿತ್ತಮ್ಮ
ಹನ್ನೆರಡು ಯೋಜನ ಎತ್ತರವಾಗಿ ಕಾಣುತಿತ್ತಮ್ಮ ।
ಮೂರು ಆರು ಸೇರುತಿತ್ತು ಹನ್ನೆರಡೇಜನ ಕಾಣುತಿತ್ತು
ಅತ್ತಿತ್ತ ನೋಡುತಿತ್ತು ಹಗಲಾ ಮೂವತ್ತುಗಾವುದಿತ್ತು ॥ ೧ ॥

ಮೂನ್ನೂರರವತ್ತು ದೂರವಿತ್ತಮ್ಮ ಅರ್ಧಕಪ್ಪು ಕಾಣತಿತ್ತಮ್ಮ
ಮೂನ್ನೂರರವತ್ತು ದೂರವಿತ್ತು ಅರ್ಧಕಪ್ಪು ಕಾಣತಿತ್ತು
ಇಪ್ಪತ್ತೇಳು ಏರುತಿತ್ತು ಯೋಗಿ ತಿಪ್ಪಯ್ಯಗೆ ಗೊತ್ತು ॥ ೨ ॥

ಧರೆಯೊಳು ರಾಯಚೂರಮ್ಮ ಜಹಿರಾಬಾದಲಿ ಶರಣ ತಿಪ್ಪಣ್ಣಾನಮ್ಮ
ಅಂಗ ಲಿಂಗ ಸಂಗಾಮಾಡಿ ಲಿಂಗದನುವ ತಿಳಿದು ನೋಡಿ
ಭಕ್ತರೆಲ್ಲ ಕೂಡಿ ಗುರು ಹನುಮೇಶನ ಕೊಂಡಾಡ್ಯಾರಮ್ಮ ॥ ೩ ॥

೫. ಏನು ಹೇಳಲಮ್ಮ ಈ ಭವದ ಭಾದಿ

ಏನು ಹೇಳಲಮ್ಮ ಈ ಭವದ ಭಾದಿ ಹೋಗದಮ್ಮ ತಂಗಿ
ಏನು ಹೇಳಲಮ್ಮ ಸಂದು ನಿಲ್ಲದಂಗ ಭವ ಬಂಧನ
ದೊಳು ಬಿದ್ದು ಭವಕೆ ಬಂದೇನಮ್ಮ ॥ ಪ ॥

ಮಣ್ಣಿನ ದೇಹವಮ್ಮ ಕುಂಬಾರ ಗಡಿಗೆಮ್ಮ ತಂಗಿ
ಏನು ಹೇಳಲಮ್ಮ ಅಮ್ಮನ ಗರ್ಭದಲ್ಲಿ ಒಂಬತ್ತು
ತಿಂಗಳಿದ್ದು ಹೊರಗೆ ಬಂದೆನಮ್ಮ ॥ ೧ ॥

ಹೆಂಡರು ಮಕ್ಕಳಮ್ಮ ಕಂಡರೂ ಸೇರರಮ್ಮ । ತಂಗಿ
ಹೆಂಡರು ಮಕ್ಕಳು ಕಂಡರೂ ಸೇರರು ಸುಖವೇ ಇಲ್ಲಮ್ಮ ॥ ೨ ॥

ಆಸೆಯ ತಿಳಿಯಮ್ಮ ಈ ಭವದ ಪಾಶವ ತಿಳಿಯಮ್ಮ
ಆಸೆಯ ಅಳಿಯಮ್ಮ ಪಾಪವ ಕಳಿಯಮ್ಮ ಹನುವೇಶನ ಕಾಣಮ್ಮ ॥ ೩ ॥

ಧರೆಯೊಳು ಅಧಿಕಮ್ಮ ರಾಯಚೂರ ಜಹಿರಾಬಾದಿಯಮ್ಮ
ಏನು ಹೇಳಲಮ್ಮ ಗುರು ತಿಪ್ಪಣ್ಣ ಮಹಿಮಾ ಯಾರಿಗೂ ತಿಳಿಯದಮ್ಮ ॥ ೪ ॥

೧೯. ತಲೇಖಾನದ ಭೀಮಸೇನರಾವ್ ಕುಲಕರ್ಣಿ
(೧೯೨೮-೧೯೯೪)

ಭೀಮಸೇನರಾವ್ ಕುಲಕರ್ಣಿಯವರು ರಾಯಚೂರು ಜಿಲ್ಲೆ ಲಿಂಗಸುಗೂರ ತಾಲೂಕಿನ 'ತಲೇಖಾನ' ಎಂಬ ಗ್ರಾಮದಲ್ಲಿ ೧೯೨೮ರಲ್ಲಿ ಜನಿಸಿದರು. ಇವರ ತಂದೆ ಗೋಪಾಲರಾವ್ ತಾಯಿ ಭಾಗೀರಥಿಬಾಯಿ ಹಳ್ಳಿಗಾಡಿನ ಪರಿಸರದಲ್ಲಿ ಹುಟ್ಟಿಬೆಳೆದ ಭೀಮಸೇನರಾವರವರು ಆ ಕಾಲದಲ್ಲಿಯೇ ಮಿಡ್ಲ ಸ್ಕೂಲ್ ಅಂದರೆ ೭ನೆಯತ್ತೆ ಪಾಸಾಗಿ ೧೯೪೯ರಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆ ಆರಂಭಿಸಿದರು. ಲಿಂಗಸುಗೂರ ತಾಲೂಕಿನ ಸಂತೆಕೆಲ್ಲೂರ, ತಲೇಖಾನ, ಕುಷ್ಟಗಿ ತಾಲೂಕಿನ ತಾಳಕೇರಿ ದೇವದುರ್ಗ ತಾಲೂಕಿನ ಮಟರಕಲ್ ಹಾಗೂ ವಂದಲಿ, ಗ್ರಾಮಗಳಲ್ಲಿ ಶಿಕ್ಷಕರಾಗಿ ಮುಖ್ಯೋಪಾಧ್ಯಾಯರಾಗಿ ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಅಕ್ಷರಾಸಕ್ತಿ ಮೂಡಿಸಿದವರು. ಇವರು ಸುಮಾರು ೩೫ ವರ್ಷಗಳವರೆಗೆ ಶಿಕ್ಷಕ ವೃತ್ತಿಯನ್ನು ಕೈಗೊಂಡು ೧೯೭೪ರಲ್ಲಿ ಸೇವಾ ನಿವೃತ್ತಿಯನ್ನು ಹೊಂದಿದರು.

ಊರು ಮತ್ತು ಮನೆಯಲ್ಲಿಯ ಸಾಹಿತ್ಯದ ಪ್ರಭಾವದಿಂದಾಗಿ ಭೀಮಸೇನರಾವ ಅವರು ಸಾಹಿತ್ಯಾಸಕ್ತಿ ಬೆಳೆಸಿಕೊಂಡರು. ಅವರ ಅಣ್ಣ ದಿ. ವೆಂಕೋಬರಾವ್ ಇವರು ಕೂಡ ಮಾಸ್ತರರಾಗಿದ್ದು, ಕುಮಾರ ವ್ಯಾಸಭಾರತ, ಲಕ್ಷ್ಮೀಶನ ಜೈಮಿನಿ ಭಾರತ, ವಾಚನ ಮಾಡುತ್ತಿದ್ದರು. ತಾತನವರೂ ಸಾಹಿತ್ಯಸಕ್ತರು. ಬಳಗದ ಇಬ್ಬರು ತಮ್ಮಂದಿರಲ್ಲಿ ಒಬ್ಬರು ಕುಮಾರವ್ಯಾಸ ಭಾರತ ಓದುತ್ತಿದ್ದರೆ, ಇನ್ನೊಬ್ಬರು ಹಾರ್ಮೋನಿಯಂ ಕಲಿತು ಹಾಡುತ್ತಿದ್ದರು. ಹಳ್ಳಿಯ ಪ್ರದೇಶದ ಜನಪದ ಸಾಹಿತ್ಯ ಇವರ ಸಾಹಿತ್ಯ ಹವ್ಯಾಸಕ್ಕೆ ಪ್ರೇರಕವಾಯಿತು. ಹಳ್ಳಿಯ ನಾಟಕ, ಬಯಲಾಟ, ಭಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ವಚನ ಸಾಹಿತ್ಯ, ದಾಸ ಸಾಹಿತ್ಯಗಳನ್ನು ಓದುತ್ತಿದ್ದರು. ೭ ಮಕ್ಕಳು ವೃದ್ಧ ತಾಯಿ, ತಮ್ಮ ಹೆಂಡತಿಯ ತಾಯಿಗೂ ಮನೆಯಲ್ಲಿಯೇ ಆಶ್ರಯ ಕೊಟ್ಟಿದ್ದರು. ಆಗ ಪಗಾರ ಕಡಿಮೆ. ಮನೆ ತುಂಬಾ ಜನ ಮಕ್ಕಳ ಅಭ್ಯಾಸದ ಹೊಂದಾಣಿಕೆ ಅನ್ನಕ್ಕೆ, ಬಟ್ಟೆಗೆ ತೊಂದರೆ ಇರಲಿಲ್ಲವಾದರೂ ಯಾವ ಆಡಂಬರಕ್ಕೆ ಆಸ್ಪದ ಇರಲಿಲ್ಲ. ಮಕ್ಕಳ ಅಭ್ಯಾಸಕ್ಕಾಗಿ ಊರಿನಿಂದ ೨೫ ಕಿ.ಮಿ. ದೂರದ ಮಸ್ಕಿಯಲ್ಲಿಯೂ ಒಂದು ಮನೆ ಮಾಡಿದರು. ಹೆಣ್ಣು-ಗಂಡು ಮಕ್ಕಳಿಗೆ ಯಾವ ತಾರತಮ್ಯವಿಲ್ಲದೆ ಶಿಕ್ಷಣ ಕೊಡಿಸಿದ, ಶಿಕ್ಷಣ

ಪ್ರೀತಿ ಅವರದು. ಹಲವು ಆಯುರ್ವೇದ ಪುಸ್ತಕಗಳನ್ನು ಓದಿ ಆಯುರ್ವೇದ ವೈದ್ಯರಾಗಿ ಹಳ್ಳಿಯ ಜನರಿಗೆ ಬಂದ ಸಣ್ಣ ಪುಣ್ಣ ರೋಗಗಳಿಗೆ ಉಚಿತ ಔಷಧವನ್ನು ಕೊಡುತ್ತಿದ್ದರು. ಗುಡ್ಡಗಾಡು ಪ್ರದೇಶಗಳಲ್ಲಿ ಗಿಡಮೂಲಿಕೆ ತಂದು ತಾವೇ ಸ್ವತಃ ಆಯುರ್ವೇದ ಗುಳಿಗೆ, ಭಸ್ಮ ತಯಾರಿಸುವ ಪಾಂಡಿತ್ಯವಿತ್ತು. ಅಧ್ಯಾತ್ಮ ಜ್ಯೋತಿಷ್ಯ ಶಾಸ್ತ್ರ ಬಲ್ಲವರಾಗಿದ್ದರು. ಆ ಕಾಲದ ಅಧ್ಯಾತ್ಮ, ವೇದಾಂತಪಂಡಿತರೊಂದಿಗೆ ರಾತ್ರಿಯಿಡೀ ಚರ್ಚೆ ಮಾಡುವಷ್ಟು ವಿದ್ವಾಂಸರಾಗಿದ್ದರು.


ಪರಿಶ್ರಮ, ಪ್ರಯತ್ನಶೀಲ, ಸಮಾಜ ಮುಖಿ ಸ್ವಭಾವನೊಂದಿಗೆ ಪ್ರಗತಿಪರ ಚಿಂತಕರಾಗಿದ್ದರು. ಬಾಹ್ಯಾಡಂಬರ, ಆಚರಣೆ ವಿರೋಧಿ, ಹೊಲದಲ್ಲಿ ಮಣ್ಣು ಹೊರುವ, ಕಳೆ ತೆಗೆಯುವ, ಪ್ರತಿವರುಷ ಸೆಗಣಿಯಿಂದ ಮನೆ ಸಾರಿಸುವ ಕಾರ್ಯವನ್ನು ಮಕ್ಕಳಿಗೆ ಕಲಿಸಿಕೊಡುತ್ತಿದ್ದರು. ಇವರು ಮನೆಗೆ ಬಂದ ಅತಿಥಿಗಳಿಗೆ ಅನ್ನದಾನ ಮಾಡುತ್ತಿದ್ದರು. ಜಾತಿಯ ತಾರತಮ್ಯ ಭಾವನೆಯಿಂದ ದೂರವಿದ್ದರು. ಶಿಕ್ಷಕರಾಗಿ ಸರಕಾರದಿಂದ ಉತ್ತಮ ಶಿಕ್ಷಕ ಪುರಸ್ಕಾರ ಪಡೆದವರು. ಹಾಡುಗಳ ಮೂಲಕ ಮಕ್ಕಳಿಗೆ ಸಾಹಿತ್ಯದ ಪರಿಚಯ ಮಾಡಿಸುತ್ತಿದ್ದವರು. ಮನೆಯ ಆವರಣದಲ್ಲಿ ಕೈತೋಟ ಮಾಡಿ, ಸ್ನಾನ ಮಾಡಿದ ನೀರು ತೋಟಕ್ಕೆ ಹೋಗುವಂತೆ ಮಾಡಿ, ಅಲ್ಲಿ ತರಕಾರಿ ಬೆಳೆಯುತ್ತಿದ್ದ ನೂತನ ಪ್ರಯೋಗಶೀಲರು ಇವರಾಗಿದ್ದರು. ಮೂಕ ಪ್ರಾಣಿಗಳ ಮೇಲೆ ಇವರದು ಅಪಾರ ದಯೆ. ಕುದುರೆ, ಜಿಂಕೆ, ಆಡು, ಕುರಿ, ಕೋಳಿ, ಎಮ್ಮೆ, ಗಿಳಿಗಳನ್ನು ಮನೆಯಲ್ಲಿ ಸಾಕಿದ್ದರು. ಇವರು ಸಾಕಿದ "ವಿಠ್ಠು" ಎಂಬ ಹೆಸರಿನ ಗಿಳಿ ತಪ್ಪಿಸಿಕೊಂಡು ಹಾರಿ ಹೋದಾಗ ಅಡವಿಯ ಗಿಡ ಮರಗಳಲ್ಲಿ ವಿಠ್ಠು ವಿಠ್ಠು ಎಂದು ಕೂಗುತ್ತಾ ಅದರ ನೆನಪಿನ ವೇದನೆಯಲ್ಲಿ ಎರಡು ದಿನ ಊಟ ಮಾಡದೇ ಕುಳಿತು ಕೊಂಡಿದ್ದರು.

ಭೀಮಸೇನರಾವ್ ಕುಲಕರ್ಣಿಯವರು ಇದ್ದುದು ಇದ್ದಂತೆ ಹೇಳುವ ನಿಷ್ಠುರ ಸ್ವಭಾವದವರು. ಹೀಗಾಗಿ ಊರಿನ ನ್ಯಾಯ ಬಗೆಹರಿಸುವ ಕಟ್ಟೆಯಲ್ಲಿ ಇವರು ಇದ್ದಾಗಲೇ ಜನರಿಗೆ ಸಮಾಧಾನ. ಇವರು ವರ್ಗಾವಣೆಗೊಂಡ ಹಳ್ಳಿಗಳಲ್ಲಿ ಭಜನಾ ಮಂಡಳಿ, ಬಯಲಾಟ ಸಂಘಗಳನ್ನು ಸ್ಥಾಪಿಸುತ್ತಿದ್ದರು. ತಾವೇ ಹಾಡು ಬರೆದು ಅವರಿಗೆ ಹೇಳಿ ಕೊಡುತ್ತಿದ್ದರು. ಈ ಕಾರಣ ಅವಿದ್ಯಾವಂತ ಜನರಿಗೆ ಇವರ ಮೇಲೆ ಅತಿ ಪ್ರೇಮ. ಭಕ್ತಿಗೀತೆ, ಭಜನೆ ಪದ, ಬಯಲಾಟ, ತತ್ವಪದ ದೇಶಭಕ್ತಿಗೀತೆ, ಮಾನೋಮಿ ಪದಗಳನ್ನು ಬರೆಯುವದರಲ್ಲಿ ಎತ್ತಿದ ಕೈ ಇವರದ್ದು. ಇವರ ಪ್ರಾಮಾಣಿಕ ಗುಣಕ್ಕಾಗಿ ಕೇಂದ್ರ ಸರಕಾರವು ಆ ಕಾಲದಲ್ಲಿಯೇ ಇವರನ್ನು ಗ್ರಾಮದ ಅಂಚೆ ಮಾಸ್ತರರಾಗಿ ನೇಮಕ ಮಾಡಿ ಪ್ರತಿ ತಿಂಗಳು ೨೫ರೂ ವೇತನ ಕೊಡುತ್ತಿತ್ತು. ಕುಲಕರ್ಣಿಯವರ ನಿವೃತ್ತಿಯ ನಂತರ ೭ನೇ ತರಗತಿ ಓದಿದ್ದ,

ವಿಧವೆಯಾಗಿ ತವರಿನಲ್ಲಿಯೇ ಇದ್ದ, ತಮ್ಮ ಮಗಳನ್ನು ಪೋಸ್ಟ ಮಾಸ್ತರ ಆಗಿ ಕೆಲಸ ಮಾಡಲು ಪ್ರೇರಣೆ ನೀಡಿದರು. ಮೂರು ದಶಕಗಳ ಹಿಂದೆ ಇವರು ಇಡೀ ರಾಯಚೂರು ಜಿಲ್ಲೆಯಲ್ಲಿಯೇ ಮೊದಲ ಮಹಿಳಾ ಪೋಸ್ಟ ಮಾಸ್ತರರ ತಂದೆ ಎಂಬ ಗೌರವಕ್ಕೆ ಪಾತ್ರರಾದರು.

೧೯೭೪ರಲ್ಲಿ ನಿವೃತ್ತಿಯ ನಂತರ ಇವರಿಗೆ ಸಾಹಿತ್ಯ ರಚನೆಯತ್ತ ಒಲವು ಮೂಡಿತು. ೧೯೭೪ರಲ್ಲಿ ಶ್ರೀ ಸತ್ಯನಾರಾಯಣ ಭಜನಾ ಶತಾಷ್ಟಕ ಎಂಬ ೧೦೮ ನುಡಿಗಳ ಇವರ ಕಿರು ಪುಸ್ತಕ ಪ್ರಕಟವಾಯಿತು. ಇದಕ್ಕಾಗಿ 'ಶಿರಪುರ' ಪ್ರಕಾಶನ ಎಂಬ ಸ್ವಂತ ಪ್ರಕಾಶನ ಆರಂಭಿಸಿದರು. ೧೯೭೮ರಲ್ಲಿ "ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣಾ" ಎಂಬ ತತ್ವಪದ, ಭಕ್ತಿ ಗೀತೆಗಳ ಸಂಗ್ರಹ ಪುಸ್ತಕ ಪ್ರಕಟವಾಯಿತು. ಆ ಅವಧಿಯಲ್ಲಿ 'ಜ್ಞಾನಪೀಠ' ಪ್ರಶಸ್ತಿ ಗೌರವ ಪಡೆದು, ನಾಗರಿಕ ಸನ್ಮಾನಕ್ಕಾಗಿ ಕಲ್ಬುರ್ಗಿಗೆ ಆಗಮಿಸಿದ್ದ ಡಾ॥ ಶಿವರಾಮ ಕಾರಂತರು ಈ ತತ್ವಪದ ಸಂಕಲನವನ್ನು ಬಿಡುಗಡೆ ಮಾಡಿದರು. ಅನಂತರ 'ಚಹಾಪುರಾಣ' ಎಂಬ ಇವರ ವಿಡಂಬನ ಕಾವ್ಯ ಪ್ರಕಟವಾಯಿತು. ಭಾಮಿನಿ ಷಟ್ಪದಿಯ ಈ ಕೃತಿ ಅತ್ಯಂತ ಜನಪ್ರಿಯವಾಯಿತು.

ದೇವದುರ್ಗ ತಾಲೂಕಿನ ವಂದಲಿ ಹನುಮಪ್ಪನ ಮೇಲೆ ಬರೆದ ಭಕ್ತಿಗೀತೆ ಹಾಗೂ ಒಂದು ಶತಾಷ್ಟಕವು "ವಂದಲಿ ಪುರವರ ಹನುಮಂತ" ಎಂಬ ಹೆಸರಿನಿಂದ ಕ್ಯಾಸೆಟ್ ಆಗಿ ಜನಪ್ರಿಯವಾಗಿದೆ. ದಾಸರ ಕೀರ್ತನೆ, ಶರಣರ ವಚನ, ಬಯಲಾಟದ ಹಾಡುಗಳನ್ನು ಇವರು ಹಾಡುತ್ತಿದ್ದರು. ಕುಮಾರವ್ಯಾಸ ಭಾರತದ ಮೇಲೆ ಅತ್ಯಂತ ಸ್ವಾರಸ್ಯಕರವಾಗಿ ವ್ಯಾಖ್ಯಾನ ಮಾಡುತ್ತಿದ್ದರು. ದೀಪಾವಳಿ, ಮಹಾನವಮಿ, ಊರಿನ ಜಾತ್ರೆಯ ಸಂದರ್ಭದಲ್ಲಿ ಗ್ರಾಮದ ನೂರಾರು ಜನರು ರಾತ್ರಿಯಿಡೀ ಇವರು ಹೇಳುವ ಭಾರತ ಕತೆಯನ್ನು ಕೇಳಿ ಆನಂದಿಸುತ್ತಿದ್ದರು. ೧೯೯೦ರಲ್ಲಿ ತಮ್ಮ ೭೦ನೆಯ ವಯಸ್ಸಿನಲ್ಲಿ ಅನಾರೋಗ್ಯದಿಂದ ಗುಲ್ಬರ್ಗಾದಲ್ಲಿನ ಮಗನ ಮನೆಯಲ್ಲಿದ್ದಾಗಲೂ ಅಧ್ಯಯನ ಬರಹಕ್ಕೆ ವಿರಾಮ ಕೊಟ್ಟಿರಲಿಲ್ಲ. ದಿ. ವೆಂಕಟರಾವ ನಾಯಕ ದಿ. ದತ್ತಾತ್ರೇಯ ಹೆರೂರ ಹಿರಿಯ ಸಾಹಿತಿಗಳೊಂದಿಗೆ ಒಡನಾಟ ಹೊಂದಿದ್ದರು. ೧೯೯೪ರ ಏಪ್ರಿಲ್ ತಿಂಗಳಲ್ಲಿ ಇವರು ಇಹಲೋಕ ತ್ಯಜಿಸಿದರು. ಇವರ ಭಾವಚಿತ್ರ ಹಾಗೂ ಇವರು ವಾಸವಾಗಿದ್ದ ಮನೆಯ ಚಿತ್ರಗಳನ್ನಿಲ್ಲಿ ನೀಡಲಾಗಿದೆ. ಇವರ ಬಗ್ಗೆ ಇವರ ಮಗ ಡಾ. ಸ್ವಾಮಿರಾವ್ ಕುಲಕರ್ಣಿ ಅವರು ಮಾಹಿತಿ ನೀಡಿರುವರು.



ತತ್ವಪದಕಾರ ಶ್ರೀ ಭಿಮಸೇನರಾವ್ ಕುಲಕರ್ಣಿ ಅವರು ತಮ್ಮ ಧರ್ಮಪತ್ನಿ ಅಮೃತಾಬಾಯಿ
ಅವರೊಂದಿಗಿದ್ದ ಚಿತ್ರ, ತಲೇಖಾನ್,
ತಾ – ಲಿಂಗಸುಗೂರು



ತತ್ವಪದಕಾರ ಶ್ರೀ ಭೀಮಸೇನರಾವ್ ಕುಲಕರ್ಣಿ, ತಲೇಖಾನ್ (ತಾ -- ಲಿಂಗಸುಗೂರು)
ಅವರು ವಾಸವಾಗಿದ್ದ ಮನೆಯ ಚಿತ್ರ. ಮನೆಯ ಮುಂದೆ ಅವರ ಮಗ ಶ್ರೀನಿವಾಸ ಮಗಳು
ರುಕ್ಮಿಣಿಬಾಯಿ ನಿಂತಿರುವ ಚಿತ್ರ.

ಶ್ರೀ ಭೀಮಸೇನರಾವ್ ಕುಲಕರ್ಣಿಯವರು ಶಿಕ್ಷಕ ವೃತ್ತಿಯೊಂದಿಗೆ ತಮ್ಮ ಜೀವಿತದ ಬಹುಭಾಗವನ್ನು ಹಳ್ಳಿ ಗಾಡಿನ ಪ್ರದೇಶದಲ್ಲಿ ಕಳೆದುದರಿಂದ ತತ್ವಪದ ಭಜನೆ ಹಾಡುಗಳನ್ನು ಬರೆಯುತ್ತ ಬಂದುದು ವಿಶೇಷವಾಗಿದೆ. ಇವರು ಬರೆದ ತತ್ವಪದಗಳಲ್ಲಿ ೨೫ ಪದಗಳನ್ನು ಆಯ್ದು "ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣ" ಎಂಬ ಕೃತಿ ರೂಪದಲ್ಲಿ ಪ್ರಕಟಿಸಿದರು. ಈ ಸಂಗ್ರಹದಲ್ಲಿರುವ ತತ್ವಪದಗಳು ಅನುಭಾವದ ರಸ ಸಂಜೀವಿನಿಯನ್ನು ನೀಡುತ್ತವೆ. ಭಾವಕ್ಕೆ ತಕ್ಕಂತೆ ರಾಗಗಳೂ ಅವರ ಹಾಡುಗಳಲ್ಲಿ ಉಯ್ಯಾಲೆಯಾಗಿವೆ. ಇವರ ಹಾಡುಗಳು ಕೇವಲ ತಾಳ ಕಟೆದು ಏನೋ ಜಾಗರಣೆ ಮಾಡಿ ತೃಪ್ತಿ ಪಡೆಯಬೇಕಾದಂಥವಲ್ಲ. ಇವುಗಳ ತುಂಬಾ ಪುರಾಣ ಪುಣ್ಯ ಕಥೆಗಳ ಸರಳ ವಿವರವಿದೆ. ಬಹುಶಃ ಇದಕ್ಕೆ ಕಾರಣ ಅವರು ಆದರ್ಶ ಶಿಕ್ಷಕರಾಗಿ ಸೇವೆ ಸಲ್ಲಿಸಿರುವುದೇ ಆಗಿದೆ. ಅವರ ಅನುಭವ ಪಕ್ವವಾದುದನ್ನು ಅವರಲ್ಲಿ ಭಕ್ತಿ ರಸ ಉಕ್ಕಿ ಹರಿದುದನ್ನು ಅವರ ಈ ತತ್ವಪದಗಳಲ್ಲಿ ಕಾಣುವೆವು. ಈಗಲೂ ಈ ಪ್ರದೇಶದ ಜನ ಭಜನೆಯ ಸಮಯದಲ್ಲಿ ಇವರ ತತ್ವಪದಗಳನ್ನು ರಾಗ ಬದ್ಧವಾಗಿ ಹಾಡುವುದುಂಟು. ಇವರು ಬರೆದ ತತ್ವ ಪದಗಳಲ್ಲಿ ನಾಲ್ಕನ್ನು ಇವರ "ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣ" ಕೃತಿಯಿಂದ ಆಯ್ದು ಇಲ್ಲಿ ಉದಾಹರಣೆಗಾಗಿ ಕೊಡಬಹುದು.

೧. ಹನುಮಂತ ನಿನ್ನಬೇಡ ಬಂದಿಹೆನೊ :

ಬೇಡ ಬಂದಿಹೆನೋ । ಹನುಮಂತ ನಿನ್ನ । ಬೇಡ ಬಂದಿಹೆನೋ ॥ ಪ ॥
ಬೇಡ ಬಂದಿಹೆನಯ್ಯ ನಿನ್ನ । ತಡವು ಮಾಡದೆ ಕೊಡುವದಿನ್ನಾ । ಒಡೆಯ
ಶ್ರೀ ರಘುರಾಮ ನಡಿಗಳ । ಬಿಡದೆ ಭಜಿಸುವ ದಿವ್ಯ ಶಕ್ತಿಯ ॥ ಅ. ಪ ॥

ಹರಿಯ ಸ್ಮರಣೆಯಲೀ । ಭವವೆಂಬ ಸಾಗರ । ಭರದಿ ಜಿಗಿಯುತಲೀ ॥
ದುರುಳ ಲಂಕಿಣಿ ಎಂಬ ಮಾಯೆಯ । ತರಿದು ಹಾಕಿಸುಗುಣ ಸೀತೆಯ ।
ತ್ವರದಿ ಅರಿತು ರಾಮ ಧ್ಯಾನವ । ನಿರುತ ಮಾಡುವ ದಿವ್ಯಶಕ್ತಿಯ ಬೇಡ ॥ ೧ ॥

ಅರಿತು ಮನದಲ್ಲಿ । ವ್ಯಸನಂಗಳೆಂಬ । ಮರವ ಕೀಳುತಲೀ ॥
ಭರದಿ ಅಷ್ಟಮದಗಳೆಂಬೋ । ದುರುಳ ದೈತ್ಯರ ಶಿರವಕುಟ್ಟಿ । ಮೆರೆವ ಷಡ್ರಿಪು
ಪುರವ ಸುಟ್ಟು । ಧುರದಿ ಬಾಳುವ ದಿವ್ಯ ಶಕ್ತಿಯ ॥ ಬೇಡ ॥ ೨ ॥

ಸುಗುಣ ಸೀತೆಯಲೀ । ಜ್ಞಾನಾಖ್ಯ ರತ್ನವ । ಬೇಗ ಪಡೆಯತಲೀ ॥
ಯೋಗ ಬಲಿಸುತ ಗಗನ ಮಾರ್ಗದಿ । ಸಾಗಿ ಬಂದೂ ನಾಗಶಯನಗೆ । ಬಾಗಿ
ಮಣಿದು ಆಪ್ತ ಸೇವಕ । ನಾಗುವಂತ ದಿವ್ಯಶಕ್ತಿಯ ॥ ಬೇಡ ॥ ೩ ॥

ಚಂಡ ಶೌರ್ಯದಲೀ । ಸುಜ್ಞಾನ ಕಪಿಗಳ । ದಂಡು ಕಲೆಸುತಲೀ ॥
ಭಂಡ ದುರ್ಮತಿ ರಾವಣಾದ್ಯರ । ತಂಡವೆಲ್ಲವ ದಿಂಡು ಗೆಡಹೀ । ಗಂಡುಗಲಿ
ಕೋದಂಡ ರಾಮಗೆ । ಮಂಡೆ ಬಾಗಿ ಮಣಿವ ಶಕ್ತಿಯ ॥ ಬೇಡ ॥ ೪ ॥

ಹಿರಿಯ ಧ್ಯಾನದಲೀ । ಸ್ಥಿರಚಿತ್ತ ಪಡೆದು । ನಿರುತ ಹೃದಯದಲೀ ॥
ಹಿರಿಯ ಮೂರ್ತಿಯ ನಿಲಿಸುತಲಿ ಮೈ । ಮರೆಯುವಂಥ ನಿತ್ಯ ಭಕ್ತಿಯ । ಶಿರ
ಪುರದ ಸದ್ಭಕ್ತ ಭೀಮಗೆ । ಪರಮುದಯದಿ ಕುರಣಿಸೆಂದೂ ॥ ಬೇಡ ॥ ೫ ॥

೨. ಚೇಳು ಕಡಿಯಿತಮ್ಮ

ಚೇಳು ಕಡಿಯಿತಮ್ಮ ನೋಡಿರೇ । ಸಂಸಾರವೆಂಬೊ ।
ಚೇಳು ಕಡಿಯಿತಮ್ಮ ನೋಡಿರೇ ॥ ಪಲ್ಲ ॥
ಚೇಳು ಕಡಿಯಿತಮ್ಮ ನೋಡಿರಿ । ತಾಳಲಾರೆನು ಇದರ ಬಾಧೆಯ ।
ಹೇಳಲಿಕೆ ಅಸಾಧ್ಯವಾಗಿದೆ । ಕೇಳುವವರು ದಾರಿಲ್ಲವಮ್ಮಾ ॥ ಅ.ಪ ॥

ಮದಗಳೆಂಟು ಕಾಲ್ಗಳಾಗಿವೆ । ವ್ಯಸನಂಗಳೇಳು । ಅದರ
ಕೊಂಡಿಯ ಗಂಟಿ ನಂತಿವೆ । ಷಡ್ರಿಪುಗಳದರ । ವಿಧ ವಿಧದ
ಬಣ್ಣಂಗಳಾಗಿವೆ । ಬಲ್ ಮಾಯೆ ಎಂಬ । ತುದಿಯ ಸೊಂಡಿಯನ್ನು ಚಾಚಿ ।
ಕದಲದಂತೆ ಬಿಗಿದು ಹಿಡಿದು । ಹದನವಾದ ಕೊಂಡಿಯಿಂದ ।
ಎದೆಯನುಬ್ಬಿಸಿ ಸೆಟೆದು ನಿಂತೂ ॥ ಚೇಳು ॥ ೧ ॥

ಏನು ಹೇಳಲಿ ಬಾಧೆ ಬಹಳಾಯ್ತು । ಇಳಿಸುವರು ಇಲ್ಲದೆ ।
ದೀನನಾಗಿ ಬಳಲುವಂತಾಯ್ತು । ಕತ್ತಲೆಯಲ್ಲಿ । ನಾನು ನಟೆದಾಡಿದ್ದೆ
ತಪ್ಪಾಯ್ತು । ನಿತ್ರಾಣ ಬಹಳಾಯ್ತು । ಜ್ಞಾನವೆಂಬೋ । ದೀಪಬಿಟ್ಟು ।
ಶ್ವಾನನಂತೆ ತಿರುಗು ತಿರಲು । ಹೀನ ಮತಿ ಇವನೆಂದು ತಿಳಿದು ।
ತಾನೆದಾರಿಗೆ ಅಡ್ಡ ಬಂದೂ । ಚೇಳು ॥ ೨ ॥

ಹಿರಿಯರೆಲ್ಲರ ಕಡಿಯಿತೀ ಚೇಳು । ಮುಂಬರುವ ಎಲ್ಲಾ ।
ಕಿರಿಯರನ್ನೂ ಬಿಡದು ಈ ಚೇಳು । ನಾನೆಂಬ ಧೀರರ । ತ್ವರದಿ
ಹಿಡಿದೂ ಕಡಿವದೀ ಚೇಳೂ । ಅರಿತು ನೀ ಬಾಳು । ಶಿರಪುರದ
ಸದ್ಭಕ್ತ ಭೀಮಗೆ । ವರದ ನೆನಸಿ ಮೆರೆವ ದೇವನ । ನಿರುತ ನೆನೆವರ
ನೆರಳಿಗಂಜಿ । ಭರದಿ ಓಡಿ ಹೋಗುವಂಥ । ಚೇಳು ॥ ೩ ॥

೩. ಸತ್ಯವ್ವಾ ತಂಗಿ ಸತ್ಯವ್ವ :

ಸತ್ಯವ್ವಾ ತಂಗಿ ಸತ್ಯವ್ವಾ । ನೀ । ಸತ್ಯ ಬಿಟ್ಟರೆ ಗಡ ಸತ್ತೆವ್ವಾ ॥
ಸತ್ಯದ ಮರ್ಮವ ಅರ್ಥಿಲಿ ತಿಳಿಯುತ । ನಿತ್ಯ ನಡೆಯುವದೆ ಸತ್ಯವ್ವಾ ॥ ಅ.ಪ ॥

ಸತ್ಯ ಶರಣರಿಗೆ ಬಾಗವ್ವ । ನೀ । ನಿತ್ಯ ಮಾಡು ಅವರ ಸಂಗವ್ವಾ ।
ನಿತ್ಯ ನಿತ್ಯ ಸತ್ಯ ಶರಣರ ಸೇವಿಪ । ಶಕ್ತಿಯ ಪಡೆವುದೆ ಸತ್ಯವ್ವಾ ॥ ೧ ॥

ಆಸೆ ನೀಗುವದೆ ಚಂದವ್ವಾ । ದು । ರಾಶೆಯ ಬಿಡುವದು ಮೇಲವ್ವಾ ।
ಆಸೆಯ ಮನಸಿನ ಘಾಸೆಗೆ ಸಿಲುಕದೆ । ದೋಷ ನೀಗುವದೆ ಸತ್ಯವ್ವಾ ॥ ೨ ॥

ಬಂದಿದಿ ಭವದಲಿ ಮಳ್ಳವ್ವಾ । ನೀ ದ್ವಂದ್ವವ ಕಡಿದ್ಹಾಕಿ ಬಾಳವ್ವಾ ॥
ಒಂದೆ ಮನದಿ ಭವ ಬಂಧನ ಭೇದಿಸಿ । ಅಂದದಿ ಬಾಳ್ವುದೇ ಸತ್ಯವ್ವಾ ॥ ೩ ॥

ಧೃಡ ಮನದಲಿ ಗುರುಲಿಂಗವ್ವಾ । ಪಡೆ । ಸುಡುವದು ಗಡಭವಶೇಷವ್ವಾ ॥
ಮೃಡ ಪಂಚಾಕ್ಷರಿ ಮಂತ್ರವ ಜಪಿಸಲು । ಒಡನೆ ತೋರುವದತಿ ಸತ್ಯವ್ವಾ ॥ ೪ ॥

ಹರಗುರು ಧ್ಯಾನವೆ ಶಾಂತವ್ವಾ । ಘನ । ಗುರುಕೃಪೆ ಪಡೆನೀಮುಕ್ತವ್ವಾ ।
ಶಿರಪುರ ಭೀಮನ ಹೃದಯದಿ ನೆಲಿಸಿದ । ಪರಮ ಪರಂಜ್ಯೋತಿ ಸತ್ಯವ್ವಾ ॥ ೫ ॥

೪. ಗಂಡ ಬಡದಿನ್ಹ್ಯಾಗೆ ಮಾಡಲಿ

ಗಂಡ ಬಡದಿನ್ಹ್ಯಾಗೆ ಮಾಡಲಿ । ಹೇ ತಾಯಿಗಳಿರಾ ।
ಗಂಡ ಬಡದಿನ್ಹ್ಯಾಗೆ ಮಾಡಲೀ ॥ ಪಲ್ಲ ॥

ಗಂಡ ಬಡದಿನ್ಹ್ಯಾಗೆ ಮಾಡಲೀ । ಪುಂಡ ಪೋಕರಿಯಂತೆ ನಾನು ।
ಕಂಡ ಕಡಿಗೆ ತಿರುಗುತಿರಲು । ಭಂಡು ಮಾಡಿ ಬಿಟ್ಟನವ್ವಾ ॥ ಅ.ಪ ॥
ಹೊತ್ತು ಮೀರಿ ಮನೆಗೆ ನಾಬಂದೆ । ಕತ್ತಲೆಯಲ್ಲಿ ।
ಅತ್ತು ಕರೆದು ಬಳಲಿ ನಾ ಕುಳಿತೆ । ಸುತ್ತ ನೋಡುತ ಒಳಗೆ ಪೋಗಿ ।
ಚಿತ್ತ ಶಾಂತಿಯ ಕಳೆದು ಕೊಳುತಲಿ । ಮತ್ತೆ ಹಾಸಿಗಿ ಹಾಸಿಕೊಂಡು ।
ಮೆತ್ತಗೆ ನಾ ಮುದರಿ ಕೊಂಡೆ ॥ ಗಂಡ ॥ ೧ ॥

ಮೂರು ಜನರು ಕರೆಯಬಂದರು । ಆವಲ್ಹಿಂದೆ ನೋಡಲು ।
ಆರುಮಂದಿ ನಗುತ ನಿಂತಿಹರೂ । ಆರು ಮೂರನು ಕೂಡಿಕೊಂಡು ।
ಸರಸವಾಡುತ ತಿರುಗುತಿರಲು । ದಾರಿಯಲ್ಲಿ । ಎಂಟು ಮಂದಿ ಸೆರಗು ಹಿಡಿದುಜಗ್ಗಿದರು ॥ ೨ ॥

ಏನು ಅರಿಯದೆ ನಾನು ಬಂದಿರಲು । ಬಂದಂಥ ಪುಂಡರು । ನಾನು
ತಾನು ಎನುತ ನಿಂತಿರಲು । ಹೀನ ವೃತ್ತಿಗೆ ಹೇಸಿ ಮನದೊಳು । ಮಾನ
ರಕ್ಷಣೆಗಾಗಿ ಯೋಚಿಸಿ । ದೀನಳಾಗಿ ನಡೆದುಕೊಂಡು । ನಾನೇ ಅವರನು
ಕೂಡಿ ಹೊರಟೆ । ಗಂಡ ॥ ೩ ॥

ಪುಂಡರೆಲ್ಲರ ಮನೆಗೆ ಕರೆತಂದೆ । ಪತಿ ಇರುವನೆಂದೂ ।
ಹಂಡೆಯೊಳಗೆ ಹೊಗಿಸಿ ಮುಚ್ಚಿದೆ । ಗಂಡ ಕಂಡರು ಕಾಣದಂತೆ ।
ತಂಡ ತಂಡದ ಮಾತನಾಡುತ । ಹಂಡೆ ತಳಕೆ ಉರಿಯ ಹಚ್ಚಿ ।
ಪುಂಡರೆಲ್ಲರ ಸುಟ್ಟು ಬಿಟ್ಟಾ । ಗಂಡ ॥ ೪ ॥


ದಾರಿ ತಪ್ಪಿದ ಹೆಣ್ಣು ನಾನಾದೆ । ಪತಿ ಸಂಗಕಂಜಿ ।
ಸಾರಿ ಶಿರಪುರವನ್ನು ಸೇರಿದೆ । ನಾರಿ ಕೇಳ್ ಪತಿ ಇಲ್ಲದವರಿಗೆ ।
ಯಾರಿಗೂ ಗತಿ ದೊರೆಯದೆನ್ನುವ । ಧೀರ ಭೀಮನ ನುಡಿಯ ನಂಬಿ ।
ಸೇರಿ ಪತಿಯನು ಒಪ್ಪಿಕೊಂಡೆ । ಗಂಡ ॥ ೫ ॥

೨೦. ಮಂಜರ್ಲಾದ ಖಾದರಸಾಬ (೧೯೩೦–೧೯೭೫)


ಖಾದರಸಾಬನು ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಪುದ್ದಟೂರು ತಾಲೂಕಿನ ಅಂಬಾವರ ಎಂಬ ಗ್ರಾಮದಲ್ಲಿ ಕ್ರಿ.ಶ. ೧೯೩೦ರಲ್ಲಿ ಜನಿಸಿದ. ಈತನ ತಂದೆಯ ಹೆಸರು ಪೀರಸಾಹೇಬ ಹಾಗೂ ತಾಯಿಯ ಹೆಸರು ಖಾದರಬೀ. ಈ ದಂಪತಿಗಳ ಐದು ಮಕ್ಕಳಲ್ಲಿ ಖಾದರಸಾಬನು ಕೊನೆಯವನು. ಈತನಿಗೆ ಪ್ರೀತಿಯಿಂದ ಈತನ ತಾಯಿ–ತಂದೆ ಖಾದರ್‌ವಲಿ ಎಂದೂ, ಖಾದರದಾಸ್ ಎಂದೂ ಕರೆಯುತ್ತಿದ್ದರು. ಈತನು ಜನಿಸಿದ್ದು ಆಂಧ್ರಪ್ರದೇಶದ ಅಂಬಾವರ ಆದರೂ ಈತ ಕರ್ನಾಟಕದ ರಾಯಚೂರು ತಾಲೂಕಿನ ಮಂಜರ್ಲಾ ಗ್ರಾಮಕ್ಕೆ ಬಂದು ಇಲ್ಲಿಯೇ ನೆಲೆನಿಂತನು. ಈತನ ಬಾಲ್ಯದ ದಿನಗಳು ಸುಖಕರವಾಗಿರಲಿಲ್ಲ. ಬಡತನದ ಬವಣೆಯನ್ನು ಎದುರಿಸುವುದರೊಂದಿಗೆ ಈತ ಚಿಕ್ಕಂದಿನಲ್ಲಿಯೇ ತಾಯಿ ತಂದೆಗಳನ್ನು ಕಳೆದುಕೊಂಡ. ಅಣ್ಣನೊಂದಿಗೆ ಊರೂರು ಸುತ್ತಾಡಿದ. ಕೆಲಕಾಲ ಅಕ್ಕನ ಊರಿನಲ್ಲಿದ್ದು ವ್ಯಾಪಾರಿ ವೃತ್ತಿ ಕೈಕೊಂಡ. ಕಮ್ಮಾರಿಕೆ ವೃತ್ತಿಯನ್ನು ಕೆಲ ಕಾಲ ಮಾಡಿದ. ಮುಂದೆ ಈತ ಯೌವನಕ್ಕೆ ಕಾಲಿರಿಸಲು ಮಲಕಾಪುರದ ಮಹಬೂಬಿ ಎಂಬುವವರನ್ನು ಮದುವೆಯಾದ. ಈ ದಂಪತಿಗಳಿಗೆ ನಾಲ್ಕು ಜನ ಮಕ್ಕಳಾದರು. ಇವರಲ್ಲಿ ಹಿರಿಯ ಮಗ ದಾದಾಪೀರ್ ಎಂಬುವವರು ಸಂಗೀತ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಲಿರುವರು. ತಮ್ಮ ತಂದೆ ಬರೆದ ತತ್ವಪದಗಳನ್ನು ತುಂಬ ಸೊಗಸಾಗಿ ಹಾಡುವರು.

ಖಾದರಸಾಬ ಅವರದು ತುಂಬ ಬಹುಮುಖವಾದ ವ್ಯಕ್ತಿತ್ವ ಹುಟ್ಟಿನಿಂದ ಅವರು ಮುಸ್ಲೀಂರಾದರೂ ಹಿಂದೂ ಮುಸ್ಲಿಂ ಭಾವೈಕ್ಯತೆಯ ಬೇರಿಗೆ ನೀರೆರೆದ ಮಹಾತ್ಮರವರು. ರಾಯಚೂರ ಸುತ್ತಲಿರುವ ಅನೇಕ ಹಳ್ಳಿಗಳಿಗೆ ಹೋದ ಖಾದರಸಾಬ ಅವರು ಕೆಲಕಾಲ ಕೊರ್ವಿಹಾಳ, ಬಿಜಸಗೇರಾ ಗ್ರಾಮದಲ್ಲಿ ನೆಲೆಸಿದರು. ಬಿಜಸಗೇರಾ ಗ್ರಾಮದಲ್ಲಿದ್ದ ಸಿದ್ಧರಾಮಾನಂದ ಸ್ವಾಮಿಗಳ ಬಳಿ ಇವರು ಶಿಷ್ಯತ್ವ ಸ್ವೀಕರಿಸಿ, ಅವರಿಂದ ಕನ್ನಡವನ್ನು ಕಲಿತರು. ಸಿದ್ಧರಾಮಾನಂದರು ದೊಡ್ಡ ಅನುಭಾವಿ ಆಗಿದ್ದರು. ಅವರ ಪ್ರಭಾವಕ್ಕೊಳಗಾಗಿ ಖಾದರಸಾಬ ಅವರು

ಅನುಭಾವದ ಗಣಿಯಾದರು. ಅನೇಕ ತತ್ವಪದಗಳನ್ನು 'ಸಿದ್ಧರಾಮ' ಅಂಕಿತದಲ್ಲಿ ಕನ್ನಡದಲ್ಲಿ ಕಟ್ಟಿ ಹಾಡತೊಡಗಿದರು. ಹುಟ್ಟು ಪ್ರತಿಭಾನ್ವಿತರಾದ ಅವರು ತೆಲುಗು ಭಾಷೆಯಲ್ಲಿಯೂ ಅನೇಕ ಹಾಡುಗಳನ್ನು ರಚಿಸಿದರು. ಅಧ್ಯಾತ್ಮ ಭಾವ ಅವರಲ್ಲಿ ದಿನೆ ದಿನೆ ಬೆಳೆಯತೊಡಗಿತು. ಅವರು ಸನ್ಯಾಸ ಸ್ವೀಕರಸಬೇಕೆನ್ನುವಷ್ಟರಲ್ಲಿ ಅವರ ಗುರು ಅವರನ್ನು ಎಚ್ಚರಿಸಿ ಸಂಸಾರಸ್ಥನಾಗಲು ಪ್ರೋತ್ಸಾಹಿಸಿದರು. ಗುರುಗಳ ಒತ್ತಾಯಕ್ಕೆ ಮಣಿದು ಖಾದರಸಾಬ್ ಅವರು ಸಾಂಸಾರಿಕ ಜೀವನವನ್ನು ಸಾಗಿಸಿದರು. ಸಂಸಾರವನ್ನು ಹಿಡಿದೇ ಪಾರಮಾರ್ಥವನ್ನು ಸಾಧಿಸಬೇಕೆಂಬುದನ್ನು ಗುರುಗಳಿಂದ ಅರಿತುಕೊಂಡು ಮುನ್ನಡೆದರು. ಇವರು ಬರೆದ ತತ್ವಪದಗಳು ಕೃತಿ ರೂಪದಲ್ಲಿ ಪ್ರಕಟಗೊಂಡಿಲ್ಲ. ಇವರು ತಮ್ಮ ಅಧ್ಯಾತ್ಮದ ಅನುಭವಗಳನ್ನು ರಾಯಚೂರ ಸುತ್ತಮುತ್ತಲಿರುವ ವಡವಾಟಿ, ಮಾಸದೊಡ್ಡಿ, ಮುರುಕಿದೊಡ್ಡಿ, ಜುಲುಮಗೇರಾ ಬಿಜನಿಗೇರಾ ಡೊಂಗಾರಾಂಪುರ, ಕೊರ್ವಿಹಾಳ, ಗಂಜಳ್ಳಿ ಮಲೆಯಾಬಾದ ಮುಂತಾದ ಊರುಗಳಿಗೆ ಹೋಗಿ ಅಲ್ಲಿನ ಸಾಮಾನ್ಯ ಜನರಿಗೆ ತಿಳಿಸಿದರು. ಜನಸಾಮಾನ್ಯರಲ್ಲಿ ಅಧ್ಯಾತ್ಮದ ರುಚಿಯನ್ನು ಹುಟ್ಟಿಸುವಲ್ಲಿ ಖಾದರಸಾಬ ಅವರು ಯಶಸ್ವಿಯಾದರು. ಅವರು ತಮ್ಮ ಜೀವಿತದ ಕೊನೆಗೆ ಮಂಜರ್ಲಾ ಗ್ರಾಮಕ್ಕೆ ಬಂದು ಇಲ್ಲಿಯೇ ವಾಸಿಸತೊಡಗಿದರು. ಇವರು ಕ್ರಿ.ಶ. ೧೯೭೫ರಲ್ಲಿ ವೈಶಾಖ ಶುದ್ಧ ಪೂರ್ಣಿಮಿಯಂದು ಜೀವಂತ ಸಮಾಧಿ ಹೊಂದಿದರೆಂದು ತಿಳಿದು ಬರುವುದು. ಇವರ ಸಮಾಧಿ ಮಂಜರ್ಲಾ ಗ್ರಾಮದ ಹೊರವಲಯದಲ್ಲಿದೆ. ಇವರ ಭಾವಚಿತ್ರ, ಇವರ ಗುರುಗಳ ಚಿತ್ರ, ಇವರು ವಾಸವಾಗಿದ್ದ ಮನೆ, ಇವರ ಸಮಾಧಿ ಚಿತ್ರ, ಇವರ ಹಿರಿಯ ಮಗ ದಾದಾಪೀರ್ ಇವರ ಚಿತ್ರಗಳನ್ನು ತೆಗೆದು, ಇಲ್ಲಿ ಸ್ಮಾರಕಗಳ ರೂಪದಲ್ಲಿ ಕೊಟ್ಟಿದ್ದೇವೆ.




ಮಂಜರ್ಲಾ ಗ್ರಾಮದ ತತ್ವಪದಕಾರರಾದ
ಖಾದರಸಾಬ
(ಖಾದರ ಪ್ರಭು) ಅವರ ಭಾವ ಚಿತ್ರ,
ಮಂಜರ್ಲಾ, ತಾ – ರಾಯಚೂರು.




ಮಂಜರ್ಲಾ ಗ್ರಾಮದ ತತ್ವಪದಕಾರ
ಖಾದರಸಾಬ ಅವರ ಗುರು
ಶ್ರೀ ಶ್ರೀ ನಿಜಗುರು ಸಿದ್ಧರಾಮಾನಂದ
ಸ್ವಾಮಿಗಳವರ ಭಾವಚಿತ್ರ,
ಮಂಜರ್ಲಾ, ತಾ – ರಾಯಚೂರು.




ಮಂಜರ್ಲಾ ಗ್ರಾಮದ ತತ್ವಪದಕಾರ ಖಾದರಸಾಬ್ ಅವರು ವಾಸಿಸಿದ್ದ ಮನೆಯ ಚಿತ್ರ,
ಮಂಜರ್ಲಾ, ತಾ – ರಾಯಚೂರು.



ಮಂಜರ್ಲಾ ಗ್ರಾಮದ ತತ್ವಪದಕಾರರಾದ ಖಾದರಸಾಬ್ ಅವರ ಸಮಾಧಿಯ ಚಿತ್ರ . ಈ ಸಮಾಧಿ ಮಂಜರ್ಲಾ ಗ್ರಾಮದ ಹೊರವಲಯದಲ್ಲಿದೆ. ಮಂಜರ್ಲಾ, ತಾ – ರಾಯಚೂರು.



ರಾಯಚೂರು ತಾಲೂಕಿನ ಮಂಜರ್ಲಾ ಗ್ರಾಮದ ತತ್ವಪದಕಾರ ಮಂಜರ್ಲಾ ಖಾದರ ಸಾಬ್ ಅವರ ಧರ್ಮಪತ್ನಿ ಮಹೆಬೂಬಿ ಅವರ ಭಾವಚಿತ್ರ.



ರಾಯಚೂರು ತಾಲೂಕಿನ ಮಂಜರ್ಲಾ ಗ್ರಾಮದ ತತ್ವಪದಕಾರರಾದ ಮಂಜರ್ಲಾ ಖಾದರ ಸಾಬ್ ಅವರ ಮೊದಲ ಮಗ ದಾದಾಪೀರ್ ಹಾಗೂ ಅವರ ಪತ್ನಿ ಮಕ್ಕಳ ಭಾವಚಿತ್ರ.

ಇಲ್ಲಿ ಇವರು ಬರೆದ ನಾಲ್ಕು ತತ್ವಪದಗಳನ್ನು ಡಾ. ಬಸವರಾಜ ಸಬರದ ಅವರ ಕೃತಿಗಳಿಂದ ಆಯ್ದುಕೊಟ್ಟಿದೆ.

೧. ಸಾಕಪ್ಪ ಸಾಕೋ ಸಂಸಾರ

ಸಾಕಪ್ಪ ಸಾಕೋ ಸಂಸಾರ । ಯಾಕಪ್ಪ ಇದರ ಗೊಡವಿ ಬಹುಭಾರ ।
ಬೇಕಾದ್ದು ಮಾಡುಸ್ತಾದ ವ್ಯಾಪಾರ ಇದು
ಸಾಕಷ್ಟು ಪೀಡುಸ್ತಾದ ದೀ ಸಾರ ॥ ಪ ॥

ಶಾಂತಿಯ ಸ್ಥಾನವು ಗೊತ್ತಿಲ್ಲ । ವಿಶ್ರಾಂತಿ
ತಗೊಳ್ರಿ ಅಂತರ ಸುಳ್ಳಾ । ಭ್ರಾಂತಿಯೆಂಬ ಬಲೆಯೊಳು
ಬಿದ್ದು ಬಹಳ ಮಂದಿ ಸತ್ತಾರಪ್ಪ ॥ ೧ ॥

ಜಡದೇಹವನು ನನ್ನದೆಂದು । ಮಡದಿ ಮಕ್ಕಳ
ನಂಬಿಕೊಂಡು । ಕಡು ಬಂಧನದಲಿ ಬಳಲುತ ಈ
ಭವ ಕಡಲೊಳು ಹೊಡ ಕೊಂಡ್ಹೋಗುತಾರಪ್ಪ ॥ ೨ ॥

ಆಚಾರದಿಂದ ಬಿಡೋದು ಗ್ರಹಚಾರ । ಹುಚ್ಚರಾಗಿ
ಮಾಡಬೇಕ್ರಿ ವಿಚಾರ । ಸಚ್ಚಿ ದಾನಂದನ ಪಾದಗಳಲ್ಲಿ
ಹುಚ್ಚನಾಗಿ ಪ್ರಾಣ ಬಿಡಬೇಕಪ್ಪ ॥ ೩ ॥

ಜೀವನು ಅವನೊಬ್ಬ ಕಳ್ಳ । ಶಿವನ ಪಥವನು
ಅರಿಯಲೇ ಇಲ್ಲ । ಭಾವದಿಂದ ಗುರುಸೇವೆ ಮಾಡದೆ
ಜವನ ಜಾಲದೊಳು ಬಿದ್ದಾನಲ್ಲ ॥ ೪ ॥

ಪೊಡವಿಯೊಳು ಪೂರ್ತಿಪಲಿ ಪುರ
ದೃಢವಾಗಿ ಕಾಯುವ ಜಗದಧಿಕಾರ ಮೃಡಶ್ರೀ
ಸಿದ್ಧರಾಮನಂದರ ಅಡಿಗಳಿಗ್ಹೋಗಿ ಬಿದ್ದಾರ ॥ ೫ ॥

೨. ಡಂಕಾ ಬಜಾರೆ ಡರ್ಶ್ಯಾನಕೋರೆ

ಡಂಕಾ ಬಜಾರೆ ಡರ್ಶ್ಯಾನಕೋರೆ ।
ಸತ್ಯಮು ಮಿತ್ಯಮು ತೂಕಮು ಚೇಸಿ ।
ಮಿತ್ಯಮು ತ್ರೋಚಿ ಸತ್ಯಮು ಚೂಸಿ ॥ ಪ ॥

ಆಯಾಹೈ ತೂನೆ ಬಜಾರಕೋ ಜಾನಾನಹಿ ಮಾಯಕೆ ಜಾಲಕೋ ।
ಖ್ಹೋಯಾ ನೀಂದ್ ಮೇ ಸಬ್‌ದಿನಕೋ । ಸಮಜ್ಞಾನ ಹೀ ।
ತನ್‌ಕೊ ಔರ್ ಜಾನಕೋ ಖುದಿಕೋ ಅಪ್ನೆ ದೂಗ ಕರಕೆ ।
ಸದಾಖುದಾಕೆ ಯಾದಮೆ ರಹೆಕರ್ ॥ ೧ ॥

ನಿನ್ನ ಬಾಳು ಭಿಕ್ಷುಕನ ಕನಸಿನಂತೆ ।
ನಿನ್ನ ನೀ ತಿಳಿದು ನೋಡೋ ಇದು ಮಾಯಾ ಸಂತೆ ।
ನಾನು ನಾನೆಂದು ರಕ್ಷಿಸುವವನ ಮರೆತು ಕುಂತೆ ।
ಕಣ್ಣಿಗೆ ತೋರುವ ಜಗವೆಲ್ಲ ಮೃಗ ಜಲದಂತೆ ॥ ೨ ॥

ಘನ ಗುರುವಿನ ಸುಶ್ರೂಷೆಯ ಮಾಡಿ ।
ಧೀರನಾಗಿ ನಿಜ ತತ್ವದಿ ನಿಂತು ॥ ೩ ॥

ಆರು ಮೂಡಲೊ ಚುಕ್ಕಿ ಅಲ್ಲಾಡು ಚುನ್ನಾವು ।
ದಾರಿದಪ್ಪಿ ಒಗಟಿ ಆರಿಟಿಲೋ ಮುಣಗಿನವು ।
ಪೊರಪಾಟುತೋ ನಾಲ್ಗು ನಾಲ್ಗುಲೊ ದೊರಕಿನವು ।
ಸರಿಗಾದು ನೀಕಿದಿ ಮೇಲು ಕೊರ ನೀವು ॥ ೪ ॥

ಗುರು ಪುತ್ರುಂಡೈ ಪರಮಹಂಸವೈ ಅನುಭವ ।
ಮೆರಗಿ ಆನಂದಂಬುಲೊ ॥ ೫ ॥

ಕಾಹಾಸೇ ಆಯಾ ತೂ ಕಿದರ ಜಾ ರಹಾ ಹೈ ।
ಕಿಸ್‌ಲಿಯೇ ಆಯಾ ಕ್ಯಾಕರ್ ರಹಾ ಹೈ ।
ಅಸಲ ಕೂ ಭೂಲಕರ್ ಖ್ವಾಕ್ ಮೇ ಮಿಲ್‌ತಾ ಹೈ ।
ಫಿರ್ ಕಭೀ ಆನಾ ನಹೀ ಹೋಷ್ ಮೇ ಆಜಾರೆ ತೂ ॥ ೬ ॥

ಪೀರ್‌ಕಾ ಪ್ಯಾಲಾ ಪೀಕರ ಪಹೆಲೆ ।
ಅಪನೇ ಮೇ ತೂ ಮಸ್ತ ಹೋಕೆ ॥ ೭ ॥

ಮರುಳೇ ನಿನಗೆ ಶತ ವರುಷ ಪ್ರಮಾಣ ।
ಮರುವಿನೊಳು ತಿಳಿಯಲಿಲ್ಲ ನಿಜ ಜ್ಞಾನ ।
ಪರಿ ಪರಿ ಕಷ್ಟಗಳಿಂದ ಆಯುಷ್ಯ ಕ್ಷೀಣ ।
ಪಾರಮಾರ್ಥ ಪ್ರಪಂಚವನು ತಿಳಿದವನೇ ಜಾಣ ॥ ೮ ॥

ತಿಳಿಯದವನು ಬರೀ ಕ್ವಾಣ ।
ಪೂರತಿಪ್ಪಿಪುರ ನಿವಾಸನ ಸೇರಿ ।
ಆಸೆದುಳಿದು ನಿರಾಸೆಯ ನಿಶೆಯಲಿ ॥ ೯ ॥

೩. ನಾನೇನೆಂದೆನೋ ನಿಮಗೆ

ನಾನೇನೆಂದೆನೋ ನಿಮಗೆ । ನಾನೇನೆಂದೆನೋ
ನಾನೇನೆಂದೆನೋ ನಿಮಗೆ । ಕನಕದ ಗೊಂಬೆಯೆಂದೆ ।
ಚಿನ್ನದ ಮೂರ್ತಿಯೆಂದೆ ಪನ್ನಗಶಯನನೆಂದೆ ॥ ಪ ॥

ಆಶೆ ಕಳೆದವನೆಂದೆ ಕಾಶಿ ವಿಶ್ವನಾಥನೆಂದೆ
ದೇಶದೊಳು ಹೊಳೆಯುವ ಏಳು ಬೆಟ್ಟದ ಮೇಲೆ ।
ವೈಕುಂಠವಾಸನೆಂದೆ ವೆಂಕಟರಮಣನೆಂದೆ ॥ ೧ ॥

ಅಂಡದಲ್ಲಿರುವೆ ನೀನು ಪಿಂಡದಲ್ಲಿರುವೆ ನೀನು
ಬೆಳಗುವ ಮಾರ್ತಾಂಡ ಬ್ರಹ್ಮಾಂಡ ನೀನೆ ।
ಪಂಡರಿಪುರವಾಸ ಪುಂಡಲೀಕನ ಪ್ರಿಯನೆಂದೆ ॥ ೨ ॥

ಬಿಳಿಯ ಆಕಾರನೆಂದೆ ಬಾಲ ರಕ್ಷಕನೆಂದೆ
ಶ್ರೀಶೈಲದಲ್ಲಿರುವ ಮಲ್ಲಿಕಾರ್ಜುನನೆಂದೆ ।
ಎಲ್ಲಾ ಲೋಕವ ಕಾಯ್ವ ಅಲ್ಲಮಪ್ರಭುವೆಂದೆ ॥ ೩ ॥

ನರರಲ್ಲಿ ನರಸಿಂಹ ಹರದೂರು ಕರ್ತ ನೀನು
ಪಾರಮಾರ್ಥ ಗುರುದೇವಾ ಪ್ರಪಂಚ ರಹಿತನೆ ।
ಆಪಾದ್ಬಾಂದವ ನೀ ಹರಿನಾರಾಯಣನೆಂದೆ ॥ ೪ ॥

ಶುದ್ಧ ವಸ್ತುವೂ ಎಂದೆ ಬೋಧಗುರು ನಿಮಗಂದೆ
ಮೇಧಿನಿಯೊಳಗಿರುವ ಪೂರತಿಪ್ಲಿಪುರದಲ್ಲಿ ।
ಥಳಥಳ ಹೊಳೆಯುವ ಸಿದ್ಧರಾಮೇಶನೆಂದೆ ॥ ೫ ॥

೪. ಬಳ್ಳಾರಿ ನೋಡಬೇಕಮ್ಮಾ

ಬಳ್ಳಾರಿ ನೋಡಬೇಕಮ್ಮಾ ಬಹಳ ಮಾಡಿ
ಬಳ್ಳಾರಿ ನೋಡಬೇಕಮ್ಮಾ ॥ ಪ ॥

ನೀಲಕಂಠನ ಸಿನಿಮಾ ಬಂತಮ್ಮ
ಆಮೇಲೆ ಆ ಸಿನಿಮಾ ಎಲ್ಲಿ ಹೋಯ್ತಮ್ಮ ॥ ೧ ॥

ಖೌಲು ಬಜಾರು ದೊಡ್ಡದಿರುವುದು
ಕಳ್ಳರ ಜಬರು ಬೇರೆಯಾದ ।

ಸೆಂಟ್ರಲ್ ಜೈಲು ಅಲ್ಲೆ ಅದಾ
ಜೈಲು ದಾಟಿದರೆ ಬಯಲಾದಮ್ಮ ॥ ೨ ॥

ದುರ್ಗಮ್ಮನ ಗುಡಿ ಬಂದಾದಮ್ಮ
ದೂರದಿಂದ ನೋಡೋಣಂದರೆ ಕಾಣುವದಿಲ್ಲಮ್ಮ ।
ಧೀರರಿಗೆ ವೀರರಿಗೆ ಸರ್ವನು ತಿಳಿದ ಸರ್ವಜ್ಞರಿಗೆ । ಶ್ರೀ
ಗುರು ಚರಣಾಮೃತವನು ಸವಿಯುವ
ಸರದಾರರಿಗೆ ದೇವಿ ಮೆಚ್ಚುವಳಮ್ಮ ॥ ೩ ॥

ತಾರಾಮಂಡಲ ವಿಧದಿ ಲೈಟಮ್ಮ ಸುರಲೋಕದಂತಹ
ತರಹ ತರಹದ ಬೆಳಕು ನೋಡಮ್ಮ
ಪಾರಮಾರ್ಥದ ಪಂಡಿತರು ತಾರಕಯೋಗ ಬಲ್ಲಂತವರು
ಧೀರಚಿತ್ತರು ವೈರಾಗ್ಯರು
ತೂರ್ಯದವರು ತುಂಬ್ಯಾರಮ್ಮ ॥ ೪ ॥

ಧಮ್ಮು ಏರಾತನಕಾ ತಿರುಗಿದೆ
ಒಮ್ಮೆಲೆ ದಿಮ್ಮು ತಿರುಗಿ ಬಿದ್ದು
ಅಮ್ಮನ ನೆನೆಸಿದೆ ಗಮ್ಮತ್ತೆಲ್ಲ ಮಾಯವಾಯಿತು
ಅಮ್ಮನ ದರ್ಶನ ಆಗ ಆಯಿತು
ಸುಮ್ಮನಾಗಿ ನೋಡಿದರೆ ಸಿದ್ಧರಾಮನ ಚರಣ ಕಂಡವಮ್ಮ ॥ ೫ ॥

೨೧. ಜಹಿರಾಬಾದದ ತಿಪ್ಪಣ್ಣ ತಾತಾ (೧೯೪೦)

'ತಿಪ್ಪಣ್ಣ ತಾತಾ' ಎಂದೇ ಪ್ರಸಿದ್ಧಿ ಹೊಂದಿದ್ದ ತಿಪ್ಪಣ್ಣನವರು ರಾಯಚೂರು ತಾಲೂಕಿನ ಮಲಿಯಾಬಾದ ಎಂಬ ಗ್ರಾಮದಲ್ಲಿ ಕ್ರಿ.ಶ. ೧೯೪೦ರಲ್ಲಿ ಜನಿಸಿದರು. ಇವರು ನಗರದ ಜಹಿರಾಬಾದದಲ್ಲಿರುವ ಅನುಭವ ಮಂಟಪದ ಅಧ್ಯಕ್ಷರಾಗಿದ್ದಾರೆ. ಇವರ ತಂದೆ ಫಕೀರಪ್ಪ ಮತ್ತು ತಾಯಿ ಲಕ್ಕಮ್ಮ. ತಿಪ್ಪಣ್ಣನವರ ಮೊದಲನೆ ಹೆಂಡತಿ ಒಂದು ಗಂಡು ಮಗುವಿಗೆ ಜನ್ಮ ನೀಡಿ ತೀರಿಕೊಂಡಳು. ಅನಂತರ ತಿಪ್ಪಣ್ಣ ಮತ್ತೆ ಎರಡನೇ ಮದುವೆ ಶರಣಮ್ಮಳೊಂದಿಗೆ ಮಾಡಿಕೊಂಡರು. ಈ ದಂಪತಿಗಳಿಗೆ ಐದು ಮಕ್ಕಳಿದ್ದಾರೆ. ನಾಲ್ಕು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳಿದ್ದಾಳೆ.

ಯಲಬುರ್ಗಾ ತಾಲೂಕಿನ ರಾಜೂರು ಗ್ರಾಮದಲ್ಲಿ ಸರಕಾರಿ ಕೆಲಸದಲ್ಲಿದ್ದಾಗ ತಿಪ್ಪಣ್ಣ ಗುರು ರಾಜೂರು ಹನುಮೇಶ್ವರರಿಂದ ದೀಕ್ಷೆ ಪಡೆದು ತಿಪ್ಪಣ್ಣ ತಾತಾರಾದರು. ಅಂದಿನಿಂದ ತಿಪ್ಪಣ್ಣನವರ ಬದುಕಿನಲ್ಲಿ ಹೊಸ ರೀತಿಯ ಬೆಳವಣಿಗೆ ಪ್ರಾರಂಭವಾಯಿತು. ಮಾದಿಗರ ಮನೆತನದಲ್ಲಿ ಹುಟ್ಟಿದ ತಿಪ್ಪಣ್ಣ ದೀಕ್ಷೆ ಪಡೆದ ನಂತರ ಮುಂದೆ ಅನೇಕರಿಗೆ ಅಧ್ಯಾತ್ಮದ ದೀಕ್ಷೆ ಕೊಟ್ಟರು. ಗುರುವಾಗಿ ಅನೇಕ ತತ್ವಪದಗಳನ್ನು ರಚಿಸಿದರು. ಯೋಗ ಹಾಗೂ ಅಧ್ಯಾತ್ಮದಲ್ಲಿ ಸಾಧನೆ ಮಾಡಿರುವ ತಿಪ್ಪಣ್ಣ ತಾತಾ ಇಂದು ಜಹಿರಾಬಾದ ಪ್ರದೇಶದಲ್ಲಿ ಒಬ್ಬ ಶರಣನಾಗಿ ಮೆರೆಯುತ್ತಿದ್ದಾರೆ. ಒಂದು ಕಡೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಗುರುವಾದರೆ, ಇನ್ನೊಂದೆಡೆ ಭಕ್ತ ಜನರಿಗೆ ಆತ್ಮೋನ್ನತಿಯ ಮಾರ್ಗವನ್ನು ತೋರಿಸುವ ಗುರುವಾಗಿದ್ದಾರೆ. ಯೋಗ ಹಠಯೋಗಗಳಿಗಿಂತ ಶಿವಯೋಗವೇ ಉನ್ನತವೆನ್ನುವ ತಿಪ್ಪಣ್ಣ ತಾತಾನಲ್ಲಿ ಅನೇಕ ಭಕ್ತರು ಬರುತ್ತಾರೆ. ಜಹಿರಾಬಾದ, ಮಡ್ಡಿಪೇಟೆ, ಇಕ್‌ಬಾಲ ನಗರ, ಹಾಗೂ ಯಲಬರ್ಗಾ ತಾಲೂಕಿನ ಬನ್ನಿಕೊಪ್ಪ ಮುಂತಾದ ಸ್ಥಳಗಳಲ್ಲಿ ತಾತನವರ ಶಿಷ್ಯಂದಿರಿದ್ದಾರೆ.

ರಾಯಚೂರು ನಗರದ ಜಹಿರಾಬಾದನಲ್ಲಿ ಒಂದು ಶೂನ್ಯ ಸಿಂಹಾಸನದ ಪ್ರಕಾಶನ ಪ್ರಭುಲೀಲೆಯ ಅನುಭವ ಮಂಟಪವಿದೆ. ಈ ಮಂಟಪಕ್ಕೆ ಸಂಬಂಧಿಸಿದ


ಧಾರ್ಮಿಕ ಕಾರ್ಯಗಳೆಲ್ಲವೂ ತಿಪ್ಪಣ್ಣನವರ ನೇತೃತ್ವದಲ್ಲಿ ನಡೆಯುತ್ತವೆ. ಈ ಮಂಟಪದ ವೇದಿಕೆಯ ಮೇಲೆ ಗುರು ಹನಮೇಶನ ಭಾವಚಿತ್ರವಿದೆ. ವೇದಿಕೆಯ ಕೆಳಗಡೆ ನೆಲ ಮನೆಯಿದೆ. ಆ ನೆಲ ಮನೆಯಲ್ಲಿ ತಿಪ್ಪಣ್ಣ ತಾತಾ ಅನೇಕ ಭಕ್ತರಿಗೆ ದೀಕ್ಷೆ ನೀಡುತ್ತಾರೆ. ಯಾವುದೇ ಜಾತಿ ಭೇದವಿಲ್ಲದೆ ಬರುವ ಭಕ್ತರಿಗೆ ಮಾರ್ಗದರ್ಶನ ನೀಡುತ್ತಾ ಅವರ ಜೊತೆಯಲ್ಲಿ ಅನುಭವದ ಬುತ್ತಿಯನ್ನು ಹಂಚಿಕೊಳ್ಳುತ್ತಾರೆ. ಜೀವ-ಆತ್ಮ, ಶಿವಭಕ್ತಿ-ಗುರುಭಕ್ತಿ ಇವುಗಳ ಮಹತ್ವವನ್ನು ಕುರಿತು ಭಕ್ತರಲ್ಲಿ ಚರ್ಚಿಸುತ್ತಾ, ಲೌಕಿಕ ಬದುಕಿನೊಂದಿಗೆ ಆತ್ಮೋನ್ನತಿಯನ್ನು ಸಾಧಿಸುವ ವಿಚಾರವನ್ನು ಹಾಗೂ ದೇಹದಂಡನೆ, ಮನೋನಿಗ್ರಹದಿಂದ ಮಾಡುವ ಯೋಗಸಾಧನೆಗಿಂತಲೂ ಅಂತರಂಗ, ಬಹಿರಂಗ ಶುದ್ಧಿಯಿಂದ ಶಿವಯೋಗ ಸಾಧನೆ ಮುಖ್ಯವೆಂದು ಸಾರಿದ್ದಾರೆ. ತಿಪ್ಪಣ್ಣ ತಾತಾ, ಅವರ ಗುರು ಅವರು ವಾಸಿಸಿದ ಮನೆ ಹಾಗೂ ಪ್ರಕಾಶ ಪ್ರಭುಲೀಲೆಯ ಅನುಭವ ಮಂಟಪದ ಚಿತ್ರಗಳನ್ನು ಇಲ್ಲಿ ಸ್ಮಾರಕದ ರೂಪದಲ್ಲಿ ನೀಡಲಾಗಿದೆ.




ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿರುವ ತತ್ವಪದಕಾರ ಶ್ರೀ ತಿಪ್ಪಣ್ಣ ತಾತಾ ಅವರು ಶ್ರೀ ಸದ್ಗುರು ಹನುಮೇಶ್ವರ ಅನುಭವ ಮಂಟಪದ ಬಳಿ ನಿಂತ ಚಿತ್ರ, ರಾಯಚೂರು.



ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿರುವ ತತ್ವಪದಕಾರ ಶ್ರೀ ತಿಪ್ಪಣ್ಣ ತಾತಾ ಅವರ ಗುರುಗಳಾದ ಶ್ರೀ ಸದ್ಗುರು ಹನುಮೇಶ್ವರ ತಾತನವರ ಚಿತ್ರ, ರಾಯಚೂರು.



ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿರುವ ತತ್ವಪದಕಾರ ತಿಪ್ಪಣ್ಣ ತಾತಾ ಅವರ ಮನೆಯ ಪಕ್ಕದಲ್ಲಿರುವ ಶ್ರೀ ಸದ್ಗುರು ಹನುಮೇಶ್ವರ ರಾಜೂರು ಶೂನ್ಯ ಸಿಂಹಾಸನ ಪ್ರಕಾಶ ಪ್ರಭುಲೀಲೆಯ ಅನುಭವ ಮಂಟಪದ ಹೊರನೋಟದ ಚಿತ್ರ, ರಾಯಚೂರು.



ರಾಯಚೂರಿನ ಜಹೀರಾಬಾದ ಪ್ರದೇಶದಲ್ಲಿರುವ ತತ್ವಪದಕಾರ ತಿಪ್ಪಣ್ಣ ತಾತನವರು ತಮ್ಮ ಮನೆಯೆದುರು ತಮ್ಮ ಮಗ ವಿಜಯಕುಮಾರರೊಂದಿಗೆ ನಿಂತುಕೊಂಡ ಚಿತ್ರ, ರಾಯಚೂರು.

೧೨ನೇ ಶತಮಾನದಲ್ಲಿ ಶೂನ್ಯ ಸಿಂಹಾಸನದ ಅನುಭವ ಮಂಟಪದ ಅಧ್ಯಕ್ಷರಾದ ಹಾಗೂ ವಚನಕಾರನಾದ ಅಲ್ಲಮ ಪ್ರಭುವಿನ ಆನುಭಾವಿಕ ಹಾಗೂ ಅಧ್ಯಾತ್ಮ ನೆಲೆಯಲ್ಲಿ ಚಿಂತಿಸುವ ತಿಪ್ಪಣ್ಣ ತಾತಾರವರು ಕೂಡ ಅನೇಕ ತತ್ವಪದಗಳನ್ನು ರಚಿಸಿದ್ದಾರೆ. 'ಶ್ರೀ ಗುರು ಹನುಮೇಶ' ಎಂಬ ಅಂಕಿತವನ್ನು ಇಟ್ಟು ಕೊಂಡು ದೇವರ ಅಸ್ತಿತ್ವವನ್ನು ಕುರಿತು ಮತ್ತು ದೇವರ ಅಸ್ತಿತ್ವವನ್ನು ಗುರುವಿನಲ್ಲಿ ಕಾಣುವ ಚಿತ್ರಣವನ್ನು ಇವರ ಹಾಡುಗಳಲ್ಲಿ ಕಾಣಬಹುದು. ಇವರ ತತ್ವಪದಗಳನ್ನು ಡಾ. ವಿಜಯಶ್ರೀ ಸಬರದ ಅವರು "ಗುರುಶಿಷ್ಯರ ತತ್ವಪದಗಳು" ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದು, ಅವರ ಈ ಕೃತಿಯಿಂದ ಇಲ್ಲಿ ತಿಪ್ಪಣ್ಣ ತಾತಾ ಅವರ ನಾಲ್ಕು ತತ್ವಪದಗಳನ್ನು ಆಯ್ದುಕೊಟ್ಟಿದೆ.

೧. ಎಷ್ಟು ಹುಡುಕಿದರೂ ತಂಗಿ

ಎಷ್ಟು ಹುಡುಕಿದರೂ ತಂಗಿ
ನಾದವು ಸಿಗದಮ್ಮ ತಂಗಿ ॥ ಪ ॥

ಎತ್ತೆತ್ತ ಹೋದರೂ ಏನೂ ಸಿಗದಮ್ಮ
ಕಾಕನ ಪುರದೊಳು ಕಾನನದೊಳಗೈತಮ್ಮ ॥ ಅ. ಪ ॥

ಜಪ ತಪ ಬೇಡಮ್ಮ ತಂಗಿ
ಮೋದವು ಸಿಗದಮ್ಮ ತಂಗಿ ।
ಬಸವೆಂಬ ಪುರದೊಳು ನಾಸಿಕಾಗ್ರದಲ್ಲೆಮ್ಮ
ನಡೆ ನುಡಿ ಮರ್ಮವ ತಿಳಿಯಮ್ಮ ॥ ೧ ॥

ಬಾಯಿ ಕಿವಿಗಳು ತಂಗಿ
ಕಣ್ಣು ಮೂಗವು ತಂಗಿ ।
ಕೈಯಿಂದ ಕಟ್ಟಿದರೆ ಖಂಡಿತ ಕಾಣದಮ್ಮ
ಕಟ್ಟದೆ ಕಡೆಗಾಗಿ ಮಹಿಮೆಯ ಕಾಣಮ್ಮ ॥ ೨ ॥

ಈಡ ಪಿಂಗಳ ತಂಗಿ
ಏರಿಸಬೇಡಮ್ಮ ತಂಗಿ ।
ಶ್ವಾಸವು ತ್ರಿಪುಟಿ ಮಾಡಿದರಿಲ್ಲಮ್ಮ
ಅಂಗವು ಆಕಾಶಕ್ಕೆ ಏರಿದರಿಲ್ಲಮ್ಮ ॥ ೩ ॥

ಕತ್ತಲ ಮನಿಯಮ್ಮ ತಂಗಿ
ಜ್ಯೋತಿ ಹಚ್ಚಿ ನೋಡಮ್ಮ ತಂಗಿ ।
ಮೂರು ಲೋಕದ ಮಾರ್ಗ ತಿಳಿಯಮ್ಮ
ಮನಸಿಟ್ಟು ಮಂಟಪ ಏರಿನೋಡಮ್ಮ ॥ ೪ ॥

ಮಂಜಿನ ಬೆಟ್ಟಮ್ಮ ತಂಗಿ
ಹತ್ತಲು ಬಾರದು ತಂಗಿ ।
ಹತ್ತುವ ಅನುವ ತಿಳಿದು ಪಾಶ ಭಯವ ಹರಿದು
ಊರಿಗೆ ಹೋಗಿ ಸೇರಿಕೊಳ್ಳಮ್ಮ ತಂಗಿ ॥ ೫ ॥

ದೇಶಕ್ಕಧಿಕವಮ್ಮ ತಂಗಿ
ಮಲಿಯಾಬಾದು ಗ್ರಾಮ ತಂಗಿ ।
ಬ್ರಹ್ಮನಿಷ್ಠ ತಿಪ್ಪಣ್ಣ ಹತ್ತಿ ನೋಡ್ಯಾನಮ್ಮ
ಶ್ರೀಗುರು ಹನುಮೇಶ ಭವ ಹರಿಸಿದನಮ್ಮ ॥ ೬ ॥

೨. ಮನಸಿನ ಭೇದವನು ಅಳಿಯಮ್ಮ

ಮನಸಿನ ಭೇದವನು ಅಳಿಯಮ್ಮ ।
ಮಂಕು ಗುಣವ ಬಿಟ್ಟು ನಡಿಯಮ್ಮ ॥ ಪ ॥

ಭೇದವನಳಿದರೆ ಭವರೋಗ ಹೋದೀತು ।
ಭೇದದ ಮರ್ಮವ ತಿಳಿಯಮ್ಮ ॥ ಅ. ಪ ॥

ಹತ್ತು ಮಂದಿ ಬಳಗ ಒಂದಾಗ್ಯಾರಮ್ಮ
ಅಂದ ಚೆಂದದ ಮನೆ ಕಟ್ಟ್ಯಾರಮ್ಮ ।
ಆರೆಂಟು ಜನ ಬಂದು ಹಾರ್‍ಯಾಡುತಾರಮ್ಮ
ಆರಿಗೆ ಅರಿಯದೆ ಕಾಡುತಾರಮ್ಮ ॥ ೧ ॥

ಮಾಯದ ಗುಡಿಗೆರಡು ಕಿಟಿಕೆಮ್ಮ
ಕಿಲಿ ಕಿಲಿ ಗಿಳಿಯಧ್ವನಿ ಕೇಳಮ್ಮ ।
ಮನಸಿಟ್ಟು ಮರ್ಮವ ತಿಳಿಯಮ್ಮ
ಮಂದಮತಿಯ ಗುಣ ಕಳೆಯಮ್ಮ ॥ ೨ ॥

ಆಗಮ ನಿಗಮದ ಸ್ಥಾನ ತಿಳಿಯಮ್ಮ
ಹಾರ್‍ಯಾಡ್ವರಲ್ಲಿ ಅಗಜ ವಲ್ಲಭರಮ್ಮ ।
ಹಗಲಿರುಳು ಮನಕೊಟ್ಟು ಪೂಜೆ ಮಾಡಮ್ಮ
ಮೋಹ ಮಾಯವನೀಗಿ ನಡೆಯಮ್ಮ ॥ ೩ ॥

ಸಾಗಿ ಬಂದು ಗುಡಿ ನೋಡಮ್ಮ
ಸತ್ ಚಿತ್ ಒಂದು ಮಾಡಿ ನಡಿಯಮ್ಮ ।
ಸಾಲಿಟ್ಟು ಸುರಿವ ಅಮೃತ ಸವಿಯಮ್ಮ
ಸಕಲ ಶಕ್ತಿಯ ನೀನು ಪಡೆಯಮ್ಮ ॥ ೪ ॥

ಹತ್ತು ಹರದಾರಿ ಆಚೆಗಮ್ಮ
ಮಕರಂದ ಮಲ್ಲಿಗೆ ಹೂ ಚೆಲ್ಲ್ಯಾರಮ್ಮ ।
ಜ್ಞಾನದ ಬಲದಿಂದ ನೀ ಹೋಗಮ್ಮ
ಮನಸಿಟ್ಟು ಮಕರಂದ ಸವಿಯಮ್ಮ ॥ ೫ ॥

ಧರೆಯೊಳು ಮೆರೆವ ರಾಜೂರು ಗ್ರಾಮ
ಶ್ರೀಗುರು ಹನುಮೇಶರ ನೆನಿರಮ್ಮ ।
ಅಜ್ಞಾನದ ಪೊರೆಯನ್ನು ಹರಿವರಮ್ಮ
ಘನವಾದ ಸುಖ ಫಲ ನೀಡುವರಮ್ಮ ॥ ೬ ॥

೩. ಅಂಬಿಗ

ಅಂಬಿಗ । ಅಂಬಿಗ । ಅಂಬಿಗ
ಎಲ್ಲಾ ದೇಹದೊಳಗೆ ಐದಾನಂಬಿಗ ॥ ಪ ॥

ಏಳು ಕೋಟೆಯೊಳಗಿರುವ ನಂಬಿಗ
ಸಪ್ತ ನದಿಯೊಳಗೈದಾನಂಬಿಗ ।
ನೀರಿಲ್ಲದ ಹೊಳೆಯಾಗ ಅಂಬಿಗ
ಒಂದು ಹರಿಗೋಲ ಹಾಕ್ಯಾನಂಬಿಗ ॥ ೧ ॥

ಬಿರುಗಾಳಿ ಬೀಸಿತು ಅಂಬಿಗ
ಅಲ್ಲಿ ಹುಟ್ಟು ಹಾಕುವನೊಬ್ಬ ಸತ್ತನಂಬಿಗ ।
ಹರಿಗೋಲು ಮುಳುಗಿತು ಅಂಬಿಗ
ಮೂರು ಝುಂಡಾ ಹಾರಿ ಹೋಗ್ಯಾವಂಬಿಗ ॥ ೨ ॥

ನೂರಾಯೆಂಟು ಜನರು ಅಂಬಿಗ
ಪತ್ತೆಯಿಲ್ದ ಸತ್ತು ಹೋಗ್ಯಾರಂಬಿಗ
ಸತ್ತಮ್ಯಾಲ ಪ್ರಾಣ ಎಲ್ಲ್ಯಾದಂಬಿಗ
ಪ್ರಾಣಹೋಗಿ ಜೀವ ಉಳದಾದಂಬಿಗ ॥ ೩ ॥

ಮೇಲಗಿರಿಯ ಬೆಟ್ಟದ ಮೇಲಂಬಿಗ
ಅಲ್ಲಿ ಹತ್ತು ವರ್ಣದ ಝುಂಡಾ ಅಂಬಿಗ ।
ಹನ್ನೊಂದಳಿದು ಆನಂದಾಗ್ಯಾನಂಬಿಗ
ಹನ್ನೆರಡಳಿದು ಹೋಗಿ ಒಂದಾಗ್ಯಾನಂಬಿಗ ॥ ೪ ॥

ಆತ್ಮದ ಅಂತ್ಯಕ್ಕಿಳಿದಾನಂಬಿಗ
ಅಲ್ಲಿ ಸತ್ತು ಹುಟ್ಟಿದಂಗ ಆಗ್ಯಾನಂಬಿಗ ।
ಬಲ್ಲ ಜ್ಞಾನಿಗಳಿಗೆ ಗೊತ್ತು ಅಂಬಿಗ
ಯೋಗಾ ಬಲ್ಲವರ್ಧೇಳ್ಯಾರಂಬಿಗ ॥ ೫ ॥

ವಾಸುಳ್ಳ ಮಲಿಯಬಾದು ಅಂಬಿಗ
ಶರಣ ತಿಪ್ಪಣ್ಣ ಹೇಳ್ಯಾನಂಬಿಗ
ವಸುದಿ ರಾಜೂರು ವಾಸನಂಬಿಗ
ಶ್ರೀಗುರು ಹನುಮೇಶ ಬಲ್ಲನಂಬಿಗ ॥ ೬ ॥

೪. ಕೇಳೋ ಕೇಳೀರಣ್ಣಾ

ಕೇಳೊ ಕೇಳೋ ಕೇಳೀರಣ್ಣಾ
ಬಂಡಿಗೆ ನಾಲ್ಕು ಗಾಲಿಗಳಣ್ಣ ॥ ಪ ॥

ನಾಲ್ಕು ಗಾಲಿನ ಬಂಡಿಯಿದು
ತ್ರಿಲೋಕ ಹೊತ್ತು ನಿಂತಾದಣ್ಣ ॥ ಅ.ಪ. ॥

ಬಂಡಿಯೊಳಗೆ ಆನೆ ಬಂದೈತಣ್ಣ
ಬಲ್ಲ ಜ್ಞಾನಿಗೆ ಅದು ಒಲಿದಾದಣ್ಣ ।
ಆತ್ಮದ ವಿಚಾರ ನೀವು ಬಲ್ಲವರಣ್ಣ
ತಿಳಿದು ಕಾರ್ಯವ ಕೈಕೊಳ್ಳಿರಣ್ಣ ॥ ೧ ॥

ಆನೆಯ ಮರಿಯೊಂದು ನೋಡಣ್ಣ
ಕಾಡಿನೊಳಗೆ ಅದು ಕಳದಾದಣ್ಣ ।
ಮರಿಯನು ಹುಡುಕಲು ಹೋದವರಣ್ಣ
ಹುಡುಕ್ಹುಡಿಕಿ ದಣಿದು ಮಡಿದಾರಣ್ಣ ॥ ೨ ॥

ಕಾಡಿಗೆ ಮೂರು ಹಾದಿಗಳಣ್ಣ
ಹಾದಿಯೊಳಗೈದು ಬಾವಿಗಳಣ್ಣ ।
ಬಂಡಿಗೆ ಎರಡು ಎತ್ತುಗಳಣ್ಣ
ಜತ್ತಿಗೆ ಬಿಗಿದು ಕಟ್ಟ್ಯಾರಣ್ಣ ॥ ೩ ॥

ಬಂಡಿಯಲಿ ಕುಳಿತು ಹೋದೇವಣ್ಣ
ಖಾನಾಪುರವೆಂಬ ಊರಿಗಣ್ಣ ।
ಊರೆಲ್ಲಾ ತಿರುಗಾಡಿ ನೋಡಿದೆವಣ್ಣ
ಕಳೆದಂಥ ಮರಿಯು ಸಿಗಲಿಲ್ಲಣ್ಣ ॥ ೪ ॥

ಖಾನಾಪುರದಿಂದ ಎಂಟು ಗಾವುದಣ್ಣ
ಅಲ್ಲಿ ಹರಿವವು ಎರಡು ನದಿಗಳಣ್ಣ ।
ನದಿಯಲ್ಲಿ ಮುಳುಗಿ ನೋಡಿದೆವಣ್ಣ
ಕಳದ್ಹೋದ ಮರಿಯು ಸಿಗಲಿಲ್ಲಣ್ಣ ॥ ೫ ॥

ನದಿಯ ಬದಿಯಲ್ಲಿ ಕದಳಿಯ ಬಸವಣ್ಣ
ಇರುವದ ಕಂಡು ಹೋದೆವಣ್ಣ ।

ವನದೊಳು ಸುಳಿದು ನೋಡಿದೆವಣ್ಣ
ಮರೆಯಾದ ಮರಿಯು ಕಾಣಲಿಲ್ಲಣ್ಣ ॥ ೬ ॥

ನದಿಯಿಂದ ಮುಂದೆ ಮೂರು ಗಾವುದಣ್ಣ
ಅಲ್ಲಿ ಇರುವದು ಖನಿಜದ ಬೆಟ್ಟವಣ್ಣ ।
ಬೆಟ್ಟವೆಲ್ಲ ಶೋಧನ ಮಾಡಿದೆವಣ್ಣ
ಕಂಡಂಥ ಮರಿಯು ಸಿಗದ್ಹೋಯಿತಣ್ಣಾ ॥ ೭ ॥

ಖನಿಜ ಬೆಟ್ಟದಿಂದ ಹತ್ತು ಗಾವುದಣ್ಣ
ನವಣೆಯ ಹೊಲವೊಂದು ಬೆಳದೈತಣ್ಣ ।
ಸಾಲು ಸಾಲಾಗಿ ನಿಂತು ನೋಡಿದೆವಣ್ಣ
ಎತ್ತ ನೋಡಿದ್ರೂ ಮರಿಯ ಸುಳಿವಿಲ್ಲಣ್ಣ ॥ ೮ ॥

ಹೊಲದಂಡೆ ಆಚೆಗೆ ಒಬ್ಬನಿದ್ದಾನಣ್ಣ
ಅಲ್ಲಿತ್ತು ಒಂದು ಗೊಂಡಾರಣ್ಯ ।
ಮರಿಹೋದ ದಾರಿಗೆ ಕಳುಹುವ ಜಾಣ ।
ಕಳೆದಂಥ ಮರಿಯ ಹಿಡಿದು ಕೊಟ್ಟಾನಣ್ಣ ॥ ೯ ॥

ಅಲ್ಲಿದ್ದ ಮರಿಯು ತಾಯಾಗಿತ್ತಣ್ಣ
ಇಲ್ಲಿದ್ದ ತಾಯಿಯು ಮರಿಯಾಯಿತಣ್ಣ ।
ಆತ್ಮದ ಅಂತ್ಯವ ಬಲ್ಲವರಣ್ಣ
ಮರಿ ತೋರಿದ ಮಹಾತ್ಮನಾರಣ್ಣ ॥ ೧೦ ॥

ವಾಸುಳ್ಳ ಮಲಿಯಾಬಾದು ತಿಪ್ಪಣ್ಣ
ಪ್ರಭುವಿನ ಪಾದಕ್ಕೆ ಎರಿಗ್ಯಾನಣ್ಣ ।
ಮರಿಯಡಗಿದ ಸ್ಥಾನ ಕಂಡಾನಣ್ಣ
ಗುರು ಹನುಮೇಶನ ಕರುಣದಿಂದಣ್ಣ ॥ ೧೧ ॥


೨೨. ಹೊಸೂರು ತಿಪ್ಪಣ್ಣ (೧೯೪೨)

ರಾಯಚೂರು ತಾಲೂಕಿನ ಹೊಸೂರು ಗ್ರಾಮದಲ್ಲಿ ಕ್ರಿ.ಶ. ೧೯೪೨ರಲ್ಲಿ ತಿಪ್ಪಣ್ಣ ಜನಿಸಿದನು. ದುರ್ಗಪ್ಪ ಮಲ್ಲಮ್ಮ ದಂಪತಿಗಳ ಮಗನಾಗಿ ಜನಿಸಿದ ತಿಪ್ಪಣ್ಣ ಜನಪದ ಅನುಭಾವಿ ಕವಿಯಾಗಿ ಮೆರೆದ. ಈತನ ಹೆಂಡತಿ ಶರಣಮ್ಮ ಬದುಕಿನಲ್ಲಿ ಅನೇಕ ಕಷ್ಟಗಳು ಬಂದರೂ ದೀಕ್ಷಾ ಗುರು ತಿಪ್ಪಣ್ಣ ತಾತನೊಂದಿಗೆ ಕೂಡಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿರುತ್ತಾನೆ. ಹೈಸ್ಕೂಲವರೆಗೆ ಓದಿದ ತಿಪ್ಪಣ್ಣ ಶಿಕ್ಷಕ ತರಬೇತಿ ಪಡೆದು ರಾಯಚೂರಿನ ಹಾಸ್ಮಿಯ ಸರಕಾರಿ ಶಾಲೆಯಲ್ಲಿ ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದಾರೆ. ಮತ್ತು ಅಧ್ಯಾತ್ಮದತ್ತ ಆಕರ್ಷಿತನಾದ ತಿಪ್ಪಣ್ಣನವರ ಜಹಿರಾಬಾದ ಅನುಭವ ಮಂಟಪದ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಅನೇಕ ತತ್ವ ಪದಗಳನ್ನು ರಚಿಸಿದ್ದಾರೆ.

ತಿಪ್ಪಣ್ಣವನರು 'ನವಪುರಜಾತ' ಎಂಬ ಅಂಕಿತದಲ್ಲಿ ತತ್ವಪದಗಳನ್ನು ರಚಿಸಿದ್ದಾರೆ. ತಿಪ್ಪಣ್ಣನಿಗೆ ಶ್ರೀ ಹನುಮೇಶಪ್ಪನೇ ಗುರುವಾದ್ದರಿಂದ ಪ್ರತಿಯೊಂದು ಹಾಡಿನ ಅಂತ್ಯದಲ್ಲಿ ಗುರುಹನುಮೇಶನನ್ನು ಸ್ಮರಿಸಿದ್ದಾನೆ. ಇದರಲ್ಲಿ ತಿಪ್ಪಣ್ಣನಿಗೆ ಗುರುವಿನಲ್ಲಿರುವ ಸೌಜನ್ಯ ಭಕ್ತಿ, ವ್ಯಕ್ತವಾಗಿದೆ. ಹೊಸೂರು ತಿಪ್ಪಣ್ಣನ ಒಟ್ಟು ೧೯ ಹಾಡುಗಳಲ್ಲಿ ೭ ಹಾಡುಗಳು ಗುರು ಮಹಿಮೆಯನ್ನು ಕುರಿತು ಹೇಳುತ್ತವೆ. ಉಳಿದ ಹಾಡುಗಳು ಅನುಭಾವಕ್ಕೆ ಸಂಬಂಧಿಸಿವೆ. ಗುರುವಿನ ಬೋಧನೆ ಹಾಗೂ ದೀಕ್ಷೆಯಿಂದ ತನ್ನಲ್ಲಿ ಉಂಟಾದ ಬದಲಾವಣೆಯನ್ನು ಕುರಿತು ತಿಳಿಸುತ್ತಾನೆ. ತಿಪ್ಪಣ್ಣ ತುಂಬ ಸರಳ ಹೃದಯವುಳ್ಳವನು. 'ಪರಮಾತ್ಮನ ನೆಲೆ ತಿಳಿಯೋ" ಎಂದು ಭಕ್ತರನ್ನು ಉದ್ದೇಶಿಸಿ ಹೇಳುತ್ತಾನೆ. ಈತನ ಭಾವ ಚಿತ್ರ, ಈತ ವಾಸಿಸಿದ ಮನೆಗಳನ್ನು ಚಿತ್ರಿಸಿ ಸ್ಮಾರಕಗಳ ರೂಪದಲ್ಲಿ ಇಲ್ಲಿ ಕೊಟ್ಟಿದೆ.



ರಾಯಚೂರು ತಾಲೂಕಿನ ಯಕ್ಲಾಸ್ ಪುರದಲ್ಲಿರುವ ತತ್ವಪದಕಾರ ಹೊಸೂರು ತಿಪ್ಪಣ್ಣ ಅವರು ತಮ್ಮ ಮನೆಯೆದುರು ಕೂತ ಚಿತ್ರ, ಯಕ್ಲಾಸ್‌ಪುರ.



ತತ್ವಪದಕಾರರಾದ ಹೊಸೂರು ತಿಪ್ಪಣ್ಣ ಅವರು ತಮ್ಮ ಧರ್ಮಪತ್ನಿಯೊಂದಿಗೆ ಕೂತ ಚಿತ್ರ, ಯಕ್ಲಾಸ್‌ಪುರ, ತಾ – ರಾಯಚೂರು.



ತತ್ವಪದಕಾರ ಹೊಸೂರು ತಿಪ್ಪಣ್ಣ ಅವರು ಆಕಾಶವಾಣಿ ಕಾರ್ಯಕ್ರಮವೊಂದಲ್ಲಿ ಕಾರ್ಯಕ್ರಮ ನಡೆಸಿಕೊಡುತ್ತಿರುವ ಚಿತ್ರ. ಯಕ್ಲಾಸ್‌ಪುರ, ತಾ – ರಾಯಚೂರು.

ನಾಲಿಗೆ ಇಲ್ಲದ ಗಂಟೆ ನುಡಿತಿದೆ ಕವನ ಆಲಿಸಿ ಅನುದಿನ ಮಾಡು ಸಾಧನ" ಎಂದು ತಿಪ್ಪಣ್ಣ ಅಧ್ಯಾತ್ಮಿಕವಾಗಿ ನುಡಿಯುತ್ತಾನೆ. "ಇದಾ ಎಂಥ ಗಂಡ ಸಿಕ್ಕ ನೋಡವ್ವ ಹಗಲು ರಾತ್ರಿ ಬಿಡನವ್ವ" ಎಂದು ತನ್ನ ಗಂಡನ ಪ್ರೀತಿಯ ಕುರಿತು ಹೇಳುವಲ್ಲಿ ಅಲೌಕಿಕ ಆನಂದದ ಭಾವವನ್ನು ವ್ಯಕ್ತಪಡಿಸಿದ್ದಾನೆ.

ಗುರುವಿನ ಮಹತ್ವವನ್ನು ಕುರಿತು ತಾತ್ವಿಕ ವಿಚಾರಗಳನ್ನು ಶೃಂಗಾರ ಭಕ್ತಿಯ ಮೂಲಕ ತಿಳಿಯ ಪಡಿಸಿದ ತಿಪ್ಪಣ್ಣನ ರೀತಿ ಹೊಸದಾಗಿದೆ. 'ಶರಣಸತಿ ಲಿಂಗಪತಿ, ಸ್ಮರಿಸುವುದರ ಜೊತೆಗೆ ಶಿವ, ಗಣಪ, ದತ್ತಾತ್ರೇಯ ಮುಂತಾದ ಪೌರಾಣಿಕ ದೇವತೆಗಳನ್ನೂ ಸ್ಮರಿಸುವ ವಿಚಾರ ಸಾಂಸ್ಕೃತಿಕ ದೃಷ್ಟಿಯಿಂದ ಬಹಳ ಪ್ರಮುಖವಾಗಿದೆ. ಇವರು ಬರೆದ ತತ್ವಪದಗಳನ್ನು ಡಾ. ವಿಜಯಶ್ರೀ ಸಬರದ ಅವರು "ಗುರುಶಿಷ್ಯರ ತತ್ವಪದಗಳು" ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದು, ಅವರ ಈ ಕೃತಿಯಿಂದ ಇಲ್ಲಿ ತಿಪ್ಪಣ್ಣನ ಮೂರು ಪದಗಳನ್ನು ಆಯ್ದು ಕೊಡಲಾಗಿದೆ.

೧. ಇವನೇ ಒಳ್ಳೇಮಾನವನು

ಇವನೇ ಒಳ್ಳೇ ಮಾನವನು
ಗುರುಧ್ಯಾನದೊಳಗೆ ಇರುವಂಥವನು ॥ ಪ ॥

ಅಲ್ಲಮನು ಹುಟ್ಟಿ ಬಂದಾನ । ಈ
ದೇಹದೊಳಗೆ ಮನೆ ಮಾಡಿಕೊಂಡಾನ ।
ಅಂತರಾತ್ಮದಲಿ ಕುಂತಾನ । ಸಣ್ಣ
ತಂತಿಯಾಗಿ ಕಿವಿಯೊಳು ಮಿಡಿದಾನ ॥ ೧ ॥

ಆರು ಮಂದಿನ ಕೊಂದಾನ
ಸಂದು ತಿಳಿಸಲು ಮುಂದೆ ಬಂದಾನ ।
ಮೂವ್ವರನೊಂದು ಮಾಡ್ಯಾನ
ಹಾಕಿದ ಬಾಗಿಲ ಕದವ ತೆರೆದಾನ ॥ ೨ ॥

ಹತ್ತು ಹರದಾರಿ ಮೇಲಾನ
ಮತ್ತೆ ಮೂರು ಏರಿ ಕುಂತಾನ ।
ಮಾನವನೆಂದರೆ ಮಹಾದೇವಾನ
ಜನನ ಮರಣಗಳಿಗೆ ದೂರ್ಹಾನ ॥ ೩ ॥
ಸೃಷ್ಟಿಗಧಿಕ ರಾಜೂರು ಶರಣ
ಶ್ರೇಷ್ಠ ಸದ್ಗುರು ಹನುಮೇಶ ಅಲ್ಲಮ ಸಮಾನ
ಬ್ರಹ್ಮ ನಿಷ್ಠ ನವಪುರ ಜಾತನು
ದಿಟ್ಟ ಮನಸಿಲೆ ಹೊಡೆದನುಭವದ ಬಾಣ ॥ ೪ ॥

೨. ಇವಾ ಎಂಥಾಗಂಡ ಸಿಕ್ಕ

ಇವಾ ಎಂಥಾಗಂಡ ಸಿಕ್ಕ ನೋಡವ್ವ
ಹಗಲೂ ರಾತ್ರಿ ಬಿಡನವ್ವ ॥ ಪ ॥

ಏನೊಂದು ಅರಿಯದ ನನ್ನ
ಸನ್ನೆ ಮಾಡಿ ಕರೆದನು ತಾನ
ಆರೂ ಹೇಳದ ಮಾತೊಂದು
ಸಾರಿ ಹೇಳಿದ ಎನಗಿಂದು ॥ ೧ ॥

ಅಲ್ಲಿ ಇಲ್ಲಿ ಸುಳಿಯಗೊಡನವ್ವ
ಎಲ್ಲಿಗ್ಹೋದ್ರೂ ಬೆನ್ನ ಬಿಡನವ್ವ ।
ಮಲಗಿದಲ್ಲೆ ಮಲಗಂತಾನವ್ವ
ಮಲಗಿದಷ್ಟು ಬಲು ಪಾಡವ್ವ ॥ ೨ ॥

ಮೂಲೆ ಮನೆಯ ಸೇರಂದನವ್ವ
ಮೂಲ ಜ್ಯೋತಿ ಹಚ್ಚೆಂದನವ್ವ ।
ಬೆಳ್ಳನ ಬೆಳದಿಂಗಳು ತಂಗೆವ್ವ
ಬೆಳಕಿನಲ್ಲೇ ಕೂಡೆಂದನವ್ವ ॥ ೩ ॥

ಮಾಳಿಗೆ ಮನೆಯಾದವ್ವ
ಮೇಲೇರಿ ಬಾರೆಂದಾನವ್ವ
ಮಲ್ಲಿಗೆ ಹೂಗಳನವ್ವ
ಚೆಲ್ಲುತ ತಾ ಬಂದಾನವ್ವ ॥ ೪ ॥

ದೊರೆ ಪುರದೊಳಗೆ ಮೆರೆವ
ಗುರು ಹನುಮೇಶ್ವರ ದೇವ ।
ಅವರ ಪಾದ ಪೂಜೆಯೊಳಿರುವ
ನವ ಪುರಜಾತನ ಕಾಯ್ವ ॥ ೫ ॥

೩. ರಾಶಿ ಮಾಡ್ಯಾರ ನೋಡು

ರಾಶಿ ಮಾಡ್ಯಾರ ನೋಡು । ಶಿವಶರಣರು
ರಾಶಿ ಮಾಡ್ಯಾರ ನೋಡು ॥ ಪ ॥

ರಾಶಿ ಮಾಡ್ಯಾರ ನೋಡು । ಸೋಸಿ ವಿಚಾರ ಮಾಡು
ದೇಶಕ್ಕೆ ಪ್ರಭುವಾದ ಈಶ ಹನುಮೇಶನು ॥ ಅ.ಪ ॥

ಅರವತ್ತು ಮೂರು ಮಂದಿ । ಶಿವಶರಣರು
ಹೊರಟರು ಭಕ್ತಿಲಿಂದೆ ॥

ಪೂರ್ವದ ಶರಣರು ಅವತರಿಸಿ ಬಂದಂತೆ
ಕುರುಹಗಳ ಶಕ್ತಿ ಸಾಧಿಸಿ ನೋಡಲು ॥ ೧ ॥

ಶಿವಯೋಗಿ ಚಂದಾಲಿಂಗ ಸ್ವಾಮಿಯ
ಸೇವೆಗೆ ಶರಣರ ಸಂಗ ॥
ಭಾವಭಕ್ತಿಯಿಂದ ಭಜನೆಯ ಮಾಡುತ
ದೇವರ ಪೂಜಿಸಿ ಆರಾಧನೆಯಗೈದು ॥ ೨ ॥

ಮುಕ್ಕುಂದಿ ಮರಹರಿಗಡ್ಡೆ ಖಾದರಲಿಂಗವು
ಮಕ್ಕಾದಂತೆ ಮೆರೆವುದು ॥
ಹೊಕ್ಕು ದರ್ಗಾದೊಳು ಅಲ್ಲಾನ ಸ್ಮರಿಸುತ
ಲೋಕಕ್ಕೆ ಅಲ್ಲಿಯ ಮಹಿಮೆಯ ಸಾರಲು ॥ ೩ ॥

ಉಳಿವಿಯ ಗುಡಿಗ್ಹೋಗಿ । ಚೆನ್ನಬಸವ
ಒಲಿವಂತೆ ಆರಾಧಿಸಿ ॥
ಅಲ್ಲಿರುವ ಅಸಧಳ ದಿವ್ಯ ಗ್ರಂಥವನೋದಿ
ಕಲಿಯುಗದ ಕಲ್ಯಾಣಗೈಯುವದಕ್ಕಾಗಿ ॥ ೪ ॥


ಕೊಡೆಕಲ್ಲು ಬಸವಣ್ಣನ । ಮನದೊಳು
ದೃಢವಾಗಿ ಧ್ಯಾನಿಸಲು ।
ಅಡಗಿರುವ ರಹಸ್ಯದನುಭಾವಗಳನೆಲ್ಲ
ಅಡಗಿ ಮಾಡುಣಿಸಿದ ಅಲ್ಲಮನೇ ತಾ ಬಲ್ಲ ॥ ೫ ॥

ನೀರಿನ ಮಧ್ಯದಲ್ಲಿ ದೊಡ್ಡ ಗುಂಡು
ಇರುವದು ಜಲದುರ್ಗದಿ ॥
ದುರ್ಗೆಯ ಭಜಿಸಲು ಗುಂಡು ಬಾಯ್ತೆರೆಯಲು
ಶರಣರ ಮಹಿಮೆಯ ಜಗದೊಳು ಸಾರುತ ॥ ೬ ॥


ತಂದೆ ಅಲ್ಲಮಪ್ರಭುವಿನ ಶೂನ್ಯದ ಜ್ಞಾನ
ಸಂದೇಶಗಳ ಸಾರುತ ॥
ಮುಂದಾಗಿ ಪೋಗುವ ಸದ್ಗುರು ಹನುಮೇಶನ
ಕಂದ ನವಪುರ ಜಾತ ಹಾಡಿದನೀ ಕವಿತಾ ॥ ೭ ॥

೨೩. ಕಲ್ಮಲಾದ ತಾಯಣ್ಣ (೧೯೪೨-೧೯೮೦)

ತಾಯಣ್ಣ ರಾಯಚೂರು ತಾಲೂಕಿನ ಕಲ್ಮಲಾದಲ್ಲಿ ಕ್ರಿ.ಶ. ೧೯೪೨ರಲಿ ಜನಿಸಿದ. ಈತನ ತಂದೆಯ ಹೆಸರು ಪೋಲಪ್ಪ. ಈತನ ಮನೆತನದ ಹೆಸರು ಬಿಂಗಾಣಿ. ಈತನ ಮದುವೆ ಕಮಲಮ್ಮ ಎಂಬುವವಳೊಡನೆ ಆಗಿತ್ತು. ಈ ದಂಪತಿಗಳಿಗೆ ಒಂದು ಗಂಡು ಎರಡು ಹೆಣ್ಣು ಮಕ್ಕಳಿರುವರು. ತಾಯಣ್ಣ ಕಂದಾಯ ಇಲಾಖೆಯಲ್ಲಿ ಎರಡನೇ ದರ್ಜೆ ಗುಮಾಸ್ತನಾಗಿ ಕೆಲಸಕ್ಕೆ ಸೇರಿಕೊಂಡು ರಾಯಚೂರು ಜಿಲ್ಲೆಯ ಲಿಂಗಸುಗೂರು, ಕುಷ್ಟಗಿ, ಮಾನ್ವಿ, ದೇವದುರ್ಗ, ಗಂಗಾವತಿ ಮುಂತಾದೆಡೆ ಸೇವೆ ಸಲ್ಲಿಸಿದ. ಸೇವೆ ಸಲ್ಲಿಸುತ್ತಿರುವಾಗಲೇ ಅಂದರೆ ತನ್ನ ಮೂವತ್ತೇಳನೇ ವಯಸ್ಸಿನಲ್ಲಿಯೇ ದಿನಾಂಕ : ೨೦-೦೬-೧೯೮೦ ರಂದು ನಿಧನನಾದ. ಈತ ವಾಸಿಸಿದ ಮನೆ, ಈತನ ಹೆಂಡತಿ ಮಗ ಇವರ ಚಿತ್ರಗಳನ್ನು ಚಿತ್ರೀಕರಿಸಿಕೊಂಡು ನಾವಿಲ್ಲಿ ಸ್ಮಾರಕದ ರೂಪದಲ್ಲಿ ನೀಡಿರುವೆವು.



ಕಲ್ಮಲಾ ಗ್ರಾಮದ ತತ್ವಪದಕಾರ ತಾಯಣ್ಣನು ವಾಸವಾಗಿದ್ದ ಮನೆಯ ಹೊರಚಿತ್ರ, ಕಲ್ಮಲಾ,
ತಾ – ರಾಯಚೂರು.



ಕಲ್ಮಲಾ ಗ್ರಾಮದ ತತ್ವಪದಕಾರ ತಾಯಣ್ಣನ ಪತ್ನಿ ಕಮಲಮ್ಮ ಹಾಗೂ ಅವರ ಪುತ್ರ ರತನರಾಜ್‌ರ ಭಾವಚಿತ್ರ, ಕಲ್ಮಲಾ, ತಾ – ರಾಯಚೂರು.

ತಾಯಣ್ಣ ವೃತ್ತಿಯಿಂದ ಗುಮಾಸ್ತನಾಗಿದ್ದರೂ ಪ್ರವೃತ್ತಿಯಿಂದ ತತ್ವಪದಕಾರನಾಗಿದ್ದ. ಈತ ಜಹೀರಾಬಾದ ತಿಪ್ಪಣ್ಣ ತಾತಾನ ಶಿಷ್ಯನಾಗಿದ್ದ. ಅವರ ಪ್ರಭಾವದಿಂದ ಈತ ತತ್ವಪದಗಳನ್ನು ರಚಿಸತೊಡಗಿದ. ಇವರು ಬರೆದ ತತ್ವಪದಗಳನ್ನು ಡಾ. ವಿಜಯ ಶ್ರೀ ಸಬರದ ಅವರು "ಗುರು ಶಿಷ್ಯರ ತತ್ವಪದಗಳು" ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದು, ಅವರ ಸಂಗ್ರಹದಿಂದ ಇಲ್ಲಿ ಎರಡು ತತ್ವಪದಗಳನ್ನು ಆಯ್ಕೆ ಮಾಡಿ ಕೊಡಲಾಗಿದೆ. ತಾಯಣ್ಣ 'ಕಲ್ಮಲಾ ತಾಯಣ್ಣ' ಹಾಗೂ 'ಗುರು ತಿಪ್ಪಣ್ಣ' ಅಂಕಿತಗಳಲ್ಲಿ ತತ್ವಪದಗಳನ್ನು ರಚಿಸಿರುವುದಾಗಿ ತಿಳಿದುಬಂದಿದೆ. ಈತನ ತತ್ವಪದಗಳ ಸಂಗ್ರಹಕಾರ್ಯವನ್ನು ನಡೆಸಬೇಕಾಗಿದೆ.

೧. ಯಾರಿಗ್ಹೇಳಲಮ್ಮ ತಂಗಿ

ಯಾರಿಗ್ಹೇಳದ ತಂಗಿ
ಯಾರಿಗ್ಹೇಳದ ಸುದ್ಧಿ ತಂಗಿ
ಯಾರಿಗ್ಹೇಳಲಮ್ಮ ಯಾರಿಗ್ಹೇಳದ ಸುದ್ದಿ
ಮನೆಯೊಳಗಿನ ಗಂಡ ಮಾಡಿದ ಹಗರಣ ॥ ಪ ॥

ಏಕಾಂತ ಸ್ಥಳವಮ್ಮ ತಂಗಿ
ಅಲ್ಲಿಗೆ ಕರೆಯೊಯ್ದನೇ ತಂಗಿ
ಮೊದಲ ದಿನದಂದು ಮುದ್ದಿಟ್ಟ ಮೋಹವದು
ವಶಳಾಗಿ ತೋಳಲ್ಲಿ ಬಿದ್ದೆನೆ ತಂಗಿ ॥ ೧ ॥

ಊರ ಮುಂದಿನ ಗುಡಿಯು ತಂಗಿ
ಉಮಾಪತಿಯ ದೇವಾ ತಂಗಿ
ಅಲ್ಲಿಗೆ ಕರೆದೊಯ್ದು ಎನ್ನತೋಳಲಿ ಎಳೆದು
ಬಿಗಿದು ಅಪ್ಪಿದನೇ ತಂಗಿ ॥ ೨ ॥

ಮೋಸದ ಮನೆಯಮ್ಮ ತಂಗಿ
ಜಾಗ್ರತದಿ ನಡೆಯಮ್ಮ ತಂಗಿ
ಕಣ್ಣಲ್ಲಿ ಕಣ್ಣಿಟ್ಟು ಸಿರಿಯ ಮುಂದಿಟ್ಟು
ಮರುಳು ಮಾಡಿದನೇ ತಂಗಿ ॥ ೩ ॥

ಅಟ್ಟದ ಮನೆಯಮ್ಮ ತಂಗಿ
ಮೆಟ್ಟಾಕಿ ಕೂತಿದ್ದನೇ ತಂಗಿ
ಕೇಶರಾಶಿಯ ಜಗ್ಗಿ ಎನ್ನ ಮೇಲೆ ನುಗ್ಗಿ
ತೋಳಲಿ ಎತ್ತಿದನೇ ತಂಗಿ ॥ ೪ ॥

ಆನಂದ ಸಮಯವು ತಂಗಿ
ಅದೆಷ್ಟು ಸೊಗಸಮ್ಮ ತಂಗಿ
ಎನ್ನ ಬತ್ತಲೆ ಮಾಡಿ ಮೋಹದಿಂದಲಿ ನೋಡಿ
ಎನ್ನ ಕೂಡಿಕೊಂಡನೇ ತಂಗಿ ॥ ೫ ॥

ಧರೆಯೊಳು ಮೆರೆಯುವುದು ತಂಗಿ
ಕಲ್ಮಾಲ ಗ್ರಾಮವು ತಂಗಿ
ಶಿಷ್ಯ ತಾಯಣ್ಣನು ಗುರು ಹನುಮೇಶನ
ಕೂಡಿದ ಪರಿಯನ್ಹೇಳ ತಂಗಿ ॥ ೬ ॥

೨. ಜಗಕ್ಕೆ ಬಂದಾನ

ಜಗಕ್ಕೆ ಬಂದಾನ ಅವತರಿಸಿ
ನಾವೆಲ್ಲಾ ಸ್ಮರಿಸೋಣ ಮನ ಸೋಸಿ ।
ಬಹು ಮಹಿಮಾನಣ್ಣ ಗುರು ತಿಪ್ಪಣ್ಣ
ಜಗ ಕುಣಿಸಿದನಣ್ಣ ಗುರು ತಿಪ್ಪಣ್ಣ ॥ ಪ ॥

ಶ್ರವಣ ಮನಮುಟ್ಟಿ ಕೇಳು
ಮುತ್ತು ಸುರಿದಂತೆ ಬಾನಿನೊಳು ।
ಪಾದ ಪೂಜೆಯೊಳಾಡು
ಸಗ್ಗದ ಸವಿಯ ಸೂಡು ॥ ೧ ॥

ಶಾಂತಿಯ ಸಾಗರವು ಬನದ ತನ್ಮಯವು
ಗುರು ತಿಪ್ಪಣ್ಣ ಜಗ ಕುಣಿಸಿದನಣ್ಣ ।
ವಿದ್ಯೆ ಭಾಂಡಾರ ಸಿರಿಯು
ರವಿಕಾಂತಿ ಹರಡಿದಾ ಪರಿಯು ॥ ೨ ॥

ಜ್ಞಾನ ಬೆಳೆಯ ನಿಲುವು
ಚಂದ್ರನ ತಂಪಿನ ಬರುವು ।
ಪುಷ್ಪದ ಮಕರಂದ ಜೇನು
ಸವಿದಾನಣ್ಣ ಗುರುತಿಪ್ಪಣ್ಣ ॥ ೩ ॥

ಜಹಿರಾಬಾದು ವಾಸ ಚಿಕ್ಕ ಮಠವದು ಸೊಗಸ
ಶಿಷ್ಯ ವೃಂದದ ನೆನವು ಗುರು ಹನುಮೇಶರ ಶಿಶುವು ।
ಕಲ್ಮಾಲಿ ತಾಯಣ್ಣನ ಅಂತರಂಗದ ಶಿವನು
ಆತನೇ ಗುರು ತಿಪ್ಪಣ್ಣನು ॥ ೪ ॥

೨೪. ಎಸ್. ಎನ್. ಕುಮಾರ ಚಟ್ನಳ್ಳಿ (೧೯೬೩)

ಎಸ್. ಎನ್. ಕುಮಾರ ಎಂಬ ಕಾವ್ಯನಾಮದಿಂದ ಸುಪ್ರಸಿದ್ಧರಾದ ಸಿದ್ಧಲಿಂಗಪ್ಪ ನಾಗೇಶಪ್ಪ ಕುಂಬಾರ ಇವರು ಮೂಲತಃ ಈಗಿನ ಯಾದಗಿರಿ ಜಿಲ್ಲೆ ಶಹಾಪೂರ ತಾಲೂಕಿನ ಚಟ್ನಳ್ಳಿ ಗ್ರಾಮದವರು. ಇವರು ೧೯೬೩ರಲ್ಲಿ ನಾಗೇಶಪ್ಪ ಮತ್ತು ಅಮರಮ್ಮ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು. ಚಟ್ನಳ್ಳಿಯಲ್ಲಿಯೇ ಹುಟ್ಟಿ ಬೆಳೆದ ಇವರು ಮುಂದೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ 'ಗಲಗ' ಎಂಬ ಗ್ರಾಮದಲ್ಲಿ ಖಾಯಂ ಆಗಿ ವಾಸಿಸತೊಡಗಿದರು. ಇವರು ಜನಿಸಿದ ಊರಾದ ಚಟ್ನಳ್ಳಿಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದರು. ವಿದ್ಯಾಭ್ಯಾಸದ ಅವಧಿಯಲ್ಲಿಯೇ ಇವರನ್ನು ಕಲಾದೇವಿ ತನ್ನತ್ತ ಸೆಳೆದುಕೊಂಡಳು. ವಿದ್ಯಾರ್ಥಿ ದೆಸೆಯಲ್ಲಿ ತುಂಬಾ ಕ್ರಿಯಾಶೀಲರು ಪ್ರತಿಭಾನ್ವಿತರು ಆಗಿದ್ದರು. ಇವರು ವಿದ್ಯಾರ್ಥಿಗಳಿರುವಾಗಲೇ ಭಜನೆ ಮಾಡುವುದು ಕೀರ್ತನೆ ಕೇಳುವುದು ಪ್ರವಚನ ಕೇಳುವುದು ಮುಂತಾದವನ್ನು ತಮ್ಮ ಹವ್ಯಾಸವನ್ನಾಗಿಸಿಕೊಂಡರು. ಇವುಗಳ ಜೊತೆಗೆ ವಿಶೇಷವಾಗಿ ಇವರಿಗೆ ಸಂಗೀತವನ್ನು ಕಲಿಯಬೇಕೆಂಬ ಆಸಕ್ತಿ ಹುಟ್ಟಿತು. ಆಗ ಇವರು ಗುಲ್ಬರ್ಗಾದಿಂದ ೩೫ ರೂಪಾಯಿ ಕೊಟ್ಟು ತಬಲಾ ತರಿಸಿಕೊಂಡರು. ಇವರು ತಮ್ಮ ಮನಸೋ ಇಚ್ಛೆಯಂತೆ ಕೆಲವು ದಿನ ತಬಲ ಬಾರಿಸಿದರು. ಆ ಊರಿನಲ್ಲಿ 'ಹೇಮರಡ್ಡಿ ಮಲ್ಲಮ್ಮ'ನ ನಾಟಕ ಪ್ರ್ಯಾಕ್ಟಿಸ್ ನಡೆದಿತ್ತು. ೬ ತಿಂಗಳು ಗಟ್ಟಲೆ ನಡೆದ ಈ ಪ್ರ್ಯಾಕ್ಟಿಸ್‌ನಲ್ಲಿ ದಿನ ಇವರು ತಬಲ ತೆಗೆದುಕೊಂಡು ಹೋಗಿ ಬಾರಿಸತೊಡಗಿದರು. ಹಾರ್ಮೋನಿಯಂ ಮಾಸ್ತರರ ಜೊತೆಗೆ ಇವರು ತಬಲ ನುಡಿಸುತ್ತಿದ್ದು ಆ ಊರ ಜನತೆಗೆ ತುಂಬಾ ಹಿಡಿಸಿತು. ಏನೋ ದೇವರ ದೇಣಿಗೆ ಹಿರಿಯರ ಆರ್ಶಿವಾದ ಆಯಿತೆಂಬಂತೆ ಆ ನಾಟಕದಲ್ಲಿ ತಬಲ ನುಡಿಸಿ ಗುರುಹಿರಿಯರಿಂದ ಸೈ ಎನಿಸಿಕೊಂಡರು. ಆ ಊರಿನವರೇ ಆದ ಹಾರ್ಮೋನಿಯಂ ಮಾಸ್ತರ ಕೂಡ ಮುಂದೆ ನಮ್ಮೂರಿನಲ್ಲಿ ಆಡುವ ನಾಟಕಕ್ಕೆ ನೀನೇ ತಬಲ ವಾದಕನಾಗುವೆ ಎಂದು ಭವಿಷ್ಯ ನುಡಿದರು. ಆಗ ಇವರು ಖುಷಿ ಪಟ್ಟು ಮತ್ತಷ್ಟು ತಬಲವನ್ನು ಚೆನ್ನಾಗಿ ಬಾರಿಸಲು ಕಲಿತುಕೊಂಡರು. ಮತ್ತೆ ಅವರ ಊರಿನಲ್ಲಿ 'ಸತಿ ಸರಸ್ವತಿ' ಎಂಬ

ಸಾಮಾಜಿಕ ನಾಟಕವನ್ನು ಕಲಿಯುವಾಗ ಇವರೇ ತಬಲ ನುಡಿಸಿದರು. ಆಗ ಸುತ್ತ ಮುತ್ತಲಿನ ಊರಿನ ಜನರು ಇವರನ್ನು ಕರೆಯತೊಡಗಿದರು. ನಾಲ್ಕಾರು ನಾಟಕಗಳಲ್ಲಿ ಇವರಿಗೆ ತಬಲ ನುಡಿಸಲು ಜನರು ಮೊದಲೇ ಆಮಂತ್ರಣ ನೀಡಿದರು. ಮುಂದೆ ಇವರು ಸುಮಾರು ೭೦ ನಾಟಕಗಳಿಗೆ ತಬಲ ವಾದಕನಾಗಿ ಸೇವೆ ಸಲ್ಲಿಸಿದರು. ಇವರ ವಿದ್ಯಾಭ್ಯಾಸ ಕುಂಠಿತಗೊಂಡಿತು. ಇವರು ಅಭ್ಯಾಸದ ಕಡೆಗೆ ಗಮನ ಕೊಡದೇ ರಂಗದೇವಿಯ ಸೇವೆ ಸಲ್ಲಿಸುತ್ತ ಮುನ್ನಡೆದರು. ತಬಲ ವಾದನದೊಂದಿಗೆ ಇವರಿಗೆ ನಾಟಕಗಳಲ್ಲಿ ಪಾತ್ರ ವಹಿಸಬೇಕೆನ್ನುವ ಹಂಬಲ ಹುಟ್ಟಿತು. ಆ ಸಮಯದಲ್ಲಿ ಇವರ ಊರಿನಲ್ಲಿ "ಗೌಡ್ರಗದ್ಲ" ಎಂಬ ನಾಟಕವನ್ನು ಕಲಿಯುತ್ತಿದ್ದರು ಆ ನಾಟಕದಲ್ಲಿ ಇವರು ಪ್ರಮುಖ ಪಾತ್ರವಾದ ದೇವೇಗೌಡನ ಪಾತ್ರವನ್ನು ವಹಿಸಿ ಅದನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದರು. ಈ ನಾಟಕವನ್ನು ನೋಡಲು ಈ ನಾಟಕವನ್ನು ಬರೆದ ಶ್ರೀ. ಬಿ.ವಿ. ಈಶ ಅವರು ಬಂದಿದ್ದರು. ಈ ನಾಟಕದಲ್ಲಿ ದೇವೇಗೌಡನ ಪಾತ್ರವನ್ನು ವಹಿಸಿದ ಇವರ ನಟನಾ ಸಾಮರ್ಥ್ಯವನ್ನು ಕೊಂಡಾಡಿದರು. ಮತ್ತು ಅವರು ಇವರನ್ನು ತಾವು ಇರುವ ಚಿಕ್ಕೊಪ್ಪ ಕಂಪನಿಗೆ ಕರೆದೊಯ್ದು ಪಾತ್ರ ಮಾಡಲು ಹಚ್ಚಿದರು. ಹೀಗೆ ಎಸ್.ಎನ್. ಕುಮಾರರವರು ಪಾತ್ರ ಮಾಡುತ್ತ ಕಾಲ ಕಳೆಯುತ್ತಿರುವಾಗ ಇವರ ಸ್ನೇಹಿತರು ಅಲ್ಲಿಗೆ ಹೋಗಿ ನಾಟಕ ಕಂಪನಿ ಬಿಡಿಸಿ ಇವರನ್ನು ಊರಿಗೆ ಕರೆ ತಂದರು. ಆಗ ಇವರು ಊರಿಗೆ ಬಂದು ಸುಮ್ಮನೆ ಕೂಡ್ರಲಿಲ್ಲ. ನಾಟಕ, ಭಕ್ತಿ-ಪದ, ಭಜನೆ ಹಾಡು, ತತ್ವಪದ ಮುಂತಾದವುಗಳನ್ನು ಬರೆಯತೊಡಗಿದರು. ಆಗ ಇವರು 'ಕಳ್ಳ ನೀನಲ್ಲ' ಎಂಬ ನಾಟಕವನ್ನು ಬರೆದು ಅದನ್ನು ಆ ಊರಿನಲ್ಲಿ ಆಡಿಸಿದರು. ಇದನ್ನು ನೋಡಿದ ಆ ಊರಿನ ಜನ ಮತ್ತು ಸುತ್ತ-ಮುತ್ತಲಿನ ಊರಿನ ಜನರು ತುಂಬ ಮೆಚ್ಚಿಕೊಂಡರು. ಅಂದಿನಿಂದ ಇವರಿಗೆ ನಾಟಕಗಳನ್ನು ಬರೆಯಬೇಕೆಂಬ ಆಸೆ ಮೂಡಿತು. "ಛಲ ಸಾಧಿಸಿದ ಹೆಣ್ಣು" ಎಂಬ ನಾಟಕವನ್ನು ಬರೆದಾಗ ಇವರು ಒಬ್ಬ ಒಳ್ಳೆಯ ನಾಟಕಕಾರನೆಂದು ಪ್ರಸಿದ್ಧಿ ಪಡೆದರು. ಜನ ಇವರನ್ನು ನಾಟಕಕಾರರೆಂದೇ ಗುರುತಿಸತೊಡಗಿದರು. ಇದೇ ವೇಳೆಗೆ ಇವರ ಮದುವೆ ಆಯಿತು. ಮದುವೆ ಮಾಡಿಕೊಂಡ ನಂತರ ಇವರು 'ಅತ್ತಿಗೆ ಅಂಥವಳಲ್ಲ' 'ವೀಣಾ ಉಳಿಸಿದ ಪ್ರಾಣ' 'ಪಂಜರದ ಗಿಳಿ' 'ಊರಿಗೆ ಬಂದಳು ನೀರಿಗೆ ಬರಲಿಲ್ಲ' 'ಹೆಡೆ ಎತ್ತಿದ ಸರ್ಪ' 'ಲಗಾಮ್ ಇಲ್ಲದ ಕುದುರೆ' ಹೀಗೆ ಇವರು ೧೫ ನಾಟಕಗಳನ್ನು ಬರೆದಿದ್ದು, ಇವೆಲ್ಲವೂ ಪ್ರಕಟಗೊಂಡಿವೆ. ಅಷ್ಟೇ ಅಲ್ಲ ಇವೆಲ್ಲವು ಕಲಾರಸಿಕರ ಕಲಾಭಿಮಾನಿಗಳ ಕೈ ಸೇರಿ ಅಚ್ಚು ಮೆಚ್ಚಿನವು ಆಗಿವೆ. ಇದಾದ ನಂತರ ಇವರಲ್ಲಿ ಕ್ಯಾಸೆಟ್ ಮಾಡಬೇಕೆಂಬ ಹಂಬಲ ತುಂಬಿ ಬಂತು. ಬೆಂಗಳೂರು ಝೇಂಕಾರ ಕಂಪನಿಯಲ್ಲಿ ಎರಡು-ಮೂರು ಕ್ಯಾಸೆಟ್ ಮಾಡಿಸಿದರು. ಅಶ್ವಿನಿ ಕಂಪನಿಯಲ್ಲಿ ಸುಮಾರು ಹತ್ತು


ಕ್ಯಾಸೆಟ್‌ಗಳನ್ನು ಮಾಡಿಸಿದರು. ನಾಲವಾರ ಕೋರಿಸಿದ್ದೇಶ್ವರರ ಭಜನೆ ಪದ ಶರಣ ಬಸವೇಶ್ವರರ ಭಜನೆ ಪದ ಕಲ್ಮಲಾ ಕರಿಯಪ್ಪ ತಾತನ ಭಜನೆ ಪದ, ಬಸವಣ್ಣನವರ ಭಜನೆ ಪದ ಮುಂತಾದವುಗಳನ್ನು ಕ್ಯಾಸೆಟ್ ಮಾಡಿಸುವುದರ ಮೂಲಕ ಹಾರ್ಮೋನಿಯಂ ಬಾರಿಸುವುದನ್ನು ಕಲಿತರು. ೧೮೦ ನಾಟಕಗಳಿಗೆ ಹಾರ್ಮೋನಿಯಂ ವಾದ್ಯನುಡಿಸಿದ ಹಿರಿಮೆ ಇವರದಾಗಿದೆ. ಇವರು ಇಂದಿಗೆ ಹುಟ್ಟಿದ ಊರು ಶಹಾಪುರ ತಾಲೂಕಿನ ಚಟ್ನಳ್ಳಿಯನ್ನು ಬಿಟ್ಟು ದೇವದುರ್ಗ ತಾಲೂಕಿನ ಗಲಗ ಎಂಬ ಗ್ರಾಮದಲ್ಲಿ ವಾಸಿಸತೊಡಗಿ ೨೪ ವರ್ಷಗಳಾದವು. ಇದೀಗ ಇವರು ಗಲಗ ಗ್ರಾಮದವರೇ ಆಗಿ ಅಲ್ಲಿಯೇ ಸ್ವಂತ ಮನೆಯನ್ನು ಕಟ್ಟಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇವರ ಭಾವಚಿತ್ರ ಹಾಗೂ ಇವರು ವಾಸಿಸುತ್ತಿದ್ದ ಮನೆಯ ಚಿತ್ರಗಳನ್ನಿಲ್ಲಿ ನೀಡಿದೆ.



ತತ್ವಪದಕಾರ ಎಸ್. ಎನ್. ಕುಮಾರ ಚಟ್ನಳ್ಳಿ, ಸಾ – ಗಲಗ, ತಾ – ದೇವದುರ್ಗ



ಎಸ್. ಎನ್. ಕುಮಾರ ಅವರು ವಾಸವಾಗಿದ್ದ ಮನೆಯ ಚಿತ್ರ ಗಲಗ, ತಾ – ದೇವದುರ್ಗ



ತತ್ವಪದಕಾರ ಎಸ್. ಎನ್. ಕುಮಾರ ಅವರು ಹುಟ್ಟಿ ಬೆಳೆದು ಮೊದಲು ವಾಸವಾಗಿದ್ದ ಮನೆಯ ಚಿತ್ರ, ಚಟ್ನಳ್ಳಿ, ತಾ – ಶಹಾಪೂರ, ಜಿಲ್ಲೆ – ಯಾದಗಿರಿ.

ಎಸ್.ಎನ್. ಕುಮಾರ ಚಟ್ನಳ್ಳಿ ಎಂಬ ಅಂಕಿತನಾಮದೊಂದಿಗೆ ಪ್ರಸಿದ್ಧಿಯನ್ನು ಪಡೆದ ಸಿದ್ಧಲಿಂಗಪ್ಪ ನಾಗೇಶಪ್ಪ ಕುಂಬಾರ ಇವರು ಪ್ರಸಿದ್ಧ ತತ್ವಪದಕಾರರಾಗಿಯೂ ಹೊರ ಹೊಮ್ಮಿದ್ದಾರೆ. ಮೊದ ಮೊದಲು ಇವರು ತಬಲಾ ವಾದಕರಾಗಿ, ಹಾರ್ಮೋನಿಯಂ ಮಾಸ್ತರರಾಗಿ, ನಟರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿ ಇದೀಗ ತತ್ವಪದಕಾರರಾಗಿ ಭಜನಾ ಹಾಡುಗಳ ಲೇಖಕರಾಗಿ ಈ ಭಾಗದಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇವರು ಬರೆದ ತತ್ವ ಪದಗಳಲ್ಲಿ ೮೧ ತತ್ವಪದಗಳು "ಶ್ರೀ ಕೋರಿಸಿದ್ದೇಶ್ವರ ಭಜನೆ ಪದಗಳು" ಎಂಬ ಕೃತಿಯಲ್ಲಿ ಸಮಾವೇಶಗೊಂಡಿವೆ. ಇವರ ತತ್ವಪದಗಳಲ್ಲಿ ಭಕ್ತಿ ಭಾವ ತುಂಬಿ ಹೊರಸೂಸಿದೆ. ಗುರುಭಕ್ತಿ, ಅರಿವು, ಅಧ್ಯಾತ್ಮ, ಕಾಯಕ, ಮಹಾತ್ಮರ ಸ್ಥಾನ ಮಹಿಮೆ ನಾಲವಾರ ಕೋರಿಸಿದ್ದೇಶ್ವರರ ಮಹಿಮಾನ್ವಿತ ಜೀವನ ಮುಂತಾದವು ವ್ಯಕ್ತಗೊಂಡಿರುವುದನ್ನು ಕಾಣುವೆವು. ಶ್ರೀ ತೋಟೇಂದ್ರ ಶಿವಾಚಾರ್ಯರನ್ನು ತಮ್ಮ ಅಧಿದೈವವಾಗಿ ಸ್ವೀಕರಿಸಿದ ಅವರು ಇವರನ್ನು ನಾನಾ ವಿಧವಾಗಿ ಸ್ತುತಿಸಿರುವರು. ತೋಟೇಂದ್ರ ಶಿವಾಚಾರ್ಯರು ನಾಲವಾರ ಮಠಕ್ಕೆ ಬಂದು ನಾಡಿಗೆ ಬೆಳಕ ತಂದವರು, ಎಂದು ಕೊಂಡಾಡಿರುವರು. ಕೋರಿಸಿದ್ಧೇಶ್ವರ ಭಜನೆ ಪದಗಳನ್ನು ಬರೆದಂತೆ ಇವರು ಶರಣಬಸವೇಶ್ವರ, ಕಲ್ಮಲಾದ ಕರಿಯಪ್ಪ ತಾತ ಹಾಗೂ ಬಸವಣ್ಣನವರ ಮೇಲೂ ಅನೇಕ ಭಜನೆ ಪದಗಳನ್ನು ಬರೆದಿರುವರು. ಇವರು ಬರೆದ ತತ್ವ ಪದಗಳಲ್ಲಿ ಆರು ತತ್ವ ಪದಗಳನ್ನು ಇಲ್ಲಿ ಆಯ್ದುಕೊಡಲಾಗಿದೆ.

೧. ನನ್ನದೆನ್ನಬೇಡ

ನನ್ನದೆನ್ನಬೇಡ ಓ ಮನವೇ
ನಿನ್ನದೇನಿಲ್ಲ ತಿಳಿ ಮನವೇ ॥
ನಾನೇ ನೀನೆಂದು ಅರಿತರೆ ಕ್ಷೇಮ
ತಿಳಿಯದ ಮನುಜನಿಗೆ ಆಗುವದು ಕ್ಷಾಮ ॥ ಪ ॥

ಹುಟ್ಟು ಸಾವು ಉಂಟು ಈ ಕಾಯಕ
ಸೃಷ್ಟಿ ಮಾಡಿ ಕಳಿಸಿದ ಬ್ರಹ್ಮ ಈ ನರ ಜನ್ಮಕ
ಅಷ್ಟ ಐಶ್ವರ್ಯ ಬೇಡುವದು ಮನಕ
ಎಷ್ಟು ಮಾಡಿದರು ಏನಿಲ್ಲ ಇದಕ್ಕ ॥ ೧ ॥

ಮಾನ ಹೋಗುವದೆಂದು ನೀ ತಿಳ್ಕೊ ।
ದಾನ ಧರ್ಮ ಮಾಡಿ ನೀ ಪುಣ್ಯ ಕಟ್ಟಿಕೊ ॥

ಗುರು ಧ್ಯಾನ ನೀನು ಮರಿಯದೆ ಇಟ್ಟು ಕೊ ।
ವರ ಮುಕ್ತಿ ದೊರೆಯುವದು ಈ ನರ ಜನ್ಮಕ ॥ ೨ ॥

ಸತಿ–ಸುತರೆಲ್ಲರು ನಿನ್ನವರಲ್ಲಾ
ಮತಿವಂತನಾಗಿ ಜಯಿಸಬೇಕು ಭೂಮಿಮ್ಯಾಲ
ಜತಿಗಾಗಿ ಮರುಗಬ್ಯಾಡ ಹಗಲೆಲ್ಲಾ
ನಿನ್ನ ಸ್ಥಿತಿಗತಿ ಕಾಯುವನು ಕೋಟೆ ಬಸವನೆ ಎಲ್ಲಾ ॥ ೩ ॥

೨. ಹಾವು ಕಡಿದಾದ

ಹಾವು ಕಡಿದಾದ ಎವ್ವ ಎನಗ ಹಾವು ಕಡಿದಾದ
ಹಾವು ಕಡಿದಾದ ಆರು ಮೆಟ್ಟಿಲ ಏರಿ
ಅಂಗವೆಲ್ಲ ಒಂದು ಗುಂಗ್ ಹಿಡಿದಾದ ॥ ಪ ॥

ಚರ್ಮವಿಲ್ಲದ ಮರ್ಮದ ಹಾವು
ಕರ್ಮ ಕಳೆಯುವ ನಿರ್ಮಲ ಹಾವು
ಗರ್ವ ಅಳಿಯಲು ಘರ್ಜಿಸೊ ಹಾವು
ಧರ್ಮದ ಹಾದಿಗೆ ಎಳೆವಂತ ಹಾವು ॥ ೧ ॥

ಹಲ್ಲು ಇಲ್ಲದೆ ಕಡಿಯುವ ಹಾವು
ಎಲ್ಲರೊಳಗೆ ಸುಳಿಯುವ ಹಾವು
ಕಲ್ಲು ಮನವ ಕರಗಿಸೊ ಹಾವು
ಬಲ್ಲ ಜ್ಞಾನಿಯ ಬಲ್ಲಿರುವ ಹಾವು ॥ ೨ ॥

ವೇದ ಶಾಸ್ತ್ರದಿ ಹೊಳೆಯುವ ಹಾವು
ಸಾಧು ಸಂತರಿಗೆ ಸಂಭ್ರಮದ ಹಾವು
ಬಾಧಿಸೋ ಆಲಸ್ಯ ಬಿಡಿಸುವ ಹಾವು
ವಾದಿಸಿ ನೋಡಿದರೆ ಸುಖಿಸುವ ಹಾವು ॥ ೩ ॥

ಕಂಗಳಿಲ್ಲದ ಕನಿಕರದ ಹಾವು
ಮೆಚ್ಚಿದ ಮನಕೆಲ್ಲ ಕಚ್ಚುವ ಹಾವು
ಕೇಶವೇಶ ಇಲ್ಲದ ಹಾವು
ರಾಶಿ ಭಕ್ತರ ಪೊರೆವಂತ ಹಾವು ॥ ೪ ॥

ವರವುಳ್ಳ ಕಲ್ಮಲ್‌ಮುರದ ಈ ಹಾವು
ಮೆರೆದು ನಾಡೆಲ್ಲ ಬೆಳಗಿದ ಹಾವು
ಮಂಗಳಾತ್ಮಾ ಶ್ರೀ ಕರಿಯಪ್ಪ ತಾತನ
ಶೋಧಿಸಿ ನೋಡಿರಿ ಬೋಧವೇ ಹಾವು ॥ ೫ ॥

೩. ತೂಗುತಾದಮ್ಮ ಜೋಕಾಲಿ

ತೂಗುತಾದಮ್ಮ ಜೋಕಾಲಿ, ತೂಗುತಾದಮ್ಮ ।
ಜೋಕಾಲಿ ತೂಗುತಾದ । ಸಾಕಾಗೊತನಕದ ।
ಏಕಭಾವದಿಂದ ಲೋಕದೊಳು ಮೆರೆಯಲು ॥ ಪ ॥

ಆರು ಮೂರು ಒಂಬತ್ತು ಹಗ್ಗ ।
ಮರಕ ಬಿಗಿದಾವೊ । ಜಗ್ಗ
ಬಿಗಿ ಎರಡೆ ಮಣಿಗಳಿಂದ ಜೋಕಾಲಿ
ಇರುವದು ಚಂದ । ಏಕಭಾವದಿಂದ
ಮೂಕಾಗಿ ಅತ್ತ ಇತ್ತ । ಜೋಕಾಲಿ ತೂಗುತಾದಮ್ಮ ॥ ೧ ॥

ಜೋಕಾಲಿಗಿ ಜೋಡಿ ಇಲ್ಲಾ । ಸಾಕಾರ ಮಾಡಿ ಎಲ್ಲಾ
ಮೂಕಾಗಿ ಅತ್ತ ಇತ್ತ । ಜೋರಾಗಿ ತಿರುಗುವಂತ ।
ಏಕಭಾವದಿಂದ ಸಾಕಾಗೋ ತನಕದ ಜೋಕಾಲಿ ತೂಗುತಾದಮ್ಮ ॥ ೨ ॥

ಭಕ್ತಿ ಭಾವ ತುಂಬಿ । ಘನಶಕ್ತಿಯನ್ನುನಂಬಿ
ಮುಕ್ತದಾತ ನಮ್ಮ । ಕೋರಿಸಿದ್ಧೇಶನು
ಸ್ಮರಣೆ ಗೈಯ್ಯುತ ಅನುದಿನ
ತೂಗುವಂತ ಜೋಕಾಲಿ ತೂಗುತಾದಮ್ಮ ॥ ೩ ॥

೪. ಸ್ಥಿರವಿಲ್ಲೋ ತಮ್ಮ ಈ ದೇಹ

ನೀರ ಮೇಲಿನ ಗುಳ್ಳಿಯಂತೆ ನಿಜವಿಲ್ಲೊ ಈ ಕಾಯ ।
ಸ್ಥಿರವಿಲ್ಲೊ ತಮ್ಮ ಈ ದೇಹ, ಬಿಡು ಮನದ ಮೋಹ
ಸ್ಥಿರ ವಿಲ್ಲೋ ತಮ್ಮ ಈ ದೇಹ ॥ ॥ ಪ ॥

ನಾನಾ ಪರಿಕಷ್ಟದಿ ಬೆಂದೆ, ಬರುವಾಗ ಏನಿಲ್ಲ ಒಂದೇ ।
ಇರುವತನಕ ಎಲ್ಲಾನುನಂದೆ, ಅಂತ್ಯೈತಿ ಮುಂದೆ ಮುಂದೆ ॥
ಬಾಡಿಗಿ ಮನೆ ಬಿಟ್ಟು ಹೋಗುವಾಗ, ಬ್ಯಾರೆಯವರು ನಿನಗಾರಿಲ್ಲಾ ॥ ೧ ॥

ಸಂಸಾರ ಸಾಗರ ಈಸಬೇಕು, ಈಸಿಕಾಯ ಸವಿಯಬೇಕು,
ನೂರೆಂಟು ವೇಶ ಧರಿಸುವ ಜನ್ಮ ಸ್ಥಿರ ವಿಲ್ಲೊ ತಮ್ಮ ॥
ಎಲ್ಲಾ ಮರೆತು ಕಣ್ಮರೆಯಾದಾಗ, ಭ್ರಾಂತಿ ಬಿಡವದು ಆಗ ॥ ೨ ॥

ನೆಂಟ ಬಂಟರ ತಗಲು ಬಾಳ । ಗಂಟು ಬಿದ್ದು
ಒದ್ದಾಡುವ ಗೋಳ । ಸುಳ್ಳಿನ ಸಂತಿ ನಡೆದೈತಿ
ಬಾಳ । ಸಂತೆಯೊಳಗ ಒಣ ಭ್ರಾಂತಿಯ ಮೂಲ
ಚಿಂತೆಯ ಬಿಡಿಸೊ ಚಿನ್ಮಯ ॥ ಕೋರಿಸಿದ್ದೇಶನ ಪಾದಕ
ನೀ ಹೊಂದು ಮೊದಲ ॥ ೩ ॥

೫. ಸಾಗಿತಣ್ಣ ತೇರು

ಸಾಗಿತಣ್ಣ ತೇರು ನೋಡಿರೆ ಈ ದೇಹವೆಂಬೊ ।
ತೇರು ಸಾಗಿತಣ್ಣ ನೋಡಿರೆ ॥ ಸಾಗಿತಣ್ಣ
ತೇರು ನೋಡಿರಿ ಸಾರ ಸುಜನರೆಲ್ಲ ಕೂಡಿ । ಹಾರಿ
ನಗುತ ಹಾದಿ ಮೇಲೆ ದೂರಸಾಗಿ ಪೋಗುತಿರುವ ॥ ಪ ॥

ಕಷ್ಟನಷ್ಟವನೆಲ್ಲನು ತಿಂತು । ಇಷ್ಟದ ಆಲಯದ ತೊರೆದು ।
ಎಷ್ಟು ಇದ್ದರೆಲ್ಲವ ಮರೆತು । ತಾನೇ ತಾನಾಗಿ ಮೌನದಿಂದ
ಸಾಗಿತಣ್ಣ ತೇರು ನೋಡಿರೆ ॥ ೧ ॥

ತುಂಬಿದ ಸಂಭ್ರಮದೊಳಗ ನಡದಿತ್ತು । ಇಂಪನು
ಪಡೆದಿತ್ತು । ನಂಬಿಕೊಂಡು ನಡುಬೀದಿಯ ಮೇಲೆ
ತನ್ನ ಜಾಗಕ ಸಾಗಿತ್ತ । ತೇರು ಸಾಗಿತಣ್ಣ ॥ ೨ ॥

ದೇಶದೊಳಿರುವ ನಾಲ್ವಾರ । ಬಿಡದೆ ಮನದೊಳುನೆನೆದಿತ್ತ ।
ಕೋರಿಸಿದ್ದೇಶನ ಧ್ಯಾನದೊಳಗ । ಮುಂದೆ ಮುಂದೆ
ಸಾಗಿತ್ತ । ಹೀನಾಶೆ ಬಿಟ್ಟು ಆನಂದ ಮಂಟಪಕ ತೇರುಸಾಗಿತ್ತ ॥ ೩ ॥

೬. ಗುರುವು ಸಾಕಿದ ಗಿಳಿ :

ಗುರುವು ಸಾಕಿದ ಗಿಳಿಯುನೋಡಣ್ಣ
ಇದು ಎಂಥಾದಣ್ಣ ।
ಗುರುವು ಸಾಕಿದ ಮುದ್ದು ಗಿಳಿಯು

ನಯನ ನೋಡುವ ಎಂಥ ಕಳೆಯು ।
ಸುಳಿದು ಸುಳಿದು ಲೋಕದೊಳಗೆ
ಮೆರೆಯುವಂತ ಮಹಾ ಗಿಳಿಯು ॥ ಪ ॥

ಭಕ್ತ ಜನಮನ ಬೆಳಗುತಿಹ ಗಿಳಿಯು ।
ಮುಕ್ತಿಯ ದಾರಿ ತೋರಿ ಹರಸುವ ಮುದ್ದಿನ
ಗಿಳಿಯು । ಭದ್ರವಾಗಿ ಸಲಹುವ
ಮನ ಛಿದ್ರವಾಗದೆ ನೋಡುವ
ಶುದ್ಧಾತ್ಮದೊಳು ನಿಂದುದ್ಧರಿಸುವ
ಸುಪ್ರಸಿದ್ಧ ಘನವಾದ ಗಿಳಿಯು ॥ ೧ ॥

ನಾನೆಂಬ ದಳಿಸುವ ಗಿಳಿಯು । ಹೀನ ಗುಣಂಗಳ
ಬಿಡಿಸಿ ಮನ ಪಾವನ ಗೊಳಿಸುವ ಗಿಳಿಯು ।
ಮಾತು ಬಲ್ಲ ಮೂಕ ಗಿಳಿಯು । ಜ್ಯೋತಿ
ಯಂತೆ ಹೊಳೆವ ಗಿಳಿಯು । ನಮ್ಮನ್ನು
ಸಾಕಿ ಸಾಕಾರ ಮಾಡೊ ಗಿಳಿಯು ।
ಮಮಕಾರದಿಂದ ದಯವನು ತೋರಿ
ಜಗಿಸಿ ಜಗದಿ ಮೆರೆಯುವ ಗಿಳಿಯು ॥ ೨ ॥

ಅಜ್ಞಾನ ಕಳೆದು ಸುಜ್ಞಾನ ತೋರುವ ಗಿಳಿಯು
ವಿಘ್ನ ಬಾರದಂತೆ ರಕ್ಷಿಸಿ । ವಿಜಯ ನೀಡುವ
ವೀರ ಗಿಳಿಯು । ಧರೆಯೊಳು ಮೆರೆಯುವ
ನಾಲ್ವಾರ ಪುರದ । ಕೋರಿ ಸಿದ್ದೇಶನೊಳಿರುವಂತಹ ಗಿಳಿಯು ॥ ೩ ॥

ಗ್ರಂಥಋಣ

೧. ಹೈದರಾಬಾದ ಕರ್ನಾಟಕದ ತತ್ವಪದಗಳು (ಸಂ): ಡಾ. ಬಸವರಾಜ ಸಬರದ.

೨. ರಾಯಚೂರ ಜಿಲ್ಲೆಯ ಅನುಭಾವಿ ಕವಿಗಳು : ಡಾ. ಬಸವರಾಜ ಸಬರದ.

೩. ಅಂಕಲಿಮಠದ ನಿರುಪಾಧಿಗಳು ರಚಿಸಿದ ಅನುಭಾವ ಗೀತೆಗಳು (ಸಂ): ಶ್ರೀ ಗಿರಿರಾಜ ಹೊಸಮನಿ.

೪. ಬಳಗಾನೂರು ಶ್ರೀ ಮರಿತಾತನವರ ಜೀವನ ಚರಿತ್ರೆ – ವೇ. ಚಂದ್ರಮೌಳಿ ಶಾಸ್ತ್ರಿಗಳು.

೫. ರಾಜಯೋಗಿ ಬಸನಗೌಡ ಬುರಾನಪೂರ ರಚಿಸಿದ ಕೈವಲ್ಯ ಯಡಮುರಿ ಕಲ್ಪವಲ್ಲರಿ ತತ್ವಪದಗಳು. (ಸಂ) : ಪ್ರೊ. ಶಾಶ್ವತಸ್ವಾಮಿ ಮುಕ್ಕಂದಿಮಠ.

೬. ಗುರುಶಿಷ್ಯರ ತತ್ವಪದಗಳು (ಸಂ) : ಡಾ. ವಿಜಯಶ್ರೀ ಸಬರದ.

೭. ಘನ ಮಠೇಶ ತತ್ವಪದಗಳು (ಪ್ರ): ಶ್ರೀ ನಿ.ಪ್ರ. ಮಲ್ಲಿಕಾರ್ಜುನ ದೇಶಿಕೇಂದ್ರ ಮಹಾಸ್ವಾಮಿಗಳು, ಸಂತೆಕೆಲ್ಲೂರ.

೮. ಘನಶ್ರೀ – (ಸಂ) ಡಾ. ಸಂಗಮೇಶ ಸವದತ್ತಿಮಠ

೯. ವಿಶ್ವಜ್ಯೋತಿ ಶ್ರೀ ನಿರುಪಾಧೀಶ್ವರ ಮಹಾಸ್ವಾಮಿಗಳು – ಶ್ರೀ ಸಿದ್ಧೇಶ್ವರ ಶಾಸ್ತ್ರಿಗಳು, ತೆಲ್ಲೂರ

೧೦. ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣ – (ಲೇ) : ಶ್ರೀ ಭೀಮಸೇನರಾವ ಕುಲಕರ್ಣಿ ತಲೇಖಾನ.

೧೧. ಶ್ರೀ ಘನಮಠ ಶಿವಯೋಗಿಗಳವರ ಸ್ವರವಚನಗಳು -- (ಸಂ) : ಡಾ. ಕೆ. ಶಶಿಕಾಂತ.

೧೨. ಕೋರಿಸಿದ್ಧೇಶ್ವರ ಭಜನೆ ಪದಗಳು : ಲೇ – ಶ್ರೀ ಎಸ್.ಎನ್. ಕುಮಾರ, ಚಟ್ನಳ್ಳಿ.

೧೩. ಘನಮಠದಾರ್ಯರ ತತ್ವಪದಗಳು : ಒಂದು ಅಧ್ಯಯನ -- ಲೇ– ಡಾ. ಕೆ. ಶಶಿಕಾಂತ.

೧೪. ಜನಪದ ಕವಿ ಚರಿತೆ – ಡಾ. ಎಂ. ಎಸ್. ಲಠ್ಠೆ.

೧೫. ಅನುಭಾವಿ ಶರಣ ಬಸಣ್ಣ ಕರಿಗುಡ್ಡರವರ ಅಧ್ಯಯನ – ಪ್ರೊ. ಶಂಕರರಾವ್ ಉಭಾಳೆ.

೧೬. ಶ್ರೀ ರಾಮದಾಸರ ಕೀರ್ತನೆಗಳು (ಸಂ) : ಡಾ. ಸ್ವಾಮಿರಾವ್ ಕುಲಕರ್ಣಿ.

೧೭. ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ತತ್ವಪದಕಾರರ ಸ್ಮಾರಕಗಳು – ಡಾ. ವ್ಹಿ.ಜಿ. ಪೂಜಾರ

೧೮. ಜಾನಪದ ಸಾಹಿತ್ಯ ದರ್ಶನ, ಭಾಗ – ೫ (ಸಂ) – ಡಾ. ಎಂ. ಎಸ್. ಸುಂಕಾಪುರ.

೧೯. ಆಯ್ದ ಸ್ವರವಚನಗಳು (ಸಂ) – ಡಾ. ವ್ಹಿ.ಜಿ. ಪೂಜಾರ ಮತ್ತು ಡಾ. ಈಶ್ವರಯ್ಯ ಮಠ.

೨೦. ನೀರಲಕೇರಿ ಬಸವಲಿಂಗ ಶರಣರು – ಶ್ರೀ ಕಲ್ಯಾಣಪ್ಪ ಬ್ಯಾಳಿ.

೨೧. ನೀರಲಕೆರೆ ಬಸವಲಿಂಗ ಶಿವಯೋಗಿಗಳ ಸ್ವರವಚನಗಳು (ಸಂ) : ಡಾ. ಬಸವಲಿಂಗ ಸೊಪ್ಪಿಮಠ

೨೨. ದಿನ್ನಿತಾಳಪಲ್ಲಿ ವೆಂಕಯ್ಯ ಕವಿ ಬದುಕು–ಬರಹ – ಡಾ. ದಸ್ತಗೀರಸಾಬ ದಿನ್ನಿ.

೨೩. ಎಡೆದೊರೆನಾಡಿನ ಅನುಭಾವಿ ಕವಿಗಳು – ಶ್ರೀ ಶಾಂತರಸ.

೨೪. ತತ್ವಪದಗಳು (ಪ್ರಾತಿನಿಧಿಕ ಸಂಕಲನ) – ಪ್ರ.ಸಂ – ಶ್ರೀ ಶಾಂತರಸ.

೨೫. ಘನಮಠದ ಶ್ರೀ ನಾಗಭೂಷಣ ಶಿವಯೋಗಿಗಳು – ಡಾ. ಸಂಗಮೇಶ ಸವದತ್ತಿಮಠ.

□ □ □

190.

ಗುಲಬರ್ಗಾ ವಿಶ್ವವಿದ್ಯಾಲಯವು ಕಳೆದ ಮೂರು ದಶಕಗಳಿಂದ ಬೋಧನೆ, ಸಂಶೋಧನೆ ಮತ್ತು ಪ್ರಕಟನೆಗಳ ಮೂಲಕ ಗಮನ ಸೆಳೆದಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟನೆಗಳ ಮೂಲಕ ಜನ ಮೆಚ್ಚುಗೆಯನ್ನು ಪಡೆಯುತ್ತಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ, ವಿವಿಧ ಬಗೆಯ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ನಮ್ಮ ವಿಶ್ವವಿದ್ಯಾಲಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಯೋಜನೆಗಳಿಗೆ ಅನುದಾನವನ್ನು ನೀಡಿದೆ. ಇದರ ಅಂಗವಾಗಿ ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಭಾಷಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಹಮ್ಮಿಕೊಂಡ ಯೋಜನೆಗಳಲ್ಲಿ "ತತ್ವಪದಕಾರರ ಸ್ಮಾರಕಗಳ ಕ್ಷೇತ್ರಕಾರ್ಯ ಹಾಗೂ ಸಂಪುಟಗಳ ಪ್ರಕಟನಾ ಯೋಜನೆ (ಭಾಗ-೧) ಯೂ ಒಂದು. ಈ ಯೋಜನೆಗೆ ಸಂಬಂಧಿಸಿದಂತೆ "ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ತತ್ವಪದಕಾರರ ಸ್ಮಾರಕಗಳು" ಹಾಗೂ "ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು" – ಹೀಗೆ ಎರಡು ಸಂಪುಟಗಳನ್ನು ಹೊರತಂದುದು ಹರ್ಷದ ಸಂಗತಿಯಾಗಿದೆ.

ಪ್ರಸ್ತುತ "ರಾಯಚೂರು ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು" ಸಂಪುಟವನ್ನು ನಮ್ಮ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ವ್ಹಿ. ಜಿ. ಪೂಜಾರ ಅವರು ವಿಶೇಷ ಶ್ರಮವಹಿಸಿ ಕ್ಷೇತ್ರ ಕಾರ್ಯಕೈಕೊಂಡು ಸಿದ್ಧಪಡಿಸಿರುವರು. ತತ್ವಪದಕಾರರನ್ನು ಕುರಿತು ಬರೆದ ಇಲ್ಲಿನ ಲೇಖನಗಳು ಹಾಗೂ ಆಯಾ ತತ್ವಪದಕಾರರಿಗೆ ಸಂಬಂಧಿಸಿದ ಸ್ಮಾರಕಗಳ ಚಿತ್ರಗಳು ತುಂಬಾ ಮೌಲಿಕವಾದುವಾಗಿವೆ. ಈ ಸಂಪುಟವು ಹೊಸ ಆವಿಷ್ಕಾರ ಹಾಗೂ ಚಿಂತನೆಗಳಿಗೆ ಉತ್ತಮ ದಾರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದೆ.

ಪ್ರೊ. ಈ. ಟಿ. ಪುಟ್ಟಯ್ಯ
ಕುಲಪತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬

ISBN 978-81-923285-0-8

₹ 200/-